# ಮಹಿಳೆ ಮತ್ತು ಸಮಾಜ

ಇಬ್ರಾಹೀಮ್ ಸಈದ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

'ಮಹಿಳೆ ಮತ್ತು ಸಮಾಜ' ಎಂಬ ಇಬ್ರಾಹೀಮ್ ಸಈದ್‌ರವರ ಈ ಕೃತಿಯ ಮೊದಲ ಐದು ಆವೃತ್ತಿಗಳು 'ಮುಸುಕಿನಲ್ಲಿ ಮುಸ್ಲಿಮ್ ಮಹಿಳೆ' ಎಂಬ ಹೆಸರಿನಲ್ಲಿ ಮುದ್ರಣಗೊಂಡಿತ್ತು. ಇದೀಗ ಇದರ ಏಳನೆಯ ಆವೃತ್ತಿ ನಿಮ್ಮ ಕೈಯಲ್ಲಿದೆ.

ಮಹಿಳೆಯ ಕುರಿತು ಪ್ರಸ್ತಾಪ ಬಂದಾಗಲೆಲ್ಲ ಆಕೆಯ ಸ್ಥಾನಮಾನ, ಕಾರ್ಯಕ್ಷೇತ್ರ, ಹಕ್ಕುಗಳು ಮತ್ತು ಕರ್ತವ್ಯಗಳ ಚರ್ಚೆ ಬಂದೇ ಬರುತ್ತದೆ. ಅದರಲ್ಲೂ ವಿಶೇಷವಾಗಿ ಮುಸ್ಲಿಮ್ ಮಹಿಳೆ ಚರ್ಚಾ ವಿಷಯವಾಗುವುದು ಹೆಚ್ಚು. ಪಾಶ್ಚಾತ್ಯ ಪ್ರಭಾವಕ್ಕೊಳಗಾದ ನಮ್ಮ ಸಮೂಹ ಮಾಧ್ಯಮಗಳು ಇಸ್ಲಾಮ್ ಮತ್ತು ಮುಸ್ಲಿಮ್ ಸಮಾಜದಲ್ಲಿ ಮಹಿಳೆಯ ಸ್ಥಿತಿಗತಿಯ ಬಗ್ಗೆ ಬಹಳಷ್ಟು ತಪ್ಪು ಕಲ್ಪನೆಗಳನ್ನು ಹರಡಿವೆ. ಈ ಕುರಿತು ಒಂದು ವಸ್ತುನಿಷ್ಠವಾದ ಅಧ್ಯಯನವೇ ಈ ಪುಸ್ತಕದ ಉದ್ದೇಶ.

ಇದರಲ್ಲಿ ವಿವಿಧ ಧರ್ಮಗಳಲ್ಲಿ ಹಾಗೂ ಆಧುನಿಕ ಸಿದ್ಧಾಂತಗಳಡಿ ನಿರ್ಮಿತವಾದ ಸಮಾಜಗಳಲ್ಲಿ ಮಹಿಳೆಯರ ಸ್ಥಾನಮಾನ, ಹಕ್ಕು, ಅಧಿಕಾರಗಳ ಬಗ್ಗೆ ವಿಮರ್ಶೆ ನಡೆಸುವುದರ ಜೊತೆಗೆ ಇಸ್ಲಾಮ್ ಮತ್ತು ಮುಸ್ಲಿಮ್ ಮಹಿಳೆಗೆ ಸಂಬಂಧಿಸಿ ಎತ್ತಲಾಗುವ ಹೆಚ್ಚಿನೆಲ್ಲ ಆಕ್ಷೇಪಗಳನ್ನೂ ಇದರಲ್ಲಿ ಚರ್ಚಿಸಲಾಗಿದೆ. ಈ ಕೃತಿಯ ರಚನೆಯಲ್ಲಿ ಪ್ರಖ್ಯಾತ ವಿದ್ವಾಂಸರಾದ ಸಯ್ಯಿದ್ ಅಬುಲ್ ಆಲಾ ಮೌದೂದಿ(ರ) ಮತ್ತು ಸಯ್ಯಿದ್ ಜಲಾಲುದ್ದೀನ್ ಉಮರಿಯವರ ಅನೇಕ ಗ್ರಂಥಗಳಿಂದ ಪ್ರಯೋಜನ ಪಡೆಯಲಾಗಿದೆ.

ಇಸ್ಲಾಮ್ ಮತ್ತು ಮುಸ್ಲಿಮರ ಕುರಿತು ಸಮಾಜದಲ್ಲಿ ವ್ಯಾಪಕವಾಗಿರುವ ತಪ್ಪು ಕಲ್ಪನೆಗಳನ್ನು ನಿವಾರಿಸಿ ಇಸ್ಲಾಮ್ ಧರ್ಮದಲ್ಲಿ ಮಹಿಳೆಗೆ ಇರುವ ನೈಜ ಸ್ಥಾನಮಾನ ಮತ್ತು ಹಕ್ಕು-ಬಾಧ್ಯತೆಗಳನ್ನು ಅರಿಯಲು ಇದು ನೆರವಾಗಲಿ ಎಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

# ಅನುಕ್ರಮಣಿಕೆ


**ವಿವಿಧ ಸಂಸ್ಕೃತಿಯಲ್ಲಿ ಮಹಿಳೆ** **0**

- ಗ್ರೀಸ್, ರೋಮ್ ಮತ್ತು ಮಹಿಳೆ
- ಅರಬರು ಮತ್ತು ಮಹಿಳೆ
- ಯೊರೋಪ್ ಮತ್ತು ಮಹಿಳೆ 1
- ಮಹಿಳೆ ಧರ್ಮದ ದೃಷ್ಟಿಯಲ್ಲಿ 1
- ಯಹೂದಿ ಧರ್ಮ ಮತ್ತು ಮಹಿಳೆ 1
- ಕ್ರೈಸ್ತ ಧರ್ಮ ಮತ್ತು ಮಹಿಳೆ 1
- ಹಿಂದೂ ಧರ್ಮ ಮತ್ತು ಮಹಿಳೆ 1
- ಮಹಿಳೆ ಮತ್ತು ಆಧುನಿಕ ಸಿದ್ಧಾಂತಗಳು 1

**ಇಸ್ಲಾಮೀ ಸಮಾಜದಲ್ಲಿ ಮಹಿಳೆ** **3**

- ಮೂಲಭೂತ ಕಲ್ಪನೆಗಳು 3
- ಮಹಿಳೆಯ ನೈಜ ಕಾರ್ಯಕ್ಷೇತ್ರ 4
- ಸ್ತ್ರೀಯ ಕೆಲಸಕ್ಕೆ ಗೌರವ 5
- ಸಮಾಜ – ಒಂದು ಏಕತೆ 5
- ಸಮಾಜದಲ್ಲಿ ವ್ಯಕ್ತಿಯ ವಿಜಯಸೂತ್ರಗಳು 5

**ಮಹಿಳೆಯ ಶಿಕ್ಷಣ ಮತ್ತು ತರಬೇತಿ** **5**

- ಜುಮಾ ಮತ್ತು ಈದ್‌ಗಳಲ್ಲಿ ಸ್ತ್ರೀಯರ ಭಾಗವಹಿಸುವಿಕೆ 6
- ತಂದೆ–ತಾಯಿ ಮತ್ತು ಪತಿಗೆ ಆದೇಶ 6
- ಬರವಣಿಗೆಯ ವಿದ್ಯೆ 6
- ಸ್ತ್ರೀ ಶಿಕ್ಷಣಕ್ಕೆ ಕಾನೂನಿನ ಸ್ಥಾನಮಾನ 6
- ಶಿಕ್ಷಣದ ಸೌಲಭ್ಯಗಳು 6
- ವೈಚಾರಿಕ ತರಬೇತಿ 6
- ಸಹಾಬಿಗಳ ಕಾಲದಲ್ಲಿ 6

ಮಹಿಳೆ: ಕಾರ್ಯರಂಗದಲ್ಲಿ 71
- ಮನೆಯಿಂದ ಹೊರಗೆ ಹೋಗುವ ಅನುಮತಿ 73
- ಕೃಷಿ ಕಾರ್ಯ 74
- ವ್ಯಾಪಾರ 75
- ಕೈಗಾರಿಕೆ 75
- ಹಕ್ಕುಗಳ ಸಂರಕ್ಷಣೆ 76

ಇಸ್ಲಾಮೀ ಸಮಾಜದ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ 79
- ಮುಸ್ಲಿಮ್ ಸ್ತ್ರೀಯರ ತ್ಯಾಗಗಳು 79
- ಮಹಿಳೆ ಮತ್ತು ಸಾಮಾಜಿಕ ಹೊಣೆಗಾರಿಕೆಗಳು 81
- ಮಹಿಳೆಯ ದೌರ್ಬಲ್ಯ 81
- ಮಹಿಳೆಯ ಸಾಕ್ಷ್ಯ 83
- ಕೇವಲ ಮಹಿಳೆಯರ ಸಾಕ್ಷ್ಯ 83
- ಸ್ತ್ರೀ-ಪುರುಷರ ಜಂಟಿ ಸಾಕ್ಷ್ಯ 84
- ಮಹಿಳೆಯರ ಪ್ರತ್ಯೇಕ ಸಂಘಟನೆ 86
- ಸ್ತ್ರೀ-ಪುರುಷರು ಬೆರೆಯದಂತೆ ನೋಡಿಕೊಳ್ಳುವುದು 88

ಲೈಂಗಿಕ ಸಂಬಂಧಗಳು 91
- ಸನ್ಯಾಸ 92
- ಮುಕ್ತ ಲೈಂಗಿಕತೆ 94
- ಇಸ್ಲಾಮ್ ಮತ್ತುರ ಲೈಂಗಿಕ ಸಂಬಂಧ 96
- ಸನ್ಯಾಸ ಮತ್ತು ಬ್ರಹ್ಮಚರ್ಯೆ 97
- ಧರ್ಮಬದ್ಧವಾಗಿ ಕಾಮಾಪೇಕ್ಷೆಯನ್ನು ತೀರಿಸುವುದು 100
- ವ್ಯಭಿಚಾರದ ನಿಷೇಧ 101
- ನಿಷೇಧಕ್ಕೆ ಕಾರಣ 102
- ವ್ಯಕ್ತಿಯ ತರಬೇತಿ 104
- ಲಜ್ಜಾಗುಣ 105
- ಪರಲೋಕದ ವಿಚಾರಣೆ 108
- ಪರಾಧದ ಸ್ಪಷ್ಟ ಕಲ್ಪನೆ 111
- ಸತ್ವಪರೀಕ್ಷೆ 111
- ವ್ಯಭಿಚಾರದ ಪರಿಣಾಮ 112

- ವ್ಯಭಿಚಾರದ ಗತಿ 112
- ಸಚ್ಚಾರಿತ್ರ್ಯದ ಪ್ರತಿಫಲ 113
- ವಿವಾಹದ ಉದ್ದೇಶ 114
- ಉದ್ದೇಶ ಸಾಧನೆಯಲ್ಲಿ ದಂಪತಿಗಳ ಸಹಕಾರ 115
- ಧ್ಯೇಯಕ್ಕೆ ಸಹಾಯಕವಾಗುವ ವಿಷಯಗಳು 117
- ಮುನ್ನೆಚ್ಚರಿಕೆಯ ಕ್ರಮಗಳು 118
- ದೃಷ್ಟಿಯನ್ನು ತಗ್ಗಿಸಿಡುವುದು 118
- ಶ್ರವಣ ಮಾಧ್ಯಮ 119
- ನಾಲಗೆಯ ರಕ್ಷಣೆ 119
- ವಸ್ತ್ರಧಾರಣೆ 120
- ಪರಸ್ತ್ರೀಯ ಜತೆ ಏಕಾಂತದಲ್ಲಿರುವುದು ನಿಷಿದ್ಧ 121
- ಸಮಾಜ ಸುಧಾರಣೆ 121
- ಸಿದ್ಧಾಂತಗಳ ಶಕ್ತಿ 123
- ಶೀಲ–ಚಾರಿತ್ರ್ಯದ ಮಹತ್ವ 124
- ವ್ಯಭಿಚಾರಿಗಳ ನಿಂದೆ 125
- ಬ್ರಹ್ಮಚರ್ಯೆಯ ಅಂತ್ಯ 125
- ನಾಲ್ಕು ಮಂದಿ ಪತ್ನಿಯನ್ನಿರಿಸಿಕೊಳ್ಳುವ ಅನುಮತಿ 126
- ಮಹಿಳೆಗೆ ಮರು ವಿವಾಹದ ಹಕ್ಕು 126
- ವಿವಾಹ ಭಂಗಗೊಳಿಸುವ ಅಧಿಕಾರ 128
- ವಿವಾಹ ಸಂಬಂಧದ ಪಾವಿತ್ರ್ಯ 128
- ಸಾಮಾಜಿಕ ಪ್ರಜ್ಞೆ 130
- ಇಸ್ಲಾಮೀ ಕಾನೂನು 132
- ಶಾಶ್ವತ ವಿವಾಹ ನಿಷಿದ್ಧರು 132
- ಗುಪ್ತ ಸಂಬಂಧಗಳ ನಿಷೇಧ 133
- ವೇಶ್ಯಾವಾಟಿಕೆಗೆ ತಡೆ 134
- ಮುಕ್ತ ಮಿಲನಕ್ಕೆ ಕಡಿವಾಣ 135
- ಅಶ್ಲೀಲತೆಯ ಪ್ರಚಾರಕ್ಕೆ ತಡೆ 137
- ದಂಡ ಸಂಹಿಗೆ 139
- ಛಡಿಯೇಟು ಮತ್ತು ಮರಣದಂಡನೆ 140

# ವಿವಿಧ ಸಂಸ್ಕೃತಿಯಲ್ಲಿ ಮಹಿಳೆ

ಇಂದು ಭೂಮುಖದ ಮೇಲೆ ಸುಮಾರು ಆರುನೂರು ಕೋಟಿ ಮನುಷ್ಯರಿದ್ದಾರೆ. ಅವರು ನೂರಾರು ಭಾಷೆಗಳನ್ನಾಡುತ್ತಾರೆ. ಅವರ ಜೀವನ ಶೈಲಿ, ಅನ್ನಾಹಾರ, ಮದುವೆ ಹಾಗೂ ಸುಖ–ದುಃಖಗಳ ಅನೇಕ ವಿಧಾನಗಳಿವೆ. ವಿಜ್ಞಾನಿಗಳ ಅಂದಾಜಿನಂತೆ ಮಾನವ ಕುಲಕ್ಕೆ ಎರಡು ಲಕ್ಷ ವರ್ಷ ವಯಸ್ಸಾಗಿದೆ. ಈ ದೀರ್ಘಾವಧಿಯಲ್ಲಿ ಮನುಷ್ಯನಿಗೆ ಯಾವೆಲ್ಲ ಪರಿಸ್ಥಿತಿ ಮತ್ತು ಸಮಸ್ಯೆಗಳು ಎದುರಾದುವು? ಪ್ರಸಕ್ತ ಸ್ಥಿತಿಗೆ ತಲುಪಲು ಅವನು ಯಾವೆಲ್ಲ ಹಂತಗಳನ್ನು ದಾಟಬೇಕಾಯಿತು? ಅವನು ಎಲ್ಲೆಲ್ಲ ವಾಸ ಮಾಡಿದನು? ಅವನು ಎಷ್ಟು ಜನಾಂಗ ಮತ್ತು ಗೋತ್ರಗಳಲ್ಲಿ ವಿಭಜಿತನಾದನು? ಅವನು ಯಾವಾಗ ಯಾವ ರೀತಿಯ ಕೈಗಾರಿಕೆಗಳನ್ನು ಕಂಡು ಹಿಡಿದನು? ಆತನು ಕ್ರೌರ್ಯ ಮತ್ತು ಬರ್ಬರತೆಯಿಂದ ಸಂಸ್ಕೃತಿ ಮತ್ತು ನಾಗರಿಕತೆಯಲ್ಲಿ ಪ್ರಗತಿ ಹೊಂದಿದನೇ? ಅಥವಾ ಈ ಹಿಂದೆಯೂ ಅವನು ಪ್ರಗತಿಯ ಯುಗಗಳನ್ನು ಕಂಡಿದ್ದನೇ? ಇಂತಹ ಪ್ರಶ್ನೆಗಳಿಗೆ ನಿಖರವಾದ ಉತ್ತರವನ್ನು ನೀಡುವುದು ಸಾಧ್ಯವಿಲ್ಲ. ಏಕೆಂದರೆ ಮನುಷ್ಯನಿಗೆ ತನ್ನ ಭೂತಕಾಲದ ಬಗ್ಗೆ ತಿಳಿದಿರುವುದು ಬಹಳ ಕಡಿಮೆ. ಒಬ್ಬ ಎಪ್ಪತ್ತು ವರ್ಷ ಪ್ರಾಯದ ಮುದುಕ ತನ್ನ ಜೀವನದ ಕೇವಲ ಒಂದು ವರ್ಷವನ್ನು ತಿಳಿದಿರುವಂತೆ. ಆದರೆ ಒಂದು ವಿಷಯವಂತೂ ನಮಗೆ ಖಚಿತವಾಗಿ ತಿಳಿದಿದೆ. ಮನುಷ್ಯನ ಈ ಪಯಣದ ಆರಂಭವು ಸ್ತ್ರೀ–ಪುರುಷರ ಮಿಲನದಿಂದಾಯಿತು. ಅದರಿಂದಲೇ ಅವನ ಸಂತತಿ ಹರಡಿತು. ಅವನ ಜ್ಞಾನ–ಕಲೆ, ವಾಣಿಜ್ಯ–ಕೈಗಾರಿಕೆ ಹಾಗೂ ಸಂಸ್ಕೃತಿ–ನಾಗರಿಕತೆಗಳೂ ಅದರಿಂದಲೇ ಪ್ರಗತಿ ಹೊಂದಿದವು.

ಸ್ತ್ರೀ–ಪುರುಷ ಸಹವಾಸದ ಹೊರತು ಮನುಷ್ಯರ ಮಧ್ಯೆ ಇರುವ ಸಂಬಂಧಗಳೆಲ್ಲವೂ ಆ ಐಕ್ಯದ ಪರಿಣಾಮವಾಗಿದೆ ಅಥವಾ ಬಾಹ್ಯ ಪರಿಸ್ಥಿತಿ ಮತ್ತು ಕಾರಣಗಳು ಅವುಗಳನ್ನು ಸೃಷ್ಟಿಸಿವೆ. ಆ ಪರಿಸ್ಥಿತಿ ಮತ್ತು ಕಾರಣಗಳು ಇಲ್ಲದಿರುತ್ತಿದ್ದರೆ ಆ ಸಂಬಂಧಗಳೂ ಏರ್ಪಡುತ್ತಿರಲಿಲ್ಲ.

ಇಬ್ಬರು ನೆರೆವಾಸಿಗಳು ಪರಸ್ಪರ ಪ್ರೀತಿಸುತ್ತಾರೆ. ಇಬ್ಬರು ಸಂಗಾತಿಗಳು

ಪರಸ್ಪರರನ್ನು ಆಲಿಂಗಿಸುತ್ತಾರೆ. ಇಬ್ಬರು ಪ್ರಯಾಣಿಕರು ಪರಸ್ಪರ ಏಕಾಭಿಪ್ರಾಯದವರಾಗಿರುತ್ತಾರೆ. ಇದೇ ರೀತಿ ಇಬ್ಬರು ವಿದ್ಯಾರ್ಥಿಗಳು ಮತ್ತು ಇಬ್ಬರು ಸಮವೃತ್ತಿಯವರು ಪರಸ್ಪರ ಹತ್ತಿರವಿರುತ್ತಾರೆ, ಸಾಮರಸ್ಯ ಅನುಭವಿಸುತ್ತಾರೆ. ಇನ್ನು ಇಬ್ಬರ ಸ್ಥಾನಮಾನಗಳು ಭಿನ್ನವಾದರೆ ಅವರಲ್ಲಿ ಭಿನ್ನತೆ ಮತ್ತು ಅಪರಿಚಿತತೆ ಉಂಟಾಗುತ್ತದೆ. ಆದರೆ ಸ್ತ್ರೀ ಮತ್ತು ಪುರುಷರ ಐಕ್ಯವು ಈ ರೀತಿಯದ್ದಲ್ಲ. ಅವರು ಒಟ್ಟಾಗಿರುವುದು ಮತ್ತು ಕೂಡಿ ಕೆಲಸ ಮಾಡುವುದು ತಮ್ಮ ವರ್ಗ ವೈಶಿಷ್ಟ್ಯ ಅಥವಾ ನಾಗರಿಕ ಅವಶ್ಯಕತೆಗಳಿಗಾಗಿ ಅಲ್ಲ. ಅವರ ಸಂಬಂಧವು ಒಂದು ನೈಸರ್ಗಿಕ ಆಕರ್ಷಣೆಯ ಪ್ರಕಟನೆಯಾಗಿದೆ. ಅದು ಅವರನ್ನು ಕೂಡಿ ಬಾಳಲು ನಿರ್ಬಂಧಿಸುತ್ತದೆ ಆದ್ದರಿಂದ ಅವರು ಯಾವುದೇ ಬಾಹ್ಯ ಪ್ರೇರಣೆ ಇಲ್ಲದೆ ಪರಸ್ಪರ ಹತ್ತಿರ ಬರುತ್ತಾರೆ ವಸ್ತುತಃ ಅವರ ಅಭಿರುಚಿಗಳು ಮತ್ತು ಕಾರ್ಯಕ್ಷೇತ್ರಗಳು ಭಿನ್ನವಾಗಿರುತ್ತವೆ.

ಮಹಿಳೆಯು ಎದೆಹಾಲೂಡಿಸಿ ಮಾನವ ಸಂತತಿಯನ್ನು ಪೋಷಿಸಬಲ್ಲಳು ಆದರೆ ನೇಗಿಲು ನಡೆಸಿ ತನ್ನ ಜೀವನಾಧಾರವನ್ನು ಗಳಿಸುವುದು ಹಾಗೂ ಬಂದೂಕು ಹಿಡಿದು ಶತ್ರುವನ್ನು ಎದುರಿಸುವುದು ಆಕೆಯ ಮಟ್ಟಿಗೆ ಕಷ್ಟದ ಕೆಲಸ. ಏಕೆಂದರೆ ಪ್ರಕೃತಿಯು ಆಕೆಗೆ ಉಕ್ಕಿನ ಪಂಜ ಮತ್ತು ಬಲಿಷ್ಠವಾದ ತೋಳುಗಳನ್ನು ದಯಪಾಲಿಸಿಲ್ಲ. ಆಕೆ ತನ್ನ ಮನದಲ್ಲಿ ಪ್ರೀತಿ, ವಾತ್ಸಲ್ಯ, ಸಹಾನುಭೂತಿ, ಅನುಕಂಪ ಹಾಗೂ ತ್ಯಾಗ–ಬಲಿದಾನದ ಭಾವನೆಗಳನ್ನು ಹೊಂದಿರುವಳು. ಆದ್ದರಿಂದಲೇ ಮಕ್ಕಳ ಪಾಲನೆ–ಪೋಷಣೆ, ಮನೆಯ ವ್ಯವಸ್ಥೆ, ಅನ್ನಾಹಾರ ಮತ್ತು ಬಟ್ಟೆ-ಬರೆಗಳನ್ನು ಸಿದ್ಧಪಡಿಸುವಂತಹ ಕಾರ್ಯಗಳು ಎಲ್ಲ ಕಾಲಗಳಲ್ಲೂ ಮಹಿಳೆಯ ಕರ್ತವ್ಯವಾಗಿದ್ದುವು. ಪ್ರಾಣಿಗಳ ಬೇಟೆ, ಕೃಷಿ, ವ್ಯಾಪಾರ ಮತ್ತು ಶತ್ರುವನ್ನು ಎದುರಿಸುವ ಕಾರ್ಯಗಳನ್ನು ಸದಾ ಪುರುಷನೇ ಮಾಡುತ್ತಿದ್ದ. ಅವನು ಶ್ರಮಜೀವಿ ಗಟ್ಟಿ ಪಂಜ ಮತ್ತು ಬಲಿಷ್ಠವಾದ ತೋಳನ್ನು ಹೊಂದಿರುವುದೇ ಇದಕ್ಕೆ ಕಾರಣ

ಆದರೆ ಸ್ತ್ರೀ–ಪುರುಷರ ಶಕ್ತಿ–ಸಾಮರ್ಥ್ಯಗಳಲ್ಲಿರುವ ಈ ಅಂತರವು ಇತಿಹಾಸದ ಅನೇಕ ಘಟ್ಟಗಳಲ್ಲಿ ಗೌರವಾಗೌರವಗಳ ಮಾನದಂಡವೆನಿಸಿತು. ಪುರುಷನು ಹೆಚ್ಚು ಶಕ್ತಿಶಾಲಿಯಾದುದರಿಂದ ಸ್ತ್ರೀಯಿಂದಾಗದ ಅನೇಕ ಕೆಲಸಗಳನ್ನು ಮಾಡಬಲ್ಲನು ಆದ್ದರಿಂದ ಅವನನ್ನು ಉನ್ನತನೆಂದೂ ಮಹಿಳೆಯನ್ನು ಕೀಳೆಂದೂ ಬಗೆಯಲಾಯಿತು ಏಕೆಂದರೆ ಆಕೆ ಅಬಲೆ ಮತ್ತು ಅನೇಕ ವಿಷಯಗಳಲ್ಲಿ ಪುರುಷನ ಆಶ್ರಿತಳಾಗಿದ್ದಳು ಸದಾ ನೈತಿಕತೆಯ ಪಾಠ ಹೇಳುವ ಮತ್ತು ಮಾನವ ಹಕ್ಕುಗಳ ಶಿಕ್ಷಣ ನೀಡುವ ಪಾಶ್ಚಾತ್ಯ ದೇಶಗಳಲ್ಲಿ ಕೂಡಾ ಪುರುಷ ಮೇಲ್ಮೆಯು ಒಂದು ವಾಸ್ತವಿಕತೆಯಾಗಿತ್ತು ಸ್ತ್ರೀಯನ್ನು ಅಲ್ಲಿ ಕೀಳಾಗಿ ಕಾಣಲಾಗುತ್ತಿತ್ತು. ಜಾನುವಾರುಗಳಂತೆ ಆಕೆಯ ಕ್ರಯ-ವಿಕ್ರಯಗಳು ನಡೆಯುತ್ತಿದ್ದುವು. ಭೂಮುಖದ ಪ್ರತಿಯೊಂದು ಜೀವಿಗೂ ಇರುವ ಸಹಜ ಹಕ್ಕುಗಳಿಂದಲೂ ಆಕೆಯನ್ನು ಹಲವು ಬಾರಿ ವಂಚಿಸಲಾಯಿತು.

## ಗ್ರೀಸ್, ರೋಮ್ ಮತ್ತು ಮಹಿಳೆ

ಪುರಾತನ ಇತಿಹಾಸದ ಬಗ್ಗೆ ಸ್ವಲ್ಪ ವಿವರವಾದ ಮತ್ತು ಅಧಿಕೃತ ಮಾಹಿತಿಯು ನಮಗೆ ಗ್ರೀಕರ ಮತ್ತು ರೋಮನರ ಕಾಲದಿಂದ ಸಿಗುತ್ತದೆ. ಅವರು ಜ್ಞಾನ, ಕಲೆ, ಸಂಸ್ಕೃತಿ ಮತ್ತು ನಾಗರಿಕತೆಯಲ್ಲಿ ಬಹಳ ಪ್ರಗತಿ ಹೊಂದಿದ್ದರು. ಅವರಿಂದ ಅನೇಕ ಸಂಸ್ಕೃತಿಗಳು ಮತ್ತು ಜ್ಞಾನ ಪ್ರಕಾರಗಳು ಅಸ್ತಿತ್ವಕ್ಕೆ ಬಂದುವು. ಹಾಗಿದ್ದೂ ಅವರಲ್ಲಿ ಮಹಿಳೆಯ ಸ್ಥಾನ ಬಹಳ ನಿಕೃಷ್ಟವಾಗಿತ್ತು. ಆಕೆಯನ್ನು ಅವರು ಒಂದು ಹೊರೆ ಎಂದು ಪರಿಗಣಿಸುತ್ತಿದ್ದರು. ಸೇವಕಿಯಂತೆ ಮನೆಯವರ ಸೇವೆ ಮಾಡುತ್ತಿರುವುದರ ಹೊರತು ಮಹಿಳೆಯರಿಗೆ ಬೇರೇನೂ ಉದ್ದೇಶವಿಲ್ಲವೆಂದು ಅವರು ಭಾವಿಸುತ್ತಿದ್ದರು.

ತಮ್ಮ ವೈಚಾರಿಕತೆಯ ಹೊರತಾಗಿಯೂ ಗ್ರೀಕರು ಮಹಿಳೆಯ ಕುರಿತು ಹಾಸ್ಯಾಸ್ಪದವಾದ ಕಲ್ಪನೆಗಳನ್ನು ಹೊಂದಿದ್ದರು. ಅದರಿಂದ ಅವರ ದೃಷ್ಟಿಯಲ್ಲಿ ಸ್ತ್ರೀಯ ಸ್ಥಾನಮಾನವೇನಿತ್ತೆಂದು ತಿಳಿಯುತ್ತದೆ. ಅವರು ಮಹಿಳೆಯ ಕುರಿತು ಹೀಗೆ ಹೇಳುತ್ತಿದ್ದರು, "ಬೆಂಕಿ ತಾಗಿದರೆ ಮತ್ತು ಹಾವು ಕಚ್ಚಿದರೆ ಅದಕ್ಕೆ ಮದ್ದಿದೆ. ಆದರೆ ಮಹಿಳೆಯ ಕೇಡನ್ನು ನಿವಾರಿಸುವ ಮದ್ದಿಲ್ಲ."

'ನೀಡೋರಾ' ಎಂಬೋರ್ವ ಪೌರಾಣಿಕ ಮಹಿಳೆಯೇ ಎಲ್ಲ ಲೌಕಿಕ ವಿಪತ್ತು ಮತ್ತು ವಿಘ್ನಗಳ ಮೂಲವೆಂದು ಅವರು ಭಾವಿಸುತ್ತಿದ್ದರು. ಓರ್ವ ಗ್ರೀಕ್ ಸಾಹಿತಿ ಹೀಗೆ ಬರೆದಿರುವನು, "ಎರಡು ಸಂದರ್ಭಗಳಲ್ಲಿ ಮಹಿಳೆಯು ಪುರುಷನ ಪಾಲಿಗೆ ಸಂತೋಷದಾಯಕವಾಗುತ್ತಾಳೆ. ಒಂದು ಮದುವೆಯ ದಿನ. ಇನ್ನೊಂದು ಆಕೆಯ ಮರಣದ ದಿನ."

ಗುಲಾಮರಂತೆ ಮಹಿಳೆಯ ಉದ್ದೇಶವೂ ಕೇವಲ ಸೇವೆಯಾಗಿತ್ತು. ಪತ್ನಿಯಿಂದ ಸೇವೆ ಮಾಡಿಸಿಕೊಳ್ಳಲಿಕ್ಕಾಗಿಯೇ ಆಕೆಯನ್ನು ಮದುವೆ ಮಾಡಲಾಗುತ್ತಿತ್ತು. ಆಕೆಯನ್ನು ಯಾವುದೇ ಹುದ್ದೆಗೆ ಅರ್ಹಳೆಂದು ಪರಿಗಣಿಸುತ್ತಿರಲಿಲ್ಲ. ಯಾವ ವಿಷಯದಲ್ಲೂ ಆಕೆಯ ಸಾಕ್ಷ್ಯವನ್ನು ಪರಿಗಣಿಸುತ್ತಿರಲಿಲ್ಲ. ರೋಮನ್ ಸಾಮ್ರಾಜ್ಯದಲ್ಲಿ ಕಾನೂನು ರೀತ್ಯಾ ಆಕೆಗೆ ಯಾವುದೇ ಹಕ್ಕು ಪ್ರಾಪ್ತವಿರಲಿಲ್ಲ. ಶಾರೀರಿಕ ದೌರ್ಬಲ್ಯದಿಂದಾಗಿ ಕೆಲವು ಸವಲತ್ತುಗಳನ್ನು ಮಾತ್ರ ಆಕೆಗೆ ನೀಡಲಾಗಿತ್ತು.

## ಅರಬರು ಮತ್ತು ಮಹಿಳೆ

ಸಂಸ್ಕೃತಿ ಸಭ್ಯತೆಗಳ ಈ ಕೇಂದ್ರಗಳಲ್ಲೇ ಮಹಿಳೆಯ ಅಸಹಾಯಕತೆ ಮತ್ತು ಶೋಷಣೆಯ ಸ್ಥಿತಿ ಹೀಗಿರುವಾಗ ನಾಗರಿಕತೆಯ ಗಂಧ ಗಾಳಿಯೂ ಸೋಂಕಿರದ ಅರೇಬಿಯದಲ್ಲಿ ಆಕೆಯ ಸ್ಥಿತಿ ಹೇಗಿರಬಹುದೆಂದು ಊಹಿಸಬಹುದು.

ಅರಬರು ಸ್ತ್ರೀಯ ಅಸ್ತಿತ್ವವನ್ನೇ ಅಪಮಾನವೆಂದು ಬಗೆದಿದ್ದರು. ಹೆಣ್ಣು ಮಗುವಿನ ಜನನವು ಅವರ ಮಟ್ಟಿಗೆ ದುಃಖದ ಸಂದೇಶವಾಗಿತ್ತು. ಅವರು ಗಂಡು

ಮಕ್ಕಳ ಬಗ್ಗೆ ಹೆಮ್ಮೆಪಡುತ್ತಿದ್ದರು. ಆದರೆ ಹೆಣ್ಣು ಹುಟ್ಟಿದಾಗ ಅವರ ತಲೆ ತಗ್ಗಿಬಿಡುತ್ತಿತ್ತು. ಪವಿತ್ರ ಕುರ್‌ಆನ್ ಅವರ ಭಾವನೆಗಳನ್ನು ಸರಿಯಾಗಿ ಚಿತ್ರಿಸಿದೆ

"ಇವರ ಪೈಕಿ ಯಾರಿಗಾದರೂ ಮಗಳು ಹುಟ್ಟಿದ ಸುವಾರ್ತೆ ಕೊಟ್ಟಾಗ ಅವನ ಮುಖ ಕಳೆಗುಂದಿ ಹೋಗುತ್ತದೆ ಮತ್ತು ಅವನು ಸಿಡಿಮಿಡಿಗೊಳ್ಳುತ್ತಾನೆ. ಈ ಅಶುಭ ವಾರ್ತೆಯ ಬಳಿಕ ಯಾರಿಗೂ ಮುಖ ತೋರಿಸಲಾಗದೆ ಜನರಿಂದ ತಲೆ ಮರೆಸಿಕೊಳ್ಳುತ್ತಾನೆ. ಈ ಅಪಮಾನದೊಂದಿಗೆ ಮಗುವನ್ನಿರಿಸಿಕೊಳ್ಳಲೇ ಅಥವಾ ಮಣ್ಣಿನಲ್ಲಿ ಹುಗಿದುಬಿಡಲೇ ಎಂದು ಯೋಚಿಸುತ್ತಾನೆ. ಇವರು ಅಲ್ಲಾಹನ ಬಗ್ಗೆ ಎಂತಹ ಕೆಟ್ಟ ನಿರ್ಣಯ ಕೈಗೊಳ್ಳುತ್ತಾರೆಂದು ನೋಡಿರಿ."

(ಪವಿತ್ರ ಕುರ್‌ಆನ್: 16: 58–59)

ಹ. ಉಮರ್(ರ) ಹೀಗೆ ಹೇಳಿರುವರು, "ಅಲ್ಲಾಹನಾಣೆ! ನಾವು ಅಜ್ಞಾನ ಕಾಲದಲ್ಲಿ ಮಹಿಳೆಯರಿಗೆ ಯಾವುದೇ ಸ್ಥಾನಮಾನವನ್ನು ನೀಡುತ್ತಿರಲಿಲ್ಲ. ಅಲ್ಲಾಹನು ಅವರ ಬಗ್ಗೆ ಆದೇಶಗಳನ್ನು ಜಾರಿಗೊಳಿಸಿ ಅವರ ಹಕ್ಕುಗಳನ್ನು ನಿರ್ದಿಷ್ಟಪಡಿಸಿದನು."

(ಮುಸ್ಲಿಮ್)

"ಸ್ತ್ರೀಯರ ಬಗ್ಗೆ ದ್ವೇಷ ಮತ್ತು ಜಿಗುಪ್ಸೆ ಎಷ್ಟರ ಮಟ್ಟಿಗೆ ವ್ಯಾಪಿಸಿತ್ತೆಂದರೆ ಒಬ್ಬನ ಮನೆಯಲ್ಲಿ ಹೆಣ್ಣು ಶಿಶು ಹುಟ್ಟಿದಾಗ ಆತ ಆ ಮನೆಯನ್ನೇ ಅಪಶಕುನ ವೆಂದು ಬಗೆದು ತೊರೆದು ಬಿಡುತ್ತಿದ್ದ." (ತಫ್ಸೀರ್ ಕಬೀರ್ ಭಾಗ: 7, ಪುಟ: 435)

ಸ್ತ್ರೀಯರ ಬಗ್ಗೆ ಅವರಲ್ಲಿ ಕರುಣೆ ಮತ್ತು ವಾತ್ಸಲ್ಯದ ಭಾವನೆಯೇ ಇರಲಿಲ್ಲ. ಅವರು ಹೆಣ್ಮಕ್ಕಳನ್ನು ಜೀವಂತ ಹೂಳಿ ಬಿಡುತ್ತಿದ್ದರು. ಈ ಕುರಿತು ವರದಿ ಯಾಗಿರುವ ಕೆಲವು ಭಯಾನಕ ಘಟನೆಗಳು ಹೀಗಿವೆ:

ಒಬ್ಬನು ಪ್ರವಾದಿವರ್ಯರಲ್ಲಿ(ಸ) ತನ್ನ ಅಜ್ಞಾನ ಕಾಲದ ಘಟನೆಯನ್ನು ವಿವರಿಸುತ್ತಾ ಹೀಗೆ ಹೇಳಿದನು, "ನನಗೆ ಒಬ್ಬ ಮಗಳಿದ್ದಳು. ಆಕೆ ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದಳು. ನಾನು ಕರೆದಾಗಲೆಲ್ಲಾ ಸಂತೋಷದಿಂದ ನನ್ನ ಬಳಿ ಬರುತ್ತಿದ್ದಳು. ಒಂದು ದಿನ ನಾನು ಆಕೆಯನ್ನು ಕರೆದೆ. ಆಕೆ ಓಡೋಡಿ ಬಂದಳು. ನಾನು ಆಕೆಯನ್ನು ಕರೆದುಕೊಂಡು ಹೋಗಿ ಸಮೀಪದ ಬಾವಿಯೊಂದಕ್ಕೆ ದೂಡಿಬಿಟ್ಟೆ, ಆಗಲೂ ಆಕೆ ಅಪ್ಪಾ, ಅಪ್ಪಾ ಎನ್ನುತ್ತಿದ್ದಳು." ಇದನ್ನು ಕೇಳಿ ಪ್ರವಾದಿ ವರ್ಯರು(ಸ) ತಮ್ಮ ಗಡ್ಡ ತೊಯ್ದು ಹೋಗುವಷ್ಟು ಅತ್ತುಬಿಟ್ಟರು. (ದಾರಿಮೀ)

ತಂದೆಯ ವಾತ್ಸಲ್ಯಮಯ ಕೈಗಳು ಆಕೆಯ ಮಟ್ಟಿಗೆ ತೋಳದ ಪಂಜವಾಗಿ ಮಾರ್ಪಟ್ಟಿವು.

"ಕೈಸ್ ಬಿನ್ ಆಸಿಮ್ ಅಜ್ಞಾನ ಕಾಲದಲ್ಲಿ ಎಂಟು-ಹತ್ತು ಹುಡುಗಿಯರನ್ನು ಜೀವಂತ ಹೂತಿದ್ದರು." (ತಫ್ಸೀರ್ ಇಬ್ನು ಕಸೀರ್)

ಈ ಶೋಷಿತ ವರ್ಗವನ್ನು ಅವರು ಜೀವಂತ ಉಳಿಸಿದರೂ ಜೀವನದ ಎಲ್ಲ ಹಕ್ಕುಗಳಿಂದ ಅವರನ್ನು ವಂಚಿಸುತ್ತಿದ್ದರು. ವಿವಾಹಕ್ಕೆ ಯಾವುದೇ ಮಿತಿ ಇರಲಿಲ್ಲ. ಅವರು ಎಷ್ಟು ಸ್ತ್ರೀಯರನ್ನು ಬೇಕಾದರೂ ವಿವಾಹ ಮಾಡಿಕೊಳ್ಳುತ್ತಿದ್ದರು.

"ವಹಬ್ ಅಸದಿ(ರ) ಇಸ್ಲಾಮ್ ಸ್ವೀಕಾರ ಮಾಡಿದಾಗ ಅವರಿಗೆ ಹತ್ತು ಮಂದಿ ಪತ್ನಿಯರಿದ್ದರು." (ಅಬೂದಾವೂದ್)

"ಖೀಲಾನ್ ಸಖಫಿ(ರ) ಮುಸ್ಲಿಮರಾದಾಗ ಅವರ ಬಳಿ ಹತ್ತು ಮಂದಿ ಪತ್ನಿಯರಿದ್ದರು." (ತಿರ್ಮಿದಿ)

ಅದೇ ರೀತಿ ತಲಾಕ್ ನೀಡುವುದಕ್ಕೂ ಯಾವುದೇ ಮಿತಿಯಿರಲಿಲ್ಲ. ಪತಿಯು ಯಾವಾಗ, ಎಷ್ಟು ಸಲ ಬೇಕಾದರೂ ತಲಾಕ್ ನೀಡಿ ಇದ್ದತ್ ಅವಧಿ ಮುಗಿಯುವುದ ರೊಳಗೆ ಆಕೆಯನ್ನು ಮರಳಿ ಸ್ವೀಕರಿಸುತ್ತಿದ್ದ. (ಅಬೂದಾವೂದ್)

ಈ ರೀತಿ ಆತ ಜೀವನ ಪರ್ಯಂತ ತನ್ನ ಪತ್ನಿಯನ್ನು ಪೀಡಿಸಬಹುದಾಗಿತ್ತು.

"ಪತಿಯು ಜೀವಿಸಿರುವ ತನಕ ಆಕೆ ಅವನ ಅಧೀನದಲ್ಲಿರುತ್ತಿದ್ದಳು. ಪತಿ ತೀರಿಕೊಂಡ ಬಳಿಕ ಅವನ ಉತ್ತರಾಧಿಕಾರಿಗಳಿಗೆ ಅವಳ ಮೇಲೆ ಪೂರ್ಣ ಅಧಿಕಾರವಿರುತ್ತಿತ್ತು. ಅವರು ಬಯಸಿದರೆ ಆಕೆಯನ್ನು ಸ್ವತಃ ವಿವಾಹವಾಗುತ್ತಿದ್ದರು. ಇಲ್ಲವಾದರೆ ಬೇರೆಯವರಿಗೆ ವಿವಾಹ ಮಾಡಿಕೊಡುತ್ತಿದ್ದರು. ಅವರ ವಿವಾಹವನ್ನೇ ಮಾಡದೆ ಇರುವುದಕ್ಕೂ ಅವರಿಗೆ ಅಧಿಕಾರವಿತ್ತು."

(ತಫ್ಸೀರ್ ಇಬ್ನ್ ಕಸೀರ್ ಭಾಗ- 1 ಪುಟ: 425)

"ವಿಧವೆಯ ಸೊತ್ತನ್ನು ಕಬಳಿಸಲಿಕ್ಕಾಗಿ ಆಕೆಯನ್ನು ಮರುವಿವಾಹದ ಹಕ್ಕಿನಿಂದಲೇ ವಂಚಿಸುತ್ತಿದ್ದರು. ಕೆಲವೊಮ್ಮೆ ಎಳೆಯ ಹುಡುಗನು ಪ್ರಾಯಕ್ಕೆ ಬಂದು ಆಕೆಯನ್ನು ವಿವಾಹವಾಗುವ ತನಕ ಆಕೆಯ ವಿವಾಹವನ್ನು ತಡೆ ಹಿಡಿಯುತ್ತಿದ್ದರು."

(ತಫ್ಸೀರ್ ಇಬ್ನ್ ಕಸೀರ್ ಭಾಗ- 1 ಪುಟ: 425)

"ಮಲತಾಯಿಯೊಂದಿಗೆ ಮದುವೆಯಾಗುವುದು ಕೂಡಾ ಅವರ ಮಟ್ಟಿಗೆ ಕೆಟ್ಟದಾಗಿರಲಿಲ್ಲ. ಮಲತಾಯಿಯೊಂದಿಗೆ ವಿವಾಹವು ಅರಬರಲ್ಲಿ ಸಾಮಾನ್ಯವಾಗಿತ್ತು."

(ಅಹ್ಕಾಮುಲ್ ಕುರ್‌ಆನ್ ಭಾಗ- 2 ಪುಟ: 148)

ಅಕಸ್ಮಾತ್ ಒಬ್ಬ ಸುಂದರಿ ಮತ್ತು ಸಿರಿವಂತ ಹುಡುಗಿ ಅನಾಥಳಾಗಿ ಯಾರ ಆಶ್ರಯಕ್ಕಾದರೂ ಸಿಕ್ಕಿದರೆ ಅವನೇ ಆಕೆಯನ್ನು ವಿವಾಹವಾಗುತ್ತಿದ್ದ. ಆಕೆಯ ಮಹ್ರನ್ನೂ ಸರಿಯಾಗಿ ಪಾವತಿಸುತ್ತಿರಲಿಲ್ಲ.

ವಾರೀಸು ಸೊತ್ತಿನಲ್ಲಿ ಮಹಿಳೆಗೆ ಯಾವುದೇ ಹಕ್ಕಿರಲಿಲ್ಲ. ಇಸ್ಲಾಮ್ ಮಹಿಳೆಗೆ ವಾರೀಸು ಸೊತ್ತಿನಲ್ಲಿ ಪಾಲನ್ನು ನಿಶ್ಚಯಿಸಿದಾಗ ಅರಬರಿಗೆ ಆಶ್ಚರ್ಯವಾಯಿತು.

ಅವರು ಪ್ರವಾದಿ(ಸ) ಅವರಲ್ಲಿ ಹೀಗೆ ವಿಚಾರಿಸಿದರು, "ಪ್ರವಾದಿಗಳೇ! ಕುದುರೆಯನ್ನೇರಲಾರದ ಮತ್ತು ರಕ್ಷಣೆ ಮಾಡಲಾರದ ಮಹಿಳೆಗೆ ವಾರೀಸು ಸೊತ್ತಿನಲ್ಲಿ ಅರ್ಧಾಂಶದ ಹಕ್ಕಿದೆಯೇ?"

## ಯುರೋಪ್ ಮತ್ತು ಮಹಿಳೆ

ಯುರೋಪ್ ಈಗ ಸ್ತ್ರೀ-ಪುರುಷ ಸಮಾನತೆಯ ಅತಿದೊಡ್ಡ ಹರಿಕಾರ. ಆದರೆ ಇದೇ ಯುರೋಪ್‌ನಲ್ಲಿ ಒಂದು ಶತಮಾನದ ಹಿಂದಿನ ತನಕವೂ ಮಹಿಳೆ ಪುರುಷನ ಅಕ್ರಮ-ಅನ್ಯಾಯಗಳಿಗೆ ಬಲಿಯಾಗಿದ್ದಳು. ಪುರುಷರ ಈ ಅತಿಕ್ರಮಗಳನ್ನು ತಡೆಯುವ ಯಾವುದೇ ಬಲಿಷ್ಠ ಕಾನೂನು ಅಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ.

ಬ್ರಿಟನ್‌ನಲ್ಲಿ ಮದುವೆಯ ನಂತರ ಪುರುಷನ ಸ್ಥಾನಮಾನದಲ್ಲಿ ಯಾವುದೇ ವ್ಯತ್ಯಾಸ ಆಗುತ್ತಿರಲಿಲ್ಲ. ಆದರೆ ಸ್ತ್ರೀಯ ಅಸ್ತಿತ್ವವು ಪುರುಷನ ವ್ಯಕ್ತಿತ್ವದ ಒಂದು ಅಂಗವಾಗಿ ಮಾರ್ಪಡುತ್ತಿತ್ತು. ಮದುವೆಗೆ ಮುಂಚೆ ಮಹಿಳೆಯು ಯಾವುದೇ ಒಪ್ಪಂದ ಮಾಡಿರದಿದ್ದರೆ ಆಕೆಯ ಎಲ್ಲ ಸೊತ್ತು-ವಿತ್ತ ಮತ್ತು ಸಾಲಗಳು ಪುರುಷನಿಗೆ ಸೇರುತ್ತಿದ್ದುವು.

ಮಹಿಳೆಯ ಜೀವನೋಪಾಯದ ಬಗೆಗೂ ಯಾವುದೇ ಸೂಕ್ತ ಕಾನೂನು ಇರಲಿಲ್ಲ. ಆಕೆಗೆ ಪುರುಷನ ವಿರುದ್ಧ ಮೊಕದ್ದಮೆ ಹೂಡುವ ಅಧಿಕಾರವೂ ಇರಲಿಲ್ಲ. ಪುರುಷನು ಬಯಸಿದರೆ ಪತ್ನಿಯನ್ನು ವಾರೀಸು ಹಕ್ಕಿನಿಂದ ವಂಚಿತಗೊಳಿಸಬಹುದಾಗಿತ್ತು. ಆದರೆ ಪತ್ನಿಯ ಸೊತ್ತು ಕಾನೂನುಬದ್ಧವಾಗಿ ಅವನಿಗೇ ಸೇರುತ್ತಿತ್ತು.

ಮಹಿಳೆಯು ಸ್ವತಂತ್ರವಾಗಿ ಯಾವುದೇ ವ್ಯವಹಾರ ಮಾಡುವಂತಿರಲಿಲ್ಲ. ಆಕೆಗೆ ಸ್ವಂತ ದುಡಿದು ತಿನ್ನುವ ಮತ್ತು ತನ್ನಿಷ್ಟದಂತೆ ವಿವಾಹ ಮಾಡುವ ಅಧಿಕಾರವೂ ಇರಲಿಲ್ಲ. ಹೆಣ್ಣನ್ನು ಹೆತ್ತವರ ಸೊತ್ತೆಂದು ಪರಿಗಣಿಸಲಾಗುತ್ತಿತ್ತು. ಆಕೆಯನ್ನು ಅವರು ಬಯಸಿದವನಿಗೆ ವಿವಾಹ ಮಾಡಿ ಕೊಡುತ್ತಿದ್ದರು. ಮದುವೆ ಒಂದು ವ್ಯಾಪಾರ ವಾಗಿತ್ತು. ಹೆತ್ತವರು ತಮ್ಮ ಹುಡುಗಿಯರನ್ನು ಹುಡುಗರಿಗೆ ಮಾರುತ್ತಿದ್ದರು.

ಕ್ರೈಸ್ತ ಧರ್ಮದ ಆಗಮನಕ್ಕಿಂತ ಮುಂಚೆ ಪುರುಷನು ನಿರಂಕುಶ ಮಾಲಿಕನಾಗಿದ್ದನು. ಪುರುಷನಿಗೆದುರು ಸ್ತ್ರೀಗೆ ಯಾವುದೇ ನಿಯಮ ಸಂಹಿತೆ ಮತ್ತು ಕಾನೂನಿನ ನೆರವಿರಲಿಲ್ಲ. ಪತಿ ಬಯಸಿದಾಗ ಪತ್ನಿಯನ್ನು ತೊರೆದು ಬಿಡುತ್ತಿದ್ದನು. ಆದರೆ ಪತ್ನಿಯು ಯಾವ ಪರಿಸ್ಥಿತಿಯಲ್ಲೂ ಪತಿಯಿಂದ ಬಿಡುಗಡೆ ಪಡೆಯುವ ಹಕ್ಕನ್ನು ಹೊಂದಿರಲಿಲ್ಲ. ಬ್ರಿಟನ್‌ನ ಪುರಾತನ ಕಾನೂನಿನಲ್ಲಿ ಪತಿಯು ಪತ್ನಿಯ ಒಡೆಯನೂ ಆಡಳಿತಗಾರನೂ ಆಗಿದ್ದ. ಪತಿಯು ಪತ್ನಿಯನ್ನು ಕೊಲ್ಲಲು ಪ್ರಯತ್ನಿಸಿದರೆ ಅದನ್ನು ಸಣ್ಣ ಬಂಡಾಯವೆಂದು ತಿಳಿಯಲಾಗುತ್ತಿತ್ತು. ಆದರೆ

ಪತ್ನಿಯು ಪತಿಯ ಕೊಲೆಗೆ ಯತ್ನಿಸಿದರೆ ಅದನ್ನು ಬಂಡಾಯಕ್ಕಿಂತಲೂ ಮಿಗಿಲಾದ ಅಪರಾಧವೆಂದು ಪರಿಗಣಿಸಿ ಆಕೆಯನ್ನು ಸುಟ್ಟು ಕೊಲ್ಲಲಾಗುತ್ತಿತ್ತು. ಈಗಲೂ ಚರ್ಚ್‌ನಲ್ಲಿ ವಿವಾಹದ ವೇಳೆ ಆಕೆಯಿಂದ ಜೀವನ ಪರ್ಯಂತ ಪತಿಯ ಅನುಸರಣೆಯ ಕರಾರು ಪಡೆಯಲಾಗುತ್ತದೆ. ಈ ಕಾನೂನಿನಂತೆ ಆಕೆ ತನ್ನ ಕರಾರನ್ನು ಪಾಲಿಸಲು ನಿರ್ಬಂಧಿತಳಾಗುತ್ತಾಳೆ. ಪತಿಯ ಅನುಮತಿಯಿಲ್ಲದೆ ಆಕೆ ಏನೂ ಮಾಡುವಂತಿಲ್ಲ. ಆಕೆ ಬಯಸಿದರೂ ಯಾವುದೇ ಆಸ್ತಿಯನ್ನು ಗಳಿಸು ವಂತಿಲ್ಲ. ಗಳಿಸಿದರೆ ಅದು ತನ್ನಿಂತಾನೇ ಪತಿಗೆ ಸೇರುತ್ತದೆ. ಅನೇಕ ದೇಶಗಳಲ್ಲಿ ಗುಲಾಮರಿಗಿದ್ದಷ್ಟು ಸ್ಥಾನಮಾನವೂ ಬ್ರಿಟಿಷ್ ಕಾನೂನಿನಲ್ಲಿ ಮಹಿಳೆಗೆ ಇರಲಿಲ್ಲ.

## ಮಹಿಳೆ ಧರ್ಮದ ದೃಷ್ಟಿಯಲ್ಲಿ

ಗ್ರೀಸ್, ರೋಮ್, ಅರೇಬಿಯ, ಯುರೋಪ್ ಮತ್ತು ಏಶ್ಯಾ ಎಲ್ಲೆಡೆ ಮಹಿಳೆಯು ಶೋಷಿತಳಾಗಿದ್ದಳು. ಆಕೆಯ ಪೂರ್ಣ ಇತಿಹಾಸವೇ ಶೋಷಣೆಯ ಕಥೆಯಾಗಿದೆ. ವಿಭಿನ್ನ ಕಾಲಗಳಲ್ಲಿ ಬಂದ ದೈವಿಕ ಬೋಧನೆಗಳನ್ನು ಕೂಡಾ ತಿರುಚಿ ಪುಣ್ಯ, ನೀತಿ, ಶೀಲ ಮತ್ತು ಚಾರಿತ್ರ್ಯಗಳೆಂದರೆ ಸ್ತ್ರೀ ಸಂಪರ್ಕವನ್ನು ತೊರೆಯುವುದೆಂದು ಬಗೆಯಲಾಯಿತು. ಆಕೆಯೊಂದಿಗಿನ ಸಂಪರ್ಕವು ಮನುಷ್ಯನನ್ನು ಕೆಡುಕು ಮತ್ತು ಪಾಪಕ್ಕೆ ಪ್ರೇರೇಪಿಸುತ್ತದೆಂದು ಪರಿಗಣಿಸಲಾಯಿತು.

ಕಾಲ ಕಳೆದಂತೆ ಈ ಕಲ್ಪನೆಯು ಪಕ್ವವಾಗತೊಡಗಿತು. ಮಹಿಳೆಯೊಂದಿಗೆ ದ್ವೇಷ ಭಾವನೆಯು ಹೆಚ್ಚುತ್ತಲೇ ಹೋಯಿತು. ಆಕೆಯನ್ನು ಶೈತಾನನ ಏಜೆಂಟ್ ಎಂದೂ ಪಾಪಗಳ ದ್ವಾರವೆಂದೂ ಭಾವಿಸಲಾಯಿತು. ಆಕೆಯೊಂದಿಗಿನ ಸಂಪರ್ಕ ವನ್ನು ಧರ್ಮನಿಷ್ಠೆಗೆ ವಿರುದ್ಧವೆಂದೂ ಸ್ತ್ರೀಸಂಗ ತ್ಯಾಗವನ್ನು ದೇವಭಕ್ತಿಯ ಪ್ರಮಾಣವೆಂದೂ ಪರಿಗಣಿಸಲಾಯಿತು.

ಈ ಕಲ್ಪನೆಗಳ ಪ್ರಭಾವವು ಸಹಜವಾಗಿಯೇ ಮಹಿಳೆಯ ಸಾಮಾಜಿಕ ಜೀವನದ ಮೇಲೆ ಬಿತ್ತು. ಪುರುಷನಿಗೆ ಸಮಾಜದಲ್ಲಿರುವ ಗೌರವದ ಸ್ಥಾನಮಾನವು ಆಕೆಗೆ ಪ್ರಾಪ್ತವಾಗಲಿಲ್ಲ. ಪುರುಷನಿಗಿರುವ ಹಕ್ಕು ಅಧಿಕಾರಗಳೂ ಆಕೆಗೆ ದಕ್ಕಲಿಲ್ಲ. ಆಕೆಯ ನೆಲೆಯು ಓರ್ವ ಪಾಪಿ ಮತ್ತು ಅಪರಾಧಿಯದ್ದಾಗಿತ್ತು. ಆಕೆಯನ್ನು ನಿಂದ್ಯಳೂ ನೀಚಳೂ ಆಗಿ ಕಾಣಲಾಯಿತು.

## ಯಹೂದಿ ಧರ್ಮ ಮತ್ತು ಮಹಿಳೆ

ಯಹೂದಿ ಧರ್ಮವೂ ಕೆಲವು ವಿಶ್ವಾಸ ಮತ್ತು ಸಿದ್ಧಾಂತಗಳನ್ನು ಮಾತ್ರ ನೀಡಿರುವುದಲ್ಲ. ಅವುಗಳ ಆಧಾರದಲ್ಲಿ ಅದು ಜೀವನದ ಸಮಸ್ಯೆಗಳ ಕುರಿತೂ ವಿವರವಾಗಿ ಚರ್ಚಿಸಿದೆ. ಇಂತಹ ಒಂದು ಧರ್ಮವು ಮಹಿಳೆಯರ ಕುರಿತು ವಾಸ್ತವಕ್ಕೆ ಹತ್ತಿರವಾದ ವಿಚಾರಗಳನ್ನು ಹೊಂದಿರಬಹುದೆಂದು ನಿರೀಕ್ಷಿಸುವುದು

ಸಹಜವೇ ಆಗಿದೆ. ಆದರೆ ಅದು ಪುರುಷನು ಪುಣ್ಯವಂತನಾಗಿರುವನೆಂದೂ ಸ್ತ್ರೀ ಪಾಪಿಯೂ ಕುಟಿಲೆಯೂ ಆಗಿರುವಳೆಂದೂ ಹೇಳುತ್ತದೆ. ಮಾನವಕುಲದ ಪ್ರಥಮ ವ್ಯಕ್ತಿಯಾದ ಆದಮ್(ಅ) ಸ್ವರ್ಗದಲ್ಲಿ ಸುಖ-ಸಂತೋಷದ ಜೀವನ ಸಾಗಿಸುತ್ತಿದ್ದರು ಅವರು ಅಲ್ಲಾಹನ ವಿಧೇಯ ದಾಸರಾಗಿದ್ದರು, ಆದರೆ, ಅವರ ಪತ್ನಿ ಹವ್ವಾ(ಅ ಅವರನ್ನು ಅಲ್ಲಾಹನ ಅವಿಧೇಯತೆಗೆ ಪ್ರೇರೇಪಿಸಿದರು, ಅವರಿಗೆ ಅಲ್ಲಾಹನು ನಿಷೇಧಿಸಿದಂತಹ ಒಂದು ಮರದ ಫಲವನ್ನು ತಿನ್ನಿಸಿ ದರು, ಇದರ ಪರಿಣಾಮವಾಗಿ ಅವರು ಅಲ್ಲಾಹನ ಅನುಗ್ರಹಗಳಿಂದ ವಂಚಿತ ರಾದರು. ಅವರಿಗೆ ಸಂಕಷ್ಟಗಳ ಜೀವನ ಲಭಿಸಿತು ಎಂದು ಅದು ಹೇಳುತ್ತದೆ.

ಬೈಬಲ್‌ನ ಹಳೆಯ ಒಡಂಬಡಿಕೆಯಲ್ಲಿ ಹೀಗಿದೆ: ದೇವನು ಆದಮರಲ್ಲಿ ಕೇಳಿದನು, "ನಾನು ನಿನಗೆ ತಿನ್ನಬಾರದೆಂದು ಹೇಳಿದ ಮರದ ಫಲವನ್ನು ನೀನು ತಿಂದೆಯಾ?" ಆಗ ಆದಮ್ ಹೇಳಿದರು, "ನೀನು ನನ್ನ ಜತೆ ಸೇರಿಸಿದ ಸ್ತ್ರೀಯು ನನಗೆ ಆ ಮರದ ಫಲವನ್ನು ನೀಡಿದಳು ಮತ್ತು ನಾನು ಅದನ್ನು ತಿಂದೆ." ಅನಂತರ ದೇವನು ಹವ್ವಾರಲ್ಲಿ ಹೀಗೆ ಹೇಳಿದನು, "ನಾನು ನಿನ್ನ ಪ್ರಸವ ವೇದನೆಯನ್ನು ಹೆಚ್ಚಿಸುವೆನು. ನೀನು ನೋವಿನೊಂದಿಗೆ ಮಗುವಿಗೆ ಜನ್ಮ ನೀಡುವಿ, ನಿನ್ನ ಒಲವು ನಿನ್ನ ಪತಿಯ ಕಡೆಗಿರುವುದು ಮತ್ತು ಅವನು ನಿನ್ನ ಮೇಲೆ ಅಧಿಕಾರ ಚಲಾಯಿಸುವನು." **(ಆದಿಕಾಂಡ ಭಾಗ: 3)**

"ಬೇರೆ ಪದಗಳಲ್ಲಿ ಹೇಳುವುದಾದರೆ, ಹವ್ವಾರವರು ಆದಮರನ್ನು ಪಥಭ್ರಷ್ಟ ಗೊಳಿಸುವ ಮೂಲಕ ಯಾವ ಅಪರಾಧವನ್ನು ಎಸಗಿದರೋ ಅದಕ್ಕೆ ದೇವನ ಕಡೆಯಿಂದ ಸಿಕ್ಕಿದ ಶಿಕ್ಷೆಯು ಆಕೆಯನ್ನು ಗರ್ಭಧಾರಣೆ ಮತ್ತು ಹೆರಿಗೆಯ ಸಂಕಷ್ಟದಲ್ಲಿ ಸಿಲುಕಿಸುವುದು ಮತ್ತು ಆಕೆಯನ್ನು ಶಾಶ್ವತವಾಗಿ ಪುರುಷನ ಆಳ್ವಿಕೆಗೆ ಒಳಪಡಿಸುವುದಾಗಿತ್ತು. ಇನ್ನು ನಿರ್ಣಾಯಕ ದಿನದ ತನಕ ಪುರುಷನು ಸ್ತ್ರೀಯ ಮೇಲೆ ಆಡಳಿತ ನಡೆಸುವನು. ಈ ಸಿದ್ಧಾಂತದ ಪರಿಣಾಮವಾಗಿ ಸ್ತ್ರೀಯ ಮೇಲೆ ಪುರುಷನ ಅಧಿಕಾರವು ಹೆಚ್ಚಾಯಿತು. ಆಕೆ ದೇವನಿಗೆ ಏನೂ ಹರಕೆ ಮಾಡುವಂತಿರಲಿಲ್ಲ ತನ್ನ ಯುವ ಪ್ರಾಯದಲ್ಲಿ ತಂದೆಯ ಮನೆಯಲ್ಲಿರುತ್ತಾ ತನ್ನ ಮೇಲೆ ಯಾವುದೇ ಧಾರ್ಮಿಕ ಕಾರ್ಯವನ್ನು ಕಡ್ಡಾಯಗೊಳಿಸಿಕೊಂಡರೆ ಅದನ್ನು ತಿಳಿದ ಕೂಡಲೇ ತಂದೆಯು ಆಕೆಯನ್ನು ಅದರಿಂದ ತಡೆಯಬೇಕು. ತನ್ಮೂಲಕ ಆಕೆಯ ಹರಕೆಯಾಗಲೀ ಆಕೆ ತನ್ನ ಮೇಲೆ ಕಡ್ಡಾಯಗೊಳಿಸಿಕೊಂಡ ಧಾರ್ಮಿಕ ಕಾರ್ಯವಾಗಲೀ ನೆಲೆ ನಿಲ್ಲುವುದಿಲ್ಲ. ದೇವನು ಕೂಡಾ ಮಹಿಳೆಯನ್ನು ಮನ್ನಿಸುವನು. ಏಕೆಂದರೆ ಆಕೆಯ ತಂದೆಯು ಅದರ ಅನುಮತಿ ನೀಡಲಿಲ್ಲ. ಈ ರೀತಿ ಆಕೆಯ ಹರಕೆಗಳಾಗಲೀ ಧಾರ್ಮಿಕ ಕಾರ್ಯಗಳಾಗಲೀ ತಂದೆ ಮತ್ತು ಪತಿಯ ಅನುಮತಿಯನ್ನು ಅವಲಂಬಿಸಿರುವುದು." **(ಅರಣ್ಯಕಾಂಡ ಭಾಗ– 3)**

"ಯಹೂದಿ ಕಾನೂನಿನ ಪ್ರಕಾರ ಪುರುಷ ವಾರೀಸುದಾರನು ಇರುವಾಗ ಸ್ತ್ರೀಗೆ ವಾರೀಸು ಹಕ್ಕು ಇರುವುದಿಲ್ಲ. ಇದೇ ರೀತಿ ಮಹಿಳೆಗೆ ದ್ವಿತೀಯ ವಿವಾಹದ ಅಧಿಕಾರವಿಲ್ಲ." (ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ)

## ಕ್ರೈಸ್ತ ಧರ್ಮ ಮತ್ತು ಮಹಿಳೆ

ಮಹಿಳೆಯೊಂದಿಗೆ ಕ್ರೈಸ್ತ ಧರ್ಮದ ವರ್ತನೆಯು ಇನ್ನಷ್ಟು ಕೆಟ್ಟದಾಗಿತ್ತು. ಅದು ಈ ದುರ್ಬಲ ವರ್ಗವನ್ನು ಅತ್ಯಧಿಕ ಪತನಕ್ಕೆ ತಳ್ಳಿತು. ಮಹಿಳೆಯ ಕುರಿತು ಕ್ರೈಸ್ತ ಧರ್ಮದ ಭಾವನೆಗಳೇನೆಂದು ತಿಳಿಯಲು ತರ್‌ತೂಲೀನನ ಈ ಕೆಳಗಿನ ವಾಕ್ಯಗಳನ್ನು ಗಮನಿಸಿ:

ಸ್ತ್ರೀಯರೇ! ನಿಮ್ಮ ಪೈಕಿ ಪ್ರತಿಯೊಬ್ಬರೂ ಹವ್ವಾ ಆಗಿರುವಳೆಂಬುದನ್ನು ನೀವು ತಿಳಿದಿಲ್ಲ. ನಿಮ್ಮ ವರ್ಗದ ಕುರಿತು ದೇವನ ತೀರ್ಪು ಈಗಲೂ ನಿಮ್ಮಲ್ಲಿದೆ. ಆದ್ದರಿಂದ ಪಾಪವೂ ನಿಮ್ಮಲ್ಲಿ ಇರಲೇ ಬೇಕು. ನೀವಂತೂ ಶೈತಾನನ ದ್ವಾರವಾಗಿರುವಿರಿ. ನೀವೇ ಸುಲಭವಾಗಿ ಅಲ್ಲಾಹನ ಚಿತ್ರ ಅರ್ಥಾತ್ ಪುರುಷನನ್ನು ನಾಶಗೊಳಿಸಿದಿರಿ.

ಪೌಲನು ತಿಮಾಥೆಯನಿಗೆ ಬರೆದ ತನ್ನ ಮೊದಲನೆಯ ಪತ್ರಿಕೆಯಲ್ಲಿ ಹೀಗಿದೆ: 'ಸ್ತ್ರೀಯರು ಮೌನವಾಗಿದ್ದು ಪೂರ್ಣ ವಿಧೇಯರಾಗಿ ಉಪದೇಶವನ್ನು ಕೇಳಬೇಕು. ಉಪದೇಶ ಮಾಡುವುದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡೆಸುವುದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವುದಿಲ್ಲ. ಅವರು ಮೌನವಾಗಿರಬೇಕು. ಮೊದಲು ನಿರ್ಮಿತವಾದವರು ಆದಮನಲ್ಲವೇ, ಆಮೇಲೆ ಹವ್ವಳು. ಇದಲ್ಲದೆ ಆದಾಮನು ವಂಚನೆಗೆ ಒಳಬೀಳಲಿಲ್ಲ. ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು."

(ಪೌಲನು ತಿಮೋಥೆಯನಿಗೆ ಬರೆದ ಮೊದಲ ಪತ್ರಿಕೆ: 2: 11–14)

ಇನ್ನೊಂದು ಪತ್ರಿಕೆಯಲ್ಲಿ ಹೀಗೆ ಬರೆಯಲಾಗಿದೆ: "ಆದರೂ ಒಂದು ಸಂಗತಿಯನ್ನು ನೀವು ತಿಳಿದುಕೊಳ್ಳಬೇಕೆಂದು ನನ್ನ ಇಷ್ಟ. ಅದೇನೆಂದರೆ ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ, ಕ್ರಿಸ್ತನಿಗೆ ದೇವರು ತಲೆ ಆಗಿದ್ದಾನೆ. ಪುರುಷನು ದೇವರ ಪ್ರತಿರೂಪವೂ ಪ್ರಭಾವವೂ ಆಗಿರುವನು... ಸ್ತ್ರೀಯರಾದರೋ ಪುರುಷನ ಪ್ರಭಾವವಾಗಿದ್ದಾಳೆ. ಪುರುಷನು ಸ್ತ್ರೀಯಿಂದ ಉತ್ಪತ್ತಿಯಾಗಲಿಲ್ಲ. ಸ್ತ್ರೀಯು ಪುರುಷ ನಿಂದ ಉತ್ಪತ್ತಿಯಾದಳು. ಇದಲ್ಲದೆ ಪುರುಷನು ಸ್ತ್ರೀ ನಿಮಿತ್ತವಾಗಿ ನಿರ್ಮಾಣವಾಗ ಲಿಲ್ಲ. ಸ್ತ್ರೀಯು ಪುರುಷನ ನಿಮಿತ್ತವಾಗಿ ನಿರ್ಮಾಣವಾದಳು. ಹೀಗಿರುವುದರಿಂದ ದೂತರ (ಅಥವಾ ದೇವದೂತರು ನೋಡುತ್ತಾರೆಂದು) ನಿಮಿತ್ತವಾಗಿ ಸ್ತ್ರೀಯು ಪುರುಷನ ಅಧಿಕಾರ ಸೂಚಿಸುವ ಮುಸುಕನ್ನು ತಲೆಯ ಮೇಲೆ ಹಾಕಿಕೊಂಡಿರ ಬೇಕು."

(ಪೌಲನು ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರಿಕೆ: 11: 7–10)

# ಹಿಂದೂ ಧರ್ಮ ಮತ್ತು ಮಹಿಳೆ

ಭಾರತವು ಒಂದು ಧಾರ್ಮಿಕ ದೇಶವೆಂದು ಪರಿಗಣಿಸಲ್ಪಡುತ್ತದೆ. ಏಕೆಂದ ಅದರ ಧಾರ್ಮಿಕ ಅಸ್ತಿತ್ವವು ಇತರ ಅಸ್ತಿತ್ವಗಳಿಗಿಂತ ಸದಾ ಪ್ರಬಲ ವಾಗಿತ ಇಲ್ಲಿಯೂ ಮಹಿಳೆಗೆ ದಾಸ್ಯ ಮತ್ತು ಪರಾಧೀನತೆಯ ಜೀವನದಿಂದ ಮು ದೊರೆಯಲಿಲ್ಲ. ಭಾರತದ ಪ್ರಖ್ಯಾತ ಧರ್ಮಶಾಸ್ತ್ರಜ್ಞನೆನಿಸಿದ 'ಮನು' ಮಹಿಳೆಂ ಕುರಿತು ಹೀಗೆ ಹೇಳಿರುವನು: "ಬಾಲಕಿಯಿದ್ದಾಗಲೂ, ಯುವತಿಯಾದಾಗಲು ವೃದ್ಧೆಯಾದಾಗಲೂ ಮನೆಗಳಲ್ಲಿದ್ದಾಗಲೂ ತಾನೇ ಸ್ವತಂತ್ರವಾಗಿ ಸ್ತ್ರೀಯು ಯಾ ಕಾರ್ಯವನ್ನೂ ಮಾಡಬಾರದು." (ಮನುಸ್ಮೃತಿ: 5: 147)

"ಬಾಲ್ಯದಲ್ಲಿ ಸ್ತ್ರೀಯು ತಂದೆಯ ವಶದಲ್ಲಿ, ಯೌವನದಲ್ಲಿ ಗಂಡ ಅಧೀನದಲ್ಲಿ, ಗಂಡ ಸತ್ತ ನಂತರ ಪುತ್ರರ ಅಧೀನದಲ್ಲಿ ಬಾಳಬೇಕಲ್ಲದೇ ತಾ ಸ್ವತಂತ್ರವಾಗಿ ವ್ಯವಹರಿಸಬಾರದು." (ಮನುಸ್ಮೃತಿ 5: 148)

"ಪತಿಯನ್ನು ಬಿಟ್ಟು ಸ್ತ್ರೀಗೆ ಇನ್ನಾವ ಬೇರೆ ಯಜ್ಞವೇ ಇಲ್ಲ. ಪತಿಸೇವೆ ಯ ಬಿಟ್ಟು ಇನ್ನಾವ ವ್ರತವೂ ಇಲ್ಲ, ಉಪವಾಸವೂ ಇಲ್ಲ. ಪತಿವ್ರತಾ ಭಾವದಿಂ ಪತಿಸೇವೆ ಮಾಡುವುದರಿಂದಲೇ ಸ್ತ್ರೀಯು ಸ್ವರ್ಗಲೋಕದಲ್ಲಿ ಗೌರವ ಪಡೆಯುತ್ತಾ ಪತಿಯು ಮೃತನಾದ ಮೇಲೆ ಸಾಧ್ವಿಯಾದ ಸತಿಯು ಹೂವು, ಗಡ್ಡೆ-ಗೆಣ ಹಣ್ಣುಹಂಪಲುಗಳಿಂದ ದೇಹದ ಅಭಿಲಾಷೆಯನ್ನು ಕಡಿಮೆ ಮಾಡಿಕೊಳ್ಳ ರೀತಿಯಲ್ಲಿ ಆಹಾರ ವಿಹಾರಗಳಲ್ಲಿ ವರ್ತಿಸಬೇಕು. ಪರಪುರುಷನ ಹೆಸರನ್ನೂ ಕೂ ನುಡಿಯಬಾರದು." (ಮನುಸ್ಮೃತಿ 5:155,157)

"ಶಯ್ಯೆ, ಆಸನ, ಅಲಂಕಾರ ಇವುಗಳ ಮೋಹ, ಕಾಮ, ಕ್ರೋ ಅಪ್ರಾಮಾಣಿಕತೆ, ಪತಿದ್ರೋಹ ಮತ್ತು ದುರ್ನಡತೆ ಇವು ಸಾಮಾನ್ಯವಾಗಿ ಸ್ತ್ರೀಯಲ್ಲಿರು ಸ್ವಾಭಾವಿಕ ಗುಣಗಳು." (ಮನುಸ್ಮೃತಿ 9:17)

ಮನುವಿನ ಸ್ಮೃತಿಯಲ್ಲಿ ಲೋಪದೋಷಗಳಿಂದ ಮುಕ್ತಗೊಳಿಸಿ ಪರಿಷ್ಕರಿ ಚಾಣಕ್ಯನು ಮಹಿಳೆಯ ಕುರಿತು ಪ್ರಕಟಿಸಿರುವ ಅಭಿಪ್ರಾಯಗಳನ್ನು ನೋಡಿ ಚಾಣಕ್ಯನ ಬೋಧನೆಗಳು ದೀರ್ಘಕಾಲದ ವರೆಗೆ ಸರಕಾರದ ಮೂ ಧೋರಣೆಯಾಗಿತ್ತೆಂಬುದು ಇಲ್ಲಿ ಸ್ಮರಣೀಯ.

"ನದಿ, ಸಶಸ್ತ್ರ ಸೈನಿಕ, ಪಂಜ ಮತ್ತು ಕೊಂಬಿರುವ ಪ್ರಾಣಿ, ದೊರೆ ಮ ಸ್ತ್ರೀಯನ್ನು ನಂಬಬಾರದು." (ಚಾಣಕ್ಯ ನೀತಿ: ಭಾಗ: 2: 1: 15)

"ಸುಳ್ಳು ಹೇಳುವುದು, ಯೋಚಿಸದೆ ಕೆಲಸ ಮಾಡುವುದು, ವಂಚನೆ, ಮೂರ್ಖತ ದುರಾಸೆ, ಅಶುದ್ಧತೆ, ನಿಷ್ಕರುಣೆ ಇವು ಸ್ತ್ರೀಯ ಹುಟ್ಟು ಗುಣಗಳು."

(ಚಾಣಕ್ಯ ನೀತಿ: ಭಾಗ:

"ರಾಜಕುಮಾರರಿಂದ ಉತ್ತಮ ಚಾರಿತ್ರ್ಯ, ವಿದ್ವಾಂಸರಿಂದ ಸಿಹಿಮಾತು, ಜೂಜಾಡುವವರಿಂದ ಸುಳ್ಳು ಮತ್ತು ಸ್ತ್ರೀಯಿಂದ ಮೋಸ ಕಲಿಯಬೇಕು."

(ಚಾಣಕ್ಯ ನೀತಿ: ಭಾಗ: 2: 8:12)

"ಅಗ್ನಿ, ಜಲ, ಅಜ್ಞಾನಿ, ಸರ್ಪ, ರಾಜಮನೆತನ ಮತ್ತು ಸ್ತ್ರೀ - ಇವೆಲ್ಲವೂ ವಿನಾಶಕಾರಿಯಾಗಿವೆ. ಅವುಗಳಿಂದ ಸದಾ ಜಾಗೃತವಾಗಿರಬೇಕು."

(ಚಾಣಕ್ಯ ನೀತಿ: ಭಾಗ: 2: 14: 12)

"ಮಿತ್ರ, ಸೇವಕ ಮತ್ತು ಸ್ತ್ರೀ, ಮನುಷ್ಯನನ್ನು ತೊರೆಯುತ್ತಾರೆ. ಅವನು ಶ್ರೀಮಂತನಾದ ಮೇಲೆ ಅವನ ಬಳಿ ಪುನಃ ಬರುತ್ತಾರೆ."

(ಚಾಣಕ್ಯ ನೀತಿ: ಭಾಗ: 2: 15: 5)

ಭಾರತದಲ್ಲಿ ಪ್ರಚಲಿತವಿರುವ ಸತಿ ಪದ್ಧತಿಯು ಇಲ್ಲಿ ಮಹಿಳೆಯ ಪ್ರತ್ಯೇಕ ಅಸ್ತಿತ್ವಕ್ಕೆ ಮಾನ್ಯತೆಯಿರಲಿಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. ಆದ್ದರಿಂದಲೇ ಈ ಪದ್ಧತಿಯನುಸಾರ ಪತಿಯ ಮರಣದೊಂದಿಗೆ ಆಕೆಯ ಜೀವಿಸುವ ಹಕ್ಕನ್ನೂ ಕಸಿಯಲಾಗುತ್ತಿತ್ತು. ಹಿಂದೂ, ಯಹೂದಿ, ಕ್ರೈಸ್ತ ಮತ್ತು ಇತರ ಧರ್ಮಗಳು ಸಂಸ್ಕೃತಿ ಮತ್ತು ನಾಗರಿಕತೆಗಳ ಕೇಂದ್ರಗಳೆನಿಸಿದ ಪ್ರದೇಶಗಳಲ್ಲಿದ್ದುವು. ಈ ಎಲ್ಲ ಪ್ರದೇಶಗಳಲ್ಲಿ ಅಧಿಕಾರ ಮತ್ತು ನಾಯಕತ್ವವು ಪುರುಷರ ಕೈಯಲ್ಲೇ ಇದ್ದುವು. ಈ ಪುರುಷ ಪ್ರಧಾನ ಸಮಾಜಗಳಲ್ಲಿ ಪುರುಷರು ಮಹಿಳೆಯ ಮೇಲೆ ಎಲ್ಲ ರೀತಿಯ ದೌರ್ಜನ್ಯ, ಅಕ್ರಮ, ಅನ್ಯಾಯಗಳಿಗೆ ಧಾರ್ಮಿಕ ಸಿಂಧುತ್ವ ಲಭಿಸುವಂತಾಗಲು ಈ ಧರ್ಮಗಳಲ್ಲಿ ಸಾಕಷ್ಟು ಮಾರ್ಪಾಟುಗಳನ್ನು ಮಾಡಿಕೊಂಡಿದ್ದರು.

## ಮಹಿಳೆ ಮತ್ತು ಆಧುನಿಕ ಸಿದ್ಧಾಂತಗಳು

ಅನ್ಯಾಯದ ಪರಿಣಾಮವು ಎಂದೂ ಒಳ್ಳೆಯದಾಗುವುದಿಲ್ಲ. ಇತಿಹಾಸದುದ್ದಕ್ಕೂ ಮಹಿಳೆ ಶೋಷಣೆಗೆ ಒಳಗಾಗುತ್ತಾ ಬಂದಿದ್ದಾಳೆ. ಆಕೆಯ ಶೋಷಣೆಯು ಅಂತಿಮ ಹಂತಕ್ಕೆ ತಲುಪಿದಾಗ ಅದರ ಪರಿಣಾಮಗಳೂ ಅತ್ಯಂತ ಭಯಾನಕ ರೂಪದಲ್ಲಿ ಪ್ರಕಟವಾಗತೊಡಗಿದುವು. ಆಧುನಿಕ ಜಗತ್ತಿನ ಜೀವನದಲ್ಲಿ ಹಲವು ರಂಗಗಳಲ್ಲಿ ಕ್ರಾಂತಿಯಾಗಿರುವಂತೆ ಮಹಿಳೆಯ ಸಾಮಾಜಿಕ ಸ್ಥಾನಮಾನವೂ ಬದಲಾಗಿದೆ. ಒಂದೊಮ್ಮೆ ಪುರುಷನು ಆಕೆಗೆ ಸಮಾಜದಲ್ಲಿ ನೈಜ ಸ್ಥಾನಮಾನವನ್ನು ನೀಡುತ್ತಿರಲಿಲ್ಲ. ಆದರೆ ಸಂದರ್ಭ ಸಾಧಿಸಿ ಆಕೆ ತನ್ನ ನೈಜ ನೆಲೆಯಿಂದ ಮುಂದುವರಿಯತೊಡಗಿದಳು. ಈಗಲೂ ಮುಂದುವರಿಯುತ್ತಿದ್ದಾಳೆ. ನಿನ್ನೆಯ ತನಕ ಮನೆಯ ನಾಲ್ಕು ಗೋಡೆಗಳೊಳಗೂ ಆಕೆ ಸ್ವತಂತ್ರಳಾಗಿರಲಿಲ್ಲ. ಇಂದು ಮನೆಯ ಒಳಗಾಗಲೀ ಹೊರಗಾಗಲೀ ಆಕೆಯ ಕೈ ಹಿಡಿಯುವವರು ಯಾರೂ ಇಲ್ಲವಾಗಿದ್ದಾರೆ.

ಮಹಿಳೆಯನ್ನು ಸ್ವಾತಂತ್ರ್ಯದ ಈ ಹಂತಕ್ಕೆ ತಲುಪಿಸುವಲ್ಲಿ ಐತಿಹಾಸಿಕವಾಗಿ

ಕಾಲದ ಪರಿಸ್ಥಿತಿಯು ಆಕೆಗೆ ಅನುಕೂಲಕರವಾಗಿತ್ತು. ಆಕೆ ಪುರುಷನ ಶೋಷಣ ಯಿಂದ ಮುಕ್ತ ವಾಗಲು ಪ್ರಯತ್ನಿಸುತ್ತಿರುವಾಗ ಕೈಗಾರಿಕಾ ಕ್ರಾಂತಿಯು ಬಹ ವೇಗವಾಗಿ ಬರುತ್ತಿತ್ತು. ಈ ಕ್ರಾಂತಿಯು ಮಹಿಳಾ ವಿಮೋಚನೆಯ ಈ ಹೋರಾ ವನ್ನು ವಿಜಯ ಪಥದಲ್ಲಿ ಹಾಕಿತು. ಈ ಹಿಂದೆ ಮಹಿಳೆಯು ತನ್ನ ಕಾರ್ಯಕ್ಷೇತ್ರವೆಂದ ಪರಿಗಣಿಸಿದ್ದ ಮನೆಯಿಂದಲೂ ಆಕೆ ಬಂಡಾಯವೇಳ ಬಯಸಿದಾಗ ಬಾಹ ಲೋಕದಲ್ಲಿ ಆಕೆ ಏನು ಮಾಡಬೇಕು ಮತ್ತು ಜೀವನದ ಯಾವ ರೂಪರೇಷೆಯನು ಅನುಸರಿಸಬೇಕೆಂದು ಆಕೆಗೆ ತಿಳಿದಿರಲಿಲ್ಲ.

ಈ ಕ್ರಾಂತಿಯು ಆಕೆಯ ಮುಂದೆ ಮನೆಯ ಹೊರಗಿನ ಜೀವನದ ಒಂದ ರೂಪರೇಷೆ ಇಟ್ಟಿತು. ಅದು ಮನೆಯ ಜೀವನಕ್ಕಿಂತ ಸುಂದರವಾಗಿತ್ತು. ಅದ ಮೂಲಕ ಆಕೆ ತನ್ನ ಕೊರಳಿಗೆ ಬಿದ್ದಿರುವ ದಾಸ್ಯ ಶೃಂಖಲೆಯನ್ನು ಕಿತ್ತೆಸೆಯ ಬಹುದಾಗಿತ್ತು. ಈ ಹೊಸ ರೂಪರೇಷೆಯನ್ನು ಪಡೆದಾಗ ಒಂದೊಮ್ಮೆ ತಂದೆ ತಾಯಿ ಮತ್ತು ಪತಿಯ ವಿರುದ್ಧ ಯೋಚಿಸಲೂ ಸಾಧ್ಯವಿಲ್ಲದಂತಹ ಮಹಿಳೆ ಅವ ವಿರುದ್ಧ ಬಂಡಾಯಕ್ಕೆ ಸಿದ್ಧಳಾದಳು. ಏಕೆಂದರೆ ಈಗ ಆಕೆ ಯಾವ ವಿಷಯದಲ್ಲ ಅವರ ಆಶ್ರಯದಲ್ಲಿರಲಿಲ್ಲ. ಎಲ್ಲ ಕಡೆಯಿಂದ ಆಕೆಯ ಜೀವನೋಪಾಯ ಮಾರ್ಗಗಳು ತೆರೆದುಕೊಂಡವು.

ಈ ಬಂಡಾಯದ ಹಿಂದೆ ಮಹಿಳೆಯಲ್ಲಿ ತನ್ನ ಪರಿಸ್ಥಿತಿಯ ಸುಧಾರ ಗಿಂತಲೂ ಹೆಚ್ಚಾಗಿ ಪುರುಷನ ಬಂಧನಗಳಿಂದ ಮುಕ್ತಿ ಮತ್ತು ಆತನ ವಿರು ಸೇಡು ತೀರಿಸುವ ಭಾವನೆಯೇ ಕಾರ್ಯಪ್ರವೃತ್ತವಾಗಿತ್ತು. ಇದಕ್ಕಾಗಿ ಆಕೆ ಮೊ ಮೊದಲು ತನ್ನನ್ನು ಪುರುಷನಿಗೆ ಅಧೀನಗೊಳಿಸಿರುವಂತಹ ವ್ಯವಸ್ಥೆಯನ್ನು ಮುರಿಯ ಆರಂಭಿಸಿದಳು. ವಾಸ್ತವದಲ್ಲಿ ಈ ವ್ಯವಸ್ಥೆಯು ಸರ್ವ ಸಂಪೂರ್ಣವಾಗಿ ತ್ಯಾಜ್ಯವಾ ರಲಿಲ್ಲ. ಅದರಲ್ಲಿ ಕೆಲವು ಕುಂದು-ಕೊರತೆಗಳು ನುಸುಳಿ ಬಂದಿದ್ದುವು ಎಂಬುದ ನಿಜವೆ. ಆದರೂ ಅದರಲ್ಲಿ ಅನೇಕ ಉತ್ತಮ ಮತ್ತು ಉಪಯುಕ್ತ ಅಂಶಗಳಿದ್ದುವ ಆದ್ದರಿಂದ ಆ ವ್ಯವಸ್ಥೆಯನ್ನು ನುಚ್ಚುನೂರುಗೊಳಿಸುವುದರ ಬದಲು ಅದರ ಸುಧಾರಣೆ ಮಾಡುವ ಅಗತ್ಯವಿತ್ತು. ಆದರೆ ಯಾವುದೇ ಸಿದ್ಧಾಂತದ ವಿರು ಪ್ರಕಟವಾಗುವ ಪ್ರತಿಕ್ರಿಯೆಯು ತನ್ನ ಅಂತಿಮ ಹಂತಕ್ಕೆ ತಲುಪಿಯೇ ತೀರುತ್ತ ಆದ್ದರಿಂದ ಪುರುಷನ ಅನ್ಯಾಯ ಮತ್ತು ಶೋಷಣೆಯ ಬಗ್ಗೆ ಮಹಿಳೆಯಲ್ಲಿದ್ದ ದ್ವೇ ಮತ್ತು ಕ್ರೋಧವು ಮಹಿಳಾ ವಿಮೋಚನೆಯ ಚಳವಳಿಯನ್ನೂ ತನ್ನ ಸೀಮೆಯನು ಮೀರಿ ಮುಂದುವರಿಯುವಂತೆ ಮಾಡಿತು. ಅದು ಆಕೆಯನ್ನು ಯಾವ ಹಂತ ತಲುಪಿಸಿತೆಂದರೆ ಅಲ್ಲಿ ಆಕೆ ಮಹಿಳೆಯಾಗಿ ಉಳಿಯದೆ ಪುರುಷನ ರೂಪಧಾರ ಮಾಡಿಕೊಂಡಳು.

ವಾಸ್ತವದಲ್ಲಿ ಇದೊಂದು ಕೃತಕ ರೂಪವಾಗಿದೆ. ಮಹಿಳೆ ಎಂದ

ಪುರುಷನಾಗುವುದು ಸಾಧ್ಯವಿಲ್ಲ. ಪುರುಷನು ಮಹಿಳೆಯ ಪಾತ್ರ ನಿರ್ವಹಿಸುವುದು ಕೂಡಾ ಅಸಾಧ್ಯ. ಇಬ್ಬರೂ ಪರಸ್ಪರ ಭಿನ್ನವಾದಂತಹ ಶಕ್ತಿ-ಸಾಮರ್ಥ್ಯಗಳನ್ನು ಹೊಂದಿದವರಾಗಿದ್ದಾರೆ. ಒಂದೇ ಸ್ಥಳ, ಒಂದೇ ಹವಾಮಾನ ಹಾಗೂ ಒಂದೇ ಪರಿಸ್ಥಿತಿಯಲ್ಲಿ ಬೆಳೆಯುವ ಸ್ತ್ರೀ ಮತ್ತು ಪುರುಷರು ಶಾರೀರಿಕವಾಗಿಯೂ ಮಾನಸಿಕವಾಗಿಯೂ ಎಷ್ಟು ಭಿನ್ನರಾಗಿರುತ್ತಾರೆಂದರೆ ಪೂರ್ವ ಮತ್ತು ಪಶ್ಚಿಮದಲ್ಲಿ ವಾಸಿಸುವ ಇಬ್ಬರು ಪುರುಷರು ಅಥವಾ ಇಬ್ಬರು ಸ್ತ್ರೀಯರ ಮಧ್ಯೆ ಅಷ್ಟು ಅಂತರವಿರುವುದಿಲ್ಲ. ಇಬ್ಬರು ಪುರುಷರ ಮಧ್ಯೆ ಪ್ರಕೃತಿ ಮತ್ತು ಒಲವುಗಳಲ್ಲಿ ಎಷ್ಟೇ ವ್ಯತ್ಯಾಸವಿದ್ದರೂ ಪರಸ್ಪರ ಸಮಾನ ಗುಣಗಳು ಅವರಲ್ಲಿರುವ ಭಿನ್ನ ಗುಣಗಳಿಗಿಂತ ಎಷ್ಟೋ ಪಾಲು ಅಧಿಕವಾಗಿರುವುದು. ಈ ನಿಷ್ಪತ್ತಿಯು ಯಾವುದೇ ಸ್ತ್ರೀ ಮತ್ತು ಪುರುಷರ ಮಧ್ಯೆ ಇರಲು ಸಾಧ್ಯವಿಲ್ಲ. ಪ್ರಕೃತಿಯ ದೃಷ್ಟಿಯಲ್ಲಿ ವರ್ಗ, ವರ್ಣ, ಹವಾಗುಣ, ಭೌಗೋಳಿಕ ಮತ್ತು ಭಾಷೀಯ ವ್ಯತ್ಯಾಸಗಳಿಗೆ ಮೂಲಭೂತ ಮಹತ್ವವಿಲ್ಲವೆಂದು ಇದರಿಂದ ತಿಳಿದು ಬರುತ್ತದೆ.

ಆದರೆ ಅದರ ದೃಷ್ಟಿಯಲ್ಲಿ ಲಿಂಗಭೇದವು ಮೂಲಭೂತ ಮಹತ್ವದ್ದಾಗಿದೆ. ಆದ್ದರಿಂದಲೇ ಅದು ಸಾಮರ್ಥ್ಯಗಳನ್ನು ನೀಡುವಾಗ ಕರಿಯ-ಬಿಳಿಯ, ನೀಳಕಾಯ-ಕುಬ್ಜರ ಮಧ್ಯೆ ಯಾವುದೇ ಗಣನೀಯ ವ್ಯತ್ಯಾಸ ಮಾಡುವುದಿಲ್ಲ. ಆದರೆ ಯಾರು ಯಾವ ಲಿಂಗಕ್ಕೆ ಸಂಬಂಧಿಸಿದವನೆಂಬ ವ್ಯತ್ಯಾಸವನ್ನು ಖಂಡಿತ ಮಾಡುತ್ತದೆ. ಲಿಂಗಭೇದವು ಸಾಮಾನ್ಯ ಮತ್ತು ಆಂಶಿಕ ಭೇದವಲ್ಲ. ಬದಲಾಗಿ ಅದೊಂದು ಮೂಲಭೂತ ಭಿನ್ನತೆಯಾಗಿದೆಯೆಂಬುದನ್ನು ಇತಿಹಾಸದ ನಿರಂತರ ಅನುಭವವು ಸಾಬೀತುಪಡಿಸುತ್ತದೆ. ಈ ಅಂತರವನ್ನು ಶಿಕ್ಷಣ-ತರಬೇತಿಯ ಮೂಲಕವಾಗಲೀ ಪರಿಸ್ಥಿತಿಯ ಮೂಲಕವಾಗಲಿ ಅಳಿಸಲು ಸಾಧ್ಯವಿಲ್ಲ. ಏಕೆಂದರೆ ಮನುಷ್ಯನಿಗೆ ತನ್ನಲ್ಲಿರುವ ಸಾಮರ್ಥ್ಯಗಳನ್ನು ಮಾತ್ರ ಬೆಳೆಸಲು ಸಾಧ್ಯ. ಪ್ರಕೃತಿಯು ತನ್ನೊಳಗೆ ಇಟ್ಟಿರದ ಯಾವುದೇ ಸಾಮರ್ಥ್ಯವನ್ನು ಸೃಷ್ಟಿಸುವುದು ಅವನಿಗೆ ಸಾಧ್ಯವಲ್ಲ. ಸ್ತ್ರೀಯಾಗಲಿ, ಪುರುಷನಾಗಲಿ ಪ್ರಕೃತಿಯು ತನ್ನಲ್ಲಿ ಇರಿಸಿರುವಂತಹ ಶಕ್ತಿ-ಸಾಮರ್ಥ್ಯಗಳನ್ನು ಪೋಷಿಸಿ ಬೆಳೆಸಬಹುದು. ಆದರೆ ಯಾವುದೇ ಹೊಸ ಸಾಮರ್ಥ್ಯವನ್ನು ಸೃಷ್ಟಿಸುವುದು ಅವರಿಗೆ ಸಾಧ್ಯವಲ್ಲ. ಇದೊಂದು ವಾಸ್ತವಿಕತೆ. ಇದಕ್ಕೆ ಎಲ್ಲ ಕಾಲಗಳ ಇತಿಹಾಸವೂ ಪುರಾವೆ ಒದಗಿಸಿದೆ. ಇಂದಿನ ತನಕ ಯಾವುದೇ ವೈಜ್ಞಾನಿಕ ಸಂಶೋಧನೆಯು ಇದನ್ನು ಅಲ್ಲಗಳೆದಿಲ್ಲ.

ನೋಬೆಲ್ ಪ್ರಶಸ್ತಿ ವಿಜೇತ ಫ್ರೆಂಚ್ ವಿಜ್ಞಾನಿ ಅಲೆಕ್ಸಿಸ್ ಕೇರಲ್ 'Man the unknown' ಎಂಬ ತನ್ನ ಗ್ರಂಥದಲ್ಲಿ ಈ ರೀತಿ ಬರೆದಿರುವನು, "ಸ್ತ್ರೀ ಮತ್ತು ಪುರುಷರ ಮಧ್ಯೆ ಇರುವ ಭಿನ್ನತೆಗಳು ಮೂಲಭೂತ ಸ್ವರೂಪದ್ದಾಗಿವೆ. ಈ ಭಿನ್ನತೆಗಳು ಅವರ ನರ-ನಾಡಿಗಳ ರಚನೆಯ ಭಿನ್ನತೆಯಿಂದ ಹುಟ್ಟಿಕೊಳ್ಳುತ್ತವೆ.

ಸ್ತ್ರೀಯ ಅಂಡಾಶಯದಿಂದ ಹೊರಡುವ ರಾಸಾಯನಿಕ ವಸ್ತುವಿನ ಪ್ರಭಾವ ಹೆಣ್ಣಿನ ಪ್ರತಿಯೊಂದು ಅಂಗದ ಮೇಲೂ ಆಗುತ್ತದೆ. ಸ್ತ್ರೀ ಮತ್ತು ಪುರುಷರ ಶಾರೀರಿಕ ಮತ್ತು ಮಾನಸಿಕ ಭಿನ್ನತೆಗಳ ಕಾರಣವೂ ಇದುವೇ ಆಗಿದೆ."

ಡಾ। ಲೇಂಬ್ರೋಸ್‌ಗಿನಾ ತನ್ನ 'ಹೆಣ್ಣಿನ ಆತ್ಮ' ಎಂಬ ಗ್ರಂಥದಲ್ಲಿ ಹೀಗ ಬರೆದಿರುವಳು, "ಸ್ತ್ರೀ ಮತ್ತು ಪುರುಷರು ಕೇವಲ ತಮ್ಮ ಎತ್ತರ, ಗಾತ್ರ, ಮೂಳೆಗಳ ಜೋಡಣೆ ಮತ್ತು ಅಂಗಾಂಗಗಳ ರಚನೆಯಲ್ಲೇ ಭಿನ್ನವಾಗಿರುವುದಲ್ಲ. ಬದಲಾಗಿ ಅವರು ಸೇವಿಸುವ ಗಾಳಿ ಮತ್ತು ಆಹಾರದ ಪ್ರಮಾಣದಲ್ಲಿಯೂ ವ್ಯತ್ಯಾಸವಿದೆ ಅವರ ರೋಗಗಳ ಸ್ವರೂಪ ಭಿನ್ನವಾಗಿದೆ. ಅವರ ಮಾನಸಿಕ ಮತ್ತು ನೈತಿಕ ಒಲವುಗಳಲ್ಲಿಯೂ ಅಂತರವಿದೆ."

ಸ್ತ್ರೀ ಸ್ವಾತಂತ್ರ್ಯದ ಚಳವಳಿಯು ಇನ್ನೂ ಮೂರ್ತರೂಪ ಪಡೆಯದ 19ನೆಯ ಶತಮಾನದಲ್ಲಿಯೇ ಈ ರೀತಿಯ ವಿಚಾರಗಳು ವಿಚಾರವಂತರಲ್ಲಿ ಪ್ರಕಟವಾಗಿದ್ದವು 19ನೆಯ ಶತಮಾನದ ಎನ್‌ಸೈಕ್ಲೋಪೀಡಿಯಾದಲ್ಲಿ ಹೀಗಿದೆ, "ಸ್ತ್ರೀ–ಪುರುಷರ ಜನನಾಂಗಗಳ ರಚನೆ ಮತ್ತು ಸ್ವರೂಪದಲ್ಲಿರುವ ವ್ಯತ್ಯಾಸವು ಒಂದು ದೊಡ್ಡ ವ್ಯತ್ಯಾಸವಾಗಿ ಕಂಡರೂ ಅದು ಮಾತ್ರ ಅವರಲ್ಲಿರುವ ವ್ಯತ್ಯಾಸವಲ್ಲ. ಬದಲಾಗಿ ಸ್ತ್ರೀಯ ಇತರೆಲ್ಲ ಅಂಗಗಳೂ ಅಡಿಯಿಂದ ಮುಡಿ ತನಕ ಪುರುಷನ ಅಂಗಗಳಿಗಿಂತ ಭಿನ್ನವಾಗಿವೆ. ಮೇಲ್ನೋಟಕ್ಕೆ ಪುರುಷರ ಅಂಗದೊಂದಿಗೆ ಅತ್ಯಧಿಕ ಸಾಮ್ಯತೆಯಿರುವ ಅಂಗಗಳಲ್ಲಿಯೂ ಈ ವ್ಯತ್ಯಾಸ ಕಂಡುಬರುತ್ತದೆ."

ಎರಡು ವರ್ಗಗಳ ಮಧ್ಯೆ ಇರುವ ಈ ವ್ಯತ್ಯಾಸದ ಬೇಡಿಕೆಯೇನೆಂದರೆ ಯಾವ ವರ್ಗದಲ್ಲಿ ಯಾವ ರೀತಿಯ ಶಕ್ತಿ–ಸಾಮರ್ಥ್ಯಗಳಿವೆಯೋ ಅದರಿಂದ ಅದೇ ರೀತಿಯ ಕೆಲಸ ಮಾಡಿಸಬೇಕು. ಜೀವನದ ಹೆಚ್ಚಿನ ವ್ಯವಹಾರಗಳಲ್ಲಿ ಹೀಗೆಯೇ ಮಾಡಲಾಗುತ್ತದೆ. ಒಬ್ಬ ಇಂಜಿನೀಯರನನ್ನು ನಾವು ಕೃಷಿ ಕಾರ್ಯ ದಲ್ಲಿ ತೊಡಗಿಸುವುದಿಲ್ಲ. ಶಿಕ್ಷಣ ತಜ್ಞನನ್ನು ಸೇನೆಯಲ್ಲಿ ಸೇರಿಸಿ ಬಿಡುವುದಿಲ್ಲ ಒಂದೇ ವರ್ಗದ ಇಬ್ಬರು ವ್ಯಕ್ತಿಗಳ ಮಧ್ಯೆ ಅವರ ಸಾಮರ್ಥ್ಯಗಳು ಶಾರೀರಿ ಒಲವು ಮತ್ತು ಅಭಿರುಚಿಯಂತೆ ನಾವು ತಾರತಮ್ಯ ಮಾಡುತ್ತೇವೆ. ಹಾಗಿರುವಾಗ ಎರಡು ವಿಭಿನ್ನ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಮಧ್ಯೆ ಈ ವ್ಯತ್ಯಾಸ ಮಾಡದಿರಲ ಯಾವುದೇ ಕಾರಣವಿಲ್ಲ. ಏಕೆಂದರೆ ಅವರಿಬ್ಬರ ಶಾರೀರಿಕ ರಚನೆ, ಜನನದಿಂದ ಮರಣದ ತನಕ ಅವರ ಮೇಲೆ ಬರುವ ವಿಭಿನ್ನ ಪರಿಸ್ಥಿತಿಗಳು ಮತ್ತು ಇಬ್ಬರ ಭಾವ–ವಿಕಾರಗಳಿಂದ ಅವರ ಸೃಷ್ಟಿಯು ತೀರಾ ಭಿನ್ನವಾದ ರೀತಿಯಲ್ಲಾಗಿದೆ ಮತ್ತ ಪ್ರಕೃತಿಯು ಅವರಿಂದ ಎರಡು ವಿಭಿನ್ನ ರೀತಿಯ ಕೆಲಸ ಮಾಡಿಸಬಯಸಿದ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಆಧುನಿಕ ವಿಚಾರಧಾರೆಯ ಸಂಕುಚಿತ ದೃಷ್ಟಿಕೋನದಿಂದಾಗಿ ಅವರಿಬ್ಬರನ್ನೂ ಒಂದೇ ರಂಗಕ್ಕೆ ಎಳೆದು ತರಲಾಗಿದೆ. ಅದೆ

ರಂಗದಲ್ಲಿ ಇಬ್ಬರಿಗೂ ಪ್ರಗತಿಯ ಅವಕಾಶಗಳನ್ನು ಒದಗಿಸಲಾಗಿದೆ. ಸ್ತ್ರೀ-ಪುರುಷರ ಶಕ್ತಿ-ಸಾಮರ್ಥ್ಯಗಳು ಒಂದೇ ಆಗಿವೆ ಎಂಬುದಕ್ಕಾಗಲಿ, ಪುರುಷನು ಮಾಡುವ ಕಾರ್ಯವನ್ನು ಸ್ತ್ರೀಯೂ ಮಾಡಬಲ್ಲಳು ಎಂಬುದಕ್ಕಾಗಲಿ ಅದರ ಬಳಿ ಯಾವುದೇ ರೀತಿಯ ಪುರಾವೆಯಿಲ್ಲ.

ವಾಸ್ತವದಲ್ಲಿ ಪಾಶ್ಚಾತ್ಯರು ಸ್ತ್ರೀ-ಪುರುಷ ಸಮಾನತೆಯ ತತ್ವವನ್ನು ಅಂಗೀಕರಿಸಿರುವುದಕ್ಕೆ ಅವರಿಬ್ಬರ ಮಧ್ಯೆ ಇರುವ ಪ್ರಾಕೃತಿಕ ವ್ಯತ್ಯಾಸವು ತಪ್ಪೆಂದು ಸಾಬೀತಾಯಿತೆಂಬ ಕಾರಣಕ್ಕಾಗಿ ಅಲ್ಲ. ಬದಲಾಗಿ ಅದರ ದೃಷ್ಟಿಯಲ್ಲಿ ಈ ತತ್ವವು ಸ್ತ್ರೀ ಶೋಷಣೆಗೆ ಇರುವ ಏಕೈಕ ಪರಿಹಾರವಾಗಿದೆ. ಅದರ ದೃಷ್ಟಿಯಲ್ಲಿ ಸ್ತ್ರೀ ಶೋಷಣೆಯ ಕಾರಣ ಸಮಾಜದಲ್ಲಿ ಪುರುಷನಿಗೆ ಅಕ್ರಮ-ಅನ್ಯಾಯಕ್ಕಿರುವ ಅವಕಾಶಗಳಾಗಿವೆ. ಸ್ತ್ರೀಯು ತನ್ನ ಪ್ರಾಣ, ಸೊತ್ತು, ಮಾನವನ್ನು ರಕ್ಷಿಸಲು ಬೇಕಾಗುವಂತಹ ಹಕ್ಕುಗಳಿಂದ ವಂಚಿತವಾಗಿರುವಳು. ಆದ್ದರಿಂದ ಮಹಿಳೆಗೂ ಪುರುಷನಿಗೆ ಇರುವಂತಹ ಎಲ್ಲ ಸಾಮಾಜಿಕ ಹಕ್ಕುಗಳು ಸಿಗಬೇಕು. ಸಮಾಜದಲ್ಲಿ ಗೌರವ ಮತ್ತು ಉನ್ನತಿ ಸಿಗುವ ಸಂಪನ್ಮೂಲಗಳು ಯಾವುದಾದರೂ ಒಂದು ವರ್ಗಕ್ಕೆ ಸೀಮಿತವಾಗಿರಬಾರದು. ಪುರುಷನಂತೆ ಸ್ತ್ರೀಗೂ ಅತ್ಯುನ್ನತ ಮಟ್ಟದ ಪದವಿಯನ್ನು ಗಳಿಸುವ ಮತ್ತು ಅತ್ಯುನ್ನತ ವೃತ್ತಿಯನ್ನು ಕೈಗೊಳ್ಳುವ ಅವಕಾಶವಿರಬೇಕು. ಒಂದು ವರ್ಗಕ್ಕೆ ಸಮಾಜದಲ್ಲಿ ಅಭಿವೃದ್ಧಿಯ ಅವಕಾಶಗಳನ್ನು ಒದಗಿಸಿ ಇನ್ನೊಂದನ್ನು ಆ ಅವಕಾಶದಿಂದ ವಂಚಿತಗೊಳಿಸಿದರೆ ಅದರ ಅರ್ಥ ನಾವು ಸಮಾಜದಲ್ಲಿ ಮಾನವನ ಒಂದು ವರ್ಗವನ್ನು ಶಾಶ್ವತವಾಗಿ ನೀಚವಾಗಿರಿಸಲು ಬಯಸುತ್ತೇವೆ ಎಂದಾಗುತ್ತದೆ. ಒಂದು ವರ್ಗವು ಸಾಮಾಜಿಕವಾಗಿ ಹಿಂದುಳಿದರೆ, ಅದು ಖಂಡಿತ ಉನ್ನತ ವರ್ಗದ ಅಕ್ರಮ-ಅನ್ಯಾಯಗಳಿಗೆ ಬಲಿಯಾಗುವುದು. ಅಧಿಕಾರವಿರುವ ವರ್ಗವನ್ನು ಅಕ್ರಮ-ಅನ್ಯಾಯಗಳಿಂದ ತಡೆಯಲು ಜಗತ್ತಿನ ಯಾವ ಶಕ್ತಿಗೂ ಸಾಧ್ಯವಿಲ್ಲ.

ಮೇಲಿನ ವಾದದಲ್ಲಿ ಸ್ತ್ರೀಯ ಸಾಮಾಜಿಕ ಹಕ್ಕು ಮತ್ತು ಸಾಮಾಜಿಕ ಹೊಣೆಗಾರಿಕೆಗಳನ್ನು ಒಂದುಗೂಡಿಸಲಾಗಿದೆ. ವಾಸ್ತವದಲ್ಲಿ ಇವುಗಳ ಮಧ್ಯೆ ಮೂಲಭೂತ ವ್ಯತ್ಯಾಸವಿದೆ. ಒಬ್ಬ ವ್ಯಕ್ತಿಯೊಂದಿಗೆ ನ್ಯಾಯ ಮತ್ತು ಸಮಾನತೆಯ ವರ್ತನೆ ಮಾಡುವುದು ಮತ್ತು ಅವನನ್ನು ಒಂದು ನಿರ್ದಿಷ್ಟ ಸಾಮಾಜಿಕ ಕೆಲಸದಲ್ಲಿ ತೊಡಗಿಸುವುದು ಪರಸ್ಪರ ಭಿನ್ನ ವಿಷಯಗಳಾಗಿವೆ. ಅವುಗಳನ್ನು ಒಂದೇ ಎಂದು ಭಾವಿಸುವುದು ಅಥವಾ ಒಂದು ಇನ್ನೊಂದನ್ನು ಹೊಂದಿಕೊಂಡಿದೆಯೆಂದು ತಿಳಿಯುವುದು ಅಪಾಯಕಾರಿ ತಪ್ಪಾಗಿದೆ. ಏಕೆಂದರೆ ಇದರ ಪರಿಣಾಮವಾಗಿ ಕೆಲವು ನಿರ್ದಿಷ್ಟ ಕೆಲಸಗಳನ್ನು ಮಾಡದ ವ್ಯಕ್ತಿ ಸಾಮಾಜಿಕ ಹಕ್ಕುಗಳಿಂದಲೂ ವಂಚಿತನಾಗುವನು. ಮಹಿಳೆಯ ಮೇಲೆ ಅಕ್ರಮ-ಅನ್ಯಾಯಗಳು ನಡೆಯುತ್ತಿದ್ದರೆ ಹಾಗೂ ಆಕೆ ತನ್ನ ಹಕ್ಕುಗಳಿಂದ ವಂಚಿತಳಾಗಿದ್ದರೆ ಅದರ ಅರ್ಥ ಸರಕಾರ ಮತ್ತು ಸಮಾಜವು ತನ್ನ

ಕರ್ತವ್ಯವನ್ನು ನಿರ್ವಹಿಸುತ್ತಿಲ್ಲವೆಂದಾಗಿದೆ. ಆಕೆ ಸ್ವತಂತ್ರ ಮತ್ತು ಶಾಂತಿಯುತ ಪ್ರ ಯಂತೆ ಜೀವನ ಸಾಗಿಸುವಂತಾಗಲು ಆಕೆಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ ಸಾಂಸ್ಕೃತಿಕ ಸವಲತ್ತುಗಳನ್ನು ಒದಗಿಸಬೇಕಾದುದು ಸಮಾಜ ಮತ್ತು ಸರಕಾರ ಕರ್ತವ್ಯವಾಗಿದೆ. ಯಾವ ಸರಕಾರವು ಈ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸ ವುದಿಲ್ಲವೋ ಅದು ತನ್ನ ಅಸ್ತಿತ್ವವನ್ನೇ ಅಲ್ಲಗಳೆಯುತ್ತದೆ. ಏಕೆಂದರೆ ವ್ಯಕ್ತಿಯ ಸಾಮಾಜಿಕ ಜೀವನ ಸಾಗಿಸುವುದು ಮತ್ತು ಸರಕಾರ ರಚಿಸಿಕೊಳ್ಳುವುದು ಜೀವನ ಯಾವ ಮುಖ್ಯ ಉದ್ದೇಶಗಳನ್ನು ತನ್ನ ಸೀಮಿತ ಸಂಪನ್ಮೂಲಗಳಿಂದ ಪೂರೈಸಲ ಸಾಧ್ಯವಿಲ್ಲವೋ ಸರಕಾರವು ತನ್ನ ವಿಶಾಲ ಮತ್ತು ಶಕ್ತಿಶಾಲಿ ಸಂಪನ್ಮೂಲಗ ಮೂಲಕ ಅದನ್ನು ಪೂರ್ಣಗೊಳಿಸಲಿಕ್ಕಾಗಿದೆ. ಆದ್ದರಿಂದ ಯಾವನೇ ನಾಗರಿಕನನ ಅವನ ಮೂಲಭೂತ ಅಗತ್ಯಗಳಿಂದ ವಂಚಿತಗೊಳಿಸುವುದು ಒಂದು ನಿರ್ದಿ ವರ್ಗದೊಂದಿಗೆ ಪಕ್ಷಪಾತ ತೋರುವ ಅಥವಾ ಇನ್ನೊಂದು ವರ್ಗವನ ನ್ಯಾಯದಿಂದ ವಂಚಿಸುವ ಅಧಿಕಾರ ಯಾವ ಸರಕಾರಕ್ಕೂ ಇಲ್ಲ. ಜಗತ್ತಿನ ಯಾ ಸರಕಾರಕ್ಕೂ ಈ ಪಕ್ಷಪಾತಿ ನಿಲುವನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ.

ಆದರೆ ಯಾವುದೇ ಒಂದು ರಾಷ್ಟ್ರದ ಪ್ರಜೆಯಾದ ಮಾತ್ರಕ್ಕೆ ಎಲ್ಲ ರೀತಿ ಸರಕಾರಿ ಹೊಣೆಗಾರಿಕೆಗಳನ್ನು ಅವನ ಮೇಲೆ ಹೊರಿಸಲಾಗದು. ಏಕೆಂದ ಹೊಣೆಯನ್ನು ಅರ್ಹತೆಯ ಆಧಾರದಲ್ಲಿ ಹೊರಿಸಲಾಗುತ್ತದೆ. ಎಲ್ಲ ವ್ಯಕ್ತಿಗಳಲ್ಲಿ ಎ ರೀತಿಯ ಕೆಲಸ ಮಾಡುವ ಅರ್ಹತೆಯಿರುವುದಿಲ್ಲ. ಆದ್ದರಿಂದ ಮಹಿಳೆಯ ಮೇ ಆಕೆಗೆ ಹೊರಲು ಸಾಧ್ಯವಿರುವಷ್ಟು ಮಾತ್ರ ಹೊಣೆಯನ್ನು ವಹಿಸಬೇಕಾದುದ ವಸ್ತುನಿಷ್ಠತೆಯ ಬೇಡಿಕೆಯಾಗಿದೆ.

ಪಾಶ್ಚಾತ್ಯರು ಈ ವಾಸ್ತವಿಕತೆಯನ್ನು ನಿರ್ಲಕ್ಷಿಸಿದ್ದಾರೆ. ಇದಕ್ಕೆ ಕಾರಣವೇನೆಂದ ಅವರು ಗೌರವವನ್ನು ಕೆಲವು ವಿಶಿಷ್ಟ ವೃತ್ತಿ ಮತ್ತು ಕೈಗಾರಿಕೆ ಗಳೊಂದಿಗೆ ಜೋಡಿ ದ್ದಾರೆ. ಅವರು ಗೌರವ-ನಿಂದ್ಯತೆಗಳ ಸ್ವಯಂಕೃತ ಮಾನದಂಡ ವನ್ನು ಕಂಡುಕೊಂ ದ್ದಾರೆ. ಈ ಮಾನದಂಡವನ್ನು ಪುರುಷನ ಶಕ್ತಿ-ಸಾಮರ್ಥ್ಯಗಳನ್ನು ಮುಂದಿರಿಸಿಕೊಂಡ ರಚಿಸಲಾಗಿದೆ. ಮಹಿಳೆಯ ಅಭಿರುಚಿ ಮತ್ತು ಪ್ರಕೃತಿಗಳನ್ನು ಇದರಲ್ಲಿ ಪೂರ್ಣವಾ ಕಡೆಗಣಿಸಲಾಗಿದೆ. ತರುವಾಯ ಮಹಿಳೆಯು ಸಮಾಜದಲ್ಲಿ ಗೌರವ ಮತ್ತು ಉನ್ನ ಯನ್ನು ಬಯಸುವುದಾದರೆ ಈ ಮಾನದಂಡವನ್ನು ಪೂರ್ಣಗೊಳಿಸಬೇಕೆಂದ ಆಕೆಗೆ ಹೇಳಲಾಗಿದೆ. ನಿಜವಾಗಿ ಪ್ರಕೃತಿಯು ಯಾವ ಮಾನವ ವರ್ಗದಲ್ಲಿ ಯಾ ರೀತಿಯ ಸಾಮರ್ಥ್ಯವನ್ನಿರಿಸಿದೆಯೋ ಅದೇ ರೀತಿಯ ಕೆಲಸ ಮಾತ್ರ ಅದ ವಿಜಯಕ್ಕೆ ಹೇತುವಾಗಬಲ್ಲುದು. ಈ ರೀತಿ ಪ್ರತಿಯೊಂದು ವರ್ಗವು ಸಹಜವಾಗಿಯೆ ಸಮಾಜದಲ್ಲಿ ತನ್ನ ಸ್ಥಾನವನ್ನು ಸೃಷ್ಟಿಸಬಲ್ಲುದು ಮತ್ತು ಗೌರವ ಗಳಿಸಲಿಕ್ಕಾ ಯಾವುದೇ ಅನೈಸರ್ಗಿಕ ಹೋರಾಟದಲ್ಲಿ ತೊಡಗುವ ಅಗತ್ಯ ಅದಕ್ಕೆ ಬೀಳುವುದಿ

ಮಹಿಳೆಯ ಪ್ರಕೃತಿ ಎಂದು ಹೇಳುವುದು ಒಂದು ಕೃತಕ ಪರಿಸ್ಥಿತಿಯಾಗಿದ್ದು ಅದು ಪುರುಷನ ನಿರಂತರ ಅನ್ಯಾಯದ ಕಾರಣ ಅವಳ ಮೇಲೆ ಹೇರಲ್ಪಟ್ಟಿದೆ ಎಂದು ಹೇಳಲಾಗುತ್ತದೆ. ಮಹಿಳೆಯನ್ನು ಒಂದು ದೀರ್ಘ ಕಾಲದಿಂದ ತುಳಿತ ಮತ್ತು ದಬ್ಬಾಳಿಕೆಗೆ ಒಳಪಡಿಸಿದ್ದುದರಿಂದ ಆಕೆಯ ವೈಚಾರಿಕ ಮತ್ತು ಕ್ರಿಯಾತ್ಮಕ ಸಾಮರ್ಥ್ಯಗಳು ಉಡುಗಿ ಹೋದವು. ಪುರುಷನಿಗೇ ಸೇರಿದ್ದೆಂದು ಹೇಳಲಾಗುವ ಕ್ಷೇತ್ರಗಳಲ್ಲಿ ಮಹಿಳೆಗೆ ಕ್ರಿಯಾ ಸ್ವಾತಂತ್ರ್ಯ ನೀಡಿದ್ದರೆ ಆಕೆ ಅಲ್ಲಿ ಅತ್ಯುತ್ತಮ ಪಾತ್ರವನ್ನು ನಿರ್ವಹಿಸುತ್ತಿದ್ದಳು ಎಂದು ವಾದಿಸಲಾಗುತ್ತದೆ.

ನ್ಯಾಯ ಮತ್ತು ತರ್ಕದ ದೃಷ್ಟಿಯಿಂದ ನೋಡಿದರೆ ಈ ವಾದಕ್ಕೆ ಯಾವುದೇ ಮಹತ್ವವಿಲ್ಲ. ಏಕೆಂದರೆ ಮಹಿಳೆ ಕ್ರಿಯಾ ಸ್ವಾತಂತ್ರ್ಯವನ್ನು ಪಡೆದು ಎಲ್ಲ ಹಂತ ಗಳಲ್ಲೂ ಪುರುಷನಿಗೆ ಸಮಾನವಾಗುವ ಸಾಧ್ಯತೆಯಿರುವಂತೆಯೇ ಆಕೆ ಇದ್ದಲ್ಲೇ ಇದ್ದು ಬಿಡುವ ಸಾಧ್ಯತೆಯೂ ಅಷ್ಟೇ ಪ್ರಮಾಣದಲ್ಲಿದೆ. ಈ ಎರಡೂ ಸಾಧ್ಯತೆಗಳು ಸಮಾನವಾಗಿರುವಾಗ ಆಕೆಯಲ್ಲಿ ಅಪ್ಪಟ ಪುರುಷರ ಹೊಣೆಗಾರಿಕೆಗಳನ್ನು ನಿರ್ವಹಿಸುವ ಸಾಮರ್ಥ್ಯವಿದೆಯೆಂದು ಸಮರ್ಥಿಸುವುದಾದರೂ ಹೇಗೆ? ವಿಶೇಷವಾಗಿ ಆಕೆಯ ಪ್ರಸಕ್ತ ಮನೋವಿಜ್ಞಾನ ಮತ್ತು ಸಾಮರ್ಥ್ಯಗಳು ಜೀವನದ ಹೋರಾಟದಲ್ಲಿ ಆಕೆಯ ಮತ್ತು ಪುರುಷನ ರಂಗವು ತೀರಾ ಭಿನ್ನವಾಗಿವೆಯೆಂಬುದಕ್ಕೆ ಸಾಕ್ಷಿ ವಹಿಸುತ್ತಿರುವ ಸ್ಥಿತಿಯಲ್ಲಿ ಹಾಗೆ ಭಾವಿಸುವುದಕ್ಕೆ ಯಾವ ಸಮರ್ಥನೆಯೂ ಇರುವುದಿಲ್ಲ.

ಹಾಗೆಯೇ ಪುರುಷನು ಸದಾ ಸ್ತ್ರೀಯ ಮಟ್ಟಿಗೆ ಶೋಷಕನಾಗಿದ್ದನು ಮತ್ತು ಅವನ ಅಕ್ರಮ-ಅತ್ಯಾಚಾರಗಳಿಂದಾಗಿ ಸ್ತ್ರೀಯ ಮನೋಭಾವ ಮತ್ತು ಆಶೆಗಳು ಪ್ರಕಟವಾಗಲಿಲ್ಲ ಎಂದು ಹೇಳುವುದು ಕೂಡಾ ವಸ್ತುಸ್ಥಿತಿಗೆ ವಿರುದ್ಧವಾಗಿದೆ. ಏಕೆಂದರೆ ಪುರುಷನಿಗೆ ಅಕ್ರಮ-ಅತ್ಯಾಚಾರದ ಶಕ್ತಿಯಿರುವಂತೆಯೇ ಸ್ತ್ರೀಯಲ್ಲಿ ಎಂತಹ ಕಲ್ಲು ಹೃದಯದ ಮನುಷ್ಯನನ್ನೂ ಕರಗಿಸುವಂತಹ ಸೌಂದರ್ಯ ಮತ್ತು ಆಕರ್ಷಣೆಯ ಮಾಂತ್ರಿಕ ಶಕ್ತಿಯಿದೆ. ಆದ್ದರಿಂದ ಇತಿಹಾಸದಲ್ಲಿ ಪುರುಷರ ಅನ್ಯಾಯ-ಅಕ್ರಮಗಳಿಗೆ ನಿದರ್ಶನ ಸಿಗುವಂತೆಯೇ ತಮ್ಮ ಕಾಲದ ಅತ್ಯಂತ ಶಕ್ತಿಶಾಲಿ ಮತ್ತು ಅಧಿಕಾರಾರೂಢ ವ್ಯಕ್ತಿಗಳು ಕೂಡಾ ಮಹಿಳೆಯ ಈ ಮಾಂತ್ರಿಕ ಶಕ್ತಿಗೆ ಮರುಳಾದ ಉದಾಹರಣೆಗಳೂ ಧಾರಾಳವಾಗಿ ಸಿಗುತ್ತವೆ. ಅನೇಕ ವೇಳೆ ಮಹಿಳೆಯು ದೊಡ್ಡದೊಡ್ಡ ಅಧಿಕಾರ ಗದ್ದುಗೆ ಗಳನ್ನು ಏಕಾಂಗಿಯಾಗಿ ಅನುಭವಿಸಿದ ನಿದರ್ಶನಗಳೂ ಇವೆ. ಆದರೂ ಸಾಮಾಜಿಕ ಮನೋವಿಜ್ಞಾನದ ಸಂಶೋಧಕರ ಅಭಿಪ್ರಾಯದಂತೆ ಮಹಿಳೆಯು ತನ್ನ ಕಾರ್ಯಕ್ಷೇತ್ರದ ಹೊರಗೆ ಯಾವುದೇ ಮಹತ್ವಪೂರ್ಣ ಸಾಧನೆಯನ್ನು ಮಾಡಿಲ್ಲ.

ಇಪ್ಪತ್ತನೆಯ ಶತಮಾನದ ಲೈಂಗಿಕ ಮನೋವಿಜ್ಞಾನದ ಅತಿದೊಡ್ಡ ತಜ್ಞನೆಂದು ಪರಿಗಣಿಸಲ್ಪಡುವ 'ಹೇವುಲಾಕ್ ಎಲ್ಸ್' ತನ್ನ 'ಪುರುಷ ಮತ್ತು ಸ್ತ್ರೀ' ಎಂಬ

ಗ್ರಂಥದಲ್ಲಿ ಹೀಗೆ ಬರೆದಿರುವನು, "ಮಹಿಳೆಯು ಇತರರ ಸಹಾನುಭೂತಿಗಾಗಿ ತವಕಿಸುತ್ತಾಳೆ. ಆಕೆಯಲ್ಲಿ ಅಧಿಕಾರೀ ಮನೋಭಾವವು ಪುರುಷನಲ್ಲಿರುವಷ್ಟು ಬಲಿಷ್ಠವಾಗಿರುವುದಿಲ್ಲ."

ಈ ವಾದದ ಪುರಾವೆಗೆ ದೊಡ್ಡದೊಡ್ಡ ವೈಜ್ಞಾನಿಕ ಸಾಧನೆಗಳನ್ನು ಮಾಡಿದ ಕೆಲವು ಮಹಿಳೆಯರ ಉದಾಹರಣೆಯನ್ನೂ ಏಲ್ಸ್ ನೀಡಿದ್ದಾನೆ. ಆ ಪೈಕಿ ಒಬ್ಬ ಮಹಿಳೆಯೂ ತನ್ನ ಸಾಧನೆಯನ್ನು ಪುರುಷನಿಂದ ದೂರವಿದ್ದು ಕೊಂಡು ಮಾಡಿಲ್ಲ. ಮೇಡಮ್ ಕ್ಯೂರಿ ತನ್ನ ಪತಿ ಕ್ಯೂರಿಯ ಜತೆಯಲ್ಲಿ ವೈಜ್ಞಾನಿಕ ಸಾಧನೆ ಮಾಡಿದರೆ ಮಿಸಸ್ ಬ್ರೌನಿಂಗ್ ತನ್ನ ಪತಿ ಬ್ರೌನಿಂಗ್‌ನ ಜತೆ ಸೇರಿ ಕಾವ್ಯದಲ್ಲಿ ಸಾಧನೆ ಮಾಡಿದಳು. ಏಲಿಯಟ್ ಲೂಯಿಸ್‌ನ ಜತೆ ಕಾದಂಬರಿಯ ತನ್ನ ಸಾಧನೆಯನ್ನು ಮೆರೆದಳು. ಇವೆಲ್ಲವೂ ಪುರುಷನ ಸಹಯೋಗದಿಂದ ಅಸ್ತಿತ್ವಕ್ಕೆ ಬಂದುವು.

ತನ್ನ ಸಹಜ ಕಾರ್ಯಕ್ಷೇತ್ರದಿಂದ ಮಹಿಳೆಯು ಹೊರ ಬಂದಿರುವುದನ್ನು ಸಮರ್ಥಿಸಲು ಪಾಶ್ಚಾತ್ಯರು ಇನ್ನೊಂದು ಪುರಾವೆಯನ್ನು ನೀಡುತ್ತಾರೆ. ಮಹಿಳೆಯು ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಂದ ಹಿಂದೆ ಸರಿದರೆ ನಾಗರಿಕ ಪ್ರಗತಿಯ ವೇಗವು ಅರ್ಧದಷ್ಟು ಕುಂಠಿತವಾಗುವುದೆಂದು ಅವರು ಹೇಳುತ್ತಾರೆ. ಆದ್ದರಿಂದ 50 ವರ್ಷಗಳಲ್ಲಿ ನಮ್ಮ ನಾಗರಿಕತೆಯು ಪ್ರಗತಿಯ ಯಾವ ಮಟ್ಟಕ್ಕೆ ಏರಬೇಕೋ ಆ ಮಟ್ಟಕ್ಕೆ ತಲುಪಲು ಒಂದು ಶತಮಾನವೇ ಬೇಕಾಗಬಹುದಂತೆ. ಈ ಮಾತಿನ ತಾತ್ಪರ್ಯವೇನೆಂದರೆ ಮಹಿಳೆಯ ಮನೆವಾರ್ತೆಗೆ ಸಂಬಂಧಿಸಿದ ಚಟುವಟಿಕೆ ಮತ್ತು ಹೋರಾಟದಿಂದ ಸಮಾಜಕ್ಕೆ ಪ್ರಯೋಜನವಾಗುತ್ತಿಲ್ಲ. ಹಾಗಾಗಿ ಸಮಾಜದ ನಿರ್ಮಾಣ ಮತ್ತು ಪ್ರಗತಿಗೆ ಪೂರಕವಾದ ಕಾರ್ಯಗಳನ್ನು ಆಕೆ ಕೈಗೊಳ್ಳಬೇಕು.

ಈ ಪುರಾವೆಯು ಅತ್ಯಂತ ತಪ್ಪು ಮತ್ತು ಅವೈಜ್ಞಾನಿಕವಾಗಿದೆ. ಸಮಾಜವೆಂದರೆ ಯಾವುದೋ ಒಂದು ಕಲೆಯ ಸಂಸ್ಥೆಯಾಗಿದ್ದು ಆ ಕಲೆಯ ಅಭಿವೃದ್ಧಿಯನ್ನು ಸಮಾಜದ ಅಭಿವೃದ್ಧಿ ಎನ್ನುವಂತಿಲ್ಲ. ಸಮಾಜವು ವಿಭಿನ್ನ ಕ್ಷೇತ್ರಗಳ ಸಮ್ಮಿಲನದಿಂದ ರೂಪ ತಾಳುತ್ತದೆ. ಅದರಲ್ಲಿ ಸ್ತ್ರೀಯು ನಿರ್ವಹಿಸುವ ಕ್ಷೇತ್ರವೂ ಸೇರಿದೆ. ಈ ಕ್ಷೇತ್ರವು ಇಲ್ಲವಾದರೆ ಸಮಾಜವೇ ನಾಶವಾದೀತು. ಆದ್ದರಿಂದ ಸಮಾಜದ ಪ್ರಗತಿಯು ಅದರ ಎಲ್ಲ ಕ್ಷೇತ್ರಗಳ ಸಮಾನ ಪ್ರಗತಿಯಾಗಿದೆ ಮತ್ತು ಒಟ್ಟು ಜೀವನದ ಮಟ್ಟವು ಏರುವುದಾಗಿದೆ. ಕಾರ್ಮಿಕನಿಗೆ ತನ್ನ ಕೆಲಸದಲ್ಲಿ ಸೌಲಭ್ಯಗಳಿದ್ದು ಅದರಿಂದ ಅವನಿಗೆ ಸುಸ್ಥಿತಿ ಲಭಿಸಬೇಕು. ಪತ್ರಕರ್ತನಿಗೆ ಪತ್ರಿಕಾ ರಂಗದಲ್ಲಿ ಯಾವುದೇ ಸಂಕಷ್ಟ ಇರಬಾರದು. ವರ್ತಕನಿಗೆ ಆತನ ವ್ಯಾಪಾರದಲ್ಲಿ ಸ್ವಾತಂತ್ರ್ಯ ವಿರಬೇಕು. ಅದೇ ರೀತಿ ಮಹಿಳೆಗೆ ಆಕೆಯ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವ ಪೂರ್ಣ ಅವಕಾಶ ಲಭ್ಯವಾಗಬೇಕು ಮತ್ತು ಆಕೆಯ ಮೇಲೆ ಯಾವುದೇ ಅನಗತ್ಯ ಬಂಧನಗಳಿರಬಾರದು. ಸಾಮಾಜಿಕ ಕಲ್ಯಾಣದ ನೆಪದಲ್ಲಿ ಮಹಿಳೆಯನ್ನು ಆಕೆಯ ವಾಸ್ತವಿಕ ಕಾರ್ಯಕ್ಷೇತ್ರದಿಂದ

ಹೊರಗೆಳೆದು ತರಬಾರದು. ಅದು ಸಮರ್ಥನೀಯವೆನಿಸಬೇಕಾದರೆ ಮಹಿಳೆ ಈಗ ಸಮಾಜಕ್ಕೆ ಸಲ್ಲಿಸುತ್ತಿರುವ ಸೇವೆಯು ಅದಕ್ಕೆ ಹಾನಿಕರವೆಂದಾಗಲೀ ಅಥವಾ ಕನಿಷ್ಠ ಪಕ್ಷ ಅನುಪಯುಕ್ತ ವೆಂದಾಗಲೀ ಸಾಬೀತಾಗಬೇಕು. ಅನ್ಯಥಾ ಕಾರ್ಮಿಕನು ಕಾರ್ಖಾನೆಯನ್ನು ಬಿಟ್ಟು ಹೊರಬರಬೇಕು. ಪತ್ರಕರ್ತರು ತಮ್ಮ ಪತ್ರಿಕಾಲಯಗಳನ್ನು ಮುಚ್ಚಬೇಕು. ವ್ಯಾಪಾರಿಗಳು ತಮ್ಮ ವಹಿವಾಟುಗಳನ್ನು ಬಿಟ್ಟುಬಿಡಬೇಕು. ಆದರೆ ಯಾವ ಬುದ್ಧಿವಂತನೂ ಇದನ್ನು ಸಮರ್ಥಿಸಲಾರನು.

ಖಂಡಿತವಾಗಿಯೂ ಸ್ತ್ರೀಯು ಸಮಾಜಕ್ಕೆ ಉಪಯುಕ್ತವೆನಿಸಿದ ಕಾರ್ಯವನ್ನೇ ಮಾಡುತ್ತಿದ್ದಾಳೆ. ಆದರೆ ಆಕೆ ಕೇವಲ ಸಾಮಾನ್ಯ ಮತ್ತು ಕ್ಷುಲ್ಲಕ ಕೆಲಸಗಳಿಗೇ ಇರುವವಳು ಎಂದು ಬಗೆಯಲಾಗಿದೆ. ಆಕೆ ಸಮಾಜಕ್ಕೆ ಯಾವುದಾದರೂ ಮಹತ್ವದ ಸೇವೆಯನ್ನು ಮಾಡಬಯಸಿದರೂ ಅದಕ್ಕೆ ಆಕೆಗೆ ಅನುಮತಿ ನೀಡ ಲಾಗುವುದಿಲ್ಲ. ಪ್ರತಿಯೊಂದು ವೃತ್ತಿಯವರಿಗೆ ಯಾವಾಗ ಬೇಕಾದರೂ ತಮ್ಮ ವೃತ್ತಿಯುನ್ನು ಬದಲಿಸುವ ಸ್ವಾತಂತ್ರ್ಯವಿರುವಾಗ ಮಹಿಳೆಯ ಜತೆ ಈ ತಾರತಮ್ಯವೇಕೆ ಎಂದೂ ಹೇಳಲಾಗುತ್ತದೆ.

ಮಹಿಳೆಗೆ ಆಕೆಯ ಶಕ್ತಿ-ಸಾಮರ್ಥ್ಯಗಳಿಗೆ ಅನುರೂಪವಾದ ಕಾರ್ಯಕ್ಷೇತ್ರವನ್ನೇ ಗೊತ್ತುಪಡಿಸಬೇಕೆಂಬುದು ಬುದ್ಧಿಯ ಬೇಡಿಕೆಯಾಗಿದೆ. ಈ ಕಾರ್ಯಕ್ಷೇತ್ರವು ಯಾರಿಗಾದರೂ ದೋಷಪೂರ್ಣವೆಂದು ಕಂಡುಬಂದರೆ ಅವನು ಒಂದು ವರ್ಗವನ್ನು ಉನ್ನತಿಯ ಸೌಭಾಗ್ಯದಿಂದ ಶಾಶ್ವತವಾಗಿ ವಂಚಿಸಿರುವುದೇಕೆಂದು ಪ್ರಕೃತಿಯನ್ನೇ ಪ್ರಶ್ನಿಸಬೇಕು ಅಥವಾ ಕನಿಷ್ಠ ಪಕ್ಷ ತಾನು ಗೊತ್ತುಪಡಿಸುವ ಕಾರ್ಯಕ್ಷೇತ್ರಕ್ಕೆ ಅನುಗುಣವಾಗಿ ಸ್ತ್ರೀಯ ಕೆಲಸ ಮಾಡುವಂತಾಗಲು ಆಕೆಯ ಸಾಮರ್ಥ್ಯಗಳನ್ನು ಬದಲಾಯಿಸಬೇಕು.

ಪ್ರಸಕ್ತ ನಾಗರಿಕತೆಯ ಪ್ರಗತಿಯ ಕುರಿತು ಸ್ತ್ರೀಗೆ ಒಂದು ಪ್ರತ್ಯೇಕ ಕಾರ್ಯ ಕ್ಷೇತ್ರದಲ್ಲಿ ಮಾತ್ರ ಕೆಲಸ ಮಾಡಲು ಸಾಧ್ಯವೆಂಬ ವಿಚಾರವನ್ನು ಅದು ಅಲ್ಲಗಳೆಯುತ್ತದೆಂದೂ ಹೇಳಲಾಗುತ್ತದೆ. ಏಕೆಂದರೆ ನಾಗರಿಕತೆಯು ಯಾವ ಕ್ಷೇತ್ರದಲ್ಲಿ ಪ್ರಗತಿ ಮಾಡಿದ್ದರೂ ಅದರಲ್ಲಿ ಪುರುಷರ ಜತೆಗೆ ಸ್ತ್ರೀಯರ ಪಾತ್ರವೂ ಇದ್ದೇ ಇದೆ. ಅವರು ಪುರುಷರ ಬೆಂಬಲಕ್ಕಿಲ್ಲದಿರುತ್ತಿದ್ದರೆ ನಾಗರಿಕತೆಯ ಪ್ರಗತಿಯ ವೇಗವು ಕುಂಠಿತಗೊಳ್ಳುತ್ತಿತ್ತು ಎಂದೂ ವಾದಿಸುತ್ತಾರೆ.

ಆದರೆ ಈ ವಾದವೂ ಸತ್ಯಕ್ಕೆ ತುಂಬ ದೂರವಾಗಿದೆ. ಏಕೆಂದರೆ ಪ್ರಸಕ್ತ ನಾಗರಿಕತೆಯ ಪ್ರಗತಿಯ ಕಾರಣ ಮಾನವನು ಸಾಧಿಸಿರುವ ವೈಜ್ಞಾನಿಕ ವಿದ್ಯೆಯಾಗಿದೆ. ಇದು ಹದಿನೆಂಟು ಮತ್ತು ಹತ್ತೊಂಭತ್ತನೆಯ ಶತಮಾನದಲ್ಲಿ ಯುರೋಪಿನಲ್ಲಾಯಿತು. ಅದರ ಆಧಾರದಲ್ಲಿ ಮನುಷ್ಯನು ತನ್ನ ಜ್ಞಾನದ ವ್ಯಾಪ್ತಿಯಿಂದ ಹೊರಗಿನದ್ದೆಂದು ನಾವಿಸುತ್ತಿದ್ದ ಅನೇಕ ಭೌತಿಕ ವಾಸ್ತವಿಕತೆಗಳನ್ನು ಕಂಡು ಹಿಡಿಯುವಲ್ಲಿ ಯಶಸ್ವಿಯಾದನು.

ಈ ಸಂಶೋಧನೆಗಳೇ ಆಧುನಿಕ ನಾಗರಿಕತೆಯ ಉಗಮವಾಗಿದೆ. ಈ ಎಲ್ಲ ಸಂಶೋಧನೆಗಳು ಪುರುಷನ ಪರಿಶ್ರಮಗಳ ಫಲವಾಗಿವೆಯೆಂಬುದಕ್ಕೆ ಚರಿತ್ರೆ ಸಾಕ್ಷಿಯಿದೆ. ಇದರಲ್ಲಿ ಮಹಿಳೆಯ ಪಾಲು ಅತ್ಯಲ್ಪವಾಗಿದೆ. ಆಕೆ ಈ ಕ್ಷೇತ್ರದಲ್ಲಿ ನಾಗರಿಕತೆಯ ಮೇಲೆ ಆಳವಾದ ಪ್ರಭಾವ ಬೀರುವಂತಹ ಯಾವುದೇ ವಿಶಿಷ್ಟ ಸಾಧನೆ ಮಾಡಲಿಲ್ಲ. ಆದ್ದರಿಂದಲೇ ವಿಜ್ಞಾನದ ಯಾವ ವಿಭಾಗದಲ್ಲೂ ಮಹಿಳೆಗೆ ನಾಯಕತ್ವದ ಸ್ಥಾನ ಪ್ರಾಪ್ತವಾಗಲಿಲ್ಲ.

ಇದಕ್ಕೆ ಕಾರಣವೇನು? ಏಕೆಂದರೆ ಅದು ಆಕೆಯ ನೈಜ ಕಾರ್ಯಕ್ಷೇತ್ರವಲ್ಲ ಸ್ತ್ರೀಯು ಆ ಕಡೆ ಗಮನಹರಿಸಿದರೂ ಆ ಕ್ಷೇತ್ರವು ಆಕೆಗೆ ಅಪರಿಚಿತವಾಗಿರುತ್ತದೆ. ಈ ಕ್ಷೇತ್ರದಲ್ಲಿ ಮಹಿಳೆ ಎಷ್ಟೇ ಅವಕಾಶಗಳನ್ನು ಕಲ್ಪಿಸಿದರೂ ಆಕೆ ಪುರುಷನೊಂದಿಗೆ ಸ್ಪರ್ಧಿಸುವುದು ಅಸಾಧ್ಯ. ಮಹಿಳೆಯು ಪುರುಷನ ಕಾರ್ಯಕ್ಷೇತ್ರದ ಕೆಲಸಗಳನ್ನು ಮಾಡಬಯಸಿದರೂ ಆಕೆಯ ಸ್ತ್ರೀತ್ವವು ಅದನ್ನು ಅನುಮತಿಸುವುದಿಲ್ಲ. ಪ್ರಸಕ್ತ ಸಮಾಜವು ಆಕೆಯನ್ನು ಯಾವ ದಿಕ್ಕಿಗೆ ಕೊಂಡೊಯ್ಯುತ್ತಿದೆಯೋ ಆಕೆಯ ದೈಹಿಕ ಸಾಮರ್ಥ್ಯಗಳು ಆ ಕಡೆ ಮುಂದುವರಿಯಲು ನಿರಾಕರಿಸುತ್ತವೆ. ಈ ಸಂಘರ್ಷವು ಆಕೆಯನ್ನು ಒಂದು ಯಾತನೆಗೆ ಗುರಿಪಡಿಸಿದೆ. ಇದರಿಂದ ಸ್ವತಃ ಪಾಶ್ಚಾತ್ಯರೇ ಕಳವಳಗೊಂಡಿದ್ದಾರೆ.

ಪ್ರೊ॥ ಅರ್ನಾಲ್ಡ್ ಟ್ಯಾನ್‌ಬಿ ತಮ್ಮ ಒಂದು ಲೇಖನದಲ್ಲಿ ಹೀಗೆ ಬರೆದಿರುವರು. "ಈ ಹಿಂದೆ ನಾವು ನಮ್ಮ ಸಂಕಷ್ಟಗಳ ಪರಿಹಾರ ಹುಡುಕುವ ನಿಟ್ಟಿನಲ್ಲಿ ಅಪ್ಪಟ ಭೌತಿಕ ಆಧಾರದಲ್ಲಿ ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾದುವು. ನಮ್ಮ ಎಲ್ಲ ಯೋಜನೆಗಳೂ ನಗೆಪಾಟಲಿಗೀಡಾದುವು. ಸಾವಿರಾರು ಜನರನ್ನು ಪರಿಶ್ರಮದಿಂದ ರಕ್ಷಿಸಬಲ್ಲಂತಹ ಯಂತ್ರಗಳನ್ನು ಕಂಡು ಹಿಡಿದು ದೊಡ್ಡ ಪ್ರಗತಿಯನ್ನು ಸಾಧಿಸಿದ್ದೇವೆಂದು ನಾವು ಭಾವಿಸುತ್ತೇವೆ. ಖಂಡಿತ ಇದು ನಿಜವೆ. ಆದರೆ ಇದರ ಒಂದು ವಿಚಿತ್ರ ಪರಿಣಾಮ ಮುಂದೆ ಬಂತು. ಬಡಪಾಯಿ ಮಹಿಳೆಯು ಇಂದು ಹಿಂದೆಂದಿಗಿಂತಲೂ ಹೆಚ್ಚು ಶ್ರಮವನ್ನು ವಹಿಸುತ್ತಿರುವಳು. ಉದಾಹರಣೆಗೆ ಅಮೇರಿಕನ್ ಮಹಿಳೆಯನ್ನೇ ತೆಗೆದುಕೊಳ್ಳಿ. ಆಕೆಗೆ ತನ್ನ ಗೃಹ ಕೃತ್ಯಗಳಿಗೆ ಬಾಹ್ಯ ಸಹಾಯ ಒದಗುವುದಿಲ್ಲ. ಆಕೆಯ ಪರಿಸ್ಥಿತಿಯು ತನ್ನೆಲ್ಲ ಸಮಯವನ್ನು ಕೇವಲ ಗೃಹ ಕೃತ್ಯಗಳಲ್ಲೇ ತೊಡಗಿಸಲು ಆಕೆಗೆ ಅನುಮತಿ ನೀಡುವುದಿಲ್ಲ. ಇದರ ಪರಿಣಾಮವಾಗಿ ಆಕೆ ಇಬ್ಬಗೆಯ ಸಂಕಷ್ಟದಲ್ಲಿ ಸಿಲುಕಿರುವಳು. ಮನೆಯಲ್ಲಿ ಆಕೆ ಪತ್ನಿ ಮತ್ತು ತಾಯಿಯಾಗಿದ್ದಾಳೆ. ಹೊರಗೆ ಯಾವುದೋ ಕಛೇರಿ ಅಥವಾ ಕಾರ್ಖಾನೆಯಲ್ಲಿ ನೌಕರಿಯನ್ನು ಮಾಡುತ್ತಾಳೆ. ಯುದ್ಧ ಕಾಲದ ಬ್ರಿಟನ್‌ನಲ್ಲಿ ಮಹಿಳೆಯ ಈ ಸ್ಥಿತಿಯು ರಾಷ್ಟ್ರವ್ಯಾಪಿಯಾಗಿತ್ತು. ಪರಿಸ್ಥಿತಿಯ ಈ ತಿರುವನ್ನು ಯಾವ ದೃಷ್ಟಿಯಿಂದಲೂ ಆಶಾಜನಕವೆನ್ನುವಂತಿಲ್ಲ. ಮಹಿಳೆಯು ಮನೆಯ ನಾಲ್ಕು ಗೋಡೆಗಳನ್ನು ಬಿಟ್ಟು ಹೊರ ನಡೆದಾಗಲೆಲ್ಲಾ ಲೋಕದಲ್ಲಿ ಅವನತಿಯ ಕಾಲವು ಬಂದಿದೆ ಎಂದು ನಮ್ಮ

ಅನುಭವ ಸಾಬೀತುಪಡಿಸುತ್ತದೆ. ಕ್ರಿ.ಪೂ. ಐದನೆಯ ಶತಮಾನದಲ್ಲಿ ಗ್ರೀಸ್ ದೇಶವು ಪ್ರಗತಿಯ ಉತ್ತುಂಗಕ್ಕೇರಿತ್ತು. ಆದರೆ ಆಗ ಮಹಿಳೆಯು ಮನೆಯ ಶೋಭೆಯಾಗಿದ್ದಳು. ಅಲೆಕ್ಸಾಂಡರನ ನಂತರ ನಗರ ರಾಜ್ಯಗಳು ಅವನತಿಯ ಹಾದಿ ಹಿಡಿದ ಕಾಲದಲ್ಲಿ ನಮ್ಮ ಕಾಲದಲ್ಲಿದ್ದಂತಹ ಮಹಿಳಾ ಚಳವಳಿಗಳು ಆರಂಭಗೊಂಡಿದ್ದುವು."

ಸ್ತ್ರೀಯು ಮನೆಯ ನಾಲ್ಕು ಗೋಡೆಗಳನ್ನು ಬಿಟ್ಟು ಹೊರ ಬರುವುದು ಎರಡು ಕಾರಣಗಳಿಂದಾಗಿ ಪತನಕ್ಕೆ ಕಾರಣವಾಗುತ್ತದೆ. ಮೊದಲನೆಯದಾಗಿ ಜೀವನದ ಒಂದು ದೊಡ್ಡ ಕ್ಷೇತ್ರವು ಖಾಲಿ ಬೀಳುತ್ತದೆ. ಅದರ ಅನೇಕ ಸಮಸ್ಯೆಗಳು ಪರಿಹಾರ ಕಾಣದೆ ಉಳಿದುಬಿಡುತ್ತವೆ. ಏಕೆಂದರೆ ಆ ಸಮಸ್ಯೆಗಳನ್ನು ಮಹಿಳೆ ಮಾತ್ರ ಪರಿಹರಿಸ ಬಲ್ಲವಳಾಗಿದ್ದಾಳೆ. ಅವುಗಳ ಪರಿಹಾರ ಪುರುಷನಿಂದ ಸಾಧ್ಯವಲ್ಲ. ಎರಡನೆಯದಾಗಿ ಈ ಹೆಜ್ಜೆಯಿಂದ ಸ್ತ್ರೀ-ಪುರುಷರ ಸಂಬಂಧ ಮತ್ತು ಅವರಿಬ್ಬರ ಚಟುವಟಿಕೆಗಳು ಒಂದು ಹೊಸ ದಿಕ್ಕನ್ನು ಪಡೆಯುತ್ತವೆ. ಆ ದಿಕ್ಕಿನಲ್ಲಿ ನಡೆಯುವವನು ಇತಿಹಾಸದಲ್ಲೆಂದೂ ಯಶಸ್ವಿಯಾದದ್ದಿಲ್ಲ.

ವಾಸ್ತವದಲ್ಲಿ ಸಮಾಜದಲ್ಲಿ ಸ್ತ್ರೀ ಮತ್ತು ಪುರುಷನ ನೈಜ ಸ್ಥಾನಮಾನವನ್ನು ಮತ್ತು ಅವರಿಬ್ಬರ ಸಂಬಂಧವನ್ನು ನಿರ್ಧರಿಸುವಲ್ಲಿ ಹಳೆಯ ವಿಚಾರಧಾರೆಗಳೂ ಯಶಸ್ವಿಯಾಗಿಲ್ಲ. ಹೊಸ ಚಿಂತನೆಯೂ ಅದನ್ನು ಪರಿಹರಿಸಿಲ್ಲ.

ಕೇವಲ ಇಸ್ಲಾಮ್ ಒಂದೇ ಈ ಇಬ್ಬರ ಮನೋಧರ್ಮ, ಶಾರೀರಿಕ ಒಲವು, ವಿಚಾರ ಮತ್ತು ಕ್ರಿಯಾಶಕ್ತಿಗಳನ್ನು ವಸ್ತುಸ್ಥಿತಿಯ ಆಧಾರದಲ್ಲಿ ಅವಲೋಕಿಸಿದೆ. ಆದ್ದರಿಂದಲೇ ಅದು ನಾಗರಿಕತೆಯ ವ್ಯವಸ್ಥೆಯಲ್ಲಿ ಅವರಿಬ್ಬರ ಸ್ಥಾನಮಾನವನ್ನು ನಿರ್ಧರಿಸುವಲ್ಲಿ ಸಂಪೂರ್ಣ ಯಶಸ್ಸು ಕಂಡಿದೆ.

ಮೊಟ್ಟಮೊದಲು ಅದು ಒಂದು ವಾಸ್ತವಿಕತೆಯನ್ನು ನಮ್ಮ ಮುಂದಿಡುತ್ತದೆ. ಪ್ರಕೃತಿಯು ಅಸ್ತಿತ್ವ ಮತ್ತು ಜೀವನದ ಪರಂಪರೆಯನ್ನು ಎರಡು ಪರಸ್ಪರ ವಿರುದ್ಧ ವರ್ಗಗಳ ಸಹಾಯದಿಂದ ಜಾರಿಯಲ್ಲಿರಿಸಿದೆ. ಈ ಉದ್ದೇಶಕ್ಕಾಗಿ ಅದು ಯಾವ ವರ್ಗದಿಂದ ಯಾವ ರೀತಿಯ ಕೆಲಸ ಮಾಡಿಸಬಯಸುತ್ತದೋ ಅದಕ್ಕೆ ಅದೇ ರೀತಿಯ ಸಾಮರ್ಥ್ಯಗಳನ್ನು ನೀಡಿದೆ. ಈ ಪೈಕಿ ಪ್ರತಿಯೊಂದು ವರ್ಗದ ಉನ್ನತಿಯು ಅದರ ಶಾರೀರಿಕ ಶಕ್ತಿಗಳು ಪ್ರಕೃತಿಯ ಇಚ್ಛೆಯ ಈಡೇರಿಕೆಯಲ್ಲಿ ವ್ಯಯವಾಗುವುದರಲ್ಲಿ ಅಡಕವಾಗಿದೆ.

ಈ ಸಿದ್ಧಾಂತದ ಪ್ರಕಾರ ಸಮಾಜದಲ್ಲಿ ಸ್ತ್ರೀ-ಪುರುಷರ ಕಾರ್ಯಕ್ಷೇತ್ರಗಳು ಪರಸ್ಪರ ಭಿನ್ನವಾಗಿರುವುವು. ಆದರೆ ಯಾವುದೇ ವರ್ಗಕ್ಕೆ ಮತ್ತೊಂದು ವರ್ಗದಲ್ಲಿ ಇಲ್ಲದೆ ಇರುವ ವಿಶಿಷ್ಟ ಗುಣ ಮತ್ತು ಶಕ್ತಿಗಳಿಂದಾಗಿ ಯಾವುದೇ ಶ್ರೇಷ್ಠತೆ ಪ್ರಾಪ್ತವಾಗಲಾರದು. ಯಾವ ವರ್ಗವೂ ತನ್ನ ಪಾಲಿನ ಪರಿಶ್ರಮವನ್ನು ನಿಂದನೀಯ

ಮತ್ತು ನಿಕೃಷ್ಟವೆಂದು ಪರಿಗಣಿಸುವ ಪರಿಸ್ಥಿತಿಯೂ ಬರಲಾರದು. ತದ್ವಿರುದ್ಧವಾ ಪ್ರಕೃತಿ ತೋರಿಸುವ ಮಾರ್ಗದಲ್ಲಿ ನಡೆಯುವವರು ಸಮಾಜದ ಪ್ರೋತ್ಸಾಹ ಮತ್ತು ಗೌರವಕ್ಕೆ ಪಾತ್ರರಾಗುವರು. ಯಾರ ಪ್ರಯತ್ನಗಳು ಪ್ರಕೃತಿಯ ಈ ರಾಜಮಾರ್ಗದಿಂದ ಸರಿದಿರುವುದೋ ಅವರು ನಿಂದ್ಯತೆ ಮತ್ತು ಪಶ್ಚಾತ್ತಾಪಕ್ಕೆ ಗುರಿಯಾಗುವರು. ಜತೆ ಇದರ ಪರಿಣಾಮವಾಗಿ ಪ್ರತಿಯೊಂದು ವರ್ಗಕ್ಕೆ ತನ್ನ ಕಾರ್ಯಕ್ಷೇತ್ರದಲ್ಲಿ ಮುನ್ನಡೆಯುವ ಸಂಪೂರ್ಣ ಅವಕಾಶಗಳು ಲಭ್ಯವಾದರೂ ಆ ಕಾರ್ಯಕ್ಷೇತ್ರದ ಹೊರಗೆ ಅದು ಚಟುವಟಿಕೆಗಳನ್ನು ಕನಿಷ್ಠಗೊಳಿಸಲಾಗುವುದು.

ವ್ಯಾವಹಾರಿಕ ಜೀವನದಲ್ಲಿ ಮನುಷ್ಯನು ಉನ್ನತ ತತ್ವಗಳನ್ನೇ ಪಾಲಿಸುವುದಲ್ಲ ಬದಲಾಗಿ ಅವನು ತನ್ನ ಭಾವನೆಗಳು ತಣಿಯುವ ಮತ್ತು ತನ್ನ ಪಾಲಿಗೆ ಹೆಚ್ಚು ಸಂತೋಷದಾಯಕ ಮತ್ತು ಸುಂದರವಾದ ಪ್ರೇರಕಗಳ ಹಿಂದೆ ಧಾವಿಸುತ್ತಾನೆ ಆದ್ದರಿಂದ ಇಸ್ಲಾಮೀ ಸಿದ್ಧಾಂತದ ಮೇಲೆ ವಿಶ್ವಾಸವಿದ್ದಾಗ್ಯೂ ಪುರುಷನು ಸ್ತ್ರೀಯೊಂದಿಗೆ ಸಮಾನತೆಯ ವರ್ತನೆ ಕೈಗೊಳ್ಳುವನೆಂದು ನಿರೀಕ್ಷಿಸಲಾಗದು ಏಕೆಂದರೆ ತನಗೆ ಇತರರ ಮೇಲೆ ಮೇಲುಗೈ ಮತ್ತು ಅಧಿಕಾರ ಪ್ರಾಪ್ತವಾ ಬೇಕೆಂಬುದು ಮನುಷ್ಯನಲ್ಲಿರುವ ಅತ್ಯಂತ ಶಕ್ತಿಶಾಲಿ ಒಲವಾಗಿದೆ. ಈ ಒಲವು ದುರ್ಬಲ ಸೃಷ್ಟಿಯನ್ನು ದುರ್ಬಲವಾಗಿಯೇ ಇರಿಸಿ ಅದಕ್ಕೆ ಮೇಲೆ ಬರುವ ಮತ್ತು ಸಮಾನವಾಗುವ ಅವಕಾಶವೇ ಕೊಡದಂತೆ ಆತನನ್ನು ನಿರ್ಬಂಧಿಸುವುದು ಎಂದು ಹೇಳುವ ಮೂಲಕ ಒಬ್ಬ ವ್ಯಕ್ತಿ ಈ ಸಿದ್ಧಾಂತವನ್ನು ಅಪಮೌಲ್ಯಗೊಳಿಸ ಬಹುದು ಇದು ಲೋಕದ ಇತರ ಸಿದ್ಧಾಂತಗಳ ಕುರಿತು ಸರಿಯಾಗಿರಲೂಬಹುದು. ಆದರೆ ಇಸ್ಲಾಮೀ ಸಿದ್ಧಾಂತಗಳ ಕುರಿತು ಈ ರೀತಿ ಯೋಚಿಸುವುದು ತಪ್ಪಾದೀತು ಏಕೆಂದರೆ ಅವುಗಳ ಹಿಂದೆ ಸರ್ವಶಕ್ತನ ಅಸ್ತಿತ್ವದ ಮೇಲಿನ ದೃಢವಾದ ನಂಬಿಕೆ ಮತ್ತು ಅವನ ಅಪಾರ ಭಯವಿದೆ. ಈ ದೃಢವಿಶ್ವಾಸಕ್ಕೆ ವಿರುದ್ಧವಾಗಿ ವರ್ತಿಸುವುದೆಂದರೆ ರಾತ್ರಿ ನೋಡಿದ ಪಾಳು ಬಾವಿಗೆ ಹಗಲು ಹೋಗಿ ಬೀಳುವುದಾಗಿದೆ.

ಆದರೂ ಇಸ್ಲಾಮ್ ಸ್ತ್ರೀಯ ಅದೃಷ್ಟವನ್ನು ಪುರುಷನ ದಯಾದಾಕ್ಷಿಣ್ಯಕ್ಕೆ ಬಿಟ್ಟು ಬಿಡಲಿಲ್ಲ. ದೇವಭಯವು ಅವನನ್ನು ಅಕ್ರಮ-ಅನ್ಯಾಯಗಳಿಂದ ತಡೆದರಾ ಯಿತು ಇಲ್ಲವಾದರೆ ಅವನು ಎಲ್ಲ ರೀತಿಯ ಅಕ್ರಮ-ಅನ್ಯಾಯಗಳನ್ನೆಸಗಬಹುದು ಎಂಬಂತಹ ಪರಿಸ್ಥಿತಿಯನ್ನು ಅದು ಉಳಿಸುವುದಿಲ್ಲ. ಕಾನೂನಿನ ದೃಷ್ಟಿಯಲ್ಲೂ ಸ್ತ್ರೀಯ ಸ್ಥಾನಮಾನವನ್ನು ಅತ್ಯಂತ ಬಲಿಷ್ಠಗೊಳಿಸಲಾಗಿದೆ. ಆಕೆ ತನ್ನ ಶಾರೀರಿಕ ದೌರ್ಬಲ್ಯದ ಹೊರತಾಗಿಯೂ ಸಮಾಜದಲ್ಲಿ ಶೋಷಿತ ಹಾಗೂ ಅಸಹಾಯಕ ಳಾಗಿರಬಾರದು ಮತ್ತು ಹಸಿವು ಬಡತನದಲ್ಲಿ ಸಿಲುಕಿ ಬಿಡಬಾರದೆಂದು ಅದು ವ್ಯವಸ್ಥೆ ಮಾಡಿದೆ ಆಕೆಗೆ ಭಾಷಣ ಮತ್ತು ಬರವಣಿಗೆಯ ಸ್ವಾತಂತ್ರ್ಯವಿರುವುದು. ರಾಷ್ಟ್ರದ ಎಲ್ಲ ಸಂಪನ್ಮೂಲಗಳಿಂದ ಪುರುಷನು ಪ್ರಯೋಜನ ಪಡೆಯುವಂತೆಯೇ ಸ್ತ್ರೀಯೂ

ಅವುಗಳಿಂದ ಪ್ರಯೋಜನ ಪಡೆಯುವಳು. ನ್ಯಾಯ ತೀರ್ಮಾನದಲ್ಲಿ ಆಕೆಯ ಜತೆ ಯಾವುದೇ ತಾರತಮ್ಯ ಎಸಗಲಾಗದು. ಆಕೆಯ ಪ್ರಾಣ, ಸೊತ್ತು-ವಿತ್ತ ಮತ್ತು ಮಾನ-ಮರ್ಯಾದೆಗಳಲ್ಲಿ ಹಸ್ತಕ್ಷೇಪ ನಡೆಸುವ ಅಧಿಕಾರ ಯಾರಿಗೂ ಇರಲಾರದು. ತಂದೆ-ತಾಯಿ, ಪತಿ ಮತ್ತು ಆಡಳಿತಾಧಿಕಾರಿಗೆ ಕೂಡಾ ಆಕೆಯ ಮುಂದೆ ಯಾವುದೇ ಕಾನೂನುಬಾಹಿರ ಬೇಡಿಕೆಯನ್ನಿಡುವ ಅನುಮತಿಯಿರಲಾರದು.

ಈ ರೀತಿಯ ಬಿಗು ಕಾನೂನಿನ ಜತೆಗೆ ಇಸ್ಲಾಮ್ ಪುರುಷನಲ್ಲಿ ಆಕೆಯ ಬಗ್ಗೆ ಪ್ರೀತಿ-ವಾತ್ಸಲ್ಯಗಳನ್ನು ಬೆಳೆಸುತ್ತದೆ. ಸ್ತ್ರೀ ಒಂದು ದುರ್ಬಲ ಸೃಷ್ಟಿಯಾಗಿರುವಳು. ಆದ್ದರಿಂದ ಆಕೆ ನಿಮ್ಮ ಸಹಾನುಭೂತಿ-ಅನುಕಂಪ ಹಾಗೂ ಪ್ರೀತಿ-ವಾತ್ಸಲ್ಯಗಳಿಗೆ ಅರ್ಹಳಾಗಿರುವಳೇ ವಿನಾ ಕಠಿಣತೆ ಮತ್ತು ಹಿಂಸೆಗೆ ಅರ್ಹಳಲ್ಲ. ಅಧಿಕಾರ ಮತ್ತು ಮೇಲ್ಮೆಯು ಅಲ್ಲಾಹನ ಗುಣವಾಗಿದೆ. ಪುರುಷನಿಗೆ ಸ್ತ್ರೀಗಿಂತ ಅಲ್ಲಾಹನ ಈ ಗುಣವು ಸ್ವಲ್ಪ ಹೆಚ್ಚಾಗಿ ದೊರೆತಿದ್ದರೆ ಅವನ ಪ್ರೇಮ ಮತ್ತು ಅನುಕಂಪವೂ ಹೆಚ್ಚಾಗಿರಬೇಕಾಗಿದೆ. ಏಕೆಂದರೆ ಅಲ್ಲಾಹನು ಎಷ್ಟು ದೊಡ್ಡ ಅಧಿಕಾರವನ್ನು ಹೊಂದಿರುವನೋ ಅಷ್ಟೇ ದೊಡ್ಡ ಕರುಣಾನಿಧಿಯೂ ದಯಾಮಯನೂ ಆಗಿರುವನು. ಅಧಿಕಾರದ ಮದವು ಒಬ್ಬನಲ್ಲಿ ಮೃಗೀಯತೆಯನ್ನು ಸೃಷ್ಟಿಸಿದರೆ ಅದು ಅವನ ಅಲ್ಪತನವಾಗಿದೆ.

❖ ❖ ❖

# ಇಸ್ಲಾಮೀ ಸಮಾಜದಲ್ಲಿ ಮಹಿಳೆ

## ಮೂಲಭೂತ ಕಲ್ಪನೆಗಳು

ಒಂದು ಜೀವನ ವ್ಯವಸ್ಥೆಯನ್ನು ತಿಳಿಯಬೇಕಾದರೆ ಅದನ್ನು ಅಸ್ತಿತ್ವಕ್ಕೆ ತಂದ ಸಿದ್ಧಾಂತಗಳನ್ನು ಅರಿಯಬೇಕು. ಏಕೆಂದರೆ ಆ ಜೀವನ ವ್ಯವಸ್ಥೆಯ ರೂಪುರೇಷೆ ಮತ್ತು ಅದರ ಸ್ವಭಾವವನ್ನು ಆ ಸಿದ್ಧಾಂತಗಳೇ ನಿರ್ಧರಿಸುತ್ತವೆ. ಅದರಿಂದಲೇ ಸಾಮಾಜಿಕ, ಸಾಂಸ್ಕೃತಿಕ ಮತ್ತು ನಾಗರಿಕ ಹಕ್ಕುಗಳು ನಿರ್ಣಯಿಸಲ್ಪಡುತ್ತವೆ. ಒಟ್ಟಿ ನಲ್ಲಿ ಅವುಗಳ ಬುನಾದಿಯಲ್ಲೇ ಜೀವನದ ಸಂಪೂರ್ಣ ಚೌಕಟ್ಟಿನ ನಿರ್ಮಾಣವಾಗುತ್ತದ ಮತ್ತು ವ್ಯಕ್ತಿಗಳೊಂದಿಗೆ ವರ್ತಿಸ ಲಾಗುತ್ತದೆ. ಆದ್ದರಿಂದ ಇಸ್ಲಾಮಿ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನ, ಆಕೆಯ ಹಕ್ಕು-ಅಧಿಕಾರಗಳು ಹಾಗೂ ಕರ್ತವ್ಯಗಳನ್ನು ತಿಳಿ ಯಲು ಮೊದಲು ಮಹಿಳೆಯ ಕುರಿತು ಇಸ್ಲಾಮಿನ ಕಲ್ಪನೆಗಳೇನೆಂದು ತಿಳಿಯುವುದು ಅಗತ್ಯ. ಅದರ ಆಧಾರದಲ್ಲೇ ವಿವರವಾದ ಅಧ್ಯಯನ ನಡೆಸುವುದು ಸಾಧ್ಯ.

## 1. ಮನುಷ್ಯನು ಗೌರವಾರ್ಹನು

ಇಸ್ಲಾಮಿನ ಬೋಧನೆಗಳ ತಿರುಳೇನು ಎಂದು ನೀವು ಕೇಳಿದರೆ ಅದರ ಉತ್ತರ ಒಂದೇ ವಾಕ್ಯದಲ್ಲಿ "ಅದು ಮನುಷ್ಯನ ಘನತೆ ಮತ್ತು ಉನ್ನತಿಯ ಸಂದೇಶವಾಗಿದೆ" ಎಂದು ಹೇಳಬಹುದು. ಅದು ಮನುಷ್ಯನನ್ನು ಅವನತಿಯ ಪಾತಾಳದಿಂದ ಮೇಲೆತ್ತಿ ಉನ್ನತಿಯ ಶಿಖರಕ್ಕೆ ಏರಿಸಬಯಸುತ್ತದೆ. ಅದು ಸ್ವಾಭಿಮಾನ ಮತ್ತು ಮಾನವ ಘನತೆಯನ್ನು ಬೋಧಿಸುತ್ತದೆ. ಅದು ಮನುಷ್ಯ ನನ್ನು ಏಕದೇವಾರಾಧನೆಯತ್ತ ಕರೆಯುವುದೇಕೆಂದರೆ ಮನುಷ್ಯನು ಆ ಒಂದು ಆಸ್ಥಾನದಲ್ಲಿ ತನ್ನ ತಲೆಯನ್ನು ಬಾಗಿಸುವ ಮೂಲಕ ವಿಶ್ವದ ಇತರೆಲ್ಲ ಸೃಷ್ಟಿ ಗಳಿಗಿಂತ ಶ್ರೇಷ್ಠನಾಗಬೇಕು. ಇಸ್ಲಾಮಿನ ದೃಷ್ಟಿಯಲ್ಲಿ ಮನುಷ್ಯನು ಮನುಷ್ಯನೆಂಬ ನೆಲೆಯಲ್ಲಿ ತನ್ನ ಸೃಷ್ಟಿ ಮತ್ತು ಗುಣಗಳಲ್ಲಿ ಪ್ರಕೃತಿಯ ಒಂದು ಮಹಾನ್ ಸಾಧನೆಯಾಗಿದ್ದಾನೆ. ಅವನು ತನ್ನ ಬಾಹ್ಯರೂಪ ಮತ್ತು ಆಂತರಿಕ ಗುಣ ಗಳೆರಡರ ದೃಷ್ಟಿಯಲ್ಲೂ ವಿಶ್ವದ ಅತ್ಯಂತ ಗೌರವಾರ್ಹ ಅಸ್ತಿತ್ವವಾಗಿದ್ದಾನೆ. ಅವನ ಮಹಾನತೆ, ಮೇಲ್ಮೆ, ಘನತೆ ಮತ್ತು ಗೌರವಕ್ಕೆ ಸರಿಸಾಟಿಯಾದ ಯಾವ ಸೃಷ್ಟಿಯೂ ಶಕ್ತಿಯೂ ಜಗತ್ತಿನಲ್ಲಿಲ್ಲ.

"ನಾವು ಆದಮರ ಸಂತತಿಗೆ ಶ್ರೇಷ್ಠತೆಯನ್ನು ಪ್ರದಾನ ಮಾಡಿದ್ದುದೂ ಅವರಿಗೆ ನೆಲ, ಜಲಗಳಲ್ಲಿ ಯಾನಗಳನ್ನು ದಯಪಾಲಿಸಿದ್ದುದೂ ಅವರಿಗೆ ಶುದ್ಧ ವಸ್ತುಗಳಿಂದ ಜೀವನಾಧಾರ ನೀಡಿದ್ದುದೂ ನಮ್ಮ ಅನೇಕ ಸೃಷ್ಟಿಗಳ ಮೇಲೆ ಉತ್ಕೃಷ್ಟತೆ ಕೊಡ ಮಾಡಿದುದೂ ನಮ್ಮ ಅನುಗ್ರಹವಾಗಿದೆ." (ಪವಿತ್ರ ಕುರ್‌ಆನ್: 17:70)

"ನಾವು ಮಾನವನನ್ನು ಅತ್ಯುತ್ತಮ ಪ್ರಕೃತಿಯಲ್ಲಿ ಸೃಷ್ಟಿಸಿರುತ್ತೇವೆ." (ಪವಿತ್ರ ಕುರ್‌ಆನ್, 95:4)

"ನಿಮ್ಮ ಪ್ರಭು ದೇವಚರರೊಡನೆ ಹೇಳಿದ ಸಂದರ್ಭವನ್ನು ಸ್ಮರಿಸಿರಿ, 'ನಾನು ಮಣ್ಣಿನಿಂದ ಒಬ್ಬ ಮಾನವನನ್ನು ಸೃಷ್ಟಿಸುವವನಿದ್ದೇನೆ. ತರುವಾಯ ನಾನು ಅವನನ್ನು ಪೂರ್ಣವಾಗಿ ನಿರ್ಮಿಸಿದಾಗ ಮತ್ತು ಅವನೊಳಗೆ ನನ್ನ ಆತ್ಮವನ್ನು ಊದಿದಾಗ, ನೀವು ಅವನ ಮುಂದೆ ಸಾಷ್ಟಾಂಗವೆರಗಿ ಬಿಡಿರಿ.' ಈ ಆಜ್ಞೆಯ ಪ್ರಕಾರ ದೇವಚರರೆಲ್ಲರೂ ಸಾಷ್ಟಾಂಗವೆರಗಿದರು- ಆದರೆ ಇಬ್‌ಲೀಸನು ತನ್ನ ದೊಡ್ಡಸ್ತಿಕೆಯ ಅಹಂಭಾವ ಪ್ರಕಟಿಸಿದನು ಮತ್ತು ಅವನು ಸತ್ಯನಿಷೇಧಿಗಳಲ್ಲಾಗಿ ಬಿಟ್ಟನು. ಆಗ ಅಲ್ಲಾಹನು, 'ಇಬ್‌ಲೀಸ್! ನಾನು ನನ್ನೆರಡೂ ಕೈಗಳಿಂದ ನಿರ್ಮಿಸಿ ದಂತಹವನ ಮುಂದೆ ಸಾಷ್ಟಾಂಗವೆರಗುವುದರಿಂದ ಯಾವ ವಸ್ತು ನಿನ್ನನ್ನು ತಡೆ ಯಿತು? ನೀನು ಅಹಂಭಾವ ತೋರಿಸುವೆಯಾ? ಅಥವಾ ನೀನೇ ಉನ್ನತ ಮಟ್ಟದವ ರಲ್ಲಾಗಿರುವೆಯಾ?' ಎಂದು ಕೇಳಿದನು." (ಪವಿತ್ರ ಕುರ್‌ಆನ್: 38: 71–75)

ಈ ಸೂಕ್ತಗಳು ಮತ್ತು ಇಂತಹ ಇನ್ನೂ ಅನೇಕ ಸೂಕ್ತಗಳು ನಿಜವಾದ ಅರ್ಥದಲ್ಲಿ ಲೋಕಕ್ಕೆ ಮನುಷ್ಯನ ನೈಜ ಮಹಾನತೆಯ ಪ್ರಜ್ಞೆ ನೀಡಿತು. ಅವನು ತನ್ನ ಅಸ್ತಿತ್ವದ ಉದ್ದೇಶ ಮತ್ತು ತನ್ನಲ್ಲಿ ಅಂತರ್ಲೀನವಾಗಿರುವ ವೈಶಿಷ್ಟ್ಯಗಳ ದೃಷ್ಟಿಯಿಂದ ಅತ್ಯುನ್ನತನಾಗಿದ್ದಾನೆ. ಅವನ ಕಡೆ ತಾತ್ಸಾರದ ದೃಷ್ಟಿ ಬೀರುವುದಕ್ಕೆ ಅಥವಾ ಅವನ ಉನ್ನತಿಗೆ ಧಕ್ಕೆಯಾಗುವಂತಹ ವರ್ತನೆಯನ್ನು ಅವನ ವಿರುದ್ಧ ಕೈಗೊಳ್ಳುವುದಕ್ಕೆ ಸೃಷ್ಟಿಕರ್ತನು ಆಸ್ಪದವನ್ನೇ ಇಟ್ಟಿಲ್ಲ. ಯಾರಾದರೂ ಈ ನಿಯಮವನ್ನು ಉಲ್ಲಂಘಿಸಿದರೆ ಅವನು ದಯಪಾಲಿಸಿದ ಗೌರವಾದರಗಳಿಗೆ ಪಂಥಾಹ್ವಾನ ಒಡ್ಡಿದಂತಾಗುತ್ತದೆ. ವಿಮರ್ಶಾತೀತವಾದ ಮತ್ತು ಸಂಪೂರ್ಣ ಸತ್ಯವಾದ ಒಂದು ಕಾನೂನನ್ನು ಉಲ್ಲಂಘಿಸಿದಂತಾಗುತ್ತದೆ.

## 2. ಶ್ರೇಷ್ಠತೆಯ ಮಾನದಂಡ - ಸತ್ಯವಿಶ್ವಾಸ ಮತ್ತು ಸದಾಚಾರ

ಈ ಕಲ್ಪನೆಯನ್ನು ಒಪ್ಪಿಕೊಂಡರೆ ಮನುಷ್ಯನ (ಸ್ತ್ರೀಯಾಗಲಿ, ಪುರುಷನಾಗಲಿ) ಗೌರವವು ಭೂಮಿಯ ಮಣ್ಣಿನಿಂದ ಉನ್ನತವಾಗಿ ಸೂರ್ಯ, ಚಂದ್ರ, ನಕ್ಷತ್ರ ಗಳಿಗಿಂತಲೂ ಮುಂದೆ ಸಾಗುತ್ತದೆ. ಮನುಷ್ಯನು ಅವನ ಊಹೆಗೆ ನಿಲುಕುವಂತಹ ಅತ್ಯುನ್ನತವಾದ ಸ್ಥಾನಮಾನವನ್ನು ಪಡೆಯುತ್ತಾನೆ. ಒಂದು ವೇಳೆ ಅವನು ತನ್ನ

ವಿಚಾರ ಆಚಾರಗಳಿಂದಾಗಿ ತನ್ನನ್ನು ಆ ಉನ್ನತಿಗೆ ಅನರ್ಹಗೊಳಿಸಿದರೆ ಜಗತ್ತಿ ಯಾವ ಶಕ್ತಿಯಿಂದಲೂ ಅವನಿಗೆ ಉನ್ನತಿ ಮತ್ತು ಗೌರವವನ್ನು ತಂದುಕೊಡಲಾಗದು

ಇಸ್ಲಾಮಿನ ದೃಷ್ಟಿಯಲ್ಲಿ ಮನುಷ್ಯನ ಯಶಸ್ಸು ಮತ್ತು ನಷ್ಟವು ಅವನ ಸದ್ವಿಚಾ ಮತ್ತು ಸದಾಚಾರವನ್ನು ಹೊಂದಿಕೊಂಡಿದೆ. ಮಹಿಳೆಯನ್ನು ಮಹಿಳೆ ಯಾಗಿರು ಕಾರಣಕ್ಕಾಗಿ ನಿಕೃಷ್ಟವೆಂದು ಪರಿಗಣಿಸಿ ಮಾನವತೆಯ ಉನ್ನತ ಮಟ್ಟದಿಂದ ದೂ ಎಸೆಯುವ ಮತ್ತು ಪುರುಷನನ್ನು ಪುರುಷನಾಗಿರುವ ಕಾರಣಕ್ಕಾಗಿ ವಿಶ್ವ ಸಿಂಹಾಸನ ಹಕ್ಕುದಾರನೆಂದು ಬಗೆಯುವ ಸಿದ್ಧಾಂತಗಳು ಅಜ್ಞಾನದ ಸಿದ್ಧಾಂತಗಳಾಗಿವ ಉನ್ನತಿ, ಅವನತಿ, ಗೌರವ ಮತ್ತು ನಿಂದ್ಯತೆಯ ಮಾನದಂಡವು ದೇವಭಯ ಮತ ಧರ್ಮನಿಷ್ಠೆ ಹಾಗೂ ಶೀಲ ಮತ್ತು ಚಾರಿತ್ರ್ಯವಾಗಿದೆ ಎಂದು ಅದು ಸ್ಪಷ್ಟ ಮತ ಅಸಂದಿಗ್ಧ ಭಾಷೆಯಲ್ಲಿ ಘೋಷಿಸಿದೆ. ಈ ಮಾನದಂಡದ ಪ್ರಕಾರ ಯಾರು ಎಷ ಅಪ್ಪಟವಾಗಿರುತ್ತಾನೋ ಅವನು ಅಲ್ಲಾಹನ ದೃಷ್ಟಿಯಲ್ಲಿ ಅಷ್ಟೇ ಗೌರವಾರ್ಹನಾಗುವನು

"ಪುರುಷನಾಗಿರಲಿ ಸ್ತ್ರೀ ಆಗಿರಲಿ ಯಾರು ಸತ್ಕರ್ಮವೆಸಗುವನೋ ಅವನ ಸತ್ಯವಿಶ್ವಾಸಿಯಾಗಿದ್ದರೆ ಅವನಿಗೆ ನಾವು ಇಹಲೋಕದಲ್ಲಿ ಪರಿಶುದ್ಧ ಜೀವನವನ ದಯಪಾಲಿಸುವೆವು ಮತ್ತು ಇಂತಹವರಿಗೆ (ಪರಲೋಕದಲ್ಲಿ) ಅವರ ಅತ್ಯುತ್ತಮ ಕರ್ಮಗಳಿಗನುಸಾರ ಪ್ರತಿಫಲ ನೀಡುವೆವು." (ಪವಿತ್ರ ಕುರ್‌ಆನ್: 16: 97

"ನಿಶ್ಚಯವಾಗಿಯೂ ಮುಸ್ಲಿಮರೂ ಸತ್ಯವಿಶ್ವಾಸಿಗಳೂ ಆಜ್ಞಾಪಾಲಕರು ಸತ್ಯಸಂಧರೂ ಸಹನಶೀಲರೂ ವಿನಮ್ರರೂ ದಾನಶೀಲರೂ ಉಪವಾಸ ವ್ರತ ವನ ಆಚರಿಸುವವರೂ ತಮ್ಮ ಗುಪ್ತಾಂಗಗಳ ರಕ್ಷಣೆ ಮಾಡಿಕೊಳ್ಳುವವರೂ ಅಲ್ಲಾಹನನ ಅತ್ಯಧಿಕವಾಗಿ ಸ್ಮರಿಸುವವರೂ ಆದ ಎಲ್ಲಾ ಪುರುಷರು ಮತ್ತು ಸ್ತ್ರೀಯರಿ ಅಲ್ಲಾಹನು ಕ್ಷಮೆ ಮತ್ತು ಅತಿ ದೊಡ್ಡ ಸತ್ಫಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ."

(ಪವಿತ್ರ ಕುರ್‌ಆನ್: 33: 35

"ಉತ್ತರವಾಗಿ ಅವರ ಪ್ರಭು ಹೇಳಿದನು, ನಾನು ನಿಮ್ಮಲ್ಲಿ ಯಾರೊಬ್ಬ ಕರ್ಮ ವನ್ನೂ ನಿಷ್ಫಲಗೊಳಿಸುವವನಲ್ಲ. ಪುರುಷರಾಗಲಿ, ಸ್ತ್ರೀಯರಾಗಲಿ ನೀವೆ ಒಂದೇ ವರ್ಗದವರು. ಆದುದರಿಂದ ಯಾರು ನನಗಾಗಿ ತಮ್ಮ ದೇಶ ತ್ಯಾ ಮಾಡಿದರೋ ನನ್ನ ಮಾರ್ಗದಲ್ಲಿ ಮನೆ-ಮಾರುಗಳಿಂದ ಹೊರಕ್ಕಟ್ಟಲ್ಪಟ್ಟರೋ ಸತಾಯಿಸಲ್ಪಟ್ಟರೋ, ನನಗಾಗಿ ಹೋರಾಟ ನಡೆಸಿದರೋ ಮತ್ತು ವಧಿಸಲ್ಪಟ್ಟರೋ ಅವರೆಲ್ಲರ ಅಪರಾಧ ಗಳನ್ನು ನಾನು ಕ್ಷಮಿಸಿ ಬಿಡುವೆನು ಮತ್ತು ಅವರಿ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳಲ್ಲಿ ಪ್ರವೇಶ ಕೊಡುವೆನ ಇದು ಅವರಿಗೆ ಅಲ್ಲಾಹನ ಬಳಿ ಇರುವ ಪ್ರತಿಫಲ ಮತ್ತು ಅತ್ಯುತ್ತಮ ಪ್ರತಿಫ ಅಲ್ಲಾಹನ ಬಳಿಯಲ್ಲೇ ಇದೆ." (ಪವಿತ್ರ ಕುರ್‌ಆನ್: 3: 195

ಮಾನವಕುಲದ ಎರಡು ವರ್ಗಗಳ ಪೈಕಿ ಯಾವ ವರ್ಗವು ತನ್ನ ಶೀಲ-ಾರಿತ್ರ್ಯಗಳನ್ನು ಉತ್ತಮಗೊಳಿಸುವುದೋ ಆ ವರ್ಗ ಖಂಡಿತ ಯಶಸ್ಸು ಗಳಿಸುುದು. ನೀವು ಯಾವ ವರ್ಗಕ್ಕೆ ಸೇರಿದವರೆಂಬುದನ್ನು ಸೃಷ್ಟಿಕರ್ತನು ಕೇಳಲಾರನು. ಂದು ವೇಳೆ ಯಾರಾದರೂ ತನ್ನ ಜೀವನವನ್ನು ದುಷ್ಕರ್ಮಗಳಿಂದ ಕಪ್ಪಾಗಿಸಿದರೆ ತ ಖಂಡಿತ ಯಶಸ್ಸು ಕಾಣಲಾರ. ಅದು ಪುರುಷನಾಗಿರಲಿ, ಸ್ತ್ರೀಯಾಗಿರಲಿ.

ಪವಿತ್ರ ಕುರ್‌ಆನಿನಲ್ಲಿ ತಮ್ಮ ಜೀವ-ಸೊತ್ತು ಮತ್ತು ಆಶೆ-ಆಕಾಂಕ್ಷೆಗಳನ್ನು ಲ್ಲಾಹನ ಮೆಚ್ಚುಗೆಗೆ ಅಧೀನಗೊಳಿಸಿರುವಂತಹ ಸತ್ಯವಿಶ್ವಾಸಿಗಳ ಗುಣಗಳನ್ನು ವರಿಸಲಾಗಿದೆ, "ಅಲ್ಲಾಹನ ಕಡೆಗೆ ಪದೇಪದೇ ಮರಳುವವರು, ಅವನ ದಾಸ್ಯ-ರಾಧನೆ ಮಾಡುವವರು, ಅವನ ಗುಣಗಾನ ಮಾಡುವವರು, ಅವನಿಗಾಗಿ ೂಮಿಯಲ್ಲಿ ಸಂಚರಿಸುವವರು, ಅವನ ಮುಂದೆ ಬಾಗುವವರು ಮತ್ತು ಸಾಷ್ಟಾಂಗ ರಗುವವರು, ಒಳಿತಿನ ಆಜ್ಞೆ ನೀಡುವವರು, ಕೆಡುಕಿನಿಂದ ತಡೆಯುವವರು ಮತ್ತು ಲ್ಲಾಹನ ಮೇರೆಗಳ ರಕ್ಷಣೆ ಮಾಡುವವರು (ಅಲ್ಲಾಹನೊಂದಿಗೆ ತಮ್ಮ ವ್ಯವಹಾರವನ್ನು ರ್ತಿಗೊಳಿಸಿಕೊಂಡ ಆ 'ಸತ್ಯವಿಶ್ವಾಸಿ'ಗಳ ವೈಶಿಷ್ಟ್ಯಗಳಿವು.) ಓ ಪೈಗಂಬರರೇ, ಸತ್ಯವಿಶ್ವಾಸಿಗಳಿಗೆ ಶುಭವಾರ್ತೆ ನೀಡಿರಿ." (ಪವಿತ್ರ ಕುರ್‌ಆನ್: 9: 112)

ಇನ್ನೊಂದು ಕಡೆ ಪ್ರವಾದಿ ಪತ್ನಿಯರಿಗೆ ಇದೇ ಗುಣಗಳನ್ನು ಮೈಗೂಡಿಸುವ ಜ್ಞೆ ನೀಡಲಾಗಿದೆ. ಈ ಗುಣಗಳ ಹೊರತು ಪ್ರವಾದಿಯ ವೈವಾಹಿಕ ಬಂಧನದಲ್ಲಿ ವುದು ಸಾಧ್ಯವಿಲ್ಲವೆಂದೂ ಪ್ರವಾದಿಗೆ ಈ ಗುಣಗಳಿರುವ ಬೇರೆ ಪತ್ನಿಯರು ಲಭದಲ್ಲಿ ಸಿಗಬಹುದೆಂದೂ ಹೇಳಲಾಗಿದೆ, "ಪ್ರವಾದಿಯು ನಿಮಗೆಲ್ಲರಿಗೂ ಾಕ್ ನೀಡಿದರೆ ಅಲ್ಲಾಹನು ಅವರಿಗೆ ನಿಮ್ಮ ಬದಲಿಗೆ ನಿಮಗಿಂತ ಉತ್ತಮರೂ ಸ ಮುಸ್ಲಿಮರೂ ಸತ್ಯವಿಶ್ವಾಸವುಳ್ಳವರೂ ವಿಧೇಯರೂ ತೌಬಾ ಮಾಡುವವರೂ ಾಧನಾಶೀಲೆಯರೂ ಉಪವಾಸ ವ್ರತ ಆಚರಿಸುವವರೂ ಆದ- ಹಿಂದೆ ಾಹವಾಗಿದ್ದ ಅಥವಾ ಕುಮಾರಿಯಾಗಿರುವ ಪತ್ನಿಯರನ್ನು ದಯಪಾಲಿಸಬಹುದು."

(ಪವಿತ್ರ ಕುರ್‌ಆನ್: 66: 5)

ಇದರಿಂದ ತಿಳಿದುಬರುವುದೇನೆಂದರೆ ಕುರ್‌ಆನಿನ ಪ್ರಕಾರ ಧರ್ಮನಿಷ್ಠೆ ಮತ್ತು ಲೋಕದ ವಿಜಯದ ಮಾನದಂಡವು ಸ್ತ್ರೀಯರಿಗೂ ಪುರುಷರಿಗೂ ಒಂದೇ ದೆ. ಆ ಮಾನದಂಡವನ್ನು ಪಾಲಿಸದೆ ಸ್ತ್ರೀಯಾಗಲಿ, ಪುರುಷನಾಗಲಿ ತಮ್ಮ ಯವನ್ನು ಸಾಧಿಸಲಾರರು.

## ಸ್ತ್ರೀ-ಪುರುಷರು ನಾಗರಿಕತೆಯ ನಿರ್ಮಾಪಕರು

ಜೀವನದ ಜಂಜಡ ಮತ್ತು ಏರಿಳಿತಗಳಲ್ಲಿ ಎಲ್ಲ ಕಾಲಗಳಲ್ಲಿಯೂ ಸ್ತ್ರೀ- ಪುರುಷರು ಸ್ಪರ ಸಹಕಾರಿಗಳಾಗಿದ್ದರು. ಜೀವನದ ಹೊರೆಯನ್ನು ಇಬ್ಬರೂ ಹೊತ್ತಿದ್ದರು.

ನಾಗರಿಕತೆಯ ಉನ್ನತಿಯು ಇಬ್ಬರ ಐಕ್ಯದಿಂದಲೇ ಉಂಟಾಗಿದೆ. ಜಗತ್ತಿನ ಯಾವ ಸಮುದಾಯ ಅಥವಾ ಆಂದೋಲನ ಈ ಪೈಕಿ ಯಾವ ವರ್ಗವನ್ನೂ ಕಡೆಗಣಿಸು ಸಾಧ್ಯವಲ್ಲ. ಸತ್ಯದ ವಿಜಯ, ಅಭ್ಯುದಯ ಮತ್ತು ಅಧಿಕಾರದಲ್ಲಿ ಪುರುಷನ ಮಹಿಳೆಯ ಪಾತ್ರವೂ ಇರುವಂತೆ ಮಿಥ್ಯದ ಪ್ರಗತಿ ಮತ್ತು ಅಭ್ಯುದಯದಲ್ಲೂ ಇಬ್ಬ ಪಾಲುದಾರರಾಗಿರುವರು, "ಕಪಟವಿಶ್ವಾಸಿ ಪುರುಷರೂ ಕಪಟವಿಶ್ವಾಸಿ ಸ್ತ್ರೀಯ ಪರಸ್ಪರ ಅನ್ಯೋನ್ಯರು. ಅವರು ಕೆಡುಕಿನ ಆಜ್ಞೆ ಕೊಡುತ್ತಾರೆ, ಒಳಿತುಗಳಿಂದ ತಡೆ ತ್ತಾರೆ ಮತ್ತು ತಮ್ಮ ಕೈಗಳನ್ನು ಸತ್ಕಾರ್ಯಗಳಿಂದ ತಡೆದಿಡುತ್ತಾರೆ. ಅವರು ಅ ನನ್ನು ಮರೆತುಬಿಟ್ಟರು. ಆಗ ಅಲ್ಲಾಹನೂ ಅವರನ್ನು ಮರೆತುಬಿಟ್ಟನು. ನಿಶ್ಚಯವಾಗಿಂ ಈ ಕಪಟ ವಿಶ್ವಾಸಿಗಳೇ ಕರ್ಮಭ್ರಷ್ಟರು." (ಪವಿತ್ರ ಕುರ್‌ಆನ್: 9:

"ಸತ್ಯವಿಶ್ವಾಸಿ ಪುರುಷರು ಮತ್ತು ಸತ್ಯವಿಶ್ವಾಸಿ ಸ್ತ್ರೀಯರು ಇವರೆಲ್ಲ ಪ ಆಪ್ತರು; ಅವರು ಒಳಿತುಗಳ ಅಪ್ಪಣೆ ಕೊಡುತ್ತಾರೆ ಮತ್ತು ಕೆಡುಕುಗಳಿ ತಡೆಯುತ್ತಾರೆ. ನಮಾಝ್ ಸಂಸ್ಥಾಪಿಸುತ್ತಾರೆ, ಝಕಾತ್ ಕೊಡುತ್ತಾರೆ ಮ ಅಲ್ಲಾಹ್ ಹಾಗೂ ಅವನ ರಸೂಲರ ಅನುಸರಣೆ ಮಾಡುತ್ತಾರೆ. ಇವರ ಮೆ ಅಲ್ಲಾಹನ ಕರುಣೆ ಅವತೀರ್ಣಗೊಂಡೇ ತೀರುವುದು. ನಿಶ್ಚಯವಾಗಿಯೂ ಅಲ್ಲಾ ಮಹಾ ಪ್ರತಾಪಿಯೂ ಯುಕ್ತಿಪೂರ್ಣನೂ ಆಗಿರುತ್ತಾನೆ."

(ಪವಿತ್ರ ಕುರ್‌ಆನ್: 9:

ಸಂಸ್ಕೃತಿ ಮತ್ತು ನಾಗರಿಕತೆಯ ಕ್ರಾಂತಿಗಳೆಲ್ಲ ಸ್ತ್ರೀ ಮತ್ತು ಪುರು ಪ್ರಯತ್ನಗಳ ಫಲವೆಂಬುದನ್ನು ಒಪ್ಪಿಕೊಂಡ ಬಳಿಕ ಒಂದು ವರ್ಗ ಗೌರವಾರ್ಹವೆಂದೂ ಇನ್ನೊಂದನ್ನು ನಿಂದನಾರ್ಹವೆಂದೂ ಪರಿಗಣಿಸಲು ಒ ಮತ್ತು ನ್ಯಾಯದ ಪುರಾವೆಯೇನಾದರೂ ಇದೆಯೆ? ಸಮಾಜದ ಸುಧಾರಣೆ ಮ ಕೇಡಿನಲ್ಲಿ ಇಬ್ಬರ ಪಾತ್ರವೂ ಇದೆಯೆಂದ ಮೇಲೆ ಒಂದು ವರ್ಗವನ್ನು ನಾ ವ್ಯವಸ್ಥೆಯಿಂದ ಹೊರಗಿಟ್ಟುಕೊಂಡು ಮುಂದುವರಿಯುವ ತೀರ್ಮಾನ ಮಾಡು ಅವಿವೇಕವಲ್ಲವೇ? ಒಬ್ಬ ವ್ಯಕ್ತಿಯು ತನ್ನ ಶರೀರದ ಒಂದು ಭಾಗ ನಿಷ್ಕ್ರಿಯಗೊಳಿಸಿಕೊಂಡು ಜೀವನದಲ್ಲಿ ತನ್ನ ಪಾತ್ರವನ್ನು ನಿರ್ವಹಿಸುವುದು ಸಾಧ್ಯ

## 4. ಮಹಿಳೆಯ ಕುರಿತು ಇಸ್ಲಾಮಿನ ಸಿದ್ಧಾಂತ

ಇಸ್ಲಾಮಿಗಿಂತ ಮೊದಲು ಮಹಿಳೆಯನ್ನು ಒಂದು ನಿರುಪಯುಕ್ತ ನಾಗರಿಕತೆಯಲ್ಲಿ ಅಡಚಣೆ ಉಂಟುಮಾಡುವ ವರ್ಗವೆಂದು ಬಗೆದು ಆಕೆಯ ಕಾರ್ಯರಂಗದಿಂದ ದೂರ ಸರಿಸಲಾಗಿತ್ತು. ಆಕೆಯನ್ನು ಅವನತಿಯ ಪಾತ ತಳ್ಳಲಾಗಿತ್ತು. ಅದರ ನಂತರ ಮಹಿಳೆಯ ಪ್ರಗತಿಯ ಯಾವ ನಿರೀಕ್ಷೆ ಉಳಿದಿರಲಿಲ್ಲ. ಲೋಕದ ಈ ವರ್ತನೆಯ ಬಗ್ಗೆ ಇಸ್ಲಾಮ್ ಪ್ರತಿಭಟನೆಯ

ೊಳಗಿಸಿತು. ಜೀವನವು ಪುರುಷ ಮತ್ತು ಸ್ತ್ರೀ ಇಬ್ಬರನ್ನೂ ಅವಲಂಬಿಸಿದೆ ಎಂದು ಳಿಸಿತು. ಮಹಿಳೆಯು ಛೀಮಾರಿ ಹಾಕಲಿಕ್ಕಿರುವವಳಲ್ಲ. ಆಕೆಯನ್ನು ಜೀವನದ ಾಜಮಾರ್ಗದಿಂದ ಮುಳ್ಳಿನಂತೆ ದೂರಸರಿಸಲಿಕ್ಕಲ್ಲ. ಏಕೆಂದರೆ ಪುರುಷ ಅಸ್ತಿತ್ವಕ್ಕೆ ಂದು ಉದ್ದೇಶವಿರುವಂತೆ ಸ್ತ್ರೀಯ ಸೃಷ್ಟಿಯ ಹಿಂದೆಯೂ ಒಂದು ಧ್ಯೇಯವಿದೆ. ್ರಕೃತಿಯು ಈ ಎರಡೂ ವರ್ಗಗಳಿಂದ ತನ್ನ ಉದ್ದೇಶಿತ ಲಕ್ಷ್ಯಗಳನ್ನು ಈಡೇರಿಸುತ್ತದೆ.

"ಅಲ್ಲಾಹನು ಭೂಮಿ-ಆಕಾಶಗಳ ಪ್ರಭುತ್ವದ ಒಡೆಯನು. ತಾನಿಚ್ಛಿಸಿದ್ದನ್ನು ವನು ಸೃಷ್ಟಿಸುತ್ತಾನೆ, ತಾನಿಚ್ಛಿಸಿದವರಿಗೆ ಹೆಣ್ಣು ಮಕ್ಕಳನ್ನು ಕೊಡುತ್ತಾನೆ, ಾನಿಚ್ಛಿಸಿದವರಿಗೆ ಗಂಡು ಮಕ್ಕಳನ್ನು ಕೊಡುತ್ತಾನೆ, ತಾನಿಚ್ಛಿಸಿದವರಿಗೆ ಗಂಡು-ಹೆಣ್ಣುಗಳೆರಡನ್ನೂ ಸೇರಿಸಿ ಕೊಡುತ್ತಾನೆ, ತಾನಿಚ್ಛಿಸಿದವರನ್ನು ಬಂಜೆಯಾಗಿ ಾಡುತ್ತಾನೆ. ಅವನು ಸರ್ವಜ್ಞನೂ ಸರ್ವ ಸಮರ್ಥನೂ ಆಗಿರುತ್ತಾನೆ."

(ಪವಿತ್ರ ಕುರ್‌ಆನ್: 42: 49–50)

ಇಸ್ಲಾಮ್ ಮಹಿಳೆಯನ್ನು ನಿಂದ್ಯತೆಯ ಸ್ಥಾನದಿಂದ ಶೀಘ್ರವಾಗಿ ಮೇಲೆತ್ತಿತು. ಕೆಗೆ ಹಕ್ಕು ಅಧಿಕಾರಗಳನ್ನು ದಯಪಾಲಿಸಿತು. ಹ. ಅಬ್ದುಲ್ಲಾ ಬಿನ್ ಉಮರ್(ರ) ೀಗೆ ಹೇಳಿರುವರು, "ಪ್ರವಾದಿ(ಸ) ಅವರ ಕಾಲದಲ್ಲಿ ನಾವು ನಮ್ಮ ಮಹಿಳೆಯರೊಂದಿಗೆ ಾತನಾಡಲು ಮತ್ತು ನಿಸ್ಸಂಕೋಚವಾಗಿ ವರ್ತಿಸಲು ಹೆದರುತ್ತಿದ್ದೆವು. ನಮ್ಮ ರಿತು ಏನಾದರೂ ದೇವ ವಿಧಿ ಅವತೀರ್ಣಗೊಳ್ಳುವುದೋ ಎಂದು ನಾವು ದರುತ್ತಿದ್ದೆವು. ಪ್ರವಾದಿ(ಸ) ಅವರ ನಿಧನಾನಂತರವೇ ನಾವು ಅವರೊಂದಿಗೆ ಸ್ಸಂಕೋಚವಾಗಿ ಇರಲು ಆರಂಭಿಸಿದೆವು." (ಬುಖಾರಿ)

ಈ ಶೋಷಿತ ವರ್ಗಕ್ಕೆ ಜೀವಿಸುವ ಹಕ್ಕು ಕೂಡಾ ಇರಲಿಲ್ಲ. ಪವಿತ್ರ ಕುರ್‌ಆನ್ ಳಿತು: ಅವಳು ಜೀವಂತವಿರಬೇಕು. ಅವಳ ಜೀವಿಸುವ ಹಕ್ಕಿನಲ್ಲಿ ಹಸ್ತಕ್ಷೇಪ ನಡೆಸು ವನು ಅಲ್ಲಾಹನ ವಿಚಾರಣೆಗೆ ಗುರಿಯಾಗುವನು, "ಜೀವಂತ ಹೂಳಲ್ಪಟ್ಟ ಹೆಣ್ಣು ಗುವಿನೊಡನೆ ಯಾವ ತಪ್ಪಿಗಾಗಿ ಅವಳನ್ನು ಕೊಲ್ಲಲಾಯಿತೆಂದು ಕೇಳಲಾಗುವಾಗ."

(ಪವಿತ್ರ ಕುರ್‌ಆನ್: 81: 8–9)

ಪ್ರವಾದಿ(ಸ) ಈ ಶೋಷಿತ ವರ್ಗದ ಪರವಾಗಿ ನೀಡಿರುವ ಬೋಧನೆಗಳು ಂದಿಗೂ ಅಪ್ರತಿಮವಾಗಿವೆ. ಮಹಿಳಾ ಹಕ್ಕುಗಳ ಯಾವ ಪ್ರತಿಪಾದಕನೂ ವುಗಳಿಗಿಂತ ಹೆಚ್ಚು ಸೂಕ್ತ ಮತ್ತು ವಾಸ್ತವಿಕ ಬೋಧನೆಗಳನ್ನು ನೀಡಲು ಶಲವಾಗಲಿಲ್ಲ. ಪ್ರವಾದಿ(ಸ) ಹೀಗೆ ಹೇಳಿರುವರು, "ತಾಯಿಯ ಅವಿಧೇಯತೆ, ಕ್ಕುಗಳನ್ನು ಪಾವತಿಸದೆ ಇರುವುದು, ಎಲ್ಲ ಕಡೆಯಿಂದಲೂ ಹಣ ಶೇಖರಿಸು ಮ ಮತ್ತು ಹೆಣ್ಣು ಮಕ್ಕಳನ್ನು ಜೀವಂತ ಹೂಳುವುದನ್ನು ಅಲ್ಲಾಹನು ೇಧಿಸಿರುವನು." (ಬುಖಾರಿ)

"ಒಬ್ಬನಿಗೆ ಹೆಣ್ಣು ಮಗುವಿದ್ದು ಅವನು ಅದನ್ನು ಜೀವಂತ ಹೂಳದೆ, ಅದ ಅಪಮಾನಕಾರಿಯೆಂದು ಪರಿಗಣಿಸದೆ ಮತ್ತು ಅದಕ್ಕಿಂತ ತನ್ನ ಗಂಡು ಮಗ ಪ್ರಾಶಸ್ತ್ಯ ನೀಡದೆ ಇದ್ದರೆ ಅಲ್ಲಾಹನು ಅವನನ್ನು ಸ್ವರ್ಗದಲ್ಲಿ ಪ್ರವೇಶಗೊಳಿಸುವನ

[ವರದಿ: ಹ. ಇಬ್ನು ಅಬ್ಬಾಸ್(ರ) – ಅಬೂದಾವೂ

"ಯಾರು ಮೂವರು ಹೆಣ್ಣು ಮಕ್ಕಳನ್ನು ಪೋಷಿಸಿದನೋ ಮತ್ತು ಅ ಜತೆ ಸದ್ವರ್ತನೆ ಮಾಡಿದನೋ ಅವನಿಗೆ ಸ್ವರ್ಗವಿದೆ."

[ವರದಿ: ಅಬೂಸಈದ್ ಖುದ್ರೀ(ರ) – ಅಬೂದಾವೂದ್, ಇಬ್ನುಮಾಜಃ, ತಿರ್ಮಿ

"ಯಾರನ್ನು ಅಲ್ಲಾಹನು ಈ ಹುಡುಗಿಯರ ಮೂಲಕ ಪರೀಕ್ಷೆಗೊಳಪಡಿಸುವನ ಮತ್ತು ಆತನು ಅವರೊಂದಿಗೆ ಸದ್ವರ್ತನೆ ಮಾಡುವನೋ ಅವನ ಪಾಲಿಗೆ ಅವ ನರಕದಿಂದ ರಕ್ಷಣೆಯ ಹೇತುವಾಗುತ್ತಾರೆ."

[ವರದಿ: ಹ. ಆಯಿಶಾ(ರ) – ಬುಖಾರಿ, ಮುಸ್ಲಿವ

ಪ್ರವಾದಿ(ಸ) ಅತ್ಯಂತ ಪ್ರಭಾವಶಾಲಿ ಶೈಲಿಯಲ್ಲಿ ಹೀಗೆ ಹೇಳಿರುವರು, "ಹೇ ಮಹತ್ವವಿರುವ ದಾನಧರ್ಮವೇನೆಂದು ನಾನು ನಿನಗೆ ತಿಳಿಸಲೇ? (ವಿಧವೆಯ ಅಥವಾ ವಿಚ್ಛೇದನಗೊಂಡು) ನಿನ್ನೆಡೆಗೆ ಮರಳುವ ಹಾಗೂ ನಿನ್ನ ಹೊರ ಬೇರಾರೂ ಸಂರಕ್ಷಕ ಮತ್ತು ಹೊಣೆ ವಹಿಸುವವರಿಲ್ಲದ ನಿನ್ನ ಮಗಳ ಜ ಸೌಜನ್ಯದ ವರ್ತನೆ ಮಾಡುವುದು." (ಇಬ್ನುಮಾಜಃ)

ಪ್ರವಾದಿ(ಸ) ಹೀಗೆ ಹೇಳಿರುವರು, "ಯಾರಾದರೂ ಇಬ್ಬರು ಹುಡುಗಿಯರ ಅವರು ಪ್ರೌಢೆಯರಾಗುವ ತನಕ ಪೋಷಿಸಿದರೆ ನಾನು ಮತ್ತು ಅವನು ಈ ರೀ ಸ್ವರ್ಗದಲ್ಲಿ ಪ್ರವೇಶಿಸುವೆವು. (ಎನ್ನುತ್ತಾ ಪ್ರವಾದಿ(ಸ) ತಮ್ಮ ತೋರ್ಬೆರಳು ಮ ಮಧ್ಯದ ಬೆರಳನ್ನು ಎತ್ತಿ ಹಿಡಿದರು). ಲೋಕಕ್ಕೆ ಅತಿಶೀಘ್ರ ಯಾತನೆ ಎರಗು ಎರಡು ದ್ವಾರಗಳಿವೆ. ಅಕ್ರಮ–ಅನ್ಯಾಯ ಮತ್ತು ಅವಿಧೇಯತೆ."

[ವರದಿ: ಹ. ಅನಸ್(ರ) – ಹಾಕಿವ

ಈ ಪ್ರವಾದಿ ವಚನದ ಕೊನೆಯ ವಾಕ್ಯದಲ್ಲಿ ಪ್ರವಾದಿ(ಸ) ಒಂದು ಉನ್ ವಾಸ್ತವಿಕತೆಯೆಡೆಗೆ ಸೂಚನೆ ನೀಡಿದ್ದಾರೆ. ಅನ್ಯಾಯದ ಆಯುಷ್ಯವಂತೂ ಕಡಿಮೆಯ ಇರುತ್ತದೆ. ಆದರೆ ಆ ಅನ್ಯಾಯಕ್ಕೆ ಬಲಿಯಾಗುವವರು ತನ್ನದೇ ಹೆಣ್ಣು ಮಕ್ಕಳಾಗಿದ್ ಆ ಅನ್ಯಾಯವು ಆ ಮಕ್ಕಳಿಗೆ ತಟ್ಟುವ ಮೊದಲೇ ಅಕ್ರಮಿಯ ಜೀವಿತಾವಧಿಯ ಅದು ಕೊನೆಗೊಳಿಸುತ್ತದೆ.

ಜಗತ್ತು ಸ್ತ್ರೀಯನ್ನು ಕೆಡುಕುಗಳ ಮೂಲ ಮತ್ತು ಪಾಪದ ಮೂರ್ತರೂ ಎಂದು ಭಾವಿಸುತ್ತಿತ್ತು. ಆದರೆ ಯಾರ ಪ್ರತಿಯೊಂದು ಚಲನ–ವಲನವು ಚಾರಿತ್ರ್ ಮಾದರಿಯಾಗಿತ್ತೋ, ಯಾರು ಜಗತ್ತಿಗೆ ದೇವಭಯ ಮತ್ತು ಧರ್ಮನಿಷ್ಠೆಯ

ಬೋಧಿಸುತ್ತಿದ್ದರೋ, ಯಾರು ಈ ಜಗತ್ತಿನಿಂದ ಕೆಡುಕು ಮತ್ತು ಅಶ್ಲೀಲತೆಯನ್ನು ನಿರ್ಮೂಲನ ಮಾಡಲಿಕ್ಕಾಗಿಯೇ ಜನ್ಮವೆತ್ತಿದ್ದರೋ ಆ ಮಹಾನ್ ಪ್ರವಾದಿ ಹೀಗೆ ಹೇಳಿರುವರು, "ಲೌಕಿಕ ವಸ್ತುಗಳಲ್ಲಿ ನನಗೆ ಮಹಿಳೆ ಮತ್ತು ಪರಿಮಳ ಅತ್ಯಂತ ಪ್ರಿಯವಾಗಿದೆ. ನನ್ನ ಕಣ್ಣಿನ ತಂಪನ್ನು ನಮಾಝ್‌ನಲ್ಲಿ ಇಡಲಾಗಿದೆ." (ನಸಾಈ)

ಸ್ತ್ರೀಯನ್ನು ದ್ವೇಷಿಸುವುದು, ಪರಿಶುದ್ಧತೆ ಮತ್ತು ಪರಿಮಳವನ್ನು ಮೆಚ್ಚದಿರುವುದು ದೇವಭಯದ ಸಂಕೇತವೇನಲ್ಲ. ದೇವನಿಷ್ಠೆಯು ದೇವನೊಂದಿಗಿನ ಸುದೃಢವಾದ ಸಂಬಂಧದ ಹೆಸರಾಗಿದೆ. ಅಲ್ಲಾಹನ ಕಡೆಗೆ ಮರಳುವುದರ ಮತ್ತು ಅವನನ್ನು ಭಯಪಡುವುದರ ಹೆಸರಾಗಿದೆ. ಮನುಷ್ಯನು ಸ್ತ್ರೀಯೊಂದಿಗೆ ಸಂಪರ್ಕವಿಟ್ಟುಕೊಂಡೂ ಪರಿಮಳವನ್ನು ಇಷ್ಟಪಡುತ್ತಿದ್ದೂ ಅಲ್ಲಾಹನ ಮೆಚ್ಚುಗೆಗೆ ಪಾತ್ರನಾಗಬಹುದು. ಮಾತ್ರವಲ್ಲ ಅವನ ಮೆಚ್ಚುಗೆಯನ್ನು ಗಳಿಸುವ ಸರಿಯಾದ ವಿಧಾನ ಇದುವೇ ಆಗಿದೆ. ಆದರೆ ಮನುಷ್ಯನ ಗುರಿ ಮತ್ತು ಅವನ ಪ್ರಯತ್ನಗಳ ಕೇಂದ್ರ ಈ ಲೋಕ ಮಾತ್ರ ಆಗಬಾರದು.

ಒಮ್ಮೆ ಪ್ರವಾದಿ ಪತ್ನಿಯರು ಒಂಟೆಯ ಮೇಲೆ ಸವಾರಿ ಮಾಡಿದ್ದರು. ಪ್ರವಾದಿ(ಸ) ಒಂಟೆ ನಡೆಸುವವನ್ನುದ್ದೇಶಿಸಿ ಹೀಗೆ ಹೇಳಿದರು, "ಗಾಜುಗಳನ್ನು ಸ್ವಲ್ಪ ಜಾಗ್ರತೆಯಿಂದ ಕೊಂಡು ಹೋಗಿರಿ." (ಮುಸ್ಲಿಮ್)

ಹ. ಫಾತಿಮಾ(ರ) ಅವರ ಕುರಿತು ಪ್ರವಾದಿ(ಸ) ಹೇಳಿದರು, "ನನ್ನ ಮಗಳು ನನ್ನ ಮೂಳೆ-ಮಾಂಸವಾಗಿದ್ದಾಳೆ. ಆಕೆಗೆ ಕಳವಳ ಉಂಟು ಮಾಡು ವಂತಹದು ನನಗೂ ಆತಂಕಕಾರಿಯಾಗಿದೆ. ಆಕೆಗೆ ಉಪದ್ರವಕಾರಿಯಾದುದು ಖಂಡಿತ ನನಗೂ ಕಷ್ಟದಾಯಕವಾಗಿದೆ." (ಬುಖಾರಿ)

ಹ. ಆಯಿಶಾ(ರ) ಅವರಲ್ಲಿ ಹೀಗೆ ವಿಚಾರಿಸಲಾಯಿತು, "ಪ್ರವಾದಿ(ಸ) ಯಾರನ್ನು ಅತ್ಯಧಿಕ ಪ್ರೀತಿಸುತ್ತಿದ್ದಾರೆ." ಅವರು, "ಫಾತಿಮಾರನ್ನು(ರ)" ಎಂದುತ್ತರಿಸಿದರು. ಒಮ್ಮೆ ಪ್ರವಾದಿ(ಸ) ಅವರಲ್ಲಿ ಹೀಗೆ ವಿಚಾರಿಸಲಾಯಿತು, "ತಮಗೆ ಅತ್ಯಂತ ಪ್ರಿಯರಾದವರು ಯಾರು?" ಆಗ ಪ್ರವಾದಿ(ಸ) ಅವರು, "ಆಯಿಶಾ" ಎಂದುತ್ತರಿಸಿದರು. (ತಿರ್ಮಿದಿ)

ಈ ಎರಡೂ ವಿಷಯಗಳು ಆಯಾ ಸಂದರ್ಭಕ್ಕನುಗುಣವಾಗಿ ಸರಿಯೇ ಆಗಿವೆ. ಪತ್ನಿಯರ ಪೈಕಿ ಆಯಿಶಾ(ರ) ಮತ್ತು ಮಕ್ಕಳ ಪೈಕಿ ಹ. ಫಾತಿಮಾ(ರ) ಪ್ರವಾದಿವರ್ಯರಿಗೆ(ಸ) ಅತ್ಯಂತ ಪ್ರಿಯರಾಗಿದ್ದರು. ಈ ಹದೀಸ್‌ಗಳಿಂದ ಸ್ತ್ರೀ ಸಂಕುಲದ ಬಗ್ಗೆ ಇಸ್ಲಾಮಿನ ನಿಲುವು ಮತ್ತು ಒಲವನ್ನು ತಿಳಿಯಬಹುದಾಗಿದೆ. ಅದು ತನ್ನ ಅನುಯಾಯಿಗಳಲ್ಲಿ ಈ ವರ್ಗದ ಬಗ್ಗೆ ಯಾವ ರೀತಿಯ ಭಾವನೆಗಳನ್ನು ಪೋಷಿಸುತ್ತದೆಂದು ಇದರಿಂದ ವ್ಯಕ್ತವಾಗುತ್ತದೆ.

ಈ ಶಿಕ್ಷಣದಿಂದಾಗಿ ಜನರ ವಿಚಾರ-ಆಚಾರಗಳಲ್ಲಿ ಕ್ರಾಂತಿಯುಂಟಾಯಿತು.

ತಮ್ಮ ಕರುಳ ಕುಡಿಗಳನ್ನು ಜೀವಂತ ಹೂಳುವುದಕ್ಕೂ ಹೇಸದಂತಹ ವ್ಯಕ್ತಿಗಳು ಮತ್ತು ಆ ಬಗ್ಗೆ ಯಾವುದೇ ಪಶ್ಚಾತ್ತಾಪ ಇಲ್ಲದ ಜನರು ಅವರನ್ನು ತಮ್ಮ ಜೀವನದ ಅತ್ಯಮೂಲ್ಯ ಸಂಪತ್ತೆಂಬಂತೆ ಅವರ ಪಾಲನೆ–ಪೋಷಣೆಯನ್ನು ಮಾಡತೊಡಗಿದರು. ತಮ್ಮ ಕರುಳ ಕುಡಿಗಳಿಗೇ ಅಭಯವಿಲ್ಲದಂತಹ ಜನರಲ್ಲಿ ಇತರರ ಸಂತತಿಗಳನ್ನು ಸಂರಕ್ಷಿಸುವ ಭಾವನೆ ಬೆಳೆಯಿತು. ಮಹಿಳೆಯೊಂದಿಗೆ ಪ್ರೀತಿ–ವಾತ್ಸಲ್ಯದ ವ್ಯವಹಾರವನ್ನೇ ಅರಿಯದವರು ತಮ್ಮ ಕೊನೆಯುಸಿರಿನ ತನಕ ಈ ಶೋಷಿತ ವರ್ಗದ ಬಗ್ಗೆ ಚಿಂತಿತರಾಗಿರುತ್ತಿದ್ದರು.

ಉಹುದ್ ಯುದ್ಧದ ಸಂದರ್ಭದಲ್ಲಿ ಹ. ಜಾಬಿರ್(ರ) ಅವರನ್ನುದ್ದೇಶಿಸಿ ಅವರ ತಂದೆ ಹೇಳಿದರು, "ಮಗನೇ! ಈ ಯುದ್ಧದಲ್ಲಿ ನಾನು ಈ ಲೋಕವನ್ನು ತ್ಯಜಿಸಬೇಕಾದೀತು. ಈ ಕೊನೆಯ ಘಳಿಗೆಯಲ್ಲಿ ನಾನು ನಿನಗೆ ನನ್ನ ಪುತ್ರಿಯರ ಬಗ್ಗೆ ಹಿತಾಕಾಂಕ್ಷೆಯನ್ನು ಉಪದೇಶಿಸುತ್ತೇನೆ." (ಹಾಕಿಮ್)

ಆದ್ದರಿಂದ ತಮ್ಮ ಸೋದರಿಯರ ಪಾಲನೆ–ಪೋಷಣೆಯ ದೃಷ್ಟಿಯಿಂದ ಹ. ಜಾಬಿರ್(ರ) ಯುವಕರಾಗಿದ್ದುಕೊಂಡೂ ಓರ್ವ ವಿಧವೆಯನ್ನು ಮದುವೆಯಾದರು. "ನೀವು ಯುವತಿಯೊಬ್ಬಳನ್ನು ಏಕೆ ವಿವಾಹವಾಗಲಿಲ್ಲ?" ಎಂದು ಪ್ರವಾದಿ(ಸ) ವಿಚಾರಿಸಿದಾಗ ಅವರು ಹೀಗೆ ಉತ್ತರಿಸಿದರು,

"ಪ್ರವಾದಿವರ್ಯರೇ! ನನ್ನ ತಂದೆಯವರು ಉಹುದ್ ಯುದ್ಧದಲ್ಲಿ ಹುತಾತ್ಮರಾದರು. ಅವರು ತಮ್ಮ ಹಿಂದೆ ಒಂಭತ್ತು ಹುಡುಗಿಯರನ್ನು ಬಿಟ್ಟು ಹೋಗಿದ್ದಾರೆ. ಅವರು ನನ್ನ ಒಂಭತ್ತು ಮಂಧಿ ಸೋದರಿಯರು. ಅವರ ಮೇಲ್ನೋಟಕ್ಕಾಗಿ ಅವರಂತಹುದೇ ಅನನುಭವಿ ಹುಡುಗಿಯನ್ನು ತರುವುದು ನನಗೆ ಇಷ್ಟವಾಗಲಿಲ್ಲ. ಆದ್ದರಿಂದ ಅವರ ತಲೆ ಬಾಚಬಲ್ಲ ಮತ್ತು ಅವರ ಪಾಲನೆ–ಪೋಷಣೆ ಮಾಡಬಲ್ಲ ಮಹಿಳೆಯನ್ನು ಆರಿಸಿರುವೆನು." ಆಗ ಪ್ರವಾದಿ(ಸ), "ನೀವು ಮಾಡಿದ್ದು ಸರಿಯೇ ಆಗಿದೆ" ಎಂದರು. (ಬುಖಾರಿ)

ಯೋಚಿಸಿ ನೋಡಿರಿ. ಯುವತ್ವದ ಬಯಕೆ–ಬೇಡಿಕೆಗಳ, ಭಾವ–ವಿಕಾರಗಳ ಬಿರುಗಾಳಿ ಎದ್ದಿರುವಾಗ ತನ್ನ ಸೋದರಿಯರಿಗಾಗಿ ಅದನ್ನು ಕಡೆಗಣಿಸಿ ಯುವ ಕನ್ಯೆಯನ್ನು ಬಿಟ್ಟು ವಿಧವೆಯನ್ನು ಮದುವೆಯಾಗುವುದೆಂದರೆ ಅದೊಂದು ಸಾಮಾನ್ಯ ತ್ಯಾಗವೇ?

"ಬುಖಾರಿ, ಮುಸ್ಲಿಮ್, ಅಬೂದಾವೂದ್ ಇತ್ಯಾದಿ ಹದೀಸ್ ಗ್ರಂಥಗಳಲ್ಲಿ ವರದಿಯಾಗಿರುವಂತೆ ಹ. ಹಮ್‌ಝಾ(ರ) ಅವರು ಹುತಾತ್ಮರಾದ ಬಳಿಕ ಅವರ ಮಗಳ ಪೋಷಣೆಯ ಹೊಣೆ ವಹಿಸಲು ಮೂವರು ಮುಂದೆ ಬಂದಿದ್ದರು. ಅಲೀಯವರು(ರ) ಅದು ನನ್ನ ಚಿಕ್ಕಪ್ಪನ ಮಗಳಾಗಿರುವುದರಿಂದ ಅವಳ ಪೋಷಣೆಯ

ಹೊಣೆ ನನ್ನದೆಂದು ವಾದಿಸಿದರೆ, ಹ. ಜಅಫರ್(ರ) ಆಕೆ ತನ್ನ ಚಿಕ್ಕಪ್ಪನ ಮಗಳು ಮಾತ್ರವಲ್ಲ ಅವಳ ಚಿಕ್ಕಮ್ಮ ನನ್ನ ಪತ್ನಿಯಾಗಿರುವಳು. ಆದ್ದರಿಂದ ಎರಡೂ ಕಡೆ ಯಿಂದ ಆಕೆಯ ಪೋಷಣೆಯ ಹಕ್ಕು ನನಗೆ ದೊರೆಯಬೇಕೆಂದು ವಾದಿಸಿದರು. ಮತ್ತೊಂದೆಡೆ ಹ. ಝೈದ್(ರ)ರು, ಹ. ಹಮ್‌ಝಾ ನನ್ನ ಸೋದರ. (ಪ್ರವಾದಿ(ಸ) ಅನ್ಸಾರಿಯಾಗಿದ್ದ ಝೈದ್ ಮತ್ತು ಮುಹಾಜಿರ್ ಆಗಿದ್ದ ಹಮ್‌ಝಾರನ್ನು ಮದೀನಾಕ್ಕೆ ವಲಸೆ ಬಂದ ಸಂದರ್ಭದಲ್ಲಿ ಪರಸ್ಪರ ಸೋದರರೆಂದು ಸಾರಿದ್ದರು) ಅವರ ಪುತ್ರಿಯನ್ನು ಸಾಕಿ ಸಲಹುವ ಹಕ್ಕು ಚಿಕ್ಕಪ್ಪನಾದ ನನಗಲ್ಲದೆ ಬೇರೆ ಯಾರಿಗೂ ಇಲ್ಲ ಎಂದು ವಾದಿಸಿದ್ದರು." **(ನೈಲುಲ್ ಔತಾರ್ ಭಾಗ– 7 ಪುಟ: 137)**

ಇಂತಹ ಮಹಾನ್ ವಿಚಾರ ಕ್ರಾಂತಿಯು ಇತಿಹಾಸದ ಇತರ ಯಾವುದಾದರೂ ಘಟ್ಟದಲ್ಲಿ ಸಿಗುತ್ತದೆಯೇ?

ಅಕ್ರಮ ಅನ್ಯಾಯಗಳನ್ನು ದಮನಿಸಿ ನಿಯಂತ್ರಿಸುವಷ್ಟು ಶಕ್ತಿ ಈ ಬೋಧನೆಗಳಲ್ಲಿದೆ. ಅವುಗಳನ್ನು ದೃಢವಾಗಿ ನಂಬುವ ವ್ಯಕ್ತಿಯು ಮಹಿಳೆಯರ ಕುರಿತು ನ್ಯಾಯದ ಮೇರೆಯನ್ನು ಮೀರುವ ಮತ್ತು ಆಕೆಯನ್ನು ಅಸಹಾಯಕ, ದುರ್ಬಲೆ ಎಂದು ಬಗೆದು ಅಕ್ರಮವೆಸಗುವ ಸಾಧ್ಯತೆಯೇ ಇಲ್ಲ.

## 5. ಸಮಾನ ಹಕ್ಕುಗಳು

ಇಸ್ಲಾಮ್ ಕೇವಲ ಪ್ರೇರಣೆಗಳನ್ನೂ ನೈತಿಕ ಬೋಧನೆಗಳನ್ನೂ ನೀಡಿ ಸುಮ್ಮನಾಗಲಿಲ್ಲ. ಅದು ಸ್ತ್ರೀ ಮತ್ತು ಪುರುಷರಿಬ್ಬರಿಗೂ ಅವರವರ ಹಕ್ಕುಗಳನ್ನು ಕಾನೂನಿನ ಮೂಲಕ ನಿರ್ಧರಿಸಿತು. ಈ ಕಾನೂನು ಎಷ್ಟು ಸಂತುಲಿತವಾಗಿದೆ ಯೆಂದರೆ ಅದರಲ್ಲಿ ಮಹಿಳೆಗೆ ಪರಾಧೀನತೆಯ ದೂರಾಗಲಿ ಪುರುಷನಿಗೆ ತನ್ನ ದೊಡ್ಡಸ್ಥಿಕೆಯನ್ನು ಮೆರೆಯುವ ಅವಕಾಶವಾಗಲೀ ಇಲ್ಲ. ಇಸ್ಲಾಮ್ ಧರ್ಮವು ಸಮಾಜವನ್ನು ಮಾನವ ಹಕ್ಕುಗಳ ಸಂರಕ್ಷಕ ಮತ್ತು ಶಾಂತಿ ಸಮಾಧಾನದ ಹೊಣೆಗಾರನೆಂದು ಪರಿಗಣಿಸುತ್ತದೆ. ಅಕ್ರಮ–ಅನ್ಯಾಯಕ್ಕಾಗಿ ಮುಂದೆ ಬರುವ ಕೈಯನ್ನು ಕಡಿದುಬಿಡುವುದು ಅದರ ಕರ್ತವ್ಯ ವಾಗಿದೆ. ಅಂತೆಯೇ ಸತ್ಯ ಮತ್ತು ನ್ಯಾಯವನ್ನು ಅಳಿಸಲು ಮುಂದಾಗುವ ಹೆಜ್ಜೆಯನ್ನು ಅದು ಮುರಿದು ಹಾಕ ಬೇಕು. ಅದು ಈ ರೀತಿ ಘೋಷಿಸಿದೆ, "ಓ ಬುದ್ಧಿಜೀವಿಗಳೇ! ಪ್ರತೀಕಾರದ ನಿಯಮದಲ್ಲಿ ನಿಮಗೆ ಜೀವನವಿದೆ." **(ಪವಿತ್ರ ಕುರ್‌ಆನ್: 2: 179)**

1) ಕೊಲೆಗಾರನನ್ನು ಕೊಲ್ಲುವ ಮೂಲಕ ಪ್ರತೀಕಾರವೆಸಗಬೇಕೆಂಬುದು ಶರೀಅತ್‌ನ ನಿಯಮವಾಗಿದೆ; ಕೊಲೆ ಮಾಡಿದ್ದು ಪುರುಷನನ್ನಾಗಿರಲಿ, ಸ್ತ್ರೀಯನ್ನಾಗಿ ರಲಿ. ಏಕೆಂದರೆ ಸ್ತ್ರೀಯ ಪ್ರಾಣವೂ ಪುರುಷನ ಪ್ರಾಣದಷ್ಟೇ ಗೌರವಾರ್ಹವಾಗಿದೆ. ಯಾರಾದರೂ ಈ ಪೈಕಿ ಯಾವುದೇ ವರ್ಗಕ್ಕೆ ಸೇರಿದವನನ್ನು ಕೊಲೆ ಮಾಡಿದರೆ

ಅವನು ತನ್ನ ಜೀವಿಸುವ ಹಕ್ಕನ್ನು ಕಳೆದುಕೊಳ್ಳುತ್ತಾನೆ.

ಯಮನ್‌ನವರಿಗೆ ಪ್ರವಾದಿಯವರು(ಸ) ಬರೆಯಿಸಿದ ನಿಯಮಾವಳಿಗಳಲ್ಲಿ ಈ ಮಾತನ್ನು ಸ್ಪಷ್ಟಪಡಿಸಲಾಗಿತ್ತು, "ಖಂಡಿತವಾಗಿಯೂ ಸ್ತ್ರೀಯ ಕೊಲೆಗೆ ಪ್ರತಿಯಾಗಿ ಪುರುಷನನ್ನು ಕೊಲ್ಲಲಾಗುವುದು."

**(ಅಸ್ಸುನನುಲ್ ಕುಬ್ರಾ– ಭಾಗ: 8 ಪುಟ: 208)**

"ಓರ್ವ ಯಹೂದಿಯು ಒಬ್ಬ ಹುಡುಗಿಯ ತಲೆಯನ್ನು ಜಜ್ಜಿ ಕೊಂದನು ಪ್ರವಾದಿ(ಸ) ಆ ಯಹೂದಿಯಿಂದ ಅದೇ ರೀತಿಯಲ್ಲಿ ಪ್ರತೀಕಾರ ಪಡೆದರು.'

**(ಬುಖಾರಿ, ಮುಸ್ಲಿಮ್, ತಿರ್ಮಿದಿ, ಅಬೂದಾವೂದ್, ನಸಾಈ)**

"ಹ. ಉಮರ್(ರ) ಅವರು ಒಬ್ಬ ಮಹಿಳೆಯ ಕೊಲೆಯಲ್ಲಿ ಭಾಗಿಯಾಗಿದ್ದ ಹಲವು ಮಂದಿಗೆ ಮರಣ ದಂಡನೆಯನ್ನು ವಿಧಿಸಿದ್ದರು."

**(ಅಹ್ಕಾಮುಲ್ ಕುರ್‌ಆನ್ ಜಸ್ಸಾಸ್– ಭಾಗ: 1 ಪುಟ: 163)**

2) ಸ್ತ್ರೀಯು ತನ್ನ ಬಂಧುವೊಬ್ಬರ ಕೊಲೆಯನ್ನು ಕ್ಷಮಿಸಿದರೆ ಬೇರೆ ಯಾವ ಸಂಬಂಧಿಕರಿಗೂ ಆಕೆಯ ಕ್ಷಮಾದಾನವನ್ನು ರದ್ದುಗೊಳಿಸುವ ಹಕ್ಕು ಇರುವುದಿಲ್ಲ

"ಕೊಲೆಗೀಡಾದವನ ವಾರೀಸುದಾರರು ಪರಿಹಾರ ಧನ ಪಡೆಯುವ ಮತ್ತು ಪ್ರತೀಕಾರ ಪಡೆಯುವ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದರೆ ಮತ್ತು ಹತ್ತಿರದ ಸಂಬಂಧಿಕನೊಬ್ಬನು ಕೊಲೆಗಾರನಿಗೆ ಜೀವದಾನ ನೀಡಿದರೆ ಇತರ ಎಲ್ಲ ಸಂಬಂಧಿಕರೂ (ಅದನ್ನು ಮಾನ್ಯ ಮಾಡಬೇಕು) ಆತನ ಪ್ರಾಣ ತೆಗೆಯಬಾರದು. ಕ್ಷಮಾ ದಾನ ನೀಡಿದ್ದು ಪುರುಷನಾಗಿದ್ದರೂ ಸ್ತ್ರೀಯಾಗಿದ್ದರೂ ಸರಿಯೆ." **(ಅಬೂದಾವೂದ್)**

ಮಹಿಳೆಯು ಯುದ್ಧ ನಡೆಯುತ್ತಿರುವಾಗ ಒಬ್ಬ ಶತ್ರುವಿಗೆ ಅಭಯ ನೀಡಿದರೆ ಅದನ್ನು ತಿರಸ್ಕರಿಸಲಾಗದು. ಪ್ರವಾದಿ(ಸ) ಹೀಗೆ ಹೇಳಿರುವರು, "ಸ್ತ್ರೀಯು ಮುಸ್ಲಿಮ್ ಸಮುದಾಯದ ಹಿತಕ್ಕಾಗಿ ಶತ್ರು ಜನಾಂಗಕ್ಕೆ ಆಶ್ರಯ ನೀಡಬಹುದಾಗಿದೆ." **(ತಿರ್ಮಿದಿ)**

ಹ. ಆಯಿಶಾ(ರ) ಹೀಗೆ ಹೇಳಿರುವರು, "ಸ್ತ್ರೀಯು ಸತ್ಯವಿಶ್ವಾಸಿಗಳ ವಿರುದ್ಧ ಯುದ್ಧ ಮಾಡುವವರಿಗೆ ಆಶ್ರಯ ನೀಡಬಹುದಾಗಿದೆ. ಆಕೆಯ ಆಶ್ರಯ ಜಾರಿಗೊಳ್ಳುವುದು." **(ಅಬೂದಾವೂದ್)**

ಮಕ್ಕಾ ವಿಜಯದ ವೇಳೆಯಲ್ಲಿ ಉಮ್ಮು ಹಾನೀಯವರು(ರ) ಪ್ರವಾದಿವರ್ಯರ(ಸ) ಬಳಿ ಬಂದು ಹೀಗೆ ಹೇಳುತ್ತಾರೆ, "ಪ್ರವಾದಿಗಳೇ! ನಾನು ಇಬ್ನು ಹುಬೈರಾನಿಗೆ ಆಶ್ರಯ ನೀಡಿದ್ದೇನೆ. ಆದರೆ ನಾನು ಆತನನ್ನು ಕೊಲೆ ಮಾಡಿಯೇ ತೀರುವೆನೆಂದು ಹ. ಅಲೀ(ರ) ಹೇಳುತ್ತಾರೆ." ಇದನ್ನು ಕೇಳಿ ಪ್ರವಾದಿ(ಸ) ಹೀಗೆ ಹೇಳಿದರು, "ನೀವು ಯಾರಿಗೆ ಆಶ್ರಯ ನೀಡಿರುವಿರೋ ಅವರಿಗೆ ನಮ್ಮ ಅಭಯವೂ ಇದೆ." **(ಬುಖಾರಿ)**

3) ಶರೀಅತ್‌ನ ಮೇರೆಯೊಳಗಿದ್ದುಕೊಂಡು ಇಸ್ಲಾಮ್ ಆರ್ಥಿಕ ರಂಗದಲ್ಲಿ ಸ್ತ್ರೀ ಮತ್ತು ಪುರುಷರಿಗೆ ಎಲ್ಲ ಚಟುವಟಿಕೆಗಳ ಅನುಮತಿ ನೀಡುತ್ತದೆ. ಅವರ ಶ್ರಮದ ಗಳಿಕೆಯನ್ನು ಅವರ ಕಾನೂನುಬದ್ಧ ಹಕ್ಕೆಂದು ಪರಿಗಣಿಸುತ್ತದೆ. ಆ ಹಕ್ಕಿನ ಮೇಲೆ ಯಾರಿಗೂ ಹಸ್ತಕ್ಷೇಪ ಮಾಡುವ ಅನುಮತಿಯಿಲ್ಲ. ಪತಿಯು ಪತ್ನಿಯ ಹಣವನ್ನು ಉಪಯೋಗಿಸುವಂತಿಲ್ಲ. ಪತ್ನಿಗೆ ಪತಿಯ ಸೊತ್ತಿನಲ್ಲಿ ತನ್ನ ಇಚ್ಛೆಯಂತೆ ವ್ಯವಹರಿಸಲು ಅವಕಾಶವಿಲ್ಲ.

"ಪುರುಷರು ಗಳಿಸಿದುದಕ್ಕನುಸಾರವಾದ ಪಾಲು ಅವರಿಗಿದೆ, ಸ್ತ್ರೀಯರು ಗಳಿಸಿದುದಕ್ಕನುಸಾರವಾದ ಪಾಲು ಅವರಿಗಿದೆ. ಅಲ್ಲಾಹನೊಡನೆ ಅವನ ಅನುಗ್ರಹವನ್ನು ಯಾಚಿಸುತ್ತಲಿರಿ." (ಪವಿತ್ರ ಕುರ್‌ಆನ್: 4: 32)

4) ವಾರೀಸು ಹಕ್ಕಿನ ಕುರಿತು ಹೀಗೆ ಹೇಳಲಾಗಿದೆ, "ಮಾತಾಪಿತರೂ ಆಪ್ತ ಬಂಧುಗಳೂ ಬಿಟ್ಟುಹೋದ ಸಂಪತ್ತಿನಲ್ಲಿ ಪುರುಷರಿಗೆ ಪಾಲಿದೆ. ಮಾತಾಪಿತರೂ ಆಪ್ತ ಬಂಧುಗಳೂ ಬಿಟ್ಟುಹೋದ ಸಂಪತ್ತಿನಲ್ಲಿ ಸ್ತ್ರೀಯರಿಗೂ ಪಾಲಿದೆ. ಕಡಿಮೆ ಇರಲಿ ಅಥವಾ ಹೆಚ್ಚಿರಲಿ ಈ ಪಾಲು (ಅಲ್ಲಾಹನ ಕಡೆಯಿಂದ) ನಿಶ್ಚಿತವಾಗಿದೆ." (ಪವಿತ್ರ ಕುರ್‌ಆನ್: 4: 7)

ಇಸ್ಲಾಮಿನ ವಾರೀಸು ಹಕ್ಕು ನಿಯಮಗಳ ಬಗ್ಗೆ ಸಾಮಾನ್ಯವಾಗಿ ತಪ್ಪುಕಲ್ಪನೆಗಳಿರುವುದರಿಂದ ಇಸ್ಲಾಮೀ ವಾರೀಸು ಕಾನೂನು ಯಾವ ತತ್ವಗಳ ಮೇಲೆ ಆಧಾರಿತವಾಗಿದೆ ಎಂಬುದನ್ನು ಇಲ್ಲಿ ಸಂಕ್ಷಿಪ್ತವಾಗಿ ಸೂಚಿಸುವುದು ಸಂದರ್ಭೋಚಿತವೆನಿಸುತ್ತದೆ.

1) ಅದರ ಪ್ರಥಮ ತತ್ವ ಓರ್ವ ಪುರುಷನ ಪಾಲು ಇಬ್ಬರು ಸ್ತ್ರೀಯರ ಪಾಲಿಗೆ ಸಮಾನವಾಗಿದೆ ಎಂಬುದಾಗಿದೆ.

ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಎರಡು ವಿಧಾನಗಳಿವೆ.

ಪ್ರಥಮ ವಿಧಾನವು ವಾರೀಸುದಾರ ಮೃತನೊಂದಿಗೆ ನೇರವಾಗಿ ಧರ್ಮಬದ್ಧ ಸಂಬಂಧ ಹೊಂದಿರುವುದು. ಉದಾ: ಪತಿ, ಪತ್ನಿ. ಎರಡನೆಯ ವಿಧಾನವು ವಾರೀಸುದಾರರು ಸಂಬಂಧದ ದೃಷ್ಟಿಯಿಂದ ಒಂದೇ ತರದವರಾಗಿದ್ದು ಮೃತರ ಎಲ್ಲ ಸೊತ್ತಿನ ವಾರೀಸುದಾರರಾಗುವುದು. ಉದಾ: ಮಕ್ಕಳು, ಸೋದರ ಸೋದರಿಯರು ಇತ್ಯಾದಿ.

ಬಾಹ್ಯ ನೋಟಕ್ಕೆ ಈ ಎರಡು ಸನ್ನಿವೇಶಗಳಲ್ಲಿ ಸ್ತ್ರೀ-ಪುರುಷರ ಮಧ್ಯೆ ಸಮಾನತೆಯನ್ನು ಪಾಲಿಸಲಾಗಿಲ್ಲ. ಪುರುಷನಿಗೆ ಹೋಲಿಸಿದರೆ ಸ್ತ್ರೀಯ ಆರ್ಥಿಕ ಸ್ಥಿತಿಯನ್ನು ದುರ್ಬಲಗೊಳಿಸಲಾಗಿದೆ. ಆದರೆ ಇಸ್ಲಾಮಿನ ಕುಟುಂಬ ವ್ಯವಸ್ಥೆಯನ್ನು ಅವಲೋಕಿಸಿದರೆ ವಾಸ್ತವಿಕತೆಯು ತದ್ವಿರುದ್ಧವಾಗಿದೆಯೆಂದು ತಿಳಿದು ಬರುತ್ತದೆ. ಸ್ತ್ರೀಯ ಕೆಲವು ಸಹಜ ದೌರ್ಬಲ್ಯಗಳ ಕಾರಣದಿಂದ ಇಸ್ಲಾಮ್ ಆಕೆಯ ಆರ್ಥಿಕ ಸ್ಥಿತಿಯನ್ನು ಹೆಚ್ಚು ಸುರಕ್ಷಿತ ಮತ್ತು ಸುದೃಢಗೊಳಿಸಿದೆ. ಪುರುಷನ ಆರ್ಥಿಕ ಸ್ಥಿತಿಯು

ಸದಾ ಡೋಲಾಯಮಾನ ಮತ್ತು ಅಸ್ಥಿರವಾಗಿರುತ್ತದೆ. ಇಸ್ಲಾಮ್ ಸ್ತ್ರೀಗೆ ವಾರೀಸು ಹಕ್ಕಿನಲ್ಲಿ ಅರ್ಧ ಪಾಲನ್ನು ನಿಶ್ಚಯಿಸಿದ್ದರೆ ಇನ್ನೊಂದು ರೀತಿಯಲ್ಲಿ ಅದಕ್ಕೆ ಪರಿಹಾರ ವನ್ನು ಮಾಡುತ್ತದೆ. ಮೊದಲನೆಯದಾಗಿ ಅದು ಪತ್ನಿಗೆ ಪತಿಯಿಂದ 'ಮಹ್ರ್' (ವಧುದಕ್ಷಿಣೆ ಅಥವಾ ವಿವಾಹ ಧನ) ಕೊಡಿಸುತ್ತದೆ. ಆ 'ಮಹ್ರ್'ನ ಮಾಲಕತ್ವವು ಪೂರ್ಣವಾಗಿ ಆಕೆಗೇ ಸೇರಿರುತ್ತದೆ. ಎರಡನೆಯದಾಗಿ ವಿವಾಹದ ವೇಳೆ ಆಕೆಗೆ ನೀಡಲಾಗುವ ಸೊತ್ತು, ಒಡವೆ, ಉಡುಗೊರೆಗಳೆಲ್ಲವೂ ಆಕೆಯ ಮಾಲಕತ್ವಕ್ಕೆ ಸೇರಿರುವುವು.

ಇಲ್ಲಿ ಇನ್ನೊಂದು ವಿಷಯ ಕೂಡಾ ಗಮನಾರ್ಹವಾಗಿದೆ. ಇಸ್ಲಾಮ್ ಇಡೀ ಕುಟುಂಬದ ಆರ್ಥಿಕ, ಶೈಕ್ಷಣಿಕ ಮತ್ತು ನೈತಿಕ ತರಬೇತಿಯ ಹೊಣೆಯನ್ನು ಮೂಲತಃ ಪುರುಷನ ಮೇಲೆಯೇ ಹೊರಿಸುತ್ತದೆ. ವಿಶೇಷವಾಗಿ ಆರ್ಥಿಕ ಹೊಣೆಯಿಂದ ಸ್ತ್ರೀಯನ್ನು ಸಂಪೂರ್ಣ ಮುಕ್ತಗೊಳಿಸುತ್ತದೆ. ಆಕೆಯ ಆರ್ಥಿಕ ಹೊರೆಯನ್ನು ಮದುವೆಗೆ ಮುಂಚೆ ತಂದೆ ಅಥವಾ ರಕ್ಷಕನ ಮೇಲೆ ಹಾಗೂ ಮದುವೆಯ ನಂತರ ಪತಿಯ ಮೇಲೆ ಹೇರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ವಾರೀಸು ಹಕ್ಕಿನಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಸಮಪಾಲು ನೀಡುವುದು ಬುದ್ಧಿ ಮತ್ತು ನ್ಯಾಯದ ದೃಷ್ಟಿಯಿಂದ ಉಚಿತವೆನಿಸುವುದೇ?

ಈ ಎರಡು ಸನ್ನಿವೇಶಗಳನ್ನು ಹೊರತುಪಡಿಸಿದರೆ ಉಳಿದಂತೆ ಕೇವಲ ಸಂಬಂಧವನ್ನು ಪರಿಗಣಿಸುವಾಗ ಇಸ್ಲಾಮ್ ಸ್ತ್ರೀ-ಪುರುಷರಿಗೆ ಸಮಾನ ಸ್ಥಾನಮಾನವನ್ನು ನೀಡಿದೆ. ಉದಾ: ಮೃತರಿಗೆ ಮಕ್ಕಳಿರುವ ಸಂದರ್ಭದಲ್ಲಿ ತಂದೆ-ತಾಯಿಗಳ ಪಾಲು ಸಮಾನವಾಗಿರುವುದು. ಅದೇ ರೀತಿ ಒಂದೇ ತಾಯಿಯ ಮಕ್ಕಳಾದ ಇಬ್ಬರು ಸೋದರ-ಸೋದರಿಯರಲ್ಲೂ ಇಸ್ಲಾಮ್ ಯಾವುದೇ ತಾರತಮ್ಯ ಮಾಡುವುದಿಲ್ಲ.

(2) ಶರೀಅತ್ ಮುಂದಿಡುವ ಎರಡನೆಯ ತತ್ವವೇನೆಂದರೆ, ಹಕ್ಕುಗಳನ್ನು ಹಕ್ಕುದಾರರಿಗೆ ಮುಟ್ಟಿಸಿದ ಬಳಿಕ ಉಳಿದ ಪಾಲು ನಿಕಟ ಸಂಬಂಧಿಕರಾದ ಪುರುಷರಿಗೆ ಸಲ್ಲುತ್ತದೆ.

ವಾರೀಸು ಕಾನೂನಿನ ಈ ನಿಯಮವನ್ನು ತಿಳಿಯಲು ಇಸ್ಲಾಮೀ ಸಾಮಾಜಿಕ ವ್ಯವಸ್ಥೆಯ ಇನ್ನೊಂದು ತತ್ವವನ್ನು ಗಮನದಲ್ಲಿರಿಸಬೇಕು. ಇಸ್ಲಾಮ್ ಪುರುಷನ ಮೇಲೆ ಆರ್ಥಿಕ ಜವಾಬ್ದಾರಿಯನ್ನು ಹೊರಿಸುವುದರ ಜತೆಗೆ ಕುಟುಂಬದ ಪುರುಷರ ನಡುವೆ ಪರಸ್ಪರ ಸಹಾಯ-ಸಹಕಾರದ ಒಂದು ನಿಯಮಾವಳಿಯನ್ನು ಗೊತ್ತುಪಡಿಸಿದೆ. ಇವು ಕೇವಲ ನೈತಿಕ ನಿಯಮಾವಳಿಗಳಾಗಿರದೆ ಅವುಗಳಿಗೆ ಕಾನೂನಿನ ಸ್ಥಾನಮಾನವೂ ಇದೆ. ಒಬ್ಬನು ಬಡವನಾಗಿದ್ದರೆ ಸಂಬಂಧಿಕರ ಪೈಕಿ ಆತನಿಗೆ ಹತ್ತಿರವಾದವನ ಮೇಲೆ ಅತ್ಯಧಿಕ ಆರ್ಥಿಕ ಸಹಾಯ ಮತ್ತು ಸಂರಕ್ಷಣೆಯ ಹೊಣೆ ಬೀಳುತ್ತದೆ.

ಈ ಸಮಸ್ಯೆಯ ವಿವರವಾದ ಅಧ್ಯಯನಕ್ಕೆ ಇಲ್ಲಿ ಅವಕಾಶವಿಲ್ಲ. ಜೀವನದ ಪ್ರತಿಯೊಂದು ಏರಿಳಿತದಲ್ಲಿ ಮತ್ತು ಎಲ್ಲ ಸಂಕಷ್ಟಗಳಲ್ಲಿ ಅತ್ಯಧಿಕ ಸಹಾಯ ಸಹಕಾರ ಮಾಡಬೇಕಾದವನು ಹಕ್ಕುಗಳನ್ನು ತೀರಿಸಿದ ಬಳಿಕ ಉಳಿಯುವ ಸೊತ್ತಿನ ವಾರೀಸುದಾರನಾಗುವುದು ಬುದ್ಧಿ, ವಿವೇಕ ಹಾಗೂ ನೀತಿ ಮತ್ತು ಕಾನೂನಿನ ಬೇಡಿಕೆಯಾಗಿದೆ ಎಂಬುದನ್ನು ತಿಳಿಸುವುದೇ ನಮ್ಮ ಉದ್ದೇಶ. ಆದರೆ ವಾರೀಸು ಹಕ್ಕಿನ ಕಾನೂನಿನಲ್ಲಿ ನೈಜ ಮಹತ್ವವಿರುವುದು ಪೀಳಿಗೆಗಾದುದರಿಂಧ ಪುರುಷನಿಗೆ ಹೆಚ್ಚು ಪಾಲು ಸಿಗುವುದು ಅನಿವಾರ್ಯವೇನಲ್ಲ. ಓರ್ವ ಮಹಿಳೆಯು ಮೃತನೊಂದಿಗೆ ಹತ್ತಿರದ ಸಂಬಂಧ ಹೊಂದಿದ್ದರೆ ಆಕೆಗೆ ಮೃತನೊಂದಿಗೆ ದೂರದ ಸಂಬಂಧವಿರುವ ಪುರುಷನಿಗಿಂತ ಹೆಚ್ಚಿನ ಪಾಲು ಸಿಗಬಹುದು. ಉದಾಹರಣೆಗೆ ಒಬ್ಬನು ಸಾಯುವಾಗ ಅವನಿಗೆ ಓರ್ವ ಪತ್ನಿ ಮತ್ತು ಓರ್ವ ಪುತ್ರಿ ಅಥವಾ ಓರ್ವ ಸೋದರಿ ಮತ್ತು ಓರ್ವ ಚಿಕ್ಕಪ್ಪನಿದ್ದರೆ ಇಸ್ಲಾಮಿ ವಾರೀಸು ನಿಯಮದ ಪ್ರಕಾರ ಮೃತನ ಸೊತ್ತಿನಲ್ಲಿ ಪತ್ನಿಗೆ ಕಾಲು ಭಾಗ ಪುತ್ರಿ ಅಥವಾ ಸೋದರಿಗೆ ಅರ್ಧ ಪಾಲು ಮತ್ತು ಚಿಕ್ಕಪ್ಪನಿಗೆ ಕಾಲು ಭಾಗ ಸಿಗುವುದು.

## 6. ಸಮಾನ ಕಾನೂನು

ಪ್ರಾಚೀನ ಧರ್ಮಗಳು ಸ್ತ್ರೀ–ಪುರುಷರಿಗೆ ಸಮಾನ ಸ್ಥಾನಮಾನ ನೀಡಲು ಸಿದ್ಧವಿರಲಿಲ್ಲ. ಆದ್ದರಿಂದ ಅವುಗಳು ಸ್ತ್ರೀ ಮತ್ತು ಪುರುಷನಿಗೆ ಪ್ರತ್ಯಪ್ರತ್ಯೇಕ ಕಾನೂನನ್ನು ನಿಶ್ಚಯಿಸಿದೆ. ಆದರೆ ಇಸ್ಲಾಮಿನ ಬೋಧನೆಗಳು ಪುರುಷನಂತೆಯೇ ಮಹಿಳೆಯನ್ನೂ ಉದ್ದೇಶಿಸಿದೆ. ಅದರ ಸಂದೇಶವು ಮನುಷ್ಯರಿಗಾಗಿದೆ. ಏಕೆಂದರೆ ಅದು ಮನುಷ್ಯರ ಪ್ರಭು ಮತ್ತು ಮನುಷ್ಯರ ಅಧಿಪತಿಯ ಸಂದೇಶ ವಾಗಿದೆ. ಪುರುಷರ ಪ್ರಭು ಅಥವಾ ಪುರುಷರ ಅಧಿಪತಿಯ ಸಂದೇಶವಲ್ಲ. ದೇವನ ಅನುಸರಣೆ ಮತ್ತು ವಿಧೇಯತೆಯ ಕರಾರು ಕೇವಲ ಪುರುಷರು ಅಥವಾ ಕೇವಲ ಸ್ತ್ರೀಯರು ಮಾಡಿದುದಲ್ಲ. ಬದಲಾಗಿ ಅದನ್ನು ಮನುಷ್ಯರು ಮಾಡಿದ್ದರು. ಆದ್ದರಿಂದ ಮನುಷ್ಯರ ಎರಡೂ ವರ್ಗಕ್ಕೆ ಸೇರಿದವರು ಅಲ್ಲಾಹನ ಆಸ್ಥಾನದಲ್ಲಿ ತಮ್ಮ ನಿಷ್ಠೆಯ ಪುರಾವೆಯನ್ನು ನೀಡಬೇಕಾಗುವುದು.

"ನಾವು ಈ ಅಮಾನತ್ತನ್ನು ಆಕಾಶಗಳ, ಭೂಮಿಯ ಮತ್ತು ಪರ್ವತಗಳ ಮುಂದಿರಿಸಿದೆವು. ಆಗ ಅವು ಅದನ್ನು ಎತ್ತಿಕೊಳ್ಳಲು ಸಿದ್ಧವಾಗಲಿಲ್ಲ ಮತ್ತು ಅದರಿಂದ ಭೀತರಾದವು. ಆದರೆ, ಮಾನವನು ಅದನ್ನು ಎತ್ತಿಕೊಂಡನು. ನಿಶ್ಚಯ ವಾಗಿಯೂ ಅವನು ದೊಡ್ಡ ಅಕ್ರಮಿಯೂ ತಿಳಿಗೇಡಿಯೂ ಆಗಿರುತ್ತಾನೆ. (ಈ ಅಮಾನತ್ತಿನ ಹೊರೆಯನ್ನು ಹೊತ್ತುದರ ಪರಿಣಾಮವೇನೆಂದರೆ) ಇದು, ಅಲ್ಲಾಹನು ಕಪಟವಿಶ್ವಾಸಿಗಳಿಗೂ ಕಪಟವಿಶ್ವಾಸಿನಿಯರಿಗೂ ಬಹುದೇವಾರಾಧಕರಾದ ಪುರುಷರಿಗೂ ಸ್ತ್ರೀಯರಿಗೂ ಶಿಕ್ಷೆ ಕೊಡುವಂತಾಗಲು ಮತ್ತು ಸತ್ಯವಿಶ್ವಾಸಿಗಳಾದ ಪುರುಷರು ಮತ್ತು

ಸ್ತ್ರೀಯರ ಪಶ್ಚಾತ್ತಾಪವನ್ನು ಅಲ್ಲಾಹನು ಸ್ವೀಕರಿಸುವಂತಾಗಲು. ಅಲ್ಲಾಹ್ ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ."

(ಪವಿತ್ರ ಕುರ್‌ಆನ್: 33: 72-73)

"ಅಲ್ಲಾಹ್ ಮತ್ತು ಅವನ ಸಂದೇಶವಾಹಕರು ಯಾವುದಾದರೊಂದು ವಿಷಯದ ತೀರ್ಮಾನ ಮಾಡಿಬಿಟ್ಟರೆ ಆ ವಿಷಯದಲ್ಲಿ ಸ್ವತಃ ತೀರ್ಮಾನ ಕೈಗೊಳ್ಳುವ ಹಕ್ಕು (ಸತ್ಯವಿಶ್ವಾಸಿಗಳಾದ) ಯಾವ ಸ್ತ್ರೀ-ಪುರುಷರಿಗೂ ಇಲ್ಲ. ಯಾರಾದರೂ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದರೆ, ಅವನು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದುಬಿಟ್ಟನು." (ಪವಿತ್ರ ಕುರ್‌ಆನ್: 33: 36)

ಇಸ್ಲಾಮ್ ಸ್ತ್ರೀ-ಪುರುಷರಲ್ಲಿ ಪ್ರತಿಯೊಬ್ಬನಿಗೆ ಜೀವನದ ಮಾರ್ಗವನ್ನು ನಿಶ್ಚಯಿಸಿರುವುದು ಮಾತ್ರವಲ್ಲ, ಅವರಿಗೆ ಒಂದೇ ಮಾರ್ಗ ಮತ್ತು ಒಂದೇ ಜೀವನ ಸಂವಿಧಾನವನ್ನು ನಿಶ್ಚಯಿಸಿದೆ. ಅದು ಸ್ತ್ರೀಯನ್ನು ನಿಕೃಷ್ಟ ಮತ್ತು ನೀಚಳೆಂದೂ ಪುರುಷನನ್ನು ಉನ್ನತ ಮತ್ತು ಉತ್ಕೃಷ್ಟನೆಂದೂ ಪರಿಗಣಿಸಿ ಅವರಿಗೆ ಬೇರೆಬೇರೆ ಕಾನೂನುಗಳನ್ನು ರಚಿಸಲಿಲ್ಲ. ಅದರ ಬೋಧನೆಗಳು ಇಬ್ಬರನ್ನೂ ಒಂದೇ ಮಟ್ಟದಲ್ಲಿಟ್ಟು ಸಂಬೋಧಿಸುತ್ತದೆ ಮತ್ತು ಸಮಾನ ಮಾರ್ಗದರ್ಶನ ನೀಡುತ್ತದೆ. ಅದರ ಪ್ರಕಾರ ಮಾನವ ಕುಲವು ವರ್ಗಗಳಲ್ಲಾಗಲೀ ಪದವಿಗಳಲ್ಲಾಗಲೀ ವಿಭಜಿಸಲ್ಪಟ್ಟಿಲ್ಲ. ಸ್ತ್ರೀ-ಪುರುಷರಿಬ್ಬರೂ ಒಂದೇ ರಣರಂಗದ ಯೋಧರಾಗಿದ್ದಾರೆ. ಅವರಿಬ್ಬರ ಕಾರ್ಯಕ್ಷೇತ್ರವು ಭಿನ್ನವಾಗಿದ್ದರೂ ಕಾರ್ಯದ ಧ್ಯೇಯ ಮತ್ತು ಗುರಿಯು ಒಂದೇ ಆಗಿದೆ.

ಅದು ವಿಶ್ವಾಸ-ಶ್ರದ್ಧೆಗಳು, ಆರಾಧನೆಗಳು, ನೀತಿ-ಸದಾಚಾರಗಳು, ವ್ಯವಹಾರ ಮತ್ತು ಸಂಬಂಧಗಳ ಪೈಕಿ ಯಾವುದರಲ್ಲೂ ಸ್ತ್ರೀ-ಪುರುಷರ ಮಧ್ಯೆ ತಾರತಮ್ಯ ಮಾಡಿಲ್ಲ. ಸ್ತ್ರೀ-ಪುರುಷ ಭಿನ್ನತೆಯೇ ಏನಾದರೂ ಬದಲಾವಣೆಯನ್ನು ಬಯಸುವ ಸಂದರ್ಭ ಮಾತ್ರ ಇದಕ್ಕೆ ಹೊರತಾಗಿದೆ. ಪ್ರವಾದಿ(ಸ) ಹೀಗೆ ಹೇಳಿರುವರು,

"ಸ್ತ್ರೀಯರು ಪುರುಷರ ವರ್ಗಕ್ಕೇ ಸೇರಿದವರಾಗಿದ್ದಾರೆ." (ಅಬೂದಾವೂದ್)

## 7. ದಾಂಪತ್ಯ ನಿಯಮ

ಒಟ್ಟಿನಲ್ಲಿ ಕಾನೂನಿನ ಗ್ರಂಥದಲ್ಲಿ, ನೈತಿಕತೆಯ ಪುಸ್ತಕದಲ್ಲಿ ಮತ್ತು ಹಕ್ಕುಗಳ ಪಟ್ಟಿಯಲ್ಲಿ ಸ್ತ್ರೀ ಮತ್ತು ಪುರುಷರಿಗೆ ಒಂದೇ ಸ್ಥಾನಮಾನ ನೀಡಬೇಕೆಂದು ಪವಿತ್ರ ಕುರ್‌ಆನ್ ಹೇಳುತ್ತದೆ. ಇಬ್ಬರ ಗೌರವ-ಅಗೌರವಗಳ ಮಾನದಂಡ ಒಂದೇ ಆಗಿರಬೇಕು. ಇಬ್ಬರಿಗೂ ಪ್ರಗತಿ ಮತ್ತು ಯಶಸ್ಸಿನ ಅವಕಾಶಗಳು ಒಂದೇ ಆಗಿರಬೇಕು. ಇಬ್ಬರ ಪ್ರಾಣ, ಸೊತ್ತು ಮತ್ತು ಮಾನದ ರಕ್ಷಣೆಯನ್ನು ಸಮಾನವಾಗಿ ಮಾಡಬೇಕು. ಇದು ಏಕೆ? ಲೋಕದಲ್ಲಿರುವ ಸಾಹಿತ್ಯಗಳ ಪೈಕಿ ಮೊಟ್ಟಮೊದಲು ಪವಿತ್ರ ಕುರ್‌ಆನ್ ಇದಕ್ಕೆ ದಾರ್ಶನಿಕ ಮತ್ತು ವೈಚಾರಿಕ ಉತ್ತರ ನೀಡಿದೆ. ಅದನ್ನು ಸಂಪೂರ್ಣ

ತರ್ಕಬದ್ಧವಾಗಿ ಮತ್ತು ಮನೋಜ್ಞವಾಗಿ ಜನರ ಮುಂದಿಟ್ಟಿದೆ. ಜಗತ್ತು ಅನುಭವ-ಸಂಶೋಧನೆಗಳ ನೂರಾರು ಘಟ್ಟಗಳನ್ನು ದಾಟಿಯೂ ಸ್ತ್ರೀ-ಪುರುಷ ಸಮಾನತೆಗೆ ಇದಕ್ಕಿಂತ ಉತ್ತಮ ಮತ್ತು ವೈಜ್ಞಾನಿಕ ವಿವರಣೆ ನೀಡಲು ಶಕ್ತವಾಗಲಿಲ್ಲ.

ಅದು ಹೇಳಿತು, ಈ ಲೋಕವು ಒಂದು ಯೋಜಿತ ವ್ಯವಸ್ಥೆಯಂತೆ ಸೃಷ್ಟಿಸಲ್ಪಟ್ಟಿದೆ. ಅತ್ಯಂತ ವ್ಯವಸ್ಥಿತ ರೂಪದಲ್ಲಿ ಸಾಮರಸ್ಯದೊಂದಿಗೆ ಕಾರ್ಯಪ್ರವೃತ್ತವಾಗಿದೆ. ಶತಮಾನಗಳು ಕಳೆದರೂ ಈ ಕಾರ್ಯಾಗಾರದ ವೈವಿಧ್ಯತೆ ಮತ್ತು ಆಕರ್ಷಣೆಯಲ್ಲಿ ಯಾವುದೇ ವ್ಯತ್ಯಾಸ ಉಂಟಾಗಿಲ್ಲ. ಕಾಲಚಕ್ರವು ನಿರಂತರವಾಗಿ ಉರುಳುತ್ತಿದೆ. ಆದರೂ ಈ ಜಗತ್ತಿನ ಮಹಿಮೆ ಮತ್ತು ವೈಚಿತ್ರ್ಯವು ಹಾಗೆಯೇ ಉಳಿದುಕೊಂಡಿದೆ. ಈ ಜಗತ್ತನ್ನು ವಿನಾಶಕೂಪಕ್ಕೆ ಬೀಳುವುದರಿಂದ ತಡೆದಿಟ್ಟಿರುವಂತಹ ಶಕ್ತಿ ಯಾವುದು? ಅದರ ಜೀವನದ ಕ್ಷಣಗಳನ್ನು ಮುಂದುವರಿಸುತ್ತಲೇ ಹೋಗುತ್ತಿರುವ ಕಾನೂನು ಯಾವುದು? ಪವಿತ್ರ ಕುರ್‌ಆನಿನ ಪ್ರಕಾರ ಅದು ಇಲ್ಲಿರುವ ಜೋಡಿಯ ನಿಯಮದ ಕಾರ್ಯಾಚರಣೆಯಾಗಿದೆ. ಈ ವಿಶ್ವದ ಪ್ರತಿ ಯೊಂದು ವಸ್ತುವಿನಲ್ಲಿ ತನ್ನ ವರ್ಗದ ಉಳಿವಿನ ಬಯಕೆಯಿದೆ. ಆ ಬಯಕೆಯನ್ನು ಈಡೇರಿಸಲಿಕ್ಕಾಗಿ ಪ್ರಕೃತಿಯು ಅದೇ ಸಂಕುಲದ ಒಂದು ವಿರುದ್ಧ ವರ್ಗವನ್ನು ಸೃಷ್ಟಿಸಿದೆ. ಈ ವಿರುದ್ಧ ವರ್ಗವು ಅದರ ಬಯಕೆ-ಭಾವನೆಗಳಿಗೆ ಪ್ರೇರಣೆ ಮತ್ತು ಕ್ರಿಯಾಶೀಲತೆಯನ್ನು ಒದಗಿಸುತ್ತದೆ. ತನ್ನ ಸಂಕುಲದ ಅಸ್ತಿತ್ವದ ವ್ಯವಸ್ಥೆ ಮಾಡುವಂತೆ ಅದನ್ನು ಒತ್ತಾಯಿಸುತ್ತದೆ. ತನ್ಮೂಲಕ ವಿಶ್ವವೆಂಬ ಮದುಮಗಳ ಸೌಂದರ್ಯ ಮತ್ತು ಆಕರ್ಷಣೆಯಲ್ಲಿ ಯಾವುದೇ ವ್ಯತ್ಯಾಸ ಉಂಟಾಗದಂತೆ ನೋಡಿಕೊಳ್ಳುತ್ತದೆ.

"ಅವನು ನಿಮ್ಮ ವರ್ಗದಿಂದಲೇ ನಿಮಗಾಗಿ ಜೊತೆಗಳನ್ನು ಸೃಷ್ಟಿಸಿದನು, ಹಾಗೆಯೇ ಪ್ರಾಣಿಗಳಲ್ಲೂ (ಅವುಗಳ ವರ್ಗದಿಂದಲೇ) ಜೋಡಿಗಳನ್ನು ಉಂಟು ಮಾಡಿದನು. ಈ ರೀತಿಯಲ್ಲಿ ಅವನು ನಿಮ್ಮ ಸಂತತಿಗಳನ್ನು ಹಬ್ಬಿಸುತ್ತಾನೆ."
(ಪವಿತ್ರ ಕುರ್‌ಆನ್: 42: 11)

"ನಾವು ಪ್ರತಿಯೊಂದು ವಸ್ತುವಿನ ಜೋಡಿಗಳನ್ನು ಮಾಡಿರುತ್ತೇವೆ- ನೀವು ಇದರಿಂದ ಪಾಠ ಕಲಿಯಬಹುದೆಂದು." (ಪವಿತ್ರ ಕುರ್‌ಆನ್: 51: 49)

"ಎಲ್ಲ ತರದ ಜೋಡಿಗಳನ್ನು ಅವು ಭೂಮಿಯ ವನಸ್ಪತಿಗಳಲ್ಲಿರಲಿ, ಸ್ವತಃ ಇವರ (ಮನುಷ್ಯರ) ವರ್ಗದಲ್ಲಿರಲಿ ಅಥವಾ ಇವರಿಗೆ ತಿಳಿದೇ ಇಲ್ಲದಂತಹ ವಸ್ತುಗಳಲ್ಲಿರಲಿ, ಸೃಷ್ಟಿಸಿದವನು ಪರಮ ಪಾವನನು." (ಪವಿತ್ರ ಕುರ್‌ಆನ್: 36: 36)

ದಾಂಪತ್ಯ ನಿಯಮವು ತನ್ನ ವೈಶಾಲ್ಯದಲ್ಲಿ ವಿಶ್ವದ ಪ್ರತಿಯೊಂದು ವಸ್ತುವನ್ನೂ ಆವರಿಸಿದೆ ಎಂಬುದು ಈ ಸೂಕ್ತಗಳಿಂದ ವ್ಯಕ್ತವಾಯಿತು. ಅದರಿಂದ ಮನುಷ್ಯನಾಗಲಿ ಲೋಕದ ಇತರ ಯಾವುದೇ ವಸ್ತುವಾಗಲಿ ಹೊರತಲ್ಲ. ಇದಿಲ್ಲದೆ

ಹೋದರೆ ಪರಿವರ್ತನೆಯ ವೈವಿಧ್ಯತೆ ಮತ್ತು ಸೌಂದರ್ಯದ ಮಾಂತ್ರಿಕತೆಗಳೆಲ್ಲಾ ಕ್ಷಣ ಮಾತ್ರದಲ್ಲಿ ಕೊನೆಗೊಳ್ಳುವುವು. ಪ್ರತಿಯೊಂದು ವಸ್ತು ಬಯಕೆಯಿಲ್ಲದ ಮ ನೆಮ್ಮದಿಯಿಲ್ಲದ ವಸ್ತುವಾಗುವುದು. ಮನುಷ್ಯನ ವಿಷಯಾಸಕ್ತಿಗಳು ಕೂಡಾ ಅದ ಜೊತೆಯಿಲ್ಲದೆ ನೆಮ್ಮದಿ ಕಾಣುವುದು ಸಾಧ್ಯವಿಲ್ಲ. ಪುರುಷ ಜೀವನದ ಅನೆ ನಿರ್ವಾತಗಳನ್ನು ಕೇವಲ ಸ್ತ್ರೀಯ ಸುಂದರ ಕೈಗಳೇ ತುಂಬಬಲ್ಲುವು. ಆಕೆ ಅವ ನೈಸರ್ಗಿಕ ಬೇಡಿಕೆಗಳ ಮತ್ತು ಸಹಜ ಪ್ರಶ್ನೆಗಳ ಉತ್ತರವಾಗಿದ್ದಾಳೆ. ಅವ ಪ್ರೇಮಗೀತೆಯ ವೀಣೆಯಾಗಿದ್ದಾಳೆ. ಅದೇ ರೀತಿ ಪುರುಷನಿಲ್ಲದೆ ಸ್ತ್ರೀತನದ ಊ ಬರಿದಾಗಿರುತ್ತದೆ. ಆತ ಅವಳ ಭಾವನಾಲೋಕದ ಮೆರುಗು ಮತ್ತು ಆಕೆ ವ್ಯಾಕುಲತೆಯ ಶಮನವಾಗಿದ್ದಾನೆ.

ದೇವನ ಸೃಷ್ಟಿಯಲ್ಲಿ ಕೊರತೆ ಅಥವಾ ನ್ಯೂನತೆ ಇದೆಯೆಂದು ಇದ ಅರ್ಥವಲ್ಲ. ಇಲ್ಲಿಯ ಪ್ರತಿಯೊಂದು ಹೂವು ಕಳಂಕರಹಿತವಾಗಿದೆ. ಪ್ರತಿಯೊಂ ಚಿತ್ರವೂ ಅಪ್ರತಿಮವಾಗಿದೆ. ಪ್ರಕೃತಿಯ ಚಿತ್ರಾಗಾರದ ಯಾವುದೇ ಚಿತ್ರದಲ್ಲಿಯ ಕುಂದುಕೊರತೆಯನ್ನು ಬೆಟ್ಟು ಮಾಡುವುದು ಅಸಾಧ್ಯ. ಇಲ್ಲಿನ ಪ್ರತಿಯೊಂ ಚಿತ್ರವೂ ಇನ್ನೊಂದು ಚಿತ್ರಕ್ಕೆ ಪೂರಕವಾಗಿರುತ್ತದೆ. ದಾಂಪತ್ಯ ನಿಯಮವೂ ಅದ ಒಂದು ಸಮಗ್ರ ಮತ್ತು ಸಂಪೂರ್ಣ ರೂಪವಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದ ಲೋಕದ ಪ್ರತಿಯೊಂದು ವಸ್ತುವಿಗೆ ತನ್ನ ಕೆಲವು ವ್ಯಕ್ತಿಗತ ಸಾಮರ್ಥ್ಯ ಮ ವರ್ಗೀಯ ವೈಶಿಷ್ಟ್ಯಗಳನ್ನು ಪ್ರಕಟಿಸಲು ಒಂದು ರಂಗ ಬೇಕು. ಅದರ ಜೊತೆಯ ಈ ರಂಗವನ್ನು ಒದಗಿಸುತ್ತದೆ. ಇದು ದಂಪತಿಗಳ ಮಧ್ಯೆ ಇರುವ ಒಂದು ರೀತಿ ಸಂಬಂಧವಾಗಿದೆ. ಇಬ್ಬರೂ ಏಕಪ್ರಕಾರವಾಗಿ ಪರಸ್ಪರರನ್ನು ಅವಲಂಬಿಸುತ್ತಾ ಇದರಲ್ಲಿ ನಿಕೃಷ್ಟತೆ, ನೀಚತೆ ಅಥವಾ ಗೌರವ ಮತ್ತು ಉನ್ನತಿಯ ಪ್ರಶ್ನೆಯ ಏಳುವುದಿಲ್ಲ. ಪವಿತ್ರ ಕುರ್‌ಆನ್ ಆಗಾಗ ಬೇರೆಬೇರೆ ರೂಪದಲ್ಲಿ ಈ ವಾಸ್ತವಿಕತೆಯ ವಿವರಿಸಿದೆ. ಒಂದೆಡೆ ಅದು ಹೀಗೆ ಹೇಳಿದೆ, "ಅವರು ನಿಮ್ಮ ಪಾಲ ಉಡುಪಾಗಿದ್ದಾರೆ, ನೀವು ಅವರ ಪಾಲಿಗೆ ಉಡುಪಾಗಿರುವಿರಿ."

(ಪವಿತ್ರ ಕುರ್‌ಆನ್: 2: 18

ಇದು ಎಷ್ಟೊಂದು ಸೂಕ್ಷ್ಮ ವಿವರಣೆಯೆಂಬುದನ್ನು ಯೋಚಿಸಿ ನೋ ಕುರ್‌ಆನ್ ಹೇಳಬಯಸುವುದೇನೆಂದರೆ ಪುರುಷನ ಜೀವನದಲ್ಲಿ ಅನೇಕ ಅಪೂ ಅಂಶಗಳಿವೆ. ಅವುಗಳನ್ನು ಪೂರ್ತಿಗೊಳಿಸುವ ಕಾರ್ಯವನ್ನು ಸ್ತ್ರೀ ಮ ಮಾಡಬಲ್ಲಳು. ಸ್ತ್ರೀಯ ಜೀವನದ ಅನೇಕ ಅಂಶಗಳು ಕೂಡಾ ಪುರುಷನಿ ಪೂರ್ಣಗೊಳ್ಳಲಾರವು. ಇನ್ನೊಂದೆಡೆ ಪವಿತ್ರ ಕುರ್‌ಆನ್ ಈ ಸಂಬಂಧವ ಪ್ರೀತಿ-ವಾತ್ಸಲ್ಯದ ಸಂಬಂಧವೆಂದು ವರ್ಣಿಸಿದೆ.

"ಅವನು ನಿಮಗಾಗಿ ನಿಮ್ಮ ವರ್ಗದಿಂದಲೇ ಜೋಡಿಗಳನ್ನು ಸೃಷ್ಟಿಸಿ, ನೀ

ಅವರ ಬಳಿ ಪ್ರಶಾಂತಿಯನ್ನು ಪಡೆಯುವಂತೆ ಮಾಡಿದುದೂ ನಿಮ್ಮ ನಡುವೆ ಪ್ರೇಮ ಮತ್ತು ಅನುಕಂಪವನ್ನುಂಟು ಮಾಡಿದುದೂ ಅವನ ನಿದರ್ಶನ ಗಳಲ್ಲೊಂದಾಗಿದೆ. ನಿಶ್ಚಯವಾಗಿಯೂ ವಿವೇಚಿಸುವವರಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ."

(ಪವಿತ್ರ ಕುರ್‌ಆನ್: 30: 21)

ಇದುವೇ ಇಸ್ಲಾಮೀ ಸಮಾಜದಲ್ಲಿ ಮಹಿಳೆಯ ಸ್ಥಾನಮಾನವನ್ನು ನಿರ್ಣಯಿಸುವ ಮೂಲಾಧಾರಗಳಾಗಿವೆ. ಈ ಮೂಲಾಧಾರಗಳಿಲ್ಲದೆ ಇಸ್ಲಾಮೀ ಸಮಾಜದ ಕಲ್ಪನೆಯನ್ನೂ ಮಾಡಲಾಗದು.

## ಮಹಿಳೆಯ ನೈಜ ಕಾರ್ಯಕ್ಷೇತ್ರ

ಇಸ್ಲಾಮೀ ಸಮಾಜದಲ್ಲಿ ಮುಸ್ಲಿಮ್ ಮಹಿಳೆಯ ಪಾತ್ರವೇನು? ಆಕೆಯ ಚಟುವಟಿಕೆಗಳ ರೂಪುರೇಖೆಯೇನು? ಈ ಪ್ರಶ್ನೆಗೆ ಉತ್ತರ ಪವಿತ್ರ ಕುರ್‌ಆನ್‌ನಲ್ಲಿ ಪ್ರವಾದಿ ಪತ್ನಿಯ ರನ್ನುದ್ದೇಶಿಸಿ ಹೇಳಲಾದ ಒಂದು ಸೂಕ್ತದಲ್ಲಿ ನೀಡಲಾಗಿದೆ,

"ನಿಮ್ಮ ಮನೆಗಳಲ್ಲೇ ಇದ್ದುಕೊಳ್ಳಿರಿ. ಗತ ಅಜ್ಞಾನ ಕಾಲದಂತಹ ಸೌಂದರ್ಯ ಪ್ರದರ್ಶನ ಮಾಡುತ್ತ ತಿರುಗಾಡಬೇಡಿರಿ." (ಪವಿತ್ರ ಕುರ್‌ಆನ್: 33: 33)

## ಹಿನ್ನೆಲೆ

ಈ ಆದೇಶದ ಹಿನ್ನೆಲೆ ಏನೆಂದರೆ ಹಿಜ್ರತ್‌ನ ನಂತರ ಪ್ರವಾದಿ(ಸ) ಮತ್ತವರ ಸಂಗಾತಿಗಳು ಮದೀನಾದ ಸಣ್ಣ ರಾಷ್ಟ್ರವನ್ನು ಇಸ್ಲಾಮೀ ತತ್ವ ಮತ್ತು ನೀತಿಯ ಪ್ರದರ್ಶನಾಲಯ ಮಾಡಬೇಕೆಂಬ ಪ್ರಯತ್ನದಲ್ಲಿ ತೊಡಗಿದ್ದರು. ಮಕ್ಕಾದಲ್ಲಿ ನನಸಾಗದ ಕನಸನ್ನು ಮದೀನಾದಲ್ಲಿ ವಾಸ್ತವಿಕತೆಯ ರೂಪಕ್ಕೆ ತರಬಯಸಿದ್ದರು. ಆದರೆ ಸಭ್ಯತೆ, ನೀತಿ, ಸುಧಾರಣೆ ಮತ್ತು ಧರ್ಮನಿಷ್ಠೆಯ ಅಭ್ಯುದಯದಲ್ಲಿ ತಮ್ಮ ಅವನತಿಯನ್ನು ಕಾಣುತ್ತಿದ್ದ ಜನರಿಗೆ ಈ ತೀರ್ಮಾನವು ಸಹ್ಯವಾಗಲಿಲ್ಲ. ಪ್ರವಾದಿ(ಸ) ತಮ್ಮ ಪ್ರಯತ್ನಗಳನ್ನು ಆರಂಭಿಸಿದ ಕೂಡಲೇ ಎಲ್ಲೆಡೆಗಳಿಂದ ಕ್ಷೋಭೆ ಮತ್ತು ಅಶಾಂತಿಯ ಬಿರುಗಾಳಿ ಏಳಲು ಆರಂಭಿಸಿತು. ಮದೀನಾಕ್ಕೆ ಬಂದು ಆರು ವರ್ಷಗಳೂ ಕಳೆದಿರಲಿಲ್ಲ. ವಿರೋಧದ ಈ ಬಿರುಗಾಳಿಯು ಮದೀನಾದ ದಿಗಂತದಲ್ಲಿ ವ್ಯಾಪಿಸಿತು. ಇನ್ನೇನು ಸತ್ಯದ ಜ್ಯೋತಿಯು ಶಾಶ್ವತವಾಗಿ ನಂದಿ ಬಿಡುವುದೋ ಮತ್ತು ಜಗತ್ತು ಶಾಶ್ವತವಾಗಿ ಮಿಥ್ಯದ ವಶವಾಗುವುದೋ ಎಂಬ ಸಂಶಯ ಮೂಡತೊಡಗಿತು.

ಕ್ಷೋಭೆಯ ಉಗಮಸ್ಥಾನವು ಮದೀನಾದ ಹೊರಗೆ ಮಾತ್ರ ಇದ್ದುದಲ್ಲ. ಮದೀನಾ ನಗರದೊಳಗೂ ಆಷಾಡಭೂತಿತನ ಮತ್ತು ದ್ವೇಷದ ಬೆಂಕಿಯು ಜ್ವಾಲೆ ಎಬ್ಬಿಸುತ್ತಿತ್ತು. ಕಪಟವಿಶ್ವಾಸಿಗಳು ಯಾವ ರೀತಿಯಿಂದಾದರೂ ನೀತಿ ಮತ್ತು ಧರ್ಮನಿಷ್ಠೆಯ ಈ ಗಿಡವು ಮದೀನಾದಲ್ಲಿ ಬೇರೂರದಂತೆ ನೋಡಿಕೊಳ್ಳಬೇಕೆಂದು

ತೀವ್ರ ಪ್ರಯತ್ನ ನಡೆಸುತ್ತಿದ್ದರು. ಅವರ ಜೀವನಗಳು ಪುಣ್ಯ ಮತ್ತು ಧರ್ಮನಿಷ್ಠೆಯಿಂ ಬರಿದಾಗಿರುವಂತೆ ಇಡೀ ವಾತಾವರಣವೇ ಬರಿದಾಗಿರಬೇಕೆಂದು ಅವ ಬಯಸುತ್ತಿದ್ದರು. ಜನರ ಶೀಲ ಮತ್ತು ಮಾನವೂ ಅವರ ನೀಚ ಪ್ರಯತ್ನ ಒಂದು ದೊಡ್ಡ ಗುರಿಯಾಗಿತ್ತು. ಏಕೆಂದರೆ ಇಸ್ಲಾಮೀ ಸಮಾಜದ ಈ ಮೂಲಭೂ ಸ್ತಂಭವನ್ನು ಕೆಡವಿ ಹಾಕದೆ ಅವರು ತಮ್ಮ ದೇಹೇಚ್ಛೆ ಮತ್ತು ವಿಷಯಾಸಕ್ತಿ ಲೋಕವನ್ನು ಕಟ್ಟುವಂತಿರಲಿಲ್ಲ.

ಈ ದ್ವಿಮುಖ ಮತ್ತು ನಿರ್ಣಾಯಕ ಸಂಘರ್ಷದ ಬಗ್ಗೆ ಯೋಚಿಸಿ ನೋ ಆ ಸಂದಿಗ್ಧ ಘಟ್ಟದಲ್ಲಿ ಲೋಕದ ಯಾವನೇ ಬುದ್ಧಿವಂತ ವ್ಯಕ್ತಿಯ ತೀರ್ಮಾ ಏನಿರಬಹುದೆಂದು ಊಹಿಸಿ. ಸಮುದಾಯದ ಪ್ರತಿಯೊಬ್ಬ ವ್ಯಕ್ತಿಯೂ ಶತ್ರುವ ಎದುರಿಸಲು ಟೊಂಕಕಟ್ಟಿ ನಿಲ್ಲಬೇಕು ಹಾಗೂ ರಾಷ್ಟ್ರ ಮತ್ತು ಸಮಾಜವು ಎ ರೀತಿಯ ಅನ್ಯಾಯಗಳಿಂದ ಮುಕ್ತವಾಗುವ ತನಕ ಶಸ್ತ್ರ ಕೆಳಗಿಡಬಾರದು ಎಂಬು ಆಗಿರಬೇಕಲ್ಲವೇ? ಆದರೆ ಲೌಕಿಕ ದೃಷ್ಟಿಯ ಈ ಬುದ್ಧಿವಂತ ಅಭಿಪ್ರಾಯ ವ್ಯತಿರಿಕ್ತವಾಗಿ ಇಸ್ಲಾಮ್ ರಾಷ್ಟ್ರ ಮತ್ತು ಸಮಾಜದ ಸಂರಕ್ಷಣೆಯ ಹೊಸ ತತ್ವಗಳ ಆವಿಷ್ಕರಿಸಿತು. ಅದು ಪುರುಷನ ಮಟ್ಟಿಗೆ ಆತನು ಎಲ್ಲ ಕ್ಷೋಭೆ ಮ ಗೊಂದಲವನ್ನು ನೇರವಾಗಿ ಎದುರಿಸಿ ಅದನ್ನು ಮಣಿಸಬೇಕು ಎಂ ತೀರ್ಮಾನಿಸಿದರೂ ಸಮಾಜದ ಮಹಿಳೆಯರು ತಮ್ಮ ಮನೆಯೊಳಗೆ ಇದ್ದುಕೊಂ ಈ ಯುದ್ಧದಲ್ಲಿ ಭಾಗವಹಿಸಬೇಕೆಂದು ತೀರ್ಮಾನಿಸಿತು. ಅವರು ಮನೆಯದಲ್ಲಿ ತಮ್ಮ ಶೀಲ, ಚಾರಿತ್ರ್ಯ ಮತ್ತು ಮಾನವನ್ನು ಸಂರಕ್ಷಿಸುತ್ತಾ ಧರ್ಮ ಮತ್ತು ವಿಶ್ವಾಸ ಶತ್ರುಗಳನ್ನೆದುರಿಸಬೇಕೆಂದು ಆದೇಶಿಸಿತು.

ಈ ಹಿನ್ನೆಲೆಯನ್ನು ನೋಡಿದಾಗ ಇಸ್ಲಾಮ್ ರಾಷ್ಟ್ರ ಮತ್ತು ಸಮಾಜ ರಕ್ಷಣೆಯ ಹೊಣೆಯನ್ನು ಮೂಲತಃ ಪುರುಷರ ಮೇಲೆಯೇ ಹಾಕಿದೆ. ಸ್ತ್ರೀ ಚಟುವಟಿಕೆಯ ದಿಕ್ಕನ್ನು ಮನೆಯ ಕಡೆಗೆ ತಿರುಗಿಸಿದೆ. ಪೇಟೆಯ ವ್ಯಾಪಾ ಕಛೇರಿಯ ಗುಮಾಸ್ತೆ, ನ್ಯಾಯಾಲಯದ ನ್ಯಾಯಾಧೀಶೆ ಮತ್ತು ಸೈನ್ಯ ಸಿಪಾಯಿಯಾಗುವುದು ಆಕೆಯ ನೈಜ ಸ್ಥಾನವಲ್ಲ, ಬದಲಾಗಿ ಆಕೆಯ ನೈ ಕಾರ್ಯಕ್ಷೇತ್ರವು ಆಕೆಯ ಮನೆಯಾಗಿದೆ.

## ಸ್ತ್ರೀಯ ಕೆಲಸಕ್ಕೆ ಗೌರವ

ಜೀವನದ ನಿರ್ಮಾಣಕ್ಕಾಗಿ ಇಸ್ಲಾಮ್ ತಯಾರಿಸಿರುವ ಚಿತ್ರವು ಯಾವು ಕ್ಷೇತ್ರದಲ್ಲಿ ಮಹಿಳೆಯ ಈ ಮೂಲಭೂತ ಸ್ಥಾನಮಾನಕ್ಕೆ ಚ್ಯುತಿ ಯಾಗದ ನೋಡಿಕೊಳ್ಳುತ್ತದೆ. ಆರಾಧನೆ, ವ್ಯವಹಾರ, ಕುಟುಂಬ ವ್ಯವಸ್ಥೆ, ಸಮಾಜ ಶಿಷ್ಟಾಚಾರ, ಆರ್ಥಿಕ ನಿಯಮ ಮತ್ತು ಸಂಸ್ಕೃತಿಯ ಸಿದ್ಧಾಂತ ಗಳೆಲ್ಲದಕ್ಕೂ ನಿಯಮ ಅನ್ವಯಿಸುತ್ತದೆ.

ಧರ್ಮದಲ್ಲಿ ಆರಾಧನೆಗಳಿಗೆ ಇರುವ ಮಹತ್ವವನ್ನು ಪ್ರತಿಯೊಬ್ಬನೂ ಅರಿತಿರುವನು. ಇದು ನಿಜವಾಗಿ ಧರ್ಮದ ಆತ್ಮ ಮತ್ತು ಶರೀಅತ್‌ನ ಪ್ರಾಣವಾಗಿದೆ. ಈ ಆರಾಧನೆಗಳ ಒಂದು ವಿಶೇಷತೆ ಏನೆಂದರೆ ಅದು ವ್ಯಕ್ತಿಗಳನ್ನುದ್ದೇಶಿಸಿ ಇರುವಂತಹದ್ದಾಗಿದ್ದರೂ ಅದನ್ನು ಸಾಮೂಹಿಕವಾಗಿಯೇ ನಿರ್ವಹಿಸಬೇಕೆಂದು ಆಜ್ಞಾಪಿಸಲಾಗಿದೆ. ನಮಾಝನ್ನು ಸಾಮೂಹಿಕವಾಗಿ ನಿರ್ವಹಿಸಬೇಕು. ಉಪವಾಸ ವ್ರತವನ್ನು ಎಲ್ಲರೂ ಜತೆಯಾಗಿ ಒಂದೇ ತಿಂಗಳಲ್ಲಿ ಆಚರಿಸಬೇಕು. ಝಕಾತ್‌ನ ಸಂಗ್ರಹ ಮತ್ತು ವಿತರಣೆಯ ಹಕ್ಕು ಇರುವುದು ಪ್ರಥಮತಃ ಸರಕಾರಕ್ಕಾಗಿದೆ. ಹಜ್ಜ್‌ನ ಕರ್ತವ್ಯವನ್ನು ಎಲ್ಲರ ಜತೆ ಸೇರಿ ನಿರ್ದಿಷ್ಟ ದಿನಗಳಲ್ಲಿ ನಿರ್ವಹಿಸಬೇಕು. ಇದು ಏಕೆಂದರೆ ವ್ಯಕ್ತಿಯು ತನ್ನ ತರಬೇತಿ ಮತ್ತು ಚಾರಿತ್ರ್ಯ ನಿರ್ಮಾಣದ ಕಾರ್ಯವನ್ನು ಮಾಡುತ್ತಾ ಏಕಾಂತಪ್ರಿಯ ಮತ್ತು ಸಮಾಜದಿಂದ ದೂರವಾಗುವ ಪ್ರವೃತ್ತಿ ಅವನಲ್ಲಿ ಬೆಳೆಯಬಾರದು. ಆತ ಒಂದು ಸಮಾಜದ ಅಂಗವಾಗಿದ್ದು ಅದರ ಸುಧಾರಣೆ ಮತ್ತು ಅಧಃಪತನಕ್ಕೆ ಅವನೇ ಹೊಣೆಯಾಗಿರುತ್ತಾನೆಂಬುದನ್ನು ಪ್ರತಿ ಹೆಜ್ಜೆಗೂ ಅವನು ನೆನಪಿಡಬೇಕು.

ವ್ಯಕ್ತಿಗಳು ತಮ್ಮ ವೈಯಕ್ತಿಕ ನೆಲೆಯನ್ನು ತೊರೆದು ಆ ಕಾರ್ಯಕ್ಕೆ ನಿಶ್ಚಯಿಸಲ್ಪಟ್ಟ ಆ ಸಾಮೂಹಿಕ ರೂಪವನ್ನು ಧರಿಸಿದಾಗ ಮಾತ್ರ ಯಾವುದೇ ಸಾಮೂಹಿಕ ಕಾರ್ಯ ನೆರವೇರುತ್ತದೆ. ಅದಕ್ಕಾಗಿ ವ್ಯಾಪಾರಿಯು ತನ್ನ ವ್ಯಾಪಾರವನ್ನು, ವಿದ್ಯಾರ್ಥಿಯು ತನ್ನ ವಿದ್ಯಾರ್ಜನೆಯನ್ನು, ಕಾರ್ಮಿಕನು ತನ್ನ ಶ್ರಮವನ್ನು ಮತ್ತು ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ಥಾನವನ್ನು ತೊರೆಯಬೇಕಾಗುತ್ತದೆ.

ಆದರೆ ಶರೀಅತ್‌ನ ದೃಷ್ಟಿಯಲ್ಲಿ, ಸಾಮೂಹಿಕ ಆರಾಧನೆಯಲ್ಲಿ ಪಾಲ್ಗೊಳ್ಳುವುದಕ್ಕಿಂತ ಮಹಿಳೆಯು ತನ್ನ ರಂಗದಲ್ಲಿ ಸ್ಥಿರವಾಗಿರುವುದಕ್ಕೆ ಹೆಚ್ಚಿನ ಮಹತ್ವವಿದೆ. ಆಕೆ ತನ್ನ ಕೇಂದ್ರವನ್ನು ತೊರೆಯುವುದರಿಂದ ಆಗುವ ನಷ್ಟವು ಸಾಮೂಹಿಕ ಆರಾಧನೆಯಲ್ಲಿ ಭಾಗವಹಿಸುವುದರಿಂದ ಆಗುವ ನಷ್ಟಕ್ಕಿಂತ ಹಿರಿದಾಗಿದೆ. ಸಾಮೂಹಿಕ ಆರಾಧನೆಯ ಮೂಲಕ ಗಳಿಸಬಯಸುವ ಪ್ರಯೋಜನಗಳನ್ನು ಇತರ ಅನೇಕ ವಿಧಾನಗಳಿಂದ ಗಳಿಸಬಹುದು. ಆದರೆ ಮಹಿಳೆಯು ತನ್ನ ಕ್ಷೇತ್ರದಿಂದ ದೂರ ಸರಿಯುವುದರಿಂದ ಉಂಟಾಗುವ ನಿರ್ವಾತವನ್ನು ಇನ್ನಾವ ವಿಧಾನದಿಂದಲೂ ತುಂಬಿಸಲಾಗದು. ಆದ್ದರಿಂದಲೇ ಆರಾಧನೆಗಳನ್ನಾಗಲಿ ಇನ್ನಿತರ ಕರ್ತವ್ಯಗಳನ್ನಾಗಲಿ ಮಹಿಳೆಯರ ಮೇಲೆ ಸಾಮೂಹಿಕ ರೂಪದಲ್ಲಿ ಕಡ್ಡಾಯಗೊಳಿಸಲಾಗಿಲ್ಲ. ಒಂದು ವೇಳೆ ಕಡ್ಡಾಯಗೊಳಿಸಿದ್ದರೂ ಅದು ಆಕೆಯ ಮೂಲ ಉದ್ದೇಶಗಳಿಂದ ವಿಮುಖಗೊಳಿಸದಂತಹ ಆರಾಧನೆ ಮತ್ತು ಕರ್ತವ್ಯಗಳನ್ನು ಮಾತ್ರ.

ಆರಾಧನೆಗಳ ಪೈಕಿ ಅತ್ಯಂತ ಪ್ರಮುಖವೆನಿಸಿದ ನಮಾಝನ್ನೇ ತೆಗೆದುಕೊಳ್ಳಿ. ಪುರುಷನು ನಮಾಝನ್ನು ಸಾಮೂಹಿಕವಾಗಿ ನಿರ್ವಹಿಸುವುದು ಕಡ್ಡಾಯವಾಗಿದೆ.

ಸ್ತ್ರೀಯ ಮೇಲೆ ನಮಾಝ್ ಕಡ್ಡಾಯವಾಗಿದ್ದರೂ ಅದನ್ನು ಆಕೆ ಸಾಮೂಹಿಕವಾ ನಿರ್ವಹಿಸಬೇಕೆಂದಿಲ್ಲ. ಪುರುಷನು ವಿನಾಕಾರಣ ಜಮಾಅತ್ ತೊರೆದರೆ ಖಂಡನೆಗೆ ಗುರಿಯಾಗುತ್ತಾನೆ. ಸ್ತ್ರೀಯು ತನ್ನ ಮನೆಯನ್ನೇ ತನ್ನ ಆರಾಧನಾಲಯವಾ ಮಾಡಿಕೊಳ್ಳಬೇಕೆಂಬುದಾಗಿ ಬೇರೆಬೇರೆ ರೀತಿಯಿಂದ ಪ್ರೇರೇಪಿಸಲಾಗಿದೆ. ಪ್ರವಾದಿ( ಹೀಗೆ ಹೇಳಿರುವರು, "ಸ್ತ್ರೀಯರ ಅತ್ಯುತ್ತಮ ಮಸೀದಿಗಳು ಅವರ ಮನೆಗಳ ಒಳಗಿ ಭಾಗಗಳಾಗಿವೆ." (ಮುಸ್ನದ್ ಅಹ್ಮದ್, ಹಾಕಿಮ್)

ಪ್ರಖ್ಯಾತ ಸಹಾಬಿ ಅಬೂ ಹುಮೈದ್ ಸಾಇದೀ(ರ) ಅವರ ಪತ್ನಿ ಪ್ರವಾದಿ( ಅವರ ಸನ್ನಿಧಿಯಲ್ಲಿ ಹಾಜರಾಗಿ ಈ ರೀತಿ ನಿವೇದಿಸಿಕೊಂಡರು, "ಪ್ರವಾದಿಗಳ ನಾನು ತಮ್ಮ ಜತೆ ಮಸೀದಿಯಲ್ಲಿ ನಮಾಝ್ ಮಾಡಬಯಸುತ್ತೇನೆ. ತ ಅಭಿಪ್ರಾಯವೇನು?" ಪ್ರವಾದಿ(ಸ) ಹೇಳಿದರು, "ನೀವು ಅದನ್ನೇ ಬಯಸುತ್ತೀರೆಂ ನನಗೆ ನಂಬಿಕೆಯಿದೆ. ಆದರೆ ತಿಳಿಯಿರಿ! ನಿಮ್ಮ ಮನೆಯ ಒಂದು ಒಳ ಕೋಣೆಯ ನಮಾಝ್ ಮಾಡುವುದು ನಿಮ್ಮ ಪಾಲಿಗೆ ವಿಶಾಲ ಕೋಣೆಯಲ್ಲಿ ನಮಾ ಮಾಡುವುದಕ್ಕಿಂತ ಉತ್ತಮವಾಗಿದೆ. ನೀವು ಕೋಣೆಯಲ್ಲಿ ಮಾಡುವ ನಮಾ ಮನೆಯ ಮಧ್ಯಭಾಗದಲ್ಲಿ ಮಾಡುವ ನಮಾಝ್‌ಗಿಂತ ಉತ್ತಮವಾಗಿದೆ. ನೀ ನಿಮ್ಮ ಮನೆಯ ಮಧ್ಯಭಾಗದಲ್ಲಿ ಮಾಡುವ ನಮಾಝ್ ಕೇರಿಯ ಒಂ ಮಸೀದಿಯಲ್ಲಿ ಮಾಡುವ ನಮಾಝ್‌ಗಿಂತ ಉತ್ತಮವಾಗಿದೆ. ನೀವು ನಿ ಕೇರಿಯ ಮಸೀದಿಯಲ್ಲಿ ಮಾಡುವ ನಮಾಝ್ ನಿಮ್ಮ ಪಾಲಿಗೆ ನನ್ನ ಮಸೀದಿಯ ಮಾಡುವ ನಮಾಝ್‌ಗಿಂತ ಉತ್ತಮವಾಗಿದೆ." ಹದೀಸ್‌ನ ವರದಿಗಾರರು ಹೇಳುತ್ತಾ "ಪ್ರವಾದಿವರ್ಯರ(ಸ) ಈ ಆದೇಶವು ಅಬೂ ಹುಮೈದ್ ಸಾಇದೀಯವ ಪತ್ನಿಯ ಮೇಲೆ ಯಾವ ರೀತಿ ಪ್ರಭಾವ ಬೀರಿತೆಂದರೆ ಅವರು ಮನೆಯ ಒ ಕೋಣೆಯಲ್ಲಿ ನಮಾಝ್‌ನ ಸ್ಥಳವನ್ನು ಗೊತ್ತುಪಡಿಸಿಕೊಂಡು ಜೀವನದಾದ್ಯ ಅಲ್ಲೇ ನಮಾಝ್ ಮಾಡುತ್ತಿದ್ದರು." (ಮುಸ್ನದ್ ಅಹ್ಮದ್)

ಜುಮಾ ನಮಾಝ್ ಸಂಘ ಜೀವನದ ಪ್ರತೀಕವಾಗಿದೆ. ಮಾತ್ರವಲ್ಲ ಅ ಸಮುದಾಯದ ಸದಸ್ಯರನ್ನು ಪರಸ್ಪರ ನಿಕಟಗೊಳಿಸಲು ಹಾಗೂ ಧಾರ್ಮಿ ಬೋಧನೆ ಮತ್ತು ಆದೇಶಗಳನ್ನು ಅವರಿಗೆ ತಲುಪಿಸಲಿಕ್ಕಿರುವ ಅತ್ಯುತ್ತ ಸಾಧನವಾಗಿದೆ. ಆದರೆ ಶರೀಅತ್ ಮಹಿಳೆಗೆ ಈ ಸಾಮೂಹಿಕ ಆರಾಧ ಕ್ರಮದಿಂದಲೂ ವಿನಾಯಿತಿ ನೀಡಿದೆ.

ಪ್ರವಾದಿ(ಸ) ಹೀಗೆ ಹೇಳಿರುವರು, "ಜುಮಾ ಪ್ರತಿಯೊಬ್ಬ ಮುಸ್ಲಿಮನ ಮೇ ಕಡ್ಡಾಯವಾಗಿದೆ. ನಾಲ್ಕು ವಿಧದ ಜನರ ಹೊರತು– ಗುಲಾಮ, ಮಹಿಳೆ, ಮ ಮತ್ತು ರೋಗಿ." [ವರದಿ: ತಾರಿಕ್ ಬಿನ್ ಶಿಹಾಬ್(ರ) – ಅಬೂದಾವೂದ್]

ಇಸ್ಲಾಮೀ ಸಮಾಜದ ಮೇಲೆ ಓರ್ವ ಸತ್ಯವಿಶ್ವಾಸಿಯ ಹಕ್ಕು ಜೀವಿತ ಕಾ

ಿಲ್ಲೂ ಮರಣದ ಬಳಿಕವೂ ಇರುತ್ತದೆ. ಜೀವನ ಕಾಲದಲ್ಲಿ ಸಮಾಜವು ಅವನಿಗೆ ಾಧ್ಯವಿರುವ ಎಲ್ಲ ಸೌಲಭ್ಯಗಳನ್ನು ಒದಗಿಸಿದಂತೆ ಮರಣ ಹೊಂದಿದಾಗ ಉತ್ತಮ ೀತಿಯಲ್ಲಿ ಅವನ ಅಂತಿಮ ಸಂಸ್ಕಾರ ಮಾಡುವುದು ಕೂಡಾ ಅದರ ಕರ್ತವ್ಯವಾಗಿದೆ.

ಆದರೆ ಉಮ್ಮು ಅತಿಯ್ಯ(ರ) ಈ ರೀತಿ ವರದಿ ಮಾಡಿರುವರು, "ನಮ್ಮನ್ನು ನಾಝಾ ಯಾತ್ರೆಯಲ್ಲಿ ಭಾಗವಹಿಸುವುದರಿಂದ ತಡೆಯಲಾಗಿದೆ. ಆದರೆ ಈ ಬಗ್ಗೆ ವಾದಿ(ಸ) ನಮ್ಮ ಮೇಲೆ ಒತ್ತಾಯ ಹೇರಿಲ್ಲ." (ಬುಖಾರಿ)

ಇನ್ನು ಕೆಲವು ವರದಿಗಳ ಪ್ರಕಾರ ಕೆಲವು ವೇಳೆ ಪ್ರವಾದಿ(ಸ) ಈ ಬಗ್ಗೆ ತ್ತಾಯಪಡಿಸಿದ್ದರು. ಹ. ಅನಸ್(ರ) ಹೇಳುತ್ತಾರೆ, "ನಾವು ಪ್ರವಾದಿ(ಸ) ಅವರ ತೆ ಒಂದು ಮೃತ ದೇಹವನ್ನು ಕೊಂಡು ಹೋಗುತ್ತಿದ್ದೆವು. ಕೆಲವು ಮಹಿಳೆಯರು ಮ್ಮನ್ನು ಹಿಂಬಾಲಿಸುವುದಾಗಿ ಕಂಡಾಗ ಪ್ರವಾದಿ(ಸ) (ಕೋಪದಿಂದ) ಕೇಳಿದರು: ೀವು ಇದನ್ನು ಹೊರುತ್ತೀರಾ?" ಅವರು ಇಲ್ಲವೆಂದರು. ಆಗ ಪ್ರವಾದಿ(ಸ) ಳಿದರು, "ನೀವು ಇದರ ಅಂತ್ಯಕ್ರಿಯೆಯಲ್ಲಿ ಭಾಗವಹಿಸುತ್ತೀರಾ?" ಅವರು ಲ್ಲ'ವೆಂದರು. ಆಗ ಪ್ರವಾದಿ(ಸ) ಹೇಳಿದರು, "ನಿಮಗೆ ಇಲ್ಲೇನೂ ಕೆಲಸವಿಲ್ಲದಿರುವಾಗ ರುವ ಅಗತ್ಯವಾದರೂ ಏನಿದೆ? ನಿಮಗೆ ಈ ಕಾರ್ಯದಿಂದ ಏನೂ ಪುಣ್ಯ ಭಿಸದು. ಆದ್ದರಿಂದ ನಿಮ್ಮ ಪಾಡಿಗೆ ಹೊರಟು ಹೋಗಿ."

(ಫತ್ಹುಲ್ ಬಾರಿ ಭಾಗ– 3 ಪುಟ: 118)

ಇಸ್ಲಾಮ್ ಅಂದರೆ ಸತ್ಯನಿಷ್ಠೆಯಾಗಿದೆ. ಈ ನಿಷ್ಠೆಯ ಕರಾರು ಮಾಡಿದವನು ುಸ್ಲಿಮ್ ಆಗಿರುತ್ತಾನೆ. ಈ ಕರಾರಿನ ಬಳಿಕ ಜೀವನದ ಪ್ರತಿಯೊಂದು ಹೆಜ್ಜೆಗೂ ್ಯವಿಶ್ವಾಸಿಯ ನಿಷ್ಠೆಯ ಪರೀಕ್ಷೆಯಾಗುತ್ತಿದೆ. ಆದರೆ ಇದರ ಅತ್ಯಂತ ಕಠಿಣ ೀಕ್ಷೆಯಾಗುವುದು ಸತ್ಯದ ಶತ್ರುಗಳು ಸಶಸ್ತ್ರರಾಗಿ ರಣರಂಗಕ್ಕೆ ಇಳಿದಾಗ ಮತ್ತು ್ಯ–ಮಿಥ್ಯಗಳ ಅಳಿವು ಉಳಿವಿನ ತೀರ್ಮಾನವಾಗುತ್ತಿರುವಾಗಲೇ. ಆಗ ಓರ್ವ ಷ್ಠಾವಂತ ವ್ಯಕ್ತಿಯು ಸತ್ಯದ ಸಂರಕ್ಷಣೆಗಾಗಿ ಜೀವದ ಹಂಗು ತೊರೆದು ೀರಾಡಬೇಕಾದುದು ಅವನ ಕರ್ತವ್ಯವಾಗಿದೆ. ಈ ನಿರ್ಣಾಯಕ ಗಳಿಗೆಯಲ್ಲೂ ್ಲಾಮ್ ಮಹಿಳೆಯಿಂದ ಆಕೆಯ ನಿಷ್ಠೆಯ ಪುರಾವೆಯನ್ನು ರಣಾಂಗಣದಲ್ಲಿ ುವುದಿಲ್ಲ. ಆಗಲೂ ಆಕೆಯ ಮನೆಯನ್ನೇ ಆಕೆಯ ಪರೀಕ್ಷಾ ಕೇಂದ್ರವೆಂದು ಗಣಿಸಿ ಪತಿ, ಸಂತಾನ, ಬಂಧು–ಬಳಗದವರ ಜತೆ ಹಿತಾಕಾಂಕ್ಷೆಯ ವ್ಯವಹಾರವನ್ನೇ ್ವಾಸದ ಪುರಾವೆಯೆಂದು ಸಾರಿದೆ: ಹ. ಆಯಿಶಾ(ರ) ಪ್ರವಾದಿ(ಸ) ಅವರಿಂದ ರೀತಿ ವರದಿ ಮಾಡಿರುವರು, "ನೀವು ನಿಮ್ಮ ಮನೆಗಳಲ್ಲೇ ಸ್ಥಿರವಾಗಿರಿ. ಂದರೆ ಇದುವೇ ನಿಮ್ಮ ಜಿಹಾದ್ ಆಗಿದೆ." (ಮುಸ್ನದ್ ಅಹ್ಮದ್)

ಓರ್ವ ಸಹಾಬಿ ಮಹಿಳೆ ಪ್ರವಾದಿ(ಸ) ಅವರಲ್ಲಿ ಹೀಗೆ ವಿಚಾರಿಸಿದರು, ್ಲಾಹನು ಪುರುಷರ ಮೇಲೆ ಜಿಹಾದ್ ಕಡ್ಡಾಯಗೊಳಿಸಿರುವನು. ಅವರು

ವಿಜಯಿಗಳಾದರೆ ಸಮರಾರ್ಜಿತ ಸೊತ್ತು ಗಳಿಸುತ್ತಾರೆ. ಅವರು ಹುತಾತ್ಮರಾದ ತಮ್ಮ ಪ್ರಭುವಿನ ಬಳಿ ಜೀವಂತವಿರುತ್ತಾರೆ. ಅಲ್ಲಿ ಅವರಿಗೆ ಆಹಾರ ಲಭಿಸು ತ್ತ ನಮ್ಮ ಯಾವ ಕಾರ್ಯವು ಅವರ ಈ ಕಾರ್ಯಕ್ಕೆ ಸಮಾನವಾಗಿದೆ?" ಪ್ರವಾದಿ(ಸ ಹೇಳಿದರು, "ನೀವು ನಿಮ್ಮ ಪತಿಯಂದಿರನ್ನು ಅನುಸರಿಸುವುದು ಮತ್ತು ಅವ ಹಕ್ಕುಗಳನ್ನು ತೀರಿಸುವುದು." (ಅತ್ತರ್ಗೀಬ್ ವತ್ತರ್ಹೀಬ್)

ಆದರೆ ಅಲ್ಲಾಹನ ಮಾರ್ಗದಲ್ಲಿ ಪ್ರಾಣ, ಸೊತ್ತು ಮತ್ತು ಸುಖ-ಸಂತೋ ಗಳನ್ನು ತ್ಯಾಗ ಮಾಡುವ ಭಾವನೆಯಿಂದ ಯಾವ ಮುಸ್ಲಿಮ್ ಮಹಿಳೆ ಹೃದಯವೂ ಬರಿದಾಗಿರಲಾರದು. ಶರೀಅತ್ ಆ ಭಾವನೆಗೆ ಸಮಾಧಾನ ನೀಡು ವ್ಯವಸ್ಥೆಯನ್ನಂತೂ ಮಾಡಿದೆ. ಆದರೆ ಆಕೆಯ ತ್ಯಾಗ-ಬಲಿದಾನಗಳ ಭಾವನೆ ದಿಕ್ಕನ್ನು ಬದಲಿಸಿದೆ. ಆಕೆ ತನ್ನ ಶಾಂತಿ-ನೆಮ್ಮದಿಯ ಕೇಂದ್ರವನ್ನು ಬಿಡುವುದಾದ ಅದು ಜನಾಂಗಗಳ ಭಾಗ್ಯ ನಿರ್ಣಯಿಸಲಿಕ್ಕೆ ಮತ್ತು ಸಾಮೂಹಿಕ ಸಿಕ್ಕುಗಳನ ಬಿಡಿಸಲಿಕ್ಕೆ ಆಗಿರಲಾರದು. ಬದಲಾಗಿ ತನ್ನ ದಾಸ್ಯ ಮತ್ತು ನಿಷ್ಠೆಯ ಕರಾರನ ನವೀಕರಿಸಲಿಕ್ಕಾಗಿರುವುದು. ಆಕೆ ಮನೆಯಿಂದ ಹೊರಗೆ ಬರುವುದು ಕುಟುಂ ಜೀವನವನ್ನು ಹಾಳುಗೆಡಹಲಿಕ್ಕಾಗಿರದೆ ಅದನ್ನು ಬಲ ಪಡಿಸುವ ದೃಢ ನಿರ್ಧಾರವನ ಮತ್ತಷ್ಟು ಬಲಿಷ್ಠಗೊಳಿಸಲಿಕ್ಕಾಗಿರುವುದು.

ಹ. ಆಯಿಶಾ(ರ) ಪ್ರವಾದಿ(ಸ) ಅವರಲ್ಲಿ ಈ ರೀತಿ ವಿಚಾರಿಸಿದರ "ಸ್ತ್ರೀಯರ ಮೇಲೆ ಜಿಹಾದ್ ಕಡ್ಡಾಯವಾಗಿದೆಯೇ?" ಪ್ರವಾದಿ(ಸ) ಈ ಪ್ರಶ್ನೆ ಹಿಂದಿರುವ ಭಾವನೆಯನ್ನು ಮನಗಂಡು ವಿಶಿಷ್ಟ ಶೈಲಿಯಲ್ಲಿ ಉತ್ತರಿಸಿ ದರ "ಹೌದು. ಅವರ ಮೇಲೆ ಜಿಹಾದ್ ಇದೆ. ಆದರೆ ಅದರಲ್ಲಿ ಯುದ್ಧವಿಲ್ಲ. ಅ ಹಜ್ಜ್ ಮತ್ತು ಉಮ್ರಾ ಆಗಿದೆ." (ಇಬ್ನುಮಾಜ)

ಪ್ರವಾದಿ ಪತ್ನಿಯರು ಜಿಹಾದ್‌ನಲ್ಲಿ ಭಾಗವಹಿಸುವ ಅನುಮತಿ ಕೇಳಿದಾ ಒಮ್ಮೆ ಪ್ರವಾದಿ(ಸ) ಹೇಳಿದರು, "ನಿಮ್ಮ ಜಿಹಾದ್ ಹಜ್ಜ್ ಆಗಿದೆ." ಮತ್ತೊ ಅಲ್ಲಾಹನ ಭವನದ ತನಕ ತಲುಪುವಲ್ಲಿ ಸಹಿಸಬೇಕಾಗುವ ತೊಂದರೆಗ ಮಹತ್ವವನ್ನು ತಿಳಿಸಿ ಅವರ ಭಾವನೆಗಳನ್ನು ಸಂತೈಸುವ ಪ್ರಯತ್ನ ಮಾಡಿದ್ದ ಪ್ರವಾದಿಯವರ(ಸ) ಮುಂದೆ ಇಂತಹ ಬಯಕೆಯನ್ನು ಪ್ರಕಟಿಸಿದಾಗ, "ನಿ ಪಾಲಿಗೆ ಹಜ್ಜ್ ಅತ್ಯುತ್ತಮ ಜಿಹಾದ್ ಆಗಿದೆ" ಎಂದರು.

ಸ್ತ್ರೀಯ ನೈಜ ಸ್ಥಾನಮಾನವನ್ನು ಉಳಿಸಲಿಕ್ಕಾಗಿ ಆರ್ಥಿಕ ಚಟುವಟ ಗಳಿಂದಲೂ ಆಕೆಗೆ ಮುಕ್ತಿ ನೀಡಲಾಯಿತು. ಇತರರ ಆರ್ಥಿಕ ಹೊರೆಯನ್ನು ಸ್ತ್ರೀ ಮೇಲೆ ಹೇರುವುದಂತಿರಲಿ ಸ್ವತಃ ಆಕೆಯ ಆರ್ಥಿಕ ಭಾರವನ್ನೂ ಆಕೆಯ ಮೇ ಹೇರಲಾಗಿಲ್ಲ. ಆದ್ದರಿಂದ ತನ್ನ ಅಥವಾ ಇತರರ ಹೊಟ್ಟೆ ಹೊರೆಯುವುದಕ್ಕಾ ಆಕೆ ಮನೆ ಬಿಟ್ಟು ಹೊರ ಬರಬೇಕಾದಂತಹ ಪ್ರಮೇಯವಿಲ್ಲ.

ಒಂದು ವೇಳೆ ಯಾವುದಾದರೂ ಉನ್ನತ ಧ್ಯೇಯಕ್ಕಾಗಿ ಆಕೆಗೆ ಮನೆ ಬಿಟ್ಟು ಬರುವ ಅನುಮತಿ ನೀಡಲಾಗಿದ್ದರೆ ಅಥವಾ ಯಾವುದಾದರೂ ಸಾಮೂಹಿಕ ಆರಾಧನಾ ವಿಧಿಯನ್ನು ಆಕೆಯ ಪಾಲಿಗೆ ಅಗತ್ಯವೆಂದು ಸಾರಿದ್ದರೆ ಅದರಲ್ಲೂ ಆಕೆಯಲ್ಲಿ ತನ್ನ ನೈಜ ಕ್ಷೇತ್ರವು ಮನೆಯೇ ಆಗಿದೆ ಎಂಬ ಭಾವನೆಯು ಸದಾ ಜಾಗ್ರತವಾಗಿರುವಂತೆ ವ್ಯವಸ್ಥೆ ಮಾಡಲಾಗಿದೆ. ಆಕೆ ಮನೆಯಿಂದ ಹೊರಬಂದರೆ ಸ್ತ್ರೀತನದಿಂದಲೂ ಮುಕ್ತವಾಗಿ ಬಿಡುತ್ತಾಳೆಂದು ಅದರ ಅರ್ಥವಲ್ಲ.

ಉದಾಹರಣೆಗೆ ಸ್ತ್ರೀಗೆ ಮಸೀದಿಯಲ್ಲಿ ಬಂದು ಜಮಾಅತ್ ಸಹಿತ ನಮಾಝ್ ಮಾಡುವ ಅನುಮತಿಯಿದೆ. ಆದರೆ ಆಕೆಗೆ ಅಲ್ಲಿ ಪುರುಷರೊಂದಿಗೆ ಬೆರೆಯುವ ಅವಕಾಶವಿಲ್ಲ. ಅವರ ಪಂಕ್ತಿಗಳು ಪುರುಷರ ಸಾಲಿಗಿಂತ ಬೇರೆ ಇರುವುವು. ಈ ವಿಭಜನೆ ಮತ್ತು ದೂರವು ಎಷ್ಟು ಅಧಿಕವಿರುವುದೋ ಶರೀಅತ್‌ನ ದೃಷ್ಟಿಯಲ್ಲಿ ಅದು ಅಷ್ಟೇ ಪ್ರಿಯವಾಗಿದೆ. ಪ್ರವಾದಿ(ಸ) ಹೀಗೆ ಹೇಳಿರುವರು, "ಪುರುಷರ ಅತ್ಯುತ್ತಮ ಸಾಲು ಮುಂದಿನ ಸಾಲಾಗಿದೆ ಮತ್ತು ಅತ್ಯಂತ ಕೆಟ್ಟ ಸಾಲು ಹಿಂದಿನ ಸಾಲಾಗಿದೆ. ಸ್ತ್ರೀಯರ ಅತ್ಯುತ್ತಮ ಸಾಲು ಅತ್ಯಂತ ಹಿಂದಿರುವ ಸಾಲಾಗಿದೆ ಮತ್ತು ಅತ್ಯಂತ ಕೆಟ್ಟ ಸಾಲು ಎಲ್ಲರಿಗಿಂತ ಮುಂದಿರುವ ಸಾಲಾಗಿದೆ."

[ವರದಿ: ಹ. ಅಬೂಹುರೈರಾ(ರ) – ಮುಸ್ಲಿಮ್]

ಪುರುಷರ ಕೊನೆಯ ಸಾಲು ಮತ್ತು ಸ್ತ್ರೀಯರ ಪ್ರಥಮ ಸಾಲು ಪರಸ್ಪರ ಹತ್ತಿರ ಇರುವುದನ್ನು ಖಂಡಿಸಲಾಗಿದೆ. ಆದರೆ ಪುರುಷರ ಪಥಮ ಸಾಲು ಮತ್ತು ಸ್ತ್ರೀಯರ ಕೊನೆಯ ಸಾಲುಗಳ ಮಧ್ಯೆ ಹೆಚ್ಚು ಅಂತರವಿರುವುದನ್ನು ಮೆಚ್ಚಲಾಗಿದೆ. ಇದು ಸ್ತ್ರೀಯ ಕುರಿತು ಇಸ್ಲಾಮಿನ ದೃಷ್ಟಿಕೋನದ ಸಹಜ ಪರಿಣಾಮವಾಗಿದೆ. ಇದರಿಂದ ವ್ಯಕ್ತವಾಗುವುದೇನೆಂದರೆ ಇಸ್ಲಾಮ್ ಸ್ತ್ರೀಗೆ ತನ್ನ ಕಾರ್ಯಕ್ಷೇತ್ರವನ್ನು ಬಿಟ್ಟು ಇತರರ ಕಾರ್ಯ ಕ್ಷೇತ್ರಕ್ಕೆ ಹೋಗುವ ಅನುಮತಿಯನ್ನು ನೀಡುವುದಿಲ್ಲ. ಆದ್ದರಿಂದಲೇ ಸ್ತ್ರೀಯನ್ನು ಸಮಾಜದ ವಿಭಿನ್ನ ಹೊಣೆಗಾರಿಕೆಗಳಿಂದ ಮುಕ್ತಗೊಳಿಸಿ ಆಕೆಗೆ ವಹಿಸಿಕೊಡಲಾಗಿರುವ ಕ್ಷೇತ್ರದಲ್ಲೇ ಕಾರ್ಯನಿರತವಾಗಿರುವುದನ್ನು ನೋಡಬಯಸುತ್ತದೆ.

## ಸಮಾಜ – ಒಂದು ಏಕತೆ

ಆದರೆ ಯಾವುದೇ ಸಮಾಜವು ವ್ಯಕ್ತಿಯನ್ನು ಯಾವುದಾದರೂ ಸಾಮೂಹಿಕ ವಿಭಾಗದೊಂದಿಗೆ ಜೋಡಿಸಿದರೆ ಅದರ ಅರ್ಥ ಆತ ಇತರೆಲ್ಲ ವಿಭಾಗಗಳಿಂದ ಸಂಬಂಧ ಕಡಿದುಕೊಳ್ಳಬೇಕೆಂದಲ್ಲ. ಆತ ತನ್ನ ವಿಚಾರ ಮತ್ತು ಕ್ರಿಯೆಯ ಹೆಚ್ಚಿನ ಸಾಮರ್ಥ್ಯಗಳನ್ನು ಆ ವಿಭಾಗದಲ್ಲಿ ವ್ಯಯಿಸಬೇಕೆಂಬುದೇ ಅದರ ಉದ್ದೇಶವಾಗಿದೆ. ಏಕೆಂದರೆ ಕೆಲವೇ ಮಂದಿ ಇರುವ ಒಂದು ಕುಟುಂಬವಾಗಲಿ ಅಥವಾ ಒಂದು ಹಳ್ಳಿಯ ಪಂಚಾಯತ್ ವ್ಯವಸ್ಥೆಯಾಗಲಿ, ಒಂದು ಪಟ್ಟಣದ ಪುರಸಭೆಯಾಗಿರಲಿ

ಅಥವಾ ಒಂದು ಮಹಾನಗರದ ನಗರ ಪಾಲಿಕೆಯಾಗಿರಲಿ, ಒಂದು ರಾಜ್ಯದ ಸರಕಾರವಾಗಿರಲಿ ಅಥವಾ – ಕೇಂದ್ರ ಆಡಳಿತ ವ್ಯವಸ್ಥೆಯಾಗಿರಲಿ ಹಾಗೂ ಇತರ ಕೈಗಾರಿಕೆ, ಶಿಕ್ಷಣ ಮತ್ತು ಆರ್ಥಿಕ ಸಂಸ್ಥೆಗಳಾಗಿರಲಿ. ಇವೆಲ್ಲಾ ಪರಸ್ಪರ ಭಿನ್ನವೆಂದು ಕಂಡು ಬಂದರೂ ಒಂದೇ ಸಾಮೂಹಿಕ ವ್ಯವಸ್ಥೆಯ ವಿಭಿನ್ನ ಭಾಗಗಳಾಗಿವೆ. ಸಾಮೂಹಿಕ ವ್ಯವಸ್ಥೆಗೆ ಆ ಎಲ್ಲ ಸಂಸ್ಥೆಗಳೂ ಬೇಕು. ಏಕೆಂದರೆ ಆ ಪೈಕಿ ಯಾವು ದಾದರೂ ಒಂದು ಸಂಸ್ಥೆ ಸಾಮಾಜಿಕ ಜೀವನದ ಎಲ್ಲ ಬೇಡಿಕೆಗಳನ್ನೂ ಪೂರೈಸುವು ದಿಲ್ಲ. ಎಲ್ಲ ಸಂಸ್ಥೆಗಳ ಸಹಕಾರದಿಂದಲೇ ಅವು ಪೂರ್ತಿಯಾಗುತ್ತವೆ. ಕುಟುಂಬವು ವ್ಯಕ್ತಿಯ ವೈಚಾರಿಕ ತರಬೇತಿಯನ್ನು ಆರಂಭಿಸುತ್ತದೆ. ಶಾಲೆ ಮತ್ತು ವಿಶ್ವವಿದ್ಯಾಲಯ ಗಳು ಅವನ ಪ್ರಗತಿಯಲ್ಲಿ ನೆರವಾಗುತ್ತವೆ. ನಗರಸಭೆಯು ಅವನ ಆರೋಗ್ಯದ ರಕ್ಷಣೆಯ ವ್ಯವಸ್ಥೆ ಮಾಡುತ್ತದೆ. ನ್ಯಾಯಾಲಯಗಳು ಅವನ ಹಕ್ಕುಗಳನ್ನು ಸಂರಕ್ಷಿಸು ತ್ತವೆ. ಆದ್ದರಿಂದ ಅವನು ಶಿಕ್ಷಣಕ್ಕಾಗಿ ವಿದ್ಯಾಲಯಗಳಿಗೆ ಹೋಗಲೇ ಬೇಕಾಗುತ್ತದೆ ವ್ಯಾಪಾರಿಯ ನೆಲೆಯಲ್ಲಿ ಅವನಿಗೆ ಪೇಟೆಗೆ ಹೋಗಬೇಕಾಗುತ್ತದೆ. ತನ್ನ ಹಕ್ಕುಗಳ ಸಂರಕ್ಷಣೆಗಾಗಿ ಅವನಿಗೆ ನ್ಯಾಯಾಲಯಕ್ಕೆ ಹೋಗಬೇಕಾಗುತ್ತದೆ. ಉಪಜೀವನವನ್ನರಸುತ್ತಾ ಹೊಲ ಅಥವಾ ಕಾರ್ಖಾನೆಗಳ ಕಡೆಗೆ ಧಾವಿಸಬೇಕಾಗುತ್ತದೆ. ಒಟ್ಟಿನಲ್ಲಿ ವ್ಯಕ್ತಿಯ ನಾಗರಿಕ ಆವಶ್ಯಕತೆಗಳು ಇಡೀ ಸಮಾಜದಲ್ಲಿ ವ್ಯಾಪಿಸಿವೆ. ಅವನು ತನ್ನ ಚಟುವಟಿಕೆ ಗಳನ್ನು ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತಗೊಳಿಸಿಕೊಳ್ಳುವಂತಿಲ್ಲ. ಓರ್ವ ರೈತನು ತನ್ನ ಜೀವನವನ್ನು ತನ್ನ ಜಮೀನಿನ ಕ್ಷೇತ್ರಕ್ಕೇ ಸೀಮಿತಗೊಳಿಸಿಕೊಳ್ಳುವುದು ಸಾಧ್ಯ ವಿಲ್ಲ. ಓರ್ವ ವಿದ್ಯಾರ್ಥಿಯು ಸಮಾಜದ ಇತರೆಲ್ಲ ಸಂಸ್ಥೆಗಳನ್ನು ತೊರೆದು ಕೇವಲ ತನ್ನ ವಿದ್ಯಾಲಯಕ್ಕೆ ಅಂಟಿಕೊಳ್ಳಲು ಸಾಧ್ಯವಿಲ್ಲ. ಓರ್ವ ನ್ಯಾಯಾಧೀಶನನ್ನು ಆತನ ನ್ಯಾಯಾಲಯದ ಕೋಣೆಯು ಇಡೀ ಲೋಕದಿಂದ ನಿರಪೇಕ್ಷಗೊಳಿಸಲಾಗದು ಆದ್ದರಿಂದ ವ್ಯಕ್ತಿಯ ವೈವಿಧ್ಯಮಯ ಬೇಡಿಕೆಗಳು ಯಾವೆಲ್ಲ ಸಾಮೂಹಿಕ ಸಂಬಂಧ ಗಳನ್ನು ಬಯಸುತ್ತದೋ ಅವುಗಳಿಂದ ಸಮಾಜವು ವ್ಯಕ್ತಿಯನ್ನು ತಡೆಯಬಾರದು

ಇಸ್ಲಾಮ್ ಕುಟುಂಬವನ್ನು ಮಹಿಳೆಯ ಕಾರ್ಯಕ್ಷೇತ್ರವೆಂದು ಸಾರಿದೆ. ಆದರೆ ಆಕೆಯ ವೈಚಾರಿಕ ಮತ್ತು ಕ್ರಿಯಾತ್ಮಕ ಲೋಕವನ್ನು ಕುಟುಂಬಕ್ಕೆ ಸೀಮಿತಗೊಳಿಸಿಲ್ಲ ಸಾಮಾಜಿಕ ಜೀವನ ನಡೆಸಲು ಅಗತ್ಯವಿರುವ ಹಕ್ಕುಗಳಿಂದಲೂ ಆಕೆಯನ್ನು ಅದು ವಂಚಿಸಿಲ್ಲ. ಅದು ಸ್ತ್ರೀಯನ್ನು ಸಮಾಜದಲ್ಲಿ ಯಶಸ್ವೀ ಜೀವನ ಸಾಗಿಸಲು ಅರ್ಹ ಳನ್ನಾಗಿ ಮಾಡುತ್ತದೆ.

## ಸಮಾಜದಲ್ಲಿ ವ್ಯಕ್ತಿಯ ವಿಜಯ ಸೂತ್ರಗಳು

ಒಬ್ಬ ವ್ಯಕ್ತಿ ಸಮಾಜದಲ್ಲಿ ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಬೇಕಾ ದರೆ ಮೂರು ಶರತ್ತುಗಳಿವೆ. ಮೊದಲನೆಯ ಶರತ್ತೇನೆಂದರೆ ಅವನು ಒಳಿತು- ಕೆಡುಕು ಮತ್ತು ಲಾಭ–ನಷ್ಟಗಳಲ್ಲಿ ಸುಲಭವಾಗಿ ವ್ಯತ್ಯಾಸ ಮಾಡುವಂತಾಗಲ

ಸರಿಯಾದ ಚಿಂತನೆ ಹೊಂದಿರಬೇಕು. ಈ ಸಾಮರ್ಥ್ಯವು ವ್ಯಕ್ತಿಯ ವಿಕಾಸಕ್ಕೆ ಅಗತ್ಯವಾಗಿರುವಂತೆ ಸಮಾಜದ ನಿರ್ಮಾಣ ಮತ್ತು ಅಭಿವೃದ್ಧಿಯೂ ಅದನ್ನೇ ಅವಲಂಬಿಸಿದೆ. ಏಕೆಂದರೆ ಅದಿಲ್ಲದೆ ವ್ಯಕ್ತಿ ಮತ್ತು ಸಮಾಜದ ಮಧ್ಯೆ ಪೂರ್ಣ ಸಾಮರಸ್ಯ ಉಂಟಾಗದು. ಪೂರ್ಣ ಸಾಮರಸ್ಯವೇ ವ್ಯಕ್ತಿ ಮತ್ತು ಸಮಾಜವನ್ನು ಪರಸ್ಪರರಿಗೆ ಉಪಯುಕ್ತಗೊಳಿಸುತ್ತದೆ. ವ್ಯಕ್ತಿಗೆ ಸಾಮಾಜಿಕ ಹಕ್ಕುಬಾಧ್ಯತೆಗಳ ಕುರಿತು ಚೆನ್ನಾಗಿ ತಿಳಿದಿರದಿದ್ದರೆ, ಸಮಾಜದ ಮೇಲೆ ಅವನ ಹಕ್ಕುಗಳೇನು, ಸಮಾಜದ ಬಗ್ಗೆ ಅವನ ಬಾಧ್ಯತೆಗಳೇನು, ಸಮಾಜದ ನಿರ್ಮಾಣ ಮತ್ತು ಸುಧಾರಣೆಯ ಕಾರ್ಯಗಳಾವುವು, ಅದರ ಅವನತಿಗೆ ಕಾರಣವಾಗುವ ವಿಷಯಗಳಾವುವು ಎಂಬುದೆಲ್ಲಾ ಅವನಿಗೆ ತಿಳಿಯದೆ ಹೋದರೆ ಪ್ರತಿ ಹೆಜ್ಜೆಗೂ ಅವನ ಮತ್ತು ಸಮಾಜದ ಹಿತಾಸಕ್ತಿಗಳ ಮಧ್ಯೆ ಸಂಘರ್ಷ ಏರ್ಪಡುವ ಸಾಧ್ಯತೆಗಳಿವೆ. ಸಮಾಜ ಯಾವ ದಿಕ್ಕಿನಲ್ಲಿ ಚಲಿಸುತ್ತಿದೆಯೋ ಆ ದಿಕ್ಕಿನಲ್ಲಿ ಅವನ ಚಟುವಟಿಕೆಗಳಿರುವುದು ಸಾಧ್ಯವಿಲ್ಲ. ಆದ್ದರಿಂದ ವ್ಯಕ್ತಿಯನ್ನು ಸಾಮಾಜಿಕ ಜೀವನದ ವಿಭಿನ್ನ ಘಟ್ಟ ಹಾಗೂ ಪರಿಸ್ಥಿತಿಗಳಲ್ಲಿ ಸತ್ಯ–ಮಿಥ್ಯ ಹಾಗೂ ಸರಿ–ತಪ್ಪುಗಳನ್ನು ಅರಿತು ತನ್ನ ಕರ್ತವ್ಯವನ್ನು ನಿರ್ವಹಿಸಲು ಸಮರ್ಥವಾಗುವಂತೆ ಮಾಡುವುದು ಸರಕಾರದ ಕರ್ತವ್ಯವಾಗಿದೆ. ಅವನು ಅಧಿಕಾರಿಯಾಗಿದ್ದರೆ ಪ್ರಜೆಗಳೊಂದಿಗೆ ಯಾವ ರೀತಿ ವರ್ತಿಸಬೇಕೆಂಬುದು ಅವನಿಗೆ ತಿಳಿದಿರಬೇಕು. ಅವನು ಪ್ರಜೆಯಾಗಿದ್ದರೆ ಅಧಿಕಾರಿಯ ಅನುಸರಣೆಯ ತತ್ವ ಮತ್ತು ಶರತ್ತುಗಳು ಯಾವುದೆಂದು ಅವನಿಗೆ ತಿಳಿದಿರಬೇಕು. ಅವನು ನ್ಯಾಯಾಧೀಶನಾಗಿದ್ದರೆ ನ್ಯಾಯ ಪರಿಪಾಲನೆಯ ಬೇಡಿಕೆಗಳನ್ನು ಅವನು ಚೆನ್ನಾಗಿ ಅರಿತಿರಬೇಕು. ಅವನು ನ್ಯಾಯ ಯಾಚಿಸಿ ಬರುವವನಾಗಿದ್ದರೆ ಅದನ್ನು ಗಳಿಸುವ ವಿಧಾನಗಳು ಅವನಿಗೆ ತಿಳಿದಿರಬೇಕು.

ವ್ಯಕ್ತಿಯ ಯಶಸ್ಸಿಗಿರುವ ಎರಡನೆಯ ಶರತ್ತೇನೆಂದರೆ, ಅವನಿಗೆ ತನ್ನ ಜ್ಞಾನಕ್ಕನುಸಾರವಾಗಿ ಕಾರ್ಯವೆಸಗುವ ಅವಕಾಶವಿರಬೇಕು. ಶಿಕ್ಷಣ–ಕಲೆ, ವ್ಯಾಪಾರ–ಕೃಷಿ, ಉದ್ದಿಮೆ–ಕೈಗಾರಿಕೆಗಳ ಪೈಕಿ ಯಾವುದರಲ್ಲಾದರೂ ಅವನು ಮುಂದುವರಿಯಬಯಸಿದರೆ ಅವನಿಗೆ ಯಾವುದೇ ರೀತಿಯ ಅಡಚಣೆ ಇರಬಾರದು. ಅವನ ಹಕ್ಕುಚ್ಯುತಿಯಾದರೆ ಸಮಾಜವು ಅದನ್ನು ತಡೆಯಬಲ್ಲಷ್ಟು ಬಲಿಷ್ಠವಾಗಿರಬೇಕು. ಅನ್ಯಥಾ ವ್ಯಕ್ತಿಯ ಒಳಿತು–ಕೆಡುಕು ಹಾಗೂ ಲಾಭ–ನಷ್ಟಗಳ ಅರಿವಿದ್ದಾಗ್ಯೂ ಅಜ್ಞಾನಿಯಂತೆ ವಿನಾಶಕ್ಕೆ ಗುರಿಯಾಗಬಹುದು.

ಮೂರನೆಯ ಶರತ್ತೇನೆಂದರೆ, ಒಂದೆಡೆ ವ್ಯಕ್ತಿಯು ಸಮಾಜಕ್ಕೆ ನಿಷ್ಠೆಯುಳ್ಳವನಾಗಿರಬೇಕೆಂದು ಬಯಸುವಾಗ ಇನ್ನೊಂದೆಡೆ ಅವನಿಗೆ ಸಮಾಜದ ಹಿತವನ್ನು ಕಾಪಾಡುವ ಸರಿಯಾದ ವಿಧಾನವನ್ನು ಅನುಸರಿಸುವ ಹಕ್ಕು ಕೂಡಾ ಸಿಗಬೇಕು. ಅವನಿಗೆ ಸಮಾಜಕ್ಕೆ ಹಾನಿಕರವಾದ ಯಾವ ಕಾರ್ಯವನ್ನೂ ಮಾಡುವ ಅನುಮತಿ ಇಲ್ಲದಿರುವಂತೆ ಸಮಾಜದ ಹಿತಕ್ಕಾಗಿ ಕೆಲಸ ಮಾಡುವ ಸ್ವಾತಂತ್ರ್ಯವೂ ಇರಬೇಕು.

ಏಕೆಂದರೆ ವ್ಯಕ್ತಿಯ ಕೆಡುಕಿನಿಂದ ಸಮಾಜಕ್ಕೆ ಹಾನಿಯಾಗುವಂತೆಯೇ ಸಮಾಜದ ಕೆಡುಕು ಕೂಡಾ ವ್ಯಕ್ತಿಯ ವಿನಾಶಕ್ಕೆ ಹೇತುವಾಗಬಲ್ಲುದು. ಆದ್ದರಿಂದ ಸಮಾಜಕ್ಕೆ ವ್ಯಕ್ತಿಯ ಚಾರಿತ್ರ್ಯ ಮತ್ತು ನಡತೆಯನ್ನು ಅವಲೋಕಿಸುವ ಹಕ್ಕಿರುವಂತೆಯೇ ವ್ಯಕ್ತಿಗೆ ಸಮಾಜದ ಅವಲೋಕನ ಮತ್ತು ಸುಧಾರಣೆಯ ಹಕ್ಕಿರಬೇಕು.

ಜಗತ್ತಿನ ಎಲ್ಲ ಪ್ರಜಾಸತ್ತಾತ್ಮಕ ಸಂವಿಧಾನಗಳೂ ಈ ಮೂರು ಶರತ್ತು ಗಳನ್ನು ಅಂಗೀಕರಿಸುತ್ತವೆ. ಏಕೆಂದರೆ ಅವುಗಳ ಆಧಾರದಲ್ಲೇ ವ್ಯಕ್ತಿಯು ಸಮಾಜದಲ್ಲಿ ತನ್ನ ಪಾತ್ರವನ್ನು ನಿರ್ವಹಿಸಲು ಶಕ್ತನಾಗುತ್ತಾನೆ. ಈ ಮೂರು ಶರತ್ತುಗಳನ್ನು ಸಂಕ್ಷಿಪ್ತ ಪದಗಳಲ್ಲಿ ಶಿಕ್ಷಣ–ತರಬೇತಿ, ಕೆಲಸದ ಅವಕಾಶ, ಸಮಾಜದ ನಿರ್ಮಾಣ ಮತ್ತು ಸುಧಾರಣೆಯ ಸ್ವಾತಂತ್ರ್ಯವೆಂದು ಹೇಳಬಹುದು.

ಈಗ ಇಸ್ಲಾಮೀ ಸಮಾಜದಲ್ಲಿ ಸ್ತ್ರೀಯರ ವಿಷಯದಲ್ಲಿ ಈ ಶರತ್ತುಗಳನ್ನು ಪಾಲಿಸ ಲಾಗುತ್ತದೋ ಇಲ್ಲವೋ ಎಂಬುದನ್ನು ನೋಡೋಣ. ಎಷ್ಟರಮಟ್ಟಿಗೆ ಪಾಲಿಸಲಾಗು ತ್ತಿದೆಯೋ ಅದರ ಎಂತಹ ಪರಿಣಾಮಗಳು ಆಗುತ್ತಿವೆ ಮತ್ತು ಹಿಂದೆ ಆಗಿವೆ ಎಂಬುದನ್ನೂ ಅವಲೋಕಿಸೋಣ.

❖ ❖ ❖

# ಮಹಿಳೆಯ ಶಿಕ್ಷಣ ಮತ್ತು ತರಬೇತಿ

ಪ್ರವಾದಿ ಮುಹಮ್ಮದ್(ಸ) ಅವರ ಆಗಮನಕ್ಕಿಂತ ಮುಂಚೆ ಅರಬರು ಮುಕ್ತ ಮತ್ತು ಅನಿಯಂತ್ರಿತ ಜೀವನ ಸಾಗಿಸುತ್ತಿದ್ದರೆಂಬುದು ಒಂದು ವಾಸ್ತವಿಕತೆಯಾಗಿದೆ. ಜೀವನದ ಬಗ್ಗೆ ಅವರಿಗೆ ಯಾವುದೇ ಗಂಭೀರ ಚಿಂತನೆಯಿರಲಿಲ್ಲ. ಅವರು ಆ ಬಗ್ಗೆ ಚರ್ಚಿಸಲೂ ಬಯಸುತ್ತಿರಲಿಲ್ಲ. ಅವರ ಎಲ್ಲ ಚಟುವಟಿಕೆಗಳೂ ಈ ಭೌತಿಕ ಜಗತ್ತು ಮತ್ತದರ ಸುಖಕ್ಕೆ ಮುಡಿಪಾಗಿದ್ದುವು. ಈ ಜಗತ್ತಿನ ಹೊರತಾಗಿಯೂ ಕೆಲವು ವಾಸ್ತವಿಕತೆಗಳಿವೆಯೆಂಬ ಕಲ್ಪನೆಯೂ ಅವರಿಗಿರಲಿಲ್ಲ. ಇಸ್ಲಾಮ್ ಅವರ ಮುಂದೆ ಜೀವನದ ಒಂದು ತತ್ವಶಾಸ್ತ್ರವನ್ನಿಟ್ಟಿತು. ಅದರಲ್ಲಿ ನೈತಿಕ ನಿಬಂಧನೆಗಳಿದ್ದುವು. ಸಿಂಧು-ಅಸಿಂಧು, ಧರ್ಮಸಮ್ಮತ ಹಾಗೂ ಧರ್ಮನಿಷಿದ್ಧದ ನಿಯಮಗಳಿದ್ದುವು. ಶಿಕ್ಷೆ-ಪುರಸ್ಕಾರ ಹಾಗೂ ಸ್ವರ್ಗ-ನರಕಗಳ ಕಲ್ಪನೆಯಿತ್ತು. ಅಲ್ಲಾಹ್ ಮತ್ತು ಅವನ ಪ್ರವಾದಿಯ ಮೇಲೆ ವಿಶ್ವಾಸ ಮತ್ತು ಅವರ ವಿಧೇಯತೆಯ ಶಿಕ್ಷಣವಿತ್ತು. ಈ ತತ್ವಶಾಸ್ತ್ರವನ್ನು ಮೆಲ್ಲಮೆಲ್ಲನೆ ಅವರು ಸ್ವೀಕರಿಸತೊಡಗಿದಾಗ ಇಸ್ಲಾಮಿನ ಆಧಾರದಲ್ಲಿ ಒಂದು ಸಮಾಜದ ನಿರ್ಮಾಣ ಆರಂಭವಾಯಿತು. ಈ ಸಮಾಜದ ನಿರ್ಮಾಣ ಕಾರ್ಯ ನಡೆಯುತ್ತಿರುವಾಗಲೇ ಅಲ್ಲಾಹನ ಆಜ್ಞೆ ಬಂತು. ಹೊರಗಿನ ಸ್ತ್ರೀಯೊಬ್ಬಳು ಇಸ್ಲಾಮೀ ಸಮಾಜದ ಅಂಗವಾಗಲು ಬಯಸಿದರೆ ಅವಳಿಂದ ಈ ಕೆಳಗಿನ ನೈತಿಕ ನಿಯಮಗಳ ಪಾಲನೆಯ ವಚನ ಪಡೆಯಬೇಕೆಂದು ಅದರಲ್ಲಿ ಆದೇಶಿಸಲಾಯಿತು,

"ಸಂದೇಶವಾಹಕರೇ, ಸತ್ಯವಿಶ್ವಾಸಿನಿಯರು, ನಿಷ್ಠೆಯ ಕರಾರು ಮಾಡಲು ನಿಮ್ಮ ಬಳಿಗೆ ಬಂದು ತಾವು ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಗಳಾಗಿ ಮಾಡಲಾರೆವು, ಕಳ್ಳತನ ಮಾಡಲಾರೆವು, ವ್ಯಭಿಚಾರವೆಸಗಲಾರೆವು, ತಮ್ಮ ಮಕ್ಕಳನ್ನು ವಧಿಸಲಾರೆವು, ತಮ್ಮ ಕೈಕಾಲುಗಳ ಮುಂದೆ ಯಾವುದೇ ಸುಳ್ಳಾರೋಪವನ್ನು ಸೃಷ್ಟಿಸಿ ತರಲಾರೆವು ಮತ್ತು ಯಾವುದೇ ಸತ್ಕಾರ್ಯದ ವಿಷಯದಲ್ಲಿ ನಿಮ್ಮ ಆಜ್ಞೋಲ್ಲಂಘನೆ ಮಾಡಲಾರೆವು ಎಂದು ಪ್ರತಿಜ್ಞೆ ಮಾಡಿದಾಗ, ಅವರಿಂದ ಕರಾರನ್ನು ಸ್ವೀಕರಿಸಿಕೊಳ್ಳಿರಿ ಮತ್ತು ಅವರಿಗಾಗಿ ಅಲ್ಲಾಹನೊಡನೆ ಕ್ಷಮಾಯಾಚನೆ ಮಾಡಿರಿ. ಖಂಡಿತವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ."

(ಪವಿತ್ರ ಕುರ್‌ಆನ್: 60: 12)

ಈ ಸೂಕ್ತದಲ್ಲಿ ಧರ್ಮದ ಯಾವ ತತ್ವಗಳ ಪಾಲನೆಯ ವಚನವನ್ನು ಸ್ತ್ರೀಯರಿಂದ ಪಡೆಯಲಾಗಿದೆಯೋ ಅವುಗಳಿಂದ ಪುರುಷರೂ ಮುಕ್ತರಲ್ಲ. ಏಕೆಂದರೆ ಅದರ ಸಂಬಂಧವು ಕುಟುಂಬ ಜೀವನದೊಂದಿಗೆ ಇರುವುದಕ್ಕಿಂತ ಹೆಚ್ಚಾಗಿ ಮನೆಯ ಹೊರಗಿನ ಜೀವನದೊಂದಿಗಿದೆ. ಇದರಿಂದ ತಿಳಿದು ಬರುವು ದೇನೆಂದರೆ ಧರ್ಮದ ಮೂಲತತ್ವಗಳ ಪಾಲನೆ ಕೇವಲ ಪುರುಷರು ಮಾಡಿದರೆ ಸಾಲದು, ಸ್ತ್ರೀಯರೂ ಮಾಡಬೇಕು. ಸ್ತ್ರೀಯರು ಈ ತತ್ವಗಳನ್ನು ತಮ್ಮ ಜೀವನದಲ್ಲಿ ಪಾಲಿಸಬೇಕಾದರೆ ಧರ್ಮದ ಬೋಧನೆಗಳನ್ನು ಅವರು ಚೆನ್ನಾಗಿ ಅರಿತಿರಬೇಕು. ಜೀವನದ ವಿಭಿನ್ನ ಪರಿಸ್ಥಿತಿ ಮತ್ತು ಸಮಸ್ಯೆಗಳಲ್ಲಿ ಅದರ ಆದೇಶಗಳೇನೆಂಬುದನ್ನು ತಿಳಿಯದೆ ಹೋದರೆ ಅವರು ಅವುಗಳನ್ನು ಪಾಲಿಸುವುದಾದರೂ ಹೇಗೆ? ಈ ಸೂಕ್ತದಲ್ಲಿ ಸ್ತ್ರೀಯಿಂದ ಪಡೆದ ವಚನದಲ್ಲಿ "ಸತ್ಕಾರ್ಯದ ವಿಷಯದಲ್ಲಿ ಪ್ರವಾದಿಯ ಆಜ್ಞೆಯನ್ನು ಉಲ್ಲಂಘಿಸಲಾರೆವು" ಎಂಬುದೂ ಒಂದಾಗಿದೆ. ಬಾಹ್ಯನೋಟಕ್ಕೆ ಇದು ಒಂದು ಸಣ್ಣ ವಾಕ್ಯವಾಗಿದೆ. ಆದರೆ ಅದು ಸಮಾಜದಲ್ಲಿ ಸ್ತ್ರೀಯನ್ನು ಅತ್ಯಧಿಕ ಹೊಣೆಗಾರ ಮತ್ತು ಜವಾಬ್ದಾರ ವ್ಯಕ್ತಿಯಾಗಿ ಮಾರ್ಪಡಿಸುತ್ತದೆ. ಹೆಜ್ಜೆಹೆಜ್ಜೆಗೂ ಆಕೆ ಪ್ರವಾದಿಯ ಆಜ್ಞೋಲ್ಲಂಘನೆ ಯಿಂದ ದೂರವಿದ್ದು ಅವರ ಮೆಚ್ಚುಗೆಯನ್ನು ಅರಸಬೇಕು. ಪ್ರವಾದಿವರ್ಯರ(ಸ) ಪಾವನ ಜೀವನ ಕಾಲದಲ್ಲಿಯೇ ಸ್ತ್ರೀಯರಲ್ಲಿ ಧರ್ಮದ ವಿಧಿಗಳನ್ನರಿಯುವ ಕುರಿತು ಬಹಳ ಕಳಕಳಿಯಿತ್ತು. ಅವರು ಅಹರ್ನಿಶಿ ಅದಕ್ಕಾಗಿ ಸಕ್ರಿಯರಾಗಿದ್ದರು. ಧರ್ಮಜ್ಞಾನದ ಗಳಿಕೆಯಲ್ಲಿ ಸಂಕಷ್ಟಗಳು ಎದುರಾದಾಗ ಅವರು ನಿರಾಶರಾಗುತ್ತಿರಲಿಲ್ಲ. ಅನ್ಸಾರ್ ಮಹಿಳೆಯರ ಕುರಿತು ಹ. ಆಯಿಶಾ(ರ) ಹೀಗೆ ಹೇಳಿರುವರು, "ಅನ್ಸಾರ್ ಮಹಿಳೆಯರು ಬಹಳ ಉತ್ತಮರಾಗಿದ್ದರು. ಧರ್ಮದ ತಿಳಿವಳಿಕೆ ಗಳಿಸುವ ಮಾರ್ಗದಲ್ಲಿ ನಾಚಿಕೆ–ಲಜ್ಜೆಗಳು ಅವರಿಗೆ ತಡೆಯಾಗುತ್ತಿರಲಿಲ್ಲ." (ಮುಸ್ಲಿಮ್)

ಆ ಕಾಲದ ಸ್ತ್ರೀಯರು ಇಸ್ಲಾಮೀ ಬೋಧನೆಗಳನ್ನು ಗಹನವಾಗಿ ಅಭ್ಯಸಿಸುತ್ತಿದ್ದರು. ಅದನ್ನು ಹ. ಆಯಿಶಾ(ರ) ಅವರ ಈ ಮಾತುಗಳಿಂದ ಅಂದಾಜಿಸಬಹುದು, "ಪ್ರವಾದಿ(ಸ) ಅವರ ಕಾಲದಲ್ಲಿ ಒಂದು ಸೂಕ್ತ ಅವತೀರ್ಣಗೊಂಡರೆ ಅದರಲ್ಲಿ ಹೇಳಲಾಗಿರುವ ಸಿಂಧು–ಅಸಿಂಧು ಹಾಗೂ ವಿಧಿ–ನಿಷೇಧಗಳನ್ನು ನಾವು ಮನನ ಮಾಡಿಕೊಳ್ಳುತ್ತಿದ್ದೆವು. ಅದರ ಪದಗಳನ್ನು ಕಂಠಪಾಠ ಮಾಡದಿದ್ದರೂ ಸರಿಯೆ."

(ಅಲ್ ಅಕ್‌ದುಲ್ ಫರೀದ್ ಭಾಗ: 1 ಪುಟ: 276)

## ಜುಮಾ ಮತ್ತು ಈದ್‌ಗಳಲ್ಲಿ ಸ್ತ್ರೀಯರ ಭಾಗವಹಿಸುವಿಕೆ

ಜುಮಾ ಮತ್ತು ಈದ್‌ನ ಖುತ್‌ಬಾ(ಪ್ರವಚನ)ಗಳ ಉದ್ದೇಶವು ಜನರಿಗೆ ಧರ್ಮದ ಬೋಧನೆ ನೀಡುವುದಾಗಿದೆ. ಶರೀಅತ್‌ನ ಪ್ರಕಾರ ಇವುಗಳಲ್ಲಿ ಮಹಿಳೆಯರು ಭಾಗವಹಿಸುವುದು ಕಡ್ಡಾಯವಲ್ಲ. ಏಕೆಂದರೆ ಕೆಲವೊಮ್ಮೆ ಅದರಿಂದ ಲಾಭಕ್ಕಿಂತಲೂ

ಹೆಚ್ಚಾಗಿ ನಷ್ಟವಾಗುವ ಸಾಧ್ಯತೆಯೇ ಹೆಚ್ಚಿರುತ್ತದೆ; ಅದರಿಂದ ಅವರ ಗೃಹಕೃತ್ಯಗಳಿಗೂ ಅಡಚಣೆಯಾಗುವ ಸಾಧ್ಯತೆಗಳಿವೆ.. ಆದರೆ ಸಾಮಾನ್ಯ ಪರಿಸ್ಥಿತಿಯಲ್ಲಿ ಸ್ತ್ರೀಯು ಇಂತಹ ಅವಕಾಶಗಳಿಂದ ಪ್ರಯೋಜನ ಪಡೆಯಬೇಕೆಂದು ಶರೀಅತ್ ಪ್ರೋತ್ಸಾಹಿಸುತ್ತದೆ.

ಪ್ರವಾದಿ(ಸ) ಹೀಗೆ ಹೇಳಿರುವರು, "ಪ್ರೌಢ ಮತ್ತು ಪರ್ದಾಧಾರಿ ಮಹಿಳೆಯರು ಮತ್ತು ಮುಟ್ಟಾದ ಮಹಿಳೆಯರು ಈದ್‌ಗಾಹ್‌ಗೆ ಹೋಗಬೇಕು. ಮುಟ್ಟಾದ ಮಹಿಳೆಯರು ನಮಾಝ್‌ನಲ್ಲಿ ಭಾಗವಹಿಸಬಾರದು. ಆದರೆ ಒಳಿತು ಮತ್ತು ಸತ್ಯವಿಶ್ವಾಸಿಗಳ ಪ್ರಾರ್ಥನೆಗಳಲ್ಲಿ ಪಾಲ್ಗೊಳ್ಳಬೇಕು." (ಹದೀಸ್ ವರದಿ ಮಾಡಿರುವ ಮಹಿಳೆ ಹೇಳುತ್ತಾರೆ): ನಾನು ಉಮ್ಮು ಅತಿಯ್ಯಾರಲ್ಲಿ(ರ) ವಿಚಾರಿಸಿದೆ, "ಮುಟ್ಟಾದ ಮಹಿಳೆಯರೂ ಭಾಗವಹಿಸಬೇಕೇ?" ಆಗ ಅವರು ಹೇಳಿದರು, "ಹೌದು. ಅವರು ಅರಫಾ ಮತ್ತಿತರ ಸಂದರ್ಭಗಳಲ್ಲಿ ಭಾಗವಹಿಸುವುದಿಲ್ಲವೇ?"

**[ವರದಿ: ಹ. ಉಮ್ಮು ಅತಿಯ್ಯಾ(ರ) – ಬುಖಾರಿ]**

ಇಂತಹ ಸಭೆಗಳಲ್ಲಿ ಮಹಿಳೆಯರು ಹೆಚ್ಚಿನ ಹುರುಪು–ಉತ್ಸಾಹಗಳೊಂದಿಗೆ ಗಣನೀಯ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದರೆಂದು ವರದಿಗಳಿಂದ ತಿಳಿದು ಬರುತ್ತದೆ. ಪ್ರವಾದಿ(ಸ) ಅವರ ಉಚ್ಚಸ್ವರದ ಕುರಿತು ಹ. ಖೌಲ ಬಿಂತಿ ಕೈಸ್ ಅಲ್ ಜುಹೈನ(ರ) ಹೀಗೆ ಹೇಳಿರುವರು, "ಜುಮಾ ದಿವಸ ಪ್ರವಾದಿ(ಸ) ಅವರ ಖುತ್‌ಬಾವನ್ನು ನಾನು ಸರಿಯಾಗಿ ಕೇಳುತ್ತಿದ್ದೆ. ಮಹಿಳೆಯರಲ್ಲಿ ನಾನು ಕೊನೆಯಲ್ಲಿ ಕುಳಿತುಕೊಳ್ಳುವವಳಾಗಿದ್ದೆ." **(ತಬ್‌ಕಾತ್ ಇಬ್ನು ಸಅದ್ ಭಾಗ– 8, ಪುಟ: 217)**

ಈ ಸಂದರ್ಭಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಯಾವುದಾದರೂ ಜಾತ್ರೆ ಅಥವಾ ಮನೋರಂಜನೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದಂತಾಗಿರಲಿಲ್ಲ, ಅವರು ಅದರಿಂದ ಪೂರ್ಣ ಪ್ರಯೋಜನ ಪಡೆಯುತ್ತಿದ್ದರು.

ಹಾರಿಸ್ ಬಿನ್ ನುಅ್‌ಮಾನ್‌ರ ಓರ್ವ ಪುತ್ರಿ ಹೇಳುತ್ತಾರೆ, "ನಾನು ಪ್ರವಾದಿ ವರ್ಯರ(ಸ) ಬಾಯಿಯಿಂದ ಕೇಳಿಯೇ ಸೂರಃ ಕಾಫ್ ಬಾಯಿ ಪಾಠ ಮಾಡಿರುವೆನು. ಅವರು ಅದನ್ನು ಪ್ರತಿ ಜುಮಾ ಖುತ್‌ಬಾದಲ್ಲಿ (ಜನರ ಉಪದೇಶಕ್ಕಾಗಿ) ಪಠಿಸುತ್ತಿದ್ದರು." **(ಮುಸ್ಲಿಮ್)**

ಸ್ವತಃ ಪ್ರವಾದಿವರ್ಯರಿಗೂ(ಸ) ಮಹಿಳೆಯರ ಶಿಕ್ಷಣದ ಕುರಿತು ಕಾಳಜಿ ಇರುತ್ತಿತ್ತು. ಯಾವುದೇ ಸಂದರ್ಭದಲ್ಲಿ ತಮ್ಮ ಮಾತುಗಳು ಅವರಿಗೆ ತಲುಪಿಲ್ಲವೆಂದು ಪ್ರವಾದಿ(ಸ) ಮನಗಂಡರೆ ಮತ್ತೊಮ್ಮೆ ಅವರ ಬಳಿಗೆ ಹೋಗಿ ಉಪದೇಶಿಸುತ್ತಿದ್ದರು. ಒಂದು ಈದ್‌ನ ಸಂದರ್ಭದ ಕುರಿತು ಹ. ಅಬ್ದುಲ್ಲಾ ಬಿನ್ ಅಬ್ಬಾಸ್(ರ) ಹೀಗೆ ವರದಿ ಮಾಡಿರುವರು: ಸ್ತ್ರೀಯರಿಗೆ ತಮ್ಮ ಮಾತು ತಲುಪಲಿಲ್ಲವೆಂದು ಪ್ರವಾದಿಯವರಿಗೆ(ಸ) ಭಾಸವಾಯಿತು. ಆಗ ಅವರು ಪುನಃ

ಅವರಿಗೆ ಉಪದೇಶಿಸುತ್ತಾ ದಾನ-ಧರ್ಮ ನೀಡಲು ಆದೇಶಿಸಿದರು. (ಬುಖಾರಿ

ಈ ಬಗ್ಗೆ ವಿದ್ವಾಂಸರಾದ ಇಬ್ನು ಜುರೈಹ್ ಅತಾ(ರ) ಎಂಬ ತಾಬಿಈ ಅವರಲ್ಲಿ ಈ ರೀತಿ ವಿಚಾರಿಸಲಾಯಿತು, "ನಿಮ್ಮ ಅಭಿಪ್ರಾಯ ಪ್ರಕಾರ ನಾಯಕನಾದವನ ಮಹಿಳೆಯರಿಗೆ ಉಪದೇಶ ಮಾಡಬೇಕೇ?" ಆಗ ಅವರು ಹೇಳಿದರು, "ಖಂಡಿತ ಇದು ಅವರ ಮೇಲೆ ಕಡ್ಡಾಯವಾಗಿದೆ. ಅದನ್ನು ಮಾಡದೆ ಇರಲು ಯಾವ ಕಾರಣವೂ ಇಲ್ಲ." (ಬುಖಾರಿ)

ಇಸ್ಲಾಮ್ ಮಹಿಳೆಯರಲ್ಲಿ ವಿದ್ಯೆಯ ಬಗ್ಗೆ ಅಪಾರ ಕಾಳಜಿಯನ್ನುಂಟು ಮಾಡಿತ್ತು. ಅದು ಕೇವಲ ಸಾಮಾನ್ಯ ಮಾಧ್ಯಮಗಳಿಂದ ಸಂತೃಪ್ತವಾಗುತ್ತಿರಲಿಲ್ಲ ಆದ್ದರಿಂದ ಪ್ರವಾದಿ(ಸ) ಕೆಲವೊಮ್ಮೆ ಮಹಿಳೆಯರಿಗಾಗಿ ವಿಶೇಷ ಅವಕಾಶಗಳನು ಕಲ್ಪಿಸಿಕೊಡುತ್ತಿದ್ದರು. ಹ. ಅಬೂಸಈದ್ ಖುದ್ರೀ(ರ) ಹೀಗೆ ವರದಿ ಮಾಡಿರ ವರು: ಮಹಿಳೆಯರು ಪ್ರವಾದಿ(ಸ) ಅವರಲ್ಲಿ ಹೇಳಿದರು, "ತಮ್ಮ ಬಳಿ ಯಾವಾ ಗಲೂ ಪುರುಷರು ಗುಂಪು ಕೂಡಿರುತ್ತಾರೆ. (ನಮಗೆ ಪ್ರಯೋಜನ ಪಡೆಯಲಿಕ್ಕಾಗ ವುದಿಲ್ಲ). ಆದ್ದರಿಂದ ತಾವು ನಮಗಾಗಿ ಒಂದು ದಿನವನ್ನು ನಿಗದಿಪಡಿಸಿರಿ. ಪ್ರವಾದಿ(ಸ) ಒಂದು ದಿನ ನಿಗದಿಪಡಿಸಿ ಅವರ ಬಳಿಗೆ ಹೋದರು. ಅವರಿ ಉಪದೇಶಿಸುತ್ತಾ ಸತ್ಕಾರ್ಯಗಳನ್ನು ಮಾಡುವಂತೆ ಆದೇಶಿಸಿದರು. (ಬುಖಾರಿ)

ಇಂತಹುದೇ ಒಂದು ಘಟನೆ ಹ. ಹುದೈಫಾ(ರ) ಅವರ ಸೋದರಿಯಿಂದಲು ವರದಿಯಾಗಿದೆ: ಪ್ರವಾದಿ(ಸ) ನಮ್ಮನ್ನುದ್ದೇಶಿಸಿ ಪ್ರವಚನ ನೀಡುತ್ತಾ ಹೇಳಿದರು "ಮಹಿಳೆಯರೇ! ನಿಮಗೆ ಬೆಳ್ಳಿಯ ಒಡವೆಗಳ ಬಗ್ಗೆ ಏಕೆ ಒಲವಿಲ್ಲ. ಅದನ್ನೇ ನೀವು ಉಪಯೋಗಿಸುವುದಿಲ್ಲ. ತಿಳಿಯಿರಿ! ನಿಮ್ಮ ಪೈಕಿ ಯಾವ ಮಹಿಳೆ ಬಂಗಾರದ ಒಡವೆಗಳನ್ನು ಧರಿಸಿ ಅದನ್ನು ಪ್ರದರ್ಶಿಸುತ್ತಾ ನಡೆಯುವಳೋ ಅವಳನು ಶಿಕ್ಷಿಸಲಾಗುವುದು." (ಮುಸ್ನದ್ ಅಹ್ಮದ್)

ಸ್ತ್ರೀ ಶಿಕ್ಷಣಕ್ಕಾಗಿ ಪ್ರವಾದಿ(ಸ) ತಮ್ಮ ಪ್ರತಿನಿಧಿಯನ್ನು ನೇಮಿಸುತ್ತಿದ್ದರು. ಅವರ ಮದೀನಾಕ್ಕೆ ಆಗಮಿಸಿದಾಗ, ಅನ್ಸಾರಿ ಮಹಿಳೆಯರನ್ನು ಒಂದು ಮನೆಯಲ್ಲಿ ಸೇರಿಸಿದರು ನಮ್ಮ ಬಳಿಗೆ ಉಮರ್ ಬಿನ್ ಖತ್ತಾಬ್(ರ)ರನ್ನು ಉಪದೇಶಕ್ಕಾಗಿ ಕಳುಹಿಸಿಕೊಟ್ಟರು ಅವರು ಬಂದು ಬಾಗಿಲ ಬಳಿ ನಿಂತು ಸಲಾಮ್ ಹೇಳಿದರು. ನಾವು ಸಲಾಮ್‌ ಉತ್ತರ ನೀಡಿದೆವು. ಅನಂತರ ಅವರು ಹೇಳಿದರು, "ನಾನು ಪ್ರವಾದಿವರ್ಯರ(ಸ ಪ್ರತಿನಿಧಿಯಾಗಿ ಬಂದಿರುವೆನು." ಅವರ ಮೂಲಕ ಪ್ರವಾದಿ(ಸ) ನಮಗೆ, ಈದ್‌ ದಿನ ಯುವತಿಯರನ್ನು ಮತ್ತು ಮುಟ್ಟಾದ ಸ್ತ್ರೀಯರನ್ನು ಕರೆತರುವಂತೆ ಆಜ್ಞಾಪಿಸಿದ್ದಾ ಜುಮಾ ನಮ್ಮ ಮೇಲೆ ಕಡ್ಡಾಯವಲ್ಲವೆಂದು ತಿಳಿಸಿದ್ದಾರೆ ಮತ್ತು ಅವರು ನಮ್ಮನ ಜನಾಝಾ ಯಾತ್ರೆಯ ಜತೆ ಹೋಗುವುದರಿಂದ ತಡೆದಿದ್ದಾರೆಂಬುದು ತಿಳಿಯಿತು.

[ವರದಿ: ಹ. ಉಮ್ಮು ಅತಿಯ್ಯಾ(ರ) – ಅಬೂದಾವೂದ್, ನಸಾಈ

## ತಂದೆ-ತಾಯಿ ಮತ್ತು ಪತಿಗೆ ಆದೇಶ

ಮಹಿಳೆಯ ನೈಜ ಶಿಕ್ಷಣ ಮತ್ತು ತರಬೇತಿ ಕೇಂದ್ರ ಆಕೆಯ ಮನೆಯಾಗಿದೆ. ಆದ್ದರಿಂದ ಇಸ್ಲಾಮ್ ಸ್ತ್ರೀಗೆ ಸತ್ಯ-ಮಿಥ್ಯದ ವ್ಯತ್ಯಾಸ ತಿಳಿಸುವಂತೆ ಮತ್ತು ತಪ್ಪು ಮಾರ್ಗದಿಂದ ಆಕೆಯನ್ನು ತಡೆಯುವಂತೆ ತಂದೆ-ತಾಯಿ ಮತ್ತು ಪತಿಗೆ ಆಜ್ಞಾಪಿಸಿದೆ.

ಪವಿತ್ರ ಕುರ್‌ಆನಿನಲ್ಲಿ ಈ ರೀತಿ ಆದೇಶಿಸಲಾಗಿದೆ, "ಸತ್ಯವಿಶ್ವಾಸಿಗಳೇ, ಮಾನವರೂ ಶಿಲೆಗಳೂ ಇಂಧನವಾಗಲಿರುವ ಅಗ್ನಿಯಿಂದ ನಿಮ್ಮನ್ನೂ ನಿಮ್ಮ ಕುಟುಂಬದವರನ್ನೂ ರಕ್ಷಿಸಿಕೊಳ್ಳಿರಿ." (ಪವಿತ್ರ ಕುರ್‌ಆನ್: 66: 6)

ಶಿಕ್ಷಣ-ತರಬೇತಿಯ ಹೊರತು ಇದಕ್ಕೆ ಬೇರಾವ ಮಾರ್ಗವೂ ಇಲ್ಲ. ಮಾಲಿಕ್ ಬಿನ್ ಹುವೈರಿಸ್(ರ) ಹೇಳುತ್ತಾರೆ: ನಾವು ಕೆಲವು ಮಂದಿ ಯುವಕರು ಪ್ರವಾದಿವರ್ಯರ(ಸ) ಬಳಿ ಧರ್ಮದ ಬಗ್ಗೆ ತಿಳಿದುಕೊಳ್ಳಲಿಕ್ಕಾಗಿ ಇಪ್ಪತ್ತು ದಿನ ಇದ್ದೆವು. ನಾವು ಮನೆಗೆ ಹೋಗಲು ಕಾತರರಾಗಿದ್ದೇವೆ ಎಂದು ಪ್ರವಾದಿ ವರ್ಯರಿಗೆ(ಸ) ತಿಳಿದಾಗ ಅವರು ಹೀಗೆ ಹೇಳಿದರು, "ನಿಮ್ಮ ಕುಟುಂಬದವರ ಬಳಿಗೆ ಹೋಗಿರಿ, ಅವರ ಜತೆಯಲ್ಲೇ ಇದ್ದು ಅವರಿಗೆ ಧರ್ಮದ ಬೋಧನೆ ನೀಡಿರಿ ಮತ್ತು ಅದನ್ನು ಪಾಲಿಸುವಂತೆ ಆಜ್ಞಾಪಿಸಿರಿ." (ಬುಖಾರಿ)

ವೈಚಾರಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದ ಈ ವರ್ಗದ ಪ್ರಗತಿಗಾಗಿ ಪ್ರವಾದಿ(ಸ) ವಿಭಿನ್ನ ರೀತಿಯಲ್ಲಿ ಶ್ರಮಿಸಿರುವರು. ಅವರ ಶಿಕ್ಷಣ ತರಬೇತಿಯು ಬಹಳ ಪುಣ್ಯ ಕಾರ್ಯವೆಂದು ಸಾರಿರುವರು.

"ಮೂವರು ಪುತ್ರಿಯರನ್ನು ಪೋಷಿಸಿ ಅವರಿಗೆ ಶಿಷ್ಟಾಚಾರಗಳನ್ನು ಕಲಿಸಿ ಮದುವೆ ಮಾಡಿಕೊಟ್ಟರೆ ಮತ್ತು ಅವರೊಂದಿಗೆ ಉತ್ತಮವಾಗಿ ವ್ಯವಹರಿಸಿದರೆ ಅವನಿಗೆ ಸ್ವರ್ಗವಿದೆ." (ಅಬೂದಾವೂದ್)

ಇದು ಹೆತ್ತವರ ಕುರಿತಾದರೆ ಪತಿಯನ್ನುದ್ದೇಶಿಸಿ ಪ್ರವಾದಿ(ಸ) ಹೀಗೆ ಹೇಳಿರುವರು, "ಮೂರು ವಿಧದ ಜನರಿಗೆ ಇಮ್ಮಡಿ ಪುಣ್ಯ ಸಿಗುವುದು. ಅವರ ಪೈಕಿ ಒಬ್ಬನು ತನ್ನ ಬಳಿಯಿರುವ ದಾಸಿಗೆ ಶಿಷ್ಟಾಚಾರಗಳನ್ನು ಕಲಿಸಿ, ಉತ್ತಮ ಶಿಕ್ಷಣ ನೀಡಿ ಅವಳನ್ನು ಸ್ವತಂತ್ರಗೊಳಿಸಿ ಅವಳನ್ನೇ ಮದುವೆಯಾದ ವ್ಯಕ್ತಿಯಾಗಿರುವನು." (ಬುಖಾರಿ)

ಈ ಪ್ರವಾದಿ ವಚನದ ಪ್ರಕಾರ, ತನ್ನ ಪತ್ನಿಗೆ ಶಿಕ್ಷಣ ತರಬೇತಿ ನೀಡುವವನು ಕೂಡಾ ಪುಣ್ಯಕ್ಕೆ ಅರ್ಹನಾಗುವನು. ಏಕೆಂದರೆ ಅವನು ಈ ಹದೀಸ್‌ನ ಒಂದಂಶವನ್ನು ಪಾಲಿಸಿದಂತಾಗುತ್ತದೆ: ಒಮ್ಮೆ ಪ್ರವಾದಿ(ಸ) ಓರ್ವ ಮಹಿಳೆಯ ಮದುವೆ ಬಡವರೊಬ್ಬರೊಂದಿಗೆ ಮಾಡಿಸಿದರು. ಆತನ ಬಳಿ ಮಹ್ರ್ ಕೊಡಲು ಹಣವಿರಲಿಲ್ಲ. ಆದರೆ ಆತ ಕುರ್‌ಆನಿನ ಕೆಲವು ಅಧ್ಯಾಯಗಳನ್ನು ಬಲ್ಲವನಾಗಿದ್ದ. ಪ್ರವಾದಿ(ಸ) ಆತನಿಗೆ ಮಹ್ರ್‌ನ ಬದಲಿಗೆ ಪತ್ನಿಗೆ ಆ ಅಧ್ಯಾಯಗಳನ್ನು ಕಲಿಸಲು ಆದೇಶಿಸಿದರು. (ಬುಖಾರಿ)

ಪ್ರವಾದಿ(ಸ) ಜನರಿಗೆ ತಮ್ಮ ಪತ್ನಿಯರಿಗೆ ಕುರ್‌ಆನ್‌ನ ಕೆಲವು ಪ್ರಮುಃ ಸೂಕ್ತಗಳನ್ನು ಕಲಿಸುವಂತೆ ಸೂಚಿಸಿದ್ದಾರೆ. ಉದಾ: ಅಧ್ಯಾಯ ಅಲ್‌ಬಕರ ಕೊನೆಯ ಎರಡು ಸೂಕ್ತಗಳಲ್ಲಿ ವಿಶ್ವಾಸ-ಶ್ರದ್ಧೆ ಮತ್ತು ಧರ್ಮದ ಮೂಲಭೂ ವಿಷಯಗಳ ಕುರಿತು ಚರ್ಚಿಸಲಾಗಿದೆ. ಅದರ ಕುರಿತು ಪ್ರವಾದಿ(ಸ) ಹೇಳಿದರು "ಖಂಡಿತವಾಗಿಯೂ ಅಲ್ಲಾಹನು ತನ್ನ ಅರ್ಶ್‌ನ ಕೆಳಗಿರುವ ವಿಶಿಷ್ಟ ಬಂಡಾರದಿಂ ನೀಡಿರುವ ಎರಡು ಸೂಕ್ತಗಳಿಂದ ಅಧ್ಯಾಯ ಅಲ್ ಬಕರವನ್ನು ಕೊನೆಗೊಳಿಸಿದ್ದಾ ಆದ್ದರಿಂದ ನೀವೂ ಅದನ್ನು ಕಲಿಯಿರಿ ಮತ್ತು ನಿಮ್ಮ ಪತ್ನಿಯರಿಗೂ ಅದನ ಕಲಿಸಿರಿ." ಪ್ರವಾದಿ(ಸ) ತಮ್ಮ ಪ್ರಭಾವ ವಲಯದಲ್ಲಿರುವ ಸ್ತ್ರೀಯರ ಪೈಕಿ ಯಾರು ಧರ್ಮದ ಮೂಲಭೂತ ಶಿಕ್ಷಣದಿಂದ ವಂಚಿತರಾಗಿರದಂತೆ ಪ್ರಯತ್ನಿಸುತ್ತಿದ್ದರ ಪ್ರವಾದಿ(ಸ) ತಮ್ಮ ಪುತ್ರಿಯೊಡನೆ, ಬೆಳಗಾದಾಗ ಹೀಗೆ ಹೇಳಬೇಕೆಂದು ಆದೇಶಿಸುತ್ತಿದ್ದರ "ಅಲ್ಲಾಹನು ಪರಮ ಪಾವನನು. ಸ್ತುತಿಯು ಅವನಿಗೆ ಮೀಸಲು. (ಒಳಿತಿನ ಶಕ್ತಿಯು ಅವನಿಂದಲೇ ದೊರೆಯುತ್ತದೆ. ಅಲ್ಲಾಹನು ಬಯಸುವುದು ಆಗುತ್ತ ಅವನು ಬಯಸದೆ ಇರುವಂತಹದು ಆಗುವುದಿಲ್ಲ. ಅಲ್ಲಾಹನು ಸರ್ವ ಸಮರ್ಥನೆಂದು ಅವನ ಜ್ಞಾನವು ಸರ್ವ ವ್ಯಾಪಕವಾಗಿದೆಯೆಂದೂ ಚೆನ್ನಾಗಿ ತಿಳಿದಿರಿ." (ಅಬೂದಾವೂದ

## ಬರವಣಿಗೆಯ ವಿದ್ಯೆ

ಮಹಿಳೆಗೆ ಕೇವಲ ಧರ್ಮದ ಮೂಲಭೂತ ವಿಷಯಗಳು ತಿಳಿದರೆ ಸಾಕೆಂದ ಪ್ರವಾದಿ(ಸ) ಬಗೆಯಲಿಲ್ಲ; ಓದು-ಬರಹವನ್ನು ಆಕೆಗೆ ಅನಿವಾರ್ಯವೆಂದು ಹೇಳಿದರ ಶಿಫಾ ಬಿಂತಿ ಅಬ್ದುಲ್ಲಾ(ರ) ಹೇಳುತ್ತಾರೆ. ಒಮ್ಮೆ ನಾನು ಹ. ಹಫ್ಸಾ(ರ) ಬಳಿ ಕು ತಿದ್ದೆ. ಆಗ ಪ್ರವಾದಿ(ಸ) ಹೇಳಿದರು, "ನೀವು ಇವರಿಗೆ ಬರವಣಿಗೆಯನ್ನು ಕಲಿಸಿದಂತೆಯೆ 'ನಮ್ಲ' ಕಾಯಿಲೆಯ ಪ್ರಾರ್ಥನೆಯನ್ನೂ ಕಲಿಸಿ ಕೊಡಿ." (ಅಬೂದಾವೂದ್)

## ಸ್ತ್ರೀ ಶಿಕ್ಷಣಕ್ಕೆ ಕಾನೂನಿನ ಸ್ಥಾನಮಾನ

ಈ ಆದೇಶಗಳು ಕೇವಲ ಪ್ರೋತ್ಸಾಹಕ ಮತ್ತು ನೈತಿಕವಲ್ಲ. ಅದರ ಹಿಂ ಕಾನೂನಿನ ಬಲವೂ ಇದೆ. ಎಂಟನೆಯ ಶತಮಾನದ ಪ್ರಖ್ಯಾತ ಮಾಲಿಕೀ ವಿದ್ವಾಂ ಅಲ್ಲಾಮಾ ಇಬ್ನುಲ್ ಹಾಜ್(ರ) ಹೀಗೆ ಬರೆದಿರುವರು, "ಧರ್ಮದ ವಿಷಯದ ಸ್ತ್ರೀಯು ಪತಿಯಿಂದ ತನ್ನ ಹಕ್ಕನ್ನು ಬೇಡಿಕೊಂಡು ನ್ಯಾಯಾಧೀಶನ ಮುಂ ಬಂದು ತನ್ನ ಧಾರ್ಮಿಕ ಶಿಕ್ಷಣದ ಬೇಡಿಕೆಯನ್ನು ಮುಂದಿರಿಸಿದರೆ (ಏಕೆಂದ ಒಂದೋ ಪತಿಯು ಸ್ವತಃ ಅವಳಿಗೆ ಶಿಕ್ಷಣ ನೀಡಬೇಕು ಅಥವಾ ಆಕೆಗೆ ಮನೆಯಿಂ ಹೊರಗೆ ಹೋಗಿ ಶಿಕ್ಷಣ ಪಡೆಯುವ ಅನುಮತಿ ನೀಡ ಬೇಕಾದುದು ಆಕೆ ಹಕ್ಕಾಗಿದೆ) ಆಗ ನ್ಯಾಯಾಧೀಶರು ಆಕೆಯ ಬೇಡಿಕೆಯನ್ನು ಪೂರೈಸುವಂ ಪತಿಯನ್ನು ಒತ್ತಾಯಪಡಿಸಬೇಕು. ಲೌಕಿಕ ಹಕ್ಕುಗಳ ಬಗ್ಗೆ ಅವನು ಒತ್ತಾಯಪಡಿಸುವಂ

ಏಕೆಂದರೆ ಧಾರ್ಮಿಕ ಹಕ್ಕುಗಳು ಹೆಚ್ಚು ಶಕ್ತಿಶಾಲಿ ಮತ್ತು ಪ್ರಾಮುಖ್ಯವಾಗಿವೆ."
(ಅಲ್‌ಮುದ್‌ಖಲ್ ಇಬ್ನುಲ್ ಹಾಜ್ ಸಂ.– 2 ಪುಟ: 277)

## ಶಿಕ್ಷಣದ ಸೌಲಭ್ಯಗಳು

ಮಹಿಳೆಯ ವೈಚಾರಿಕ ಪ್ರಗತಿಗೆ ವಾತಾವರಣವು ಯಾವ ರೀತಿಯಿಂದಲೂ ಅಡ್ಡಿಯಾಗಬಾರದೆಂಬುದು ಇಸ್ಲಾಮಿನ ಉದ್ದೇಶವಾಗಿದೆ; ಹಾಗಾಗಿ ಅದು ಮಹಿಳೆಗೆ ಶಿಕ್ಷಣದ ಗಳಿಕೆ ಮತ್ತು ಅದರ ಉಪಯೋಗದಲ್ಲಿ ಎಲ್ಲ ರೀತಿಯ ಸಾಮಾಜಿಕ ಸೌಲಭ್ಯಗಳನ್ನು ಒದಗಿಸಬಯಸುತ್ತದೆ ಎಂಬುದಾಗಿ ಇಸ್ಲಾಮಿ ಬೋಧನೆಗಳ ಗಾಢ ಅಧ್ಯಯನದಿಂದ ತಿಳಿದುಬರುತ್ತದೆ.

## ವೈಚಾರಿಕ ತರಬೇತಿ

ವ್ಯಕ್ತಿಯ ಬೌದ್ಧಿಕ ಬೆಳವಣಿಗೆಯಲ್ಲಿ ಅನುಕೂಲ ವಾತಾವರಣ ಮತ್ತು ಶೈಕ್ಷಣಿಕ ಸೌಲಭ್ಯಗಳಿಗಿಂತಲೂ ಹೆಚ್ಚಾಗಿ ಆತನ ಪ್ರಯತ್ನಗಳಿಗೆ ಪಾತ್ರವಿದೆ. ಅದು ಆತ ಎಷ್ಟರ ಮಟ್ಟಿಗೆ ತನ್ನ ವೈಚಾರಿಕ ಸಾಮರ್ಥ್ಯಗಳನ್ನು ಕಾರ್ಯರೂಪಕ್ಕೆ ತರುತ್ತಾನೆ, ತನ್ನ ತಿಳಿವಳಿಕೆಯಿಂದ ಹೊಸ ಹೊಸ ಪರಿಣಾಮಗಳನ್ನು ಕಂಡುಕೊಳ್ಳುತ್ತಾನೆ ಮತ್ತು ಹೊಸ ಹೊಸ ವಾಸ್ತವಿಕತೆಗಳನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಾನೆ ಎಂಬುದನ್ನು ಹೊಂದಿಕೊಂಡಿದೆ. ಶರೀಅತ್ ಮಹಿಳೆಯ ವೈಚಾರಿಕ ಮಟ್ಟವನ್ನು ಉನ್ನತಗೊಳಿಸಲು ಎಲ್ಲ ರೀತಿಯ ಬಾಹ್ಯ ಸೌಲಭ್ಯಗಳನ್ನು ಒದಗಿಸಿರುವುದು ಮಾತ್ರವಲ್ಲ, ಆಕೆಯ ಬುದ್ಧಿ ಮತ್ತು ವಿಚಾರದ ಆಂತರಿಕ ಸಾಮರ್ಥ್ಯಗಳನ್ನು ಬೆಳೆಸಲಿಕ್ಕೂ ಪ್ರಯತ್ನಿಸಿದೆ. ಪ್ರಕೃತಿಯು ಅವಳಲ್ಲಿ ಸುಪ್ತವಾಗಿ ಇರಿಸಿರುವ ವೈಚಾರಿಕ ಶಕ್ತಿಗಳಿಂದ ಪೂರ್ತಿ ಪ್ರಯೋಜನ ಪಡೆಯುವಂತಾಗಬೇಕು ಎಂಬುದೇ ಇದರ ಉದ್ದೇಶ.

ಪ್ರವಾದಿ ಪತ್ನಿಯರಿಗೆ ಕೆಲವು ಸಾಮಾಜಿಕ ನಿಯಮಗಳನ್ನು ನೀಡಿದ ಬಳಿಕ ಪವಿತ್ರ ಕುರ್‌ಆನ್ ಈ ರೀತಿ ಹೇಳುತ್ತದೆ, "ನಿಮ್ಮ ಮನೆಗಳಲ್ಲಿ ಓದಿ ಹೇಳಲಾಗುತ್ತಿರುವ ಅಲ್ಲಾಹನ ಸೂಕ್ತಗಳನ್ನೂ ಯುಕ್ತಿಪೂರ್ಣ ಮಾತುಗಳನ್ನೂ ಚೆನ್ನಾಗಿ ನೆನಪಿಡಿರಿ."
(ಪವಿತ್ರ ಕುರ್‌ಆನ್: 33: 34)

ಅರ್ಥಾತ್, ಯಾವ ಜ್ಞಾನ ಮತ್ತು ಯುಕ್ತಿಯ ಚರ್ಚೆಯು ನಿಮ್ಮ ಮನೆಗಳಲ್ಲಿ ಅಹರ್ನಿಶಿ ನಡೆಯುತ್ತಿದೆಯೋ ಅದರ ಬೇಡಿಕೆಗಳೇನು ಹಾಗೂ ಅಲ್ಲಾಹನ ಮೇಲೆ ವಿಶ್ವಾಸ ಮತ್ತು ಪರಲೋಕದ ವಿಚಾರಣೆಯ ನಂಬಿಕೆಯು ಯಾವ ರೀತಿಯ ಜೀವನ ಶೈಲಿಯನ್ನು ಬಯಸುತ್ತದೆ ಎಂಬುದರ ಕುರಿತು ಸ್ವಲ್ಪ ಯೋಚಿಸಿ ನೋಡಿ. ಇಂತಹ ಪ್ರಯತ್ನಗಳ ಪ್ರಸ್ತಾಪವು ಹದೀಸ್‌ಗಳಲ್ಲಿ ಬಹಳ ಸ್ಪಷ್ಟವಾಗಿ ಬಂದಿದೆ. ಉದಾಹರಣೆಗೆ, ನಾವು ಎರಡು ಘಟನೆಗಳನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇವೆ: ಒಬ್ಬ ಮಹಿಳೆ ಪ್ರವಾದಿ ವರ್ಯರಲ್ಲಿ(ಸ) ಹೀಗೆ ವಿಚಾರಿಸಿದರು. "ನನ್ನ ತಾಯಿ ಹಜ್ಜ್ ಮಾಡುವ ನಿರ್ಧಾರ

ಮಾಡಿದ್ದರು. ಆದರೆ ಮರಣವು ಅವರ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲ ಅವಕಾಶ ನೀಡಲಿಲ್ಲ. ನಾನು ಅವರ ಪರವಾಗಿ ಹಜ್ಜ್ ಮಾಡಬಹುದೇ?" ಆ ಪ್ರವಾದಿ(ಸ), "ಹೌದು. ನೀನು ಅವರ ಪರವಾಗಿ ಹಜ್ಜ್ ಮಾಡು. ಯೋಚಿಸಿ ನೋಡು ಒಂದು ವೇಳೆ ನಿನ್ನ ತಾಯಿಯ ಮೇಲೆ ಸಾಲವಿರುತ್ತಿದ್ದರೆ ನೀನು ಅದನ ತೀರಿಸುತ್ತಿರಲಿಲ್ಲವೇ? ಆದ್ದರಿಂದ ಅಲ್ಲಾಹನ ಯಾವ ವಿಧಿಗಳನ್ನು ಪಾಲಿಸಲಾಗಿಲ್ಲವೊ ಅವುಗಳನ್ನು ಪಾಲಿಸು. ಏಕೆಂದರೆ ಅಲ್ಲಾಹನು ಜನರಿಗಿಂತ ಹೆಚ್ಚು ತನ್ನ ಸಾ ತೀರಿಸಲ್ಪಡಲು ಅರ್ಹನಾಗಿರುತ್ತಾನೆ" ಎಂದು ಹೇಳಿದರು. (ಬುಖಾರಿ)

ಹ. ಅನಸ್(ರ) ಅವರ ತಾಯಿ ಉಮ್ಮು ಸುಲೈಮ್(ರ) ವಿಚಾರಿಸಿದರು "ಮಹಿಳೆಗೆ ಕನಸಿನಲ್ಲಿ ಲೈಂಗಿಕ ಕ್ರಿಯೆಯ ಸಂತೋಷ ಅನುಭವವಾದರೆ ಅವ ಮೇಲೆ ಸ್ನಾನ ಕಡ್ಡಾಯವಾಗುತ್ತದೆಯೇ?" ಪ್ರವಾದಿ(ಸ) ಹೇಳಿದರು, "ಹೌದು. ಆಕೆ ಸ್ಖಲನವಾದರೆ." ಆಗ ಉಮ್ಮು ಸುಲೈಮ್(ರ) ಕೇಳಿದರು, "ಸ್ತ್ರೀಗೂ ಸ್ಖಲ ವಾಗುತ್ತದೆಯೇ?" (ಈ ಪ್ರಶ್ನೆ ಏಕೆ ಉಂಟಾಯಿತೆಂದರೆ ಸ್ತ್ರೀಯರಿಗೆ ಸ್ಖಲನವಾಗುವುದ ಬಹಳ ವಿರಳ.) ಆಗ ಪ್ರವಾದಿ(ಸ) ಹೇಳಿದರು, "ಹೌದು, ಇಲ್ಲದಿದ್ದರೆ ಮಗ ಆಕೆಯಂತೆ ಆಗುವುದು ಹೇಗೆ?"

ಈ ಒಂದು ವಾಕ್ಯದ ಮೂಲಕ ಪ್ರವಾದಿಯವರು(ಸ) ಉಮ್ಮು ಸುಲೈಮ್(ರ) ಗಮನವನ್ನು ಎಷ್ಟು ವಿಷಯಗಳತ್ತ ಸೆಳೆದರೆಂಬುದರ ಕುರಿತು ಯೋಚಿಸಿ ನೋಡಿ

## ಸಹಾಬಿಗಳ ಕಾಲದಲ್ಲಿ

ಪ್ರವಾದಿವರ್ಯರ(ಸ) ನಂತರ ಸಹಾಬಿಗಳು ವೈಯಕ್ತಿಕವಾಗಿ ಸ್ತ್ರೀಯ ವೈಚಾರಿಕ ಮತ್ತು ಕ್ರಿಯಾತ್ಮಕ ಸುಧಾರಣೆಗಾಗಿ ಏನೆಲ್ಲ ಮಾಡಿದ್ದರೆಂಬುದ ವಿವರಣೆಗೆ ಇಲ್ಲಿ ಅವಕಾಶವಿಲ್ಲ. ಕೆಳಗಿನ ಒಂದು ಘಟನೆಯಿಂದ ಅದನ್ನು ಊಹಿ ಬಹುದಾಗಿದೆ.

ಒಮ್ಮೆ ಹ. ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳಿದರು, "ಕೃತಕ ಕೂದಲ ಧರಿಸುವ, ಮೈ ಕೆತ್ತಿಸುವ, ಹಲ್ಲುಗಳನ್ನು ಸವೆಸಿ ಅವುಗಳನ್ನು ಚಂದ ಮಾಡಿಸು ಸ್ತ್ರೀಯರ ಮೇಲೆ ಅಲ್ಲಾಹನ ಶಾಪವಿದೆ." ಇದನ್ನು ಕೇಳಿ ಒಬ್ಬ ಸ್ತ್ರೀ ಹೇಳಿದಳು "ಅದನ್ನೆಲ್ಲಾ ನಿಮ್ಮ ಪತ್ನಿಯೂ ಮಾಡುತ್ತಿರುವರಲ್ಲವೇ?" ಆಗ ಹ. ಅಬ್ದುಲ್ಲಾ ಬಿನ ಮಸ್‌ಊದ್(ರ) ಹೇಳಿದರು, "ಮೊದಲು ಹೋಗಿ ನೋಡಿ ಬನ್ನಿ, ಅನಂತ ಹೇಳಿ." ಆಗ ಆ ಸ್ತ್ರೀ ಅವರ ಮನೆಗೆ ಹೋದರು. ಆದರೆ ಅವರ ಅನಿಸಿಕೆ ತಪ್ಪಾಗಿತ್ತು ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳಿದರು, "ನನ್ನ ಪತ್ನಿ ಶರೀಅತ್ ವಿರೋಧಿಯಾ ಈ ಕಾರ್ಯಗಳನ್ನೆಸಗುತ್ತಿದ್ದರೆ ಆಕೆ ನನ್ನ ವಿವಾಹ ಬಂಧನದ ಮುಂದುವರಿಯುತ್ತಿರಲಿಲ್ಲ." (ಮುಸ್ಲಿಮ್)

ಇದೇ ರೀತಿ ಸಹಾಬಿಗಳು ಮಾಡುತ್ತಿದ್ದ ಸಾರ್ವತ್ರಿಕ ಸಮಾಜ ಸುಧಾರಣೆಯ ಚಟುವಟಿಕೆಗಳಲ್ಲಿ ಪುರುಷರ ಜತೆಗೆ ಸ್ತ್ರೀಯರನ್ನು ಗಮನದಲ್ಲಿರಿಸಲಾಗುತ್ತಿತ್ತು.

## ಪರಿಣಾಮಗಳು

ಈ ನಿರಂತರ ಪ್ರಯತ್ನಗಳ ಫಲವಾಗಿ ನಿನ್ನೆಯ ತನಕ ಜ್ಞಾನ–ಸಾಹಿತ್ಯಗಳ ಕುರಿತು ಅಜ್ಞಾನಿಯಾಗಿದ್ದ ಮಹಿಳೆ ಇಂದು ಅದರ ಸಂರಕ್ಷಕಿಯಾದಳು. ವಿಚಾರ ಮತ್ತು ಸಾಹಿತ್ಯದ ಜಗತ್ತಿನಲ್ಲಿ ಅಸ್ತಿತ್ವವೇ ಇಲ್ಲದವಳು ಇಂದು ಜ್ಞಾನ ಮತ್ತು ಮಾರ್ಗದರ್ಶನದ ಸೂರ್ಯನಂತೆ ಪ್ರಕಾಶಿಸತೊಡಗಿದಳು.

ಹ. ಆಯಿಶಾ(ರ) ಅವರನ್ನೇ ನೋಡಿ. ಅವರ ಜ್ಞಾನದ ವೈಶಾಲ್ಯದ ಕುರಿತು ಅವರ ಆಪ್ತ ಶಿಷ್ಯರಾದ ಉರ್ವಾ ಬಿನ್ ಝುಬೈರ್(ರ) ಹೀಗೆ ಹೇಳಿರುವರು, "ಕುರ್‌ಆನ್ ಮತ್ತು ಕಡ್ಡಾಯ ಕರ್ಮಗಳು, ಹಲಾಲ್ ಮತ್ತು ಹರಾಮ್ (ಧರ್ಮಸಮ್ಮತ ಮತ್ತು ನಿಷಿದ್ಧ), ಕವನ ಮತ್ತು ಸಾಹಿತ್ಯ, ಅರಬರ ಇತಿಹಾಸ ಹಾಗೂ ಅವರ ವಂಶ ವೃಕ್ಷಗಳ ಬಗ್ಗೆ ಹ. ಆಯಿಶಾ(ರ) ಅವರಿಗಿಂತ ಹೆಚ್ಚು ತಿಳಿದವರನ್ನು ಯಾರೂ ಕಂಡಿಲ್ಲ." (ತದ್‌ಕಿರತುಲ್ ಹುಫ್ಫಾಝ್)

ಉರ್ವಾ ಬಿನ್ ಝುಬೈರ್(ರ) ಅವರು ಅರಬಿ ಕಾವ್ಯವನ್ನು ಚೆನ್ನಾಗಿ ತಿಳಿದವರಾಗಿದ್ದರು. ಈ ಬಗ್ಗೆ ಅವರನ್ನು ಒಮ್ಮೆ ಹೊಗಳಿದಾಗ ಅವರು ಹೇಳಿದರು, "ಹ. ಆಯಿಶಾ(ರ) ಅವರಿಗೆ ಹೋಲಿಸಿದರೆ ನನ್ನ ಕಾವ್ಯಜ್ಞಾನ ಏನೇನೂ ಇಲ್ಲ. ಅವರಂತೂ ಪ್ರತಿಯೊಂದು ಮಾತನ್ನೂ ಕವನಗಳ ಮೂಲಕ ಮನವರಿಕೆ ಮಾಡಿಸುತ್ತಿದ್ದರು." (ಅಲ್‌ಇಸಾಬ ಫೀ ತಮೀಝುಸ್ಸಹಾಬಃ)

ಮೂಸಾ ಬಿನ್ ತಲ್‌ಹಾ ಈ ರೀತಿ ಹೇಳಿರುವರು, "ನಾನು ಆಯಿಶಾ(ರ) ಅವರಿಗಿಂತ ಮಿಗಿಲಾದ ಭಾಷಾ ಪಂಡಿತರನ್ನು ಕಂಡಿಲ್ಲ." (ತಿರ್ಮಿದಿ)

ಕವನ ಮತ್ತು ಸಾಹಿತ್ಯದ ಕುರಿತ ಜ್ಞಾನಕ್ಕಿಂತಲೂ ಹೆಚ್ಚಾಗಿ ಹ. ಆಯಿಶಾ(ರ) ಅವರ ವೈದ್ಯಕೀಯ ಜ್ಞಾನದ ಕುರಿತು ಜನರಿಗೆ ಆಶ್ಚರ್ಯವಾಗುತ್ತಿತ್ತು. ಇಬ್ನು ಅಬೀ ಮಲಕಿಯ್ಯ(ರ) ಹ. ಆಯಿಶಾ(ರ) ಅವರನ್ನುದ್ದೇಶಿಸಿ ಹೀಗೆ ಕೇಳಿದರು, "ನಿಮ್ಮ ಕಾವ್ಯಗಳ ಕುರಿತು ನಮಗೆ ಆಶ್ಚರ್ಯವಾಗುವುದಿಲ್ಲ. ಏಕೆಂದರೆ ನೀವು ಭಾಷಾ ಪಾಂಡಿತ್ಯದಲ್ಲಿ ಹೆಸರುವಾಸಿಯಾಗಿದ್ದ ಹ. ಅಬೂಬಕರ್(ರ) ಅವರ ಮಗಳಾಗಿರುವಿರಿ. ಆದರೆ ವೈದ್ಯಶಾಸ್ತ್ರವನ್ನು ನೀವು ಎಲ್ಲಿಂದ ಕಲಿತಿರಿ?" ಆಗ ಆಯಿಶಾ(ರ) ಹೇಳಿದರು, "ಪ್ರವಾದಿವರ್ಯರಿಗೆ(ಸ) ಏನಾದರೂ ಕಾಯಿಲೆಯಾದಾಗ ಹೊರಗಿನಿಂದ ಬರುವ ನಿಯಭಾರಿ ತಂಡಗಳು ಅದರ ಚಿಕಿತ್ಸೆಯನ್ನು ಸೂಚಿಸುತ್ತಿದ್ದರು. ನಾನು ಅದನ್ನು ನೆನಪಿಟ್ಟುಕೊಳ್ಳುತ್ತಿದ್ದೆ" ಎಂದರು. (ಮುಸ್ತದ್ರಕ್)

"ಗಣಿತ ಜ್ಞಾನದ ಕುರಿತು ಹ. ಆಯಿಶಾ(ರ) ಎಷ್ಟು ನಿಪುಣೆಯಾಗಿದ್ದರೆಂದರೆ

ದೊಡ್ಡ ದೊಡ್ಡ ಸಹಾಬಿಗಳು ಅವರಲ್ಲಿ ವಾರೀಸು ಹಕ್ಕಿನ ಸಮಸ್ಯೆಗಳ ಕುರಿತು ವಿಚಾರಿಸುತ್ತಿದ್ದರು." (ಮುಸ್ತದ್ರಕ್)

ಹ. ಆಯಿಶಾ(ರ)ರ ಶಿಷ್ಯೆಯರ ಪೈಕಿ ಒಬ್ಬರಾದ ಉಮ್ರಃ ಬಿನ್ತಿ ಅಬ್ದುರ್ರಹ್ಮಾನ್‌ರ ಕುರಿತು ಇಬ್ನು ಅಮ್ಮಾದ್ ಹಂಬಲಿಯವರು ಈ ರೀತಿ ಬರೆದಿರುವರು, "ಬುದ್ಧಿ ಮತ್ತು ಜ್ಞಾನವುಳ್ಳ ಉಮ್ರಃ ಬಿನ್ತಿ ಅಬ್ದುರ್ರಹ್ಮಾನ್‌ರ ಪಾಲನೆ ಪೋಷಣೆಯು ಆಯಿಶಾ(ರ)ರ ಮಡಿಲಲ್ಲಾಯಿತು. ಅವರು ಆಯಿಶಾ(ರ)ರಿಂದ ಅನೇಕ ಹದೀಸ್‌ಗಳನ್ನು ವರದಿ ಮಾಡಿದ್ದಾರೆ. ಅವರು ಅತ್ಯಂತ ನಂಬಿಗಸ್ಥೆ, ಸಂಯಮ ಮತ್ತು ನೆನಪು ಶಕ್ತಿಯನ್ನು ಹೊಂದಿದವರಾಗಿದ್ದು ಅವರ ವರದಿಗಳನ್ನು ಸ್ವೀಕರಿಸಲಾಗುತ್ತಿತ್ತು."
(ಶಝ್ರಾತುದ್ದಹಬ್)

ಅವರ ಬಗ್ಗೆ ಇಬ್ನು ಹಿಬ್ಬಾನ್(ರ) ಹೀಗೆ ಹೇಳಿರುವರು, "ಅವರು ಹ. ಆಯಿಶಾ(ರ) ಅವರ ವರದಿಗಳ ಬಗ್ಗೆ ಅತ್ಯಧಿಕ ತಿಳಿವಳಿಕೆಯುಳ್ಳವರಾಗಿದ್ದರು."
(ಅತ್ತಹ್‌ದೀಬುತ್ತಹ್‌ದೀಬ್)

ಹ. ಉಮ್ಮು ಸಲಮ(ರ) ಅವರ ಕುರಿತು ಹಾಫಿಝ್ ಇಬ್ನು ಹಜರ್(ರ) ಹೀಗೆ ಬರೆದಿರುವರು, "ಉಮ್ಮು ಸಲಮ(ರ) ಅತ್ಯಂತ ಸುಂದರಿಯಾಗಿರುವುದರ ಜತೆಗೆ ಅಪಾರ ಬುದ್ಧಿಮತ್ತೆ ಮತ್ತು ಅಭಿಪ್ರಾಯ ದಕ್ಷತೆಯ ಗುಣವನ್ನೂ ಹೊಂದಿದ್ದರು."
(ಅಲ್‌ಇಸಾಬ ಫೀ ತಮೀಝಿಸ್ಸಹಾಬಃ)

ಉಮ್ಮು ಸಲಮ(ರ) ಅವರ ಮಗಳಾದ ಝೈನಬ್(ರ) ಅವರ ಕುರಿತು ಅಲ್ಲಾಮಾ ಇಬ್ನು ಅಬ್ದುಲ್ ಬದ್ರ್ ಹೀಗೆ ಬರೆದಿರುವರು, "ಆಕೆ ತನ್ನ ಕಾಲದ ಅತಿದೊಡ್ಡ ವಿದ್ವಾಂಸೆಯಾಗಿದ್ದರು." (ಅಲ್ ಇಸ್ತೀಆಬ್ ಫೀ ಅಸ್ಮಾಇಲ್ ಅಸ್‌ಹಾಬ್)

ಅಬೂರಾಫಿಲ್ ಸಾಯಿಗ್(ರ) ಅವರು ಹೀಗೆ ಉಲ್ಲೇಖಿಸಿರುವರು, "ಮದೀನಾದ ವಿದ್ವಾಂಸ ಮಹಿಳೆಯರ ಕುರಿತು ಪ್ರಸ್ತಾಪವಾದಾಗಲೆಲ್ಲಾ ಥಟ್ಟನೆ ನನಗೆ ಝೈನಬ್ ಬಿನ್ತಿ ಅಬೀ ಸಲಮ(ರ) ನೆನಪಾಗುತ್ತಾರೆ." (ಅಲ್‌ಇಸಾಬ ಫೀ ತಮೀಝಿಸ್ಸಹಾಬಃ)

ಉಮ್ಮು ಸಲಮ(ರ)ರ ಓರ್ವ ಸೇವಕಿ ಉಮ್ಮುಲ್ ಹಸನ್‌ರವರು ಮಹಿಳೆಯರಿಗೆ ಪ್ರವಚನ ಮತ್ತು ಉಪದೇಶಗಳನ್ನು ನೀಡುತ್ತಿದ್ದರು. (ತಬಕಾತ್ ಇಬ್ನು ಸಅದ್)

ಹ. ಉಮ್ಮು ದರ್ದಾ(ರ) ಅವರ ಜ್ಞಾನ ಮತ್ತು ವಿವೇಕದ ಕುರಿತು ಇಮಾಮ್ ಬುಖಾರಿಯವರು ಹೀಗೆ ಬರೆದಿರುವರು, "ಉಮ್ಮುದ್ದರ್ದಾ(ರ) ಅತ್ತಹಿಯ್ಯಾತ್‌ನಲ್ಲಿ ಪುರುಷರಂತೆಯೇ ಕುಳಿತುಕೊಳ್ಳುತ್ತಿದ್ದರು. ಆಕೆ ವಿದ್ವಾಂಸೆಯಾಗಿದ್ದುದರಿಂದ ಆಕೆಯ ಮಾದರಿಯು ನಮಗೆ ಪ್ರಮಾಣವಾಗಿದೆ." (ಬುಖಾರಿ)

ಫಾತಿಮಾ ಬಿನ್ತಿ ಕೈಸ್ ಕೂಡಾ ದೊಡ್ಡ ವಿದ್ವಾಂಸೆಯಾಗಿದ್ದರು. ಅವರು ಕರ್ಮಶಾಸ್ತ್ರದ ಸಮಸ್ಯೆಯೊಂದರ ಕುರಿತು ಬಹಳ ಕಾಲದ ವರೆಗೆ ಹ. ಉಮರ್(ರ

ಮತ್ತು ಹ. ಆಯಿಶಾ(ರ) ಅವರೊಂದಿಗೆ ಚರ್ಚೆ ನಡೆಸುತ್ತಿದ್ದರು. ಆದರೆ ಅವರಿಬ್ಬರಿಗೂ ಹ. ಫಾತಿಮಾರವರ(ರ) ಅಭಿಪ್ರಾಯವನ್ನು ಬದಲಿಸಲು ಸಾಧ್ಯವಾಗಲಿಲ್ಲ. ಸಮುದಾಯದ ಅನೇಕ ಇಮಾಮ್‌ಗಳು ಅವರ ಅಭಿಪ್ರಾಯಕ್ಕೆ ಪ್ರಾಶಸ್ತ್ಯ ನೀಡಿರುವರು.

ಉಮ್ಮು ಅತಿಯ್ಯ(ರ) ಅವರ ಕುರಿತು ಇಮಾಮ್ ನಬವೀ(ರ) ಹೀಗೆ ಹೇಳಿರುವರು "ಅವರು ಗೌರವ ಮತ್ತು ಹಿರಿಮೆಯುಳ್ಳ ಹಾಗೂ ಪ್ರವಾದಿ ವರ್ಯರ(ರ) ಜತೆಗೆ ಜಿಹಾದ್‌ನಲ್ಲಿ ಪಾಲ್ಗೊಂಡ ಸಹಾಬಿ ಮಹಿಳೆಯರ ಪೈಕಿ ಒಬ್ಬರಾಗಿದ್ದಾರೆ." **(ತಹ್‌ದೀಬುಲ್ ಅಸ್ಮಾ ವಸ್ಸಿಫಾತ್)**

ಉಮ್ಮು ಅತಿಯ್ಯ ಅವರಿಂದ ಹದೀಸ್‌ಗಳನ್ನು ವರದಿ ಮಾಡಿದವರ ಪೈಕಿ ಬಸ್ರಾದವವರಾದ ಹಫ್ಸಾ ಬಿನ್ತಿ ಸೀರೀನ್ ಕೂಡಾ ಒಬ್ಬರಾಗಿದ್ದಾರೆ. ಅವರು ಹನ್ನೆರಡು ವರ್ಷ ಪ್ರಾಯದಲ್ಲೇ ಕುರ್‌ಆನಿನ ವಿದ್ಯೆಯಲ್ಲಿ ಪಾರಂಗತರಾಗಿದ್ದರು. ಅವರ ಕುರಿತು ಅಲ್ಲಿನ ಓರ್ವ ಪ್ರಖ್ಯಾತ ನ್ಯಾಯಾಧೀಶ ಮತ್ತು ವಿದ್ವಾಂಸ ಅಯಾಝ್ ಬಿನ್ ಮುಆವಿಯಾ(ರ) ಹೀಗೆ ಉಲ್ಲೇಖಿಸಿರುವರು, "ಹಫ್ಸಾ ಬಿನ್ತಿ ಸೀರೀನ್‌ರಿಗಿಂತ ದೊಡ್ಡ ವಿದ್ವಾಂಸರನ್ನು ನಾನು ಕಂಡಿಲ್ಲ." **(ತಹ್‌ದೀಬುತ್ತಹ್‌ದೀಬ್)**

ತಾಬಿಈಗಳ* ಇಮಾಮ್ ಸಈದ್ ಬಿನ್ ಮುಸಯ್ಯಿಬ್(ರ) ತಮ್ಮ ಮಗಳನ್ನು ತಮ್ಮ ಓರ್ವ ಶಿಷ್ಯನಿಗೆ ಮದುವೆ ಮಾಡಿಸಿದರು. ಮದುವೆಯ ಮರುದಿನ ಮದುಮಗ ಇಮಾಮ್ ಸಈದ್ ಬಿನ್ ಮುಸಯ್ಯಿಬ್(ರ) ಅವರ ತರಗತಿಯಲ್ಲಿ ಭಾಗವಹಿಸಲು ಸಿದ್ಧರಾಗುತ್ತಿದ್ದರು. ಆಗ ಮಗಳು, "ಇಲ್ಲೇ ಕುಳಿತುಕೊಳ್ಳಿ ತಂದೆಯವರು ನಿಮಗೆ ಕಲಿಸುವುದನ್ನು ನಾನೂ ಕಲಿಸಬಲ್ಲೆ" ಎಂದರು.

"ಅದೇ ರೀತಿ ಇಮಾಮ್ ಮಾಲಿಕ್(ರ) ಅವರ ಮಗಳೂ ದೊಡ್ಡ ವಿದ್ವಾಂಸೆಯಾಗಿದ್ದರು. ಇಮಾಮ್ ಅವರ ಶಿಷ್ಯರ ಪೈಕಿ ಯಾರಾದರೂ ಅವರ ಗ್ರಂಥವಾದ ಮೂತಾ ಓದುತ್ತಾ ಎಡವಿದರೆ ಆಕೆ ತನ್ನ ಕೋಣೆಯ ಒಳಗಿಂದ ಬಾಗಿಲಿಗೆ ಬಡಿದು ಸದ್ದು ಮಾಡುತ್ತಿದ್ದರು. ಆಗ ಇಮಾಮರು ಆ ವಿದ್ಯಾರ್ಥಿಗೆ ಮತ್ತೊಮ್ಮೆ ಓದುವಂತೆ ಆದೇಶಿಸುತ್ತಿದ್ದರು. ಏಕೆಂದರೆ ಅವರಿಗೆ ತಮ್ಮ ಮಗಳ ಜ್ಞಾನದ ಕುರಿತು ಅಷ್ಟು ಖಾತ್ರಿಯಿತ್ತು." **(ಅಲ್ ಮುದ್‌ಖಲ್ ಲಿಇಬ್ನಿಲ್ ಹಾಜ್)**

ಯಾವುದೇ ಕಾಲದ ವೈಚಾರಿಕ ಪ್ರಗತಿಯನ್ನು ಸರಿಯಾಗಿ ಅಂದಾಜಿಸಲು ಕೇವಲ ಕೆಲವು ಪ್ರಖ್ಯಾತರ ಕುರಿತು ತಿಳಿದರೆ ಸಾಲದು. ಅದಕ್ಕೆ ಸಾಮಾನ್ಯ ಜನರ ಬೌದ್ಧಿಕ ಮಟ್ಟದ ಅಧ್ಯಯನ ಮಾಡಬೇಕು. ಅನಂತರವೇ ನಾವು ಆ ಕಾಲದ ಸಾಮಾನ್ಯ ಬೌದ್ಧಿಕ ಮಟ್ಟದ ಕುರಿತು ಯಾವುದೇ ಅಭಿಪ್ರಾಯ ತಾಳಬಲ್ಲೆವು. ಆದ್ದರಿಂದಲೇ ನಾವು ಮೇಲೆ ಇಸ್ಲಾಮೀ ಇತಿಹಾಸದಲ್ಲಿ ಪ್ರಮುಖ ಸ್ಥಾನ ಹೊಂದಿರುವವರ

---

* **ಸಹಾಬಿಗಳ ದರ್ಶನ ಭಾಗ್ಯ ಪಡೆದವರು.**

ಜತೆಗೆ ಸಾಮಾನ್ಯರೆನಿಸಿದ ಮಹಿಳೆಯರ ಕುರಿತೂ ಪ್ರಸ್ತಾಪಿಸಿದ್ದೇವೆ. ಮಹಿಳೆ ವೈಚಾರಿಕ ಉನ್ನತಿಯನ್ನು ದಯಪಾಲಿಸುವಲ್ಲಿ ಇಸ್ಲಾಮ್ ಮಾಡಿದ ಶ್ರಮದ ಮಹತ್ವವು ತಿಳಿಯುವಂತಾಗಲು ಅಂತಹ ಇನ್ನೂ ಒಂದೆರಡು ಘಟನೆಗಳನು ವಿವರಿಸುತ್ತಿದ್ದೇವೆ:

ಉಮ್ಮು ವರಕಃ ಬಿನ್ ನೌಫಲ್(ರ) ಎಂಬೋರ್ವ ಸಹಾಬಿ ಮಹಿಳೆ ಇದ್ದರು ಅವರ ಕುರಿತು ಅಬೂದಾವೂದ್ ಎಂಬ ಹದೀಸ್ ಗ್ರಂಥದಲ್ಲಿ ಹೀಗೆ ವರದಿಯಾಗಿದೆ ಅವರು ಕುರ್‌ಆನ್ ಅಭ್ಯಸಿಸಿದ್ದರು. ಅವರನ್ನು ಪ್ರವಾದಿ(ಸ) ತಮ್ಮ ಮನೆಯವರಿ ಇಮಾಮತ್ ಮಾಡಲು ನೇಮಿಸಿದ್ದರು.

ಒಮ್ಮೆ ಹ. ಅಬ್ದುಲ್ಲಾ ಬಿನ್ ಮಸ್‌ಊದ್(ರ) ಒಂದು ಧಾರ್ಮಿಕ ವಿಧಿಯನು ತಿಳಿಸಿದರು. ಆಗ ಅವರ ಬಳಿಗೆ ಅಸದ್ ಗೋತ್ರದ ಒಬ್ಬ ಮಹಿಳೆ ಉಮ್ಮು ಯಅ್‌ಕೂಬ್ ಬಂದು ಈ ರೀತಿ ಹೇಳಿದರು, "ಪವಿತ್ರ ಕುರ್‌ಆನಿನ ಎರಡು ಕವಚಗಳ ಮಧ್ಯೆ ಇರುವುದೆಲ್ಲವನ್ನೂ ನಾನು ಓದಿದ್ದೇನೆ. ಆದರೆ ನೀವು ತಿಳಿಸಿದ ವಿಧಿಯನ್ನು ನಾನು ಎಲ್ಲೂ ಕಂಡಿಲ್ಲ." (ಮುಸ್ಲಿಮ್)

ಮಾಲಿಕೀ ಕರ್ಮಶಾಸ್ತ್ರದ ಪ್ರಖ್ಯಾತ ಇಮಾಮರಾದ ಅಶ್‌ಹಬ್(ರ) ಒಮ್ಮೆ ಓರ್ವ ದಾಸಿಯಿಂದ ತರಕಾರಿ ಖರೀದಿಸಿದರು. ಆ ಕಾಲದಲ್ಲಿ ತರಕಾರಿಗೆ ನಗದು ನೀಡುವ ಬದಲು ರೊಟ್ಟಿಯನ್ನು ನೀಡಲಾಗುತ್ತಿತ್ತು. ಅಶ್‌ಹಬ್‌ರ ಬಳಿ ಆಗ ರೊಟ್ಟಿ ಯಿರಲಿಲ್ಲ. "ಸಂಜೆ ರೊಟ್ಟಿಯವನು ರೊಟ್ಟಿ ತಂದಾಗ ಬಂದು ತೆಗೆದುಕೊಂಡು ಹೋಗು" ಎಂದು ಅವರು ದಾಸಿಗೆ ಹೇಳಿದರು. ಆಗ ಆ ದಾಸಿ, "ಅದು ಧರ್ಮ ಸಮ್ಮತವಲ್ಲ. ಏಕೆಂದರೆ ತಿನ್ನುವ ಕುಡಿಯುವ ವಸ್ತುಗಳ ವಿಷಯದಲ್ಲಿ ನೇರ ವಿನಿಮಯ ಮಾಡಬೇಕೆಂದು ಶರೀಅತ್ ಆದೇಶಿಸಿದೆ" ಎಂದರು.

(ಅಲ್ ಮುದ್‌ಖಲ್ ಲಿಇಬ್ನಿಲ್ ಹಾಜ್

❖ ❖ ❖

# ಮಹಿಳೆ ಕಾರ್ಯರಂಗದಲ್ಲಿ

ಇಸ್ಲಾಮ್ ಮಹಿಳೆಯ ಚಟುವಟಿಕೆಗಳನ್ನು ಕೇವಲ ವಿದ್ಯೆ ಬುದ್ಧಿಯ ಕ್ಷೇತ್ರಕ್ಕೆ ಸೀಮಿತಗೊಳಿಸಿಲ್ಲ. ಆಕೆ ವಿದ್ಯೆ ಮತ್ತು ಸಾಹಿತ್ಯದ ಕ್ಷೇತ್ರದಲ್ಲಿ ಮುನ್ನಡೆಯುವಂತೆ ಬೇಸಾಯ ಮತ್ತು ವ್ಯಾಪಾರದ ಕ್ಷೇತ್ರದಲ್ಲೂ ಪ್ರಗತಿ ಸಾಧಿಸುವ ಅಧಿಕಾರ ಹೊಂದಿರುವಳು. ಆಕೆಗೆ ಬೇರೆಬೇರೆ ಕಸುಬು ಮತ್ತು ಕೈಗಾರಿಕೆಗಳನ್ನು ನಡೆಸುವ ಹಾಗೂ ಅನೇಕ ಸಾಮುದಾಯಿಕ ಮತ್ತು ಸಾಮಾಜಿಕ ಸೇವೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಅನುಮತಿಯೂ ಇರುವುದು. ಅನುಮತಿ ಇದೆ ಯೆಂದರೆ ಆಕೆಯಲ್ಲಿರುವ ಉತ್ಸಾಹ ಮತ್ತು ಹುಮ್ಮಸ್ಸನ್ನು ಅದುಮುವ ಅಥವಾ ಹತ್ತಿಕ್ಕುವ ಪ್ರಯತ್ನ ಮಾಡದೆ ಅದರ ಪರಿಪೂರ್ಣ ಉಪಯೋಗದ ಅವಕಾಶ ಆಕೆಗೆ ನೀಡಲಾಗುವುದು ಎಂದರ್ಥ.

ಇದನ್ನು ಒಂದು ಘಟನೆಯಿಂದ ತಿಳಿಯಬಹುದು. ಒಮ್ಮೆ ಪ್ರವಾದಿ(ಸ) ಉಬಾದಃ ಬಿನ್ ಸಾಮಿತ್(ರ) ಅವರ ಪತ್ನಿ ಉಮ್ಮು ಹರಾಮ್‌ರ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಅವರು ಒಮ್ಮೆಲೇ ಮುಗುಳ್ನಗುತ್ತಾ ಎದ್ದರು. ಉಮ್ಮು ಹರಾಮ್(ರ) ಮುಗುಳ್ನಗೆಯ ಕಾರಣವನ್ನು ಕೇಳಿದರು. ಆಗ ಪ್ರವಾದಿ(ಸ) ಹೇಳಿದರು, "ನನಗೆ ನನ್ನ ಸಮುದಾಯದ ಉನ್ನತ ಮಟ್ಟದ ಜನರನ್ನು ತೋರಿಸಲಾಯಿತು. ಅವರು ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡಲಿಕ್ಕಾಗಿ ಸಮುದ್ರದ ಪ್ರಯಾಣ ಮಾಡುವರು. ಅದರ ಪ್ರತಿಫಲ ಎಷ್ಟು ದೊಡ್ಡದಾಗಿರುವುದೆಂದರೆ ಅವರು ಸ್ವರ್ಗದಲ್ಲಿ ರಾಜರಂತೆ ಸಿಂಹಾಸನದಲ್ಲಿ ವಿರಾಜಿಸುವರು." ಉಮ್ಮು ಹರಾಮ್ ಹೇಳಿದರು, "ಅಲ್ಲಾಹನು, ನನ್ನನ್ನೂ ಆ ಜನರಲ್ಲಿ ಸೇರಿಸಲಿ ಎಂದು ಪ್ರಾರ್ಥಿಸಿರಿ." ಪ್ರವಾದಿ(ಸ) ಪ್ರಾರ್ಥಿಸಿದರು. ಅನಂತರ ಅವರು ಪುನಃ ಮಲಗಿದರು. ಮತ್ತೊಮ್ಮೆ ಅವರು ಎಚ್ಚೆತ್ತಾಗ ಅದೇ ರೀತಿಯ ಮುಗುಳ್ನಗೆಯು ಅವರ ಮುಖದಲ್ಲಿತ್ತು. ಉಮ್ಮು ಹರಾಮ್(ರ) ಆಗಲೂ ಕಾರಣ ಕೇಳಿದರು. ಪ್ರವಾದಿ(ಸ) ಅದೇ ಕಾರಣ ವನ್ನು ತಿಳಿಸಿದರು. ಆಗಲೂ ಉಮ್ಮು ಹರಾಮ್(ರ) ಪ್ರವಾದಿವರ್ಯರಲ್ಲಿ(ಸ) ಪ್ರಾರ್ಥನೆಗಾಗಿ ನಿವೇದಿಸಿಕೊಂಡರು. ಆಗ ಪ್ರವಾದಿ(ಸ) ಹೇಳಿದರು, "(ಗಾಬರಿ ಪಡಬೇಡಿ) ನೀವು ಅವರ ಪೈಕಿ ಅಗ್ರಪಂಕ್ತಿಯಲ್ಲಿರುವಿರಿ." (ಬುಖಾರಿ)

. ಯೋಚಿಸಿ ನೋಡಿ. ಜಿಹಾದ್. ಅದೂ ಸಮುದ್ರ ದಾಟಿ. ಜೀವನದ ಅತ್ಯಂತ ಸಂಕಷ್ಟದಾಯಕ ಮತ್ತು ತ್ಯಾಗಗಳನ್ನು ಬಯಸುವ ಕಾರ್ಯ. ಅದರಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆಗಾಗಿ ಪ್ರವಾದಿ(ಸ) ಪ್ರಾರ್ಥಿಸುತ್ತಾರೆ. ವಸ್ತುತಃ ಜಿಹಾದ್ ಆಕೆಯ ಮೇಲೆ ಕಡ್ಡಾಯವೂ ಅಲ್ಲ. ಇದರಿಂದ ಇಸ್ಲಾಮ್‌ನ ಧೋರಣೆ ಮತ್ತು ಒಲವು ಏನೆಂದು ತಿಳಿಯುತ್ತದೆ. ಅದು ಮಹಿಳೆಯು ಸಾಮೂಹಿಕ ಚಟುವಟಿಕೆಗಳಿಂದ ಸಂಪೂರ್ಣ ದೂರ ಉಳಿಯಬೇಕೆಂದೋ ತನ್ನ ಕಾರ್ಯಕ್ಷೇತ್ರದ ಹೊರಗೆ ಯಾವುದೇ ಕೆಲಸ ಮಾಡಬಾರದೆಂದೋ ಬಯಸುವುದಿಲ್ಲ. ಆದರೆ ಯಶಸ್ವಿ ಸಾಮಾಜಿಕ ಚಟುವಟಿಕೆಗಳಿಗೆ ಕೆಲವು ಅನಿವಾರ್ಯ ಗುಣಗಳಿರಬೇಕೆಂಬುದು ಒಂದು ವಾಸ್ತವಿಕತೆಯಾಗಿದೆ. ಉದಾ: ಪರಿಶ್ರಮ, ಸರಳತೆ, ಸ್ಥೈರ್ಯ ಇತ್ಯಾದಿ. ಸಹಜವಾಗಿಯೇ ಸ್ತ್ರೀಯಲ್ಲಿ ಈ ಗುಣಗಳು ಕಡಿಮೆಯಿರುತ್ತವೆ. ಈ ಗುಣಗಳು ಮನುಷ್ಯನಲ್ಲಿ ಹುಟ್ಟುವುದೇ ಆತ ವಿರೋಧಿ ಶಕ್ತಿಗಳೊಂದಿಗೆ ಸಂಘರ್ಷ ಮಾಡುವಾಗ. ಸ್ತ್ರೀಯು ಕುಟುಂಬ ಜೀವನದೊಂದಿಗಿನ ಹೆಚ್ಚಿನ ಸಂಬಂಧದಿಂದಾಗಿ ಈ ಸಂಘರ್ಷದಿಂದ ದೂರವಿರುತ್ತಾಳೆ. ಆದ್ದರಿಂದ ಆಕೆಯಲ್ಲಿ ಈ ಗುಣಗಳು ಹುಟ್ಟುವುದೇ ವಿರಳ. ಇದಕ್ಕೆ ವ್ಯತಿರಿಕ್ತವಾಗಿ ಮನೆಯ ಶಾಂತ ವಾತಾವರಣವು ಆಕೆಯಲ್ಲಿ ಸಂಕೋಚ, ಐಷಾರಾಮ, ಕೋಮಲತೆ ಮತ್ತು ಚಂಚಲ ಚಿತ್ತವನ್ನು ಬೆಳೆಸುತ್ತದೆ. ಈ ದುರ್ಗುಣಗಳು ಆಕೆಯಲ್ಲಿ ಬೆಳೆಯಬಾರದು. ಜೀವನದ ಸಂಕಷ್ಟಗಳನ್ನು ಆಕೆ ಸ್ಥೈರ್ಯದಿಂದ ಎದುರಿಸುವಂತಾಗಬೇಕೆಂದು ಇಸ್ಲಾಮ್ ಬಯಸುತ್ತದೆ. ಆದ್ದರಿಂದಲೇ ಇಸ್ಲಾಮ್ ಆಕೆಗೆ ಪರಿಶ್ರಮದಿಂದ ಕೂಡಿದ ಸರಳ ಜೀವನವನ್ನು ಬೋಧಿಸಿದೆ.

ಎರಡು ವರ್ಗದ ಜನರ ಕುರಿತು ಅವರು ನರಕಕ್ಕೆ ಹೋಗುವರೆಂದು ಪ್ರವಾದಿ(ಸ) ಹೇಳಿರುವರು. ಅವರಲ್ಲಿ ಒಂದು ವರ್ಗವು ಹೀಗಿದೆ: "ವಸ್ತ್ರ ಧರಿಸಿಯೂ ನಗ್ನರಾಗಿರುವ ಸ್ತ್ರೀಯರು. ಬಳುಕುತ್ತಾ ನಡೆಯುವವರು. ಒಂಟೆಯ ಡುಬ್ಬದಂತೆ ತಮ್ಮ ಭುಜಗಳನ್ನು ಆಡಿಸುತ್ತಾ ಒನಪು-ವೈಯಾರ ಪ್ರದರ್ಶಿಸುವವರು. ಅವರು ಸ್ವರ್ಗವನ್ನು ಪ್ರವೇಶಿಸಲಾರರು. ಅದರ ಸುವಾಸನೆ ಯನ್ನೂ ಹೊಂದಲಾರರು. ವಸ್ತುತಃ ಸ್ವರ್ಗದ ಸುವಾಸನೆಯು ಬಹಳ ದೂರದ ತನಕ ಹರಡಿರುವುದು." (ಮುಸ್ಲಿಮ್)

ಒಮ್ಮೆ ಹ. ಮುಆವಿಯಾ(ರ) ಕೃತಕ ಕೂದಲಿನ ಒಂದು ಜಡೆಯನ್ನು ಹಿಡಿದುಕೊಂಡು ಭಾಷಣ ಮಾಡುತ್ತಾ ಮದೀನಾ ವಾಸಿಗಳಲ್ಲಿ ಹೀಗೆ ಕೇಳಿದರು, "ನಿಮ್ಮ ವಿದ್ವಾಂಸರು ಎಲ್ಲಿದ್ದಾರೆ. (ಅವರು ಇದರ ಬಗ್ಗೆ ಟೀಕಿಸುವುದಿಲ್ಲವೇಕೆ?) ಪ್ರವಾದಿ(ಸ) ಇದನ್ನು ಉಪಯೋಗಿಸುವುದರಿಂದ ತಡೆದಿರುವುದನ್ನು ನಾನು ಕೇಳಿದ್ದೇನೆ. ಪ್ರವಾದಿ(ಸ) ಅವರು, 'ಬನೀಇಸ್ರಾಈಲರ ಮಹಿಳೆಯರು ಇದನ್ನು ಉಪಯೋಗಿಸ ತೊಡಗಿದಾಗ ಆ ಜನಾಂಗವು ನಾಶವಾಯಿತು' ಎಂದು ಹೇಳಿದ್ದಾರೆ." (ಬುಖಾರಿ)

ಮಹಿಳೆಯರ ಒಂದು ಕೃತ್ಯದಿಂದಾಗಿ ಇಡೀ ಜನಾಂಗವೇ ನಾಶವಾಗುವುದು

ುಹಳ ವಿಚಿತ್ರವೆನಿಸುತ್ತದೆ. ಆದರೆ ಈ ಕೃತ್ಯವು ಆ ಜನಾಂಗದ ವಿನಾಶದ ಏಕೈಕ ಕಾರಣವೆಂಬುದು ಪ್ರವಾದಿ(ಸ) ಅವರ ಇಂಗಿತವಾಗಿರಲಿಲ್ಲ. ಈ ಕೃತ್ಯದ ಮೂಲಕ ಪ್ರವಾದಿ(ಸ) ಅವರು ಜನರನ್ನು ವಿನಾಶದತ್ತ ಸಾಗಿಸುವ ವಿಚಾರ ಮತ್ತು ಒಲವಿನ ಕಡೆಗೆ ಬೊಟ್ಟು ಮಾಡಿರುವರು. ಒಂದು ಜನಾಂಗವು ಸರಳತೆಯ ಬದಲು ಆಡಂಬರವನ್ನು ಹಾಗೂ ಪರಿಶ್ರಮದ ಬದಲು ಐಷಾರಾಮವನ್ನು ಬಯಸತೊಡಗಿದರೆ ಅದು ಜೀವನದ ಸಂಘರ್ಷದಲ್ಲಿ ಎಂದೂ ಸ್ಥಿರಚಿತ್ತವಾಗಿ ಇರಲಾರದು. ಈ ವಿನಾಶಕಾರಿ ಗುಣಗಳಿಂದಲೇ ಇಸ್ಲಾಮ್ ಸ್ತ್ರೀಯನ್ನು ತಡೆಯಬಯಸುತ್ತದೆ.

ಜಾಬಿರ್ ಬಿನ್ ಅಬ್ದುಲ್ಲಾ(ರ) ಅವರು ಹೇಳುತ್ತಾರೆ: ನನ್ನ ಚಿಕ್ಕಮ್ಮನಿಗೆ ಅವರ ಪತಿ ತಲಾಕ್ ನೀಡಿದರು. (ತಲಾಕ್‌ನ ನಂತರ ಆಕೆಗೆ ತನ್ನ ಇದ್ದತ್‌ನ ದಿನಗಳನ್ನು ಮನೆಯಲ್ಲೇ ಕಳೆಯಬೇಕಾಗಿತ್ತು. ಆದರೆ ಅವರು ಇದ್ದತ್‌ನ ಅವಧಿಯಲ್ಲೇ) ತಮ್ಮ ಕೆಲವು ಖರ್ಜೂರದ ಮರಗಳನ್ನು ಕಡಿದು ಮಾರಾಟ ಮಾಡ ಬಯಸಿದರು. ಒಬ್ಬರು ಆಕೆಯನ್ನು ಅದರಿಂದ ಬಲವಾಗಿ ತಡೆದರು. ಆಕೆ ಪ್ರವಾದಿ(ಸ) ಅವರ ಬಳಿ ಈ ಬಗ್ಗೆ ವಿಚಾರಿಸಲು ಹೋದರು. ಪ್ರವಾದಿ(ಸ) ಹೇಳಿದರು, "ನೀವು ಹೊಲಕ್ಕೆ ಹೋಗಿ ನಿಮ್ಮ ಖರ್ಜೂರದ ಮರವನ್ನು ಕಡಿದು ಮಾರಾಟ ಮಾಡಿ. ಆ ಹಣದಿಂದ ನೀವು ದಾನ-ಧರ್ಮ ಅಥವಾ ಇನ್ನಾವುದೇ ಒಳಿತಿನ ಕಾರ್ಯ ವೆಸಗಬಹುದು. ಈ ರೀತಿ ಅದು ನಿಮ್ಮ ಪಾಲಿಗೆ ಪರಲೋಕದ ಪುಣ್ಯಕ್ಕೆ ಹೇತುವಾಗ ಬಹುದು.)"

(ಅಬೂದಾವೂದ್)

ಈ ವಚನದಲ್ಲಿ ಪ್ರವಾದಿ(ಸ) ಜಾಬಿರ್‌ರ ಚಿಕ್ಕಮ್ಮನನ್ನು ಮಾನವೀಯ ಅನುಕಂಪ ಮತ್ತು ಸಮಾಜ ಕಲ್ಯಾಣದ ಕಾರ್ಯಗಳಿಗೆ ಪ್ರೇರೇಪಿಸಿರುವರು. ಮಹಿಳೆಯು ತನ್ನ ಸಹಜೀವಿಗಳಿಗೆ ಸೇವೆ ಮಾಡುತ್ತಿರಬೇಕೆಂದೂ ಅವಳ ಕೈಯಿಂದ ಸತ್ಕಾರ್ಯಗಳು ಆಗುತ್ತಿರಬೇಕೆಂದೂ ಇಸ್ಲಾಮ್ ಬಯಸುತ್ತದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

## ಮನೆಯಿಂದ ಹೊರ ಹೋಗುವ ಅನುಮತಿ

ಈ ವಚನದಿಂದ ತಿಳಿದುಬರುವ ಇನ್ನೊಂದು ವಿಷಯವೇನೆಂದರೆ ಉತ್ತಮ ಉದ್ದೇಶಗಳಿಗಾಗಿ ಮತ್ತು ಸತ್ಕಾರ್ಯಗಳ ನಿರ್ವಹಣೆಗಾಗಿ ಮಹಿಳೆಯು ಮನೆಯಿಂದ ಹೊರಗೆ ಹೋಗಬಹುದಾಗಿದೆ. ಪ್ರವಾದಿ(ಸ) ಅವರ ಕಾಲದ ಮಹಿಳೆಯರು ಅಗತ್ಯ ಬಂದಾಗ ಪೇಟೆಗೆ ಮತ್ತು ಹೊಲಕ್ಕೆ ಹೋಗುತ್ತಿದ್ದರು. ಅದಕ್ಕೇನಾದರೂ ನಿಷೇಧ ಇರುತ್ತಿದ್ದರೆ ಹ. ಜಾಬಿರ್(ರ) ಅವರ ಚಿಕ್ಕಮ್ಮ ಮನೆಬಿಟ್ಟು ಹೊರಡುತ್ತಲೇ ಇರಲಿಲ್ಲ ಮತ್ತು ಇದ್ದತ್‌ನ ಅವಧಿಯಲ್ಲಿ ಆಕೆ ಮನೆಬಿಟ್ಟು ಹೋಗಬಹುದೇ ಎಂಬ ಪ್ರಶ್ನೆಯೇ ಏಳುತ್ತಿರಲಿಲ್ಲ.

ಇನ್ನು ಕೆಲವು ಪ್ರವಾದಿ ವಚನಗಳಿಂದ ಈ ವಿಷಯ ಇನ್ನಷ್ಟು ಸ್ಪಷ್ಟವಾ ತ್ತದೆ. ಪರ್ದಾದ ಆಜ್ಞೆ ಬಂದ ಬಳಿಕದ ಒಂದು ಘಟನೆಯನ್ನು ಹ. ಆಯಿಶಾ(ರ ವಿವರಿಸುತ್ತಾರೆ. ಹ. ಉಮರ್(ರ) ಹ. ಸೌದಃ(ರ) ಅವರನ್ನು ಹೊರಗೆ ಕಂಡಾ ಅವರನ್ನು ಟೀಕಿಸಿದರು. ಹ. ಸೌದಃ(ರ) ಮೌನವಾಗಿ ಮನೆಗೆ ಮರಳಿ ಬಂದರ ಹಾಗೂ ಪ್ರವಾದಿವರ್ಯರಲ್ಲಿ(ಸ) ಈ ಘಟನೆಯ ಪ್ರಸ್ತಾಪ ಮಾಡಿದರು. ಪ್ರವಾದಿ(ಸ ಅವರಿಗೆ ವಹೀ (ದಿವ್ಯವಾಣಿ) ಅವತೀರ್ಣವಾಗುವ ಸ್ಥಿತಿ ಉಂಟಾಯಿತು. ಈ ಸ್ಥಿತಿಯು ಕೊನೆಗೊಂಡಾಗ ಪ್ರವಾದಿ(ಸ) ಹೇಳಿದರು, "ಖಂಡಿತವಾಗಿಯ ಅಲ್ಲಾಹನು ನಿಮಗೆ ನಿಮ್ಮ ಅಗತ್ಯಗಳಿಗಾಗಿ ಮನೆಯಿಂದ ಹೊರಗೆ ಹೋಗು ಅನುಮತಿ ನೀಡಿರುವನು." (ಬುಖಾರಿ)

ಸ್ತ್ರೀಯರ ಚಟುವಟಿಕೆಗಳಿಂದಲೂ ಈ ಬಗೆಗಿನ ಸ್ಪಷ್ಟ ಮತ್ತು ಖಚಿತ ಸಾಕ್ಷ್ಯಗಳ ಲಭಿಸುತ್ತವೆ. ಆಕೆ ಮನೆವಾರ್ತೆಯ ಜತೆಗೆ ಇತರ ಅನೇಕ ಚಟುವಟಿಕೆಗಳನ ಮನೆಯೊಳಗೂ ಮನೆಯ ಹೊರಗೂ ಮಾಡುತ್ತಿದ್ದಳು. ಇಸ್ಲಾಮೀ ಸಮಾಜ ಆಕೆಯನ್ನು ಎಂದೂ ಅದರಿಂದ ತಡೆದಿರಲಿಲ್ಲ.

## ಕೃಷಿ ಕಾರ್ಯ

ಕೃಷಿ ಕಾರ್ಯದಲ್ಲಿ ಮಹಿಳೆಯರು ತೊಡಗುವ ವಿಷಯ ಮೇಲೆ ಉದ್ಧರಿಸಿರು ಜಾಬಿರ್(ರ) ಅವರ ಚಿಕ್ಕಮ್ಮನ ಘಟನೆಯಿಂದ ತಿಳಿದು ಬರುತ್ತದೆ.

ಸಹಲ್ ಬಿನ್ ಸಅದ್(ರ) ಇನ್ನೋರ್ವ ಮಹಿಳೆಯ ಕುರಿತು ತಿಳಿಸಿದ್ದಾ ಅವರಿಗೆ ತಮ್ಮದೇ ಆದ ಹೊಲವಿತ್ತು. ಅವರು ನೀರಿನ ನಾಲೆಗಳ ಸು ಬೀಟುರೂಟನ್ನು ಬೆಳೆಸುತ್ತಿದ್ದರು. ಜುಮಾ ದಿವಸ ಹ. ಸಹಲ್ ಬಿನ್ ಸಅದ್(ರ ಮತ್ತು ಇತರ ಕೆಲವು ಮಂದಿ ಸಹಾಬಿಗಳು ಅವರನ್ನು ಭೇಟಿಯಾಗಲು ಹೋದಾ ಅವರು ಬೀಟುರೂಟ್ ಮತ್ತು ಗೋಧಿ ಹಿಟ್ಟಿನಿಂದ ತಯಾರಿಸಿದ ಹಲ್ವಾವನ ಅವರಿಗೆ ತಿನ್ನಿಸುತ್ತಿದ್ದರು. (ಬುಖಾರಿ)

ಹ ಅಬೂಬಕರ್(ರ) ಅವರ ಪುತ್ರಿ ಅಸ್ಮಾ(ರ) ತಮ್ಮ ಆರಂಭ ಕಾಲ ವೃತ್ತಾಂತವನ್ನು ವಿವರಿಸುತ್ತಾ ಹೇಳಿರುವರು: ಹ. ಝುಬೈರ್(ರ) ಅವರೊಂದಿ ನನ್ನ ವಿವಾಹವಾಗಿತ್ತು. ಆದರೆ ಅವರ ಬಳಿ ನೀರು ತರುವ ಒಂದು ಒಂಟೆ ಮ ಒಂದು ಕುದುರೆಯ ಹೊರತು ಬೇರೆ ಸೊತ್ತಾಗಲೀ ಗುಲಾಮನಾಗಲೀ ಇತ ವಸ್ತುಗಳಾಗಲೀ ಇರಲಿಲ್ಲ. ನಾನೇ ಅವರ ಕುದುರೆಗೆ ಮೇವು ಹಾಕುತ್ತಿದ್ದೆ, ನೀ ಕುಡಿಸುತ್ತಿದ್ದೆ ಮತ್ತು ನೀರು ತುಂಬಿಸುತ್ತಿದ್ದೆ. ನಾನೇ ಹಿಟ್ಟು ಕಲಸಿ ರೊ ತಯಾರಿಸಬೇಕಾಗುತ್ತಿತ್ತು. ನನಗೆ ರೊಟ್ಟಿ ಉತ್ತಮವಾಗಿ ಮಾಡಲು ಬರುತ್ತಿರಲಿ ನನ್ನ ನೆರೆಯಲ್ಲಿ ಕೆಲವು ಅನ್ಸಾರಿ ಮಹಿಳೆಯರಿದ್ದರು. ಅವರು ತಮ್ಮ ಸ್ನೇಹದ

ಬಹಳ ನಿಷ್ಠಾವಂತರಾಗಿದ್ದರು. ಅವರು ನನಗೆ ರೊಟ್ಟಿ ತಯಾರಿಸಿ ಕೊಡುತ್ತಿದ್ದರು. ಹ. ಝುಬೈರ್(ರ) ಅವರಿಗೆ ಪ್ರವಾದಿ(ಸ) ನಮ್ಮ ಮನೆಗೆ ಎರಡು ಮೈಲಿ ದೂರದಲ್ಲಿ ಒಂದು ಭೂಮಿಯನ್ನು ಕೃಷಿ ಮಾಡಲಿಕ್ಕಾಗಿ ನೀಡಿದ್ದರು. ನಾನು ಆ ಭೂಮಿಯಿಂದ ಖರ್ಜೂರಗಳನ್ನು ತರುತ್ತಿದ್ದೆ. ಒಂದು ದಿನ ನಾನು ಖರ್ಜೂರದ ಬುಟ್ಟಿಯನ್ನು ತಲೆಯ ಮೇಲೆ ಹೊತ್ತು ಬರುತ್ತಿದ್ದೆ. ರಸ್ತೆಯಲ್ಲಿ ಪ್ರವಾದಿ(ಸ) ಅವರ ಭೇಟಿಯಾಯಿತು. ಪ್ರವಾದಿ(ಸ) ತಮ್ಮ ಸವಾರಿಯ ಹಿಂದೆ ಕುಳಿತುಕೊಳ್ಳುವಂತೆ ನನಗೆ ಹೇಳಿದರು. ಆದರೆ ಅವರ ಜತೆ ಕೆಲವು ಅನ್ಸಾರ್ ವ್ಯಕ್ತಿಗಳು ಇದ್ದುದರಿಂದ ನನಗೆ ಪುರುಷರ ಜತೆ ಹೋಗಲು ಸಂಕೋಚವಾಯಿತು. ಝುಬೈರ್(ರ) ಅವರ ನೆನಪೂ ಬಂತು. ಅವರು ಬಹಳ ಸ್ವಾಭಿಮಾನಿ ವ್ಯಕ್ತಿಯಾಗಿದ್ದರು. ಅವರು ಅದನ್ನು ಇಷ್ಟಪಡುತ್ತಿರಲಿಲ್ಲ. ಆದ್ದರಿಂದ ನಾನು ಹಿಂದೆ–ಮುಂದೆ ನೋಡಿದೆ. ಪ್ರವಾದಿ(ಸ) ನನ್ನ ಇಂಗಿತವನ್ನು ಅರಿತು ಮುಂದೆ ಸಾಗಿಬಿಟ್ಟರು." (ಬುಖಾರಿ)

## ವ್ಯಾಪಾರ

ಕೀಲ(ರ) ಎಂಬ ಸಹಾಬಿ ಮಹಿಳೆಯೊಬ್ಬಳು ತನ್ನನ್ನು ಓರ್ವ ವ್ಯಾಪಾರಿಯ ರೂಪದಲ್ಲಿ ಪ್ರವಾದಿ(ಸ) ಅವರ ಮುಂದೆ ಪರಿಚಯಪಡಿಸಿ ಅವರಲ್ಲಿ ಕ್ರಯ–ವಿಕ್ರಯದ ಬಗ್ಗೆ ಕೆಲವು ವಿಷಯಗಳನ್ನು ವಿಚಾರಿಸಿದರು. (ತಬಕಾತ್ ಇಬ್ನು ಸಅದ್)

ಹ. ಉಮರ್(ರ) ಅವರ ಖಿಲಾಫತ್ ಕಾಲದಲ್ಲಿ ಅಸ್ಮಾ ಬಿನ್ತಿ ಮಖ್ರಮ(ರ) ಅವರಿಗೆ ಯಮನ್‌ನಿಂದ ಅವರ ಪುತ್ರ ಅಬ್ದುಲ್ಲಾ ಬಿನ್ ಅಬೀ ರಬೀಅ(ರ) ಅತ್ತರ್ (ಸುಗಂಧ ದ್ರವ್ಯ) ರವಾನಿಸುತ್ತಿದ್ದರು. ಅವರು ಅದರ ವ್ಯಾಪಾರ ಮಾಡುತ್ತಿದ್ದರು.

## ಕೈಗಾರಿಕೆ

ಹ. ಅಬ್ದುಲ್ಲಾ ಬಿನ್ ಮಸ್‌ಊದ್(ರ) ಅವರ ಪತ್ನಿ ಕೈಕಸುಬನ್ನು ತಿಳಿದವರಾಗಿದ್ದರು. ಅದರಿಂದ ಅವರು ತಮ್ಮ ಪತಿ ಮತ್ತು ಮಕ್ಕಳ ಖರ್ಚು–ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದರು. ಅವರು ಒಂದು ದಿನ ಪ್ರವಾದಿ(ಸ) ಅವರ ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ನಿವೇದಿಸಿಕೊಂಡರು, "ನಾನು ಓರ್ವ ಕೈಕಸುಬು ಬಲ್ಲವಳಾಗಿರುವೆನು. ವಸ್ತುಗಳನ್ನು ತಯಾರಿಸಿ ಮಾರುತ್ತೇನೆ. ಆದರೆ ನನ್ನ ಪತಿ ಮತ್ತು ಮಕ್ಕಳಿಗೆ (ಆದಾಯ ಮೂಲ) ಏನೂ ಇಲ್ಲ. ನಾನು ಅವರಿಗಾಗಿ ಖರ್ಚು ಮಾಡ ಬಹುದೇ?" ಆಗ ಪ್ರವಾದಿ(ಸ) ಹೇಳಿದರು, "ಹೌದು. ಅದಕ್ಕೆ ನಿಮಗೆ ಪುಣ್ಯ ಸಿಗುವುದು."

(ತಬಕಾತ್ ಇಬ್ನು ಸಅದ್)

ಇಂತಹುದೇ ಇನ್ನೊಂದು ಘಟನೆಯನ್ನು ಇಬ್ನು ಸಅದ್(ರ) ಅವರು ವಿವರಿಸಿರುವರು. ಖೌಲ ಬಿನ್ತಿ ಸಅಲಬ(ರ) ಅವರಿಗೆ ಅವರ ಪತಿ ಒಮ್ಮೆ ಅನೈಚ್ಛಿಕವಾಗಿ, "ನೀನು ನನ್ನ ತಾಯಿಗೆ ಸಮಾನ" ಎಂದು ಹೇಳಿಬಿಟ್ಟರು. ಆ

ಬಳಿಕ ಇಬ್ಬರೂ ಅದರ ವಿಧಿಯೇನೆಂದು ತಿಳಿಯಲು ಪ್ರವಾದಿ(ಸ) ಅವರ ಬಳಿ ಹೋದರು. ಆ ತನಕ ಆ ವಿಷಯದಲ್ಲಿ ಯಾವುದೇ ವಿಧಿ ಅವತೀರ್ಣಗೊಂಡಿ ಲಿಲ್ಲ. ಆದ್ದರಿಂದ ಅನುಮತಿ ದೊರೆಯುವ ತನಕ ನೀವು ನಿಮ್ಮ ಪತ್ನಿಯಿಂದ ದೂ ವಿರಿ ಎಂದು ಪ್ರವಾದಿ(ಸ) ಪತಿಗೆ ಆದೇಶಿಸಿದರು. ಇದನ್ನು ಕೇಳಿ ಪತ್ನಿಯು ಹೀ ಅರಿಕೆ ಮಾಡಿಕೊಂಡರು, "ಪ್ರವಾದಿವರ್ಯರೇ! ಅವರ ಬಳಿ ಖರ್ಚಿಗೆ ಏನೂ ಇಲ್ಲ ಅವರ ಖರ್ಚನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. (ಹಾಗಿರುವಾಗ ಅವರು ನನ್ನಿಂ ಬೇರ್ಪಟ್ಟರೆ ಜೀವನ ಸಾಗಿಸುವುದಾದರೂ ಹೇಗೆ?)" **(ತಬಕಾತ್ ಇಬ್ನು ಸಅದ್**

## ಹಕ್ಕುಗಳ ಸಂರಕ್ಷಣೆ

ಇಸ್ಲಾಮಿ ಸಮಾಜವು ಸ್ತ್ರೀಗೆ ಗೊತ್ತುಪಡಿಸಿರುವ ಹಕ್ಕು ಮತ್ತು ಸೌಲಭ ಗಳಿಂದ ಆಕೆ ಪ್ರಯೋಜನ ಪಡೆದಿದ್ದಾಳೆ. ಆಕೆಗೆ ತನ್ನ ಹಕ್ಕುಗಳನ್ನು ಕಸಿಯ ಲಾಗುತ್ತಿದೆ ಅಥವಾ ತನ್ನ ಮೇಲೆ ಅನ್ಯಾಯವಾಗುತ್ತಿದೆ ಎಂದು ಕಂಡು ಬಂದ ಆಕೆ ತನ್ನ ಹಕ್ಕುಗಳ ಸಂರಕ್ಷಣೆಗಾಗಿ ಹೋರಾಟವನ್ನು ನಡೆಸಿದ್ದಾಳೆ. ಇಸ್ಲಾಮಿ ಕಾನೂನು ಇಂತಹ ಎಲ್ಲ ಸಂದರ್ಭಗಳಲ್ಲಿ ಆಕೆಯ ಪಕ್ಷ ವಹಿಸಿದೆ.

ಒಬ್ಬನು ತನ್ನ ಮಗಳನ್ನು ಓರ್ವ ಶ್ರೀಮಂತ ವ್ಯಕ್ತಿಗೆ ಮದುವೆ ಮಾಡಿಸಿದನು ಆದರೆ ಹುಡುಗಿಯು ಅವನನ್ನು ಮೆಚ್ಚುತ್ತಿರಲಿಲ್ಲ. ಆಕೆ ಪ್ರವಾದಿ(ಸ) ಅವರಲ್ಲಿ ಈ ರೀತಿ ನಿವೇದಿಸಿಕೊಂಡಳು, "ನನ್ನ ತಂದೆಯು ನನ್ನನ್ನು ತನ್ನ ಓರ್ವ ಶ್ರೀಮಂ ಸೋದರ ಪುತ್ರನೊಂದಿಗೆ ಮದುವೆ ಮಾಡಿಸಿರುವರು. ತನ್ಮೂಲಕ ನನ್ನನ್ನು ವಿವಾಹ ಬಂಧನದಲ್ಲಿ ಸಿಲುಕಿಸಿ ತನ್ನ ಐಷಾರಾಮದ ವ್ಯವಸ್ಥೆ ಮಾಡಿರುವರು." ಆ ಪ್ರವಾದಿ(ಸ) ಹೇಳಿದರು, "ನಿನಗೆ ಈ ವಿವಾಹ ಇಷ್ಟವಿಲ್ಲದಿದ್ದರೆ ನೀನು ಸ್ವತಂ ಳಾಗಿರುವಿ." ಆಗ ಆಕೆ ಹೇಳಿದಳು, "ನಾನು ನನ್ನ ತಂದೆಯ ಕ್ರಮವನು ಅನುಮೋದಿಸುತ್ತೇನೆ. ಆದರೆ ಮಹಿಳೆಯರನ್ನು ಅವರ ಇಷ್ಟದ ವಿರುದ್ಧ ವಿವಾಹ ಮಾಡಿಸಿಕೊಡುವ ಹಕ್ಕು ತಂದೆಯಂದಿರಿಗಿಲ್ಲ ಎಂಬುದು ಅವರಿಗೆ ತಿಳಿಯ ಎಂಬುದೇ ನನ್ನ ಬಯಕೆಯಾಗಿದೆ." **(ಮುಸ್ನದ್ ಅಹ್ಮದ್)**

ಇದು ವಾಸ್ತವದಲ್ಲಿ ತಂದೆಯ ಅತಿರೇಕದ ವಿರುದ್ಧ ಓರ್ವ ಸ್ತ್ರೀಯ ಯಶ ಪ್ರತಿಭಟನೆಯಾಗಿತ್ತು.

ಬುರೈದಃ ಓರ್ವ ದಾಸಿಯಾಗಿದ್ದರು. ಅವರ ವಿವಾಹವು ಮುಗೀಸ್ ಎಂ ಓರ್ವ ಗುಲಾಮನೊಂದಿಗಾಗಿತ್ತು. ಕೆಲವು ಕಾಲದ ಬಳಿಕ ಬುರೈದಃ ಸ್ವತಂತ್ರಳಾದಳು ಆಗ ಅವರು ಮುಗೀಸ್‌ರ ವಿವಾಹ ಬಂಧನದಲ್ಲಿರಲು ನಿರಾಕರಿಸಿದರು. ಏಕೆಂದ ಶರೀಅತ್ ನಿಯಮದಂತೆ ಸ್ವತಂತ್ರ ಮಹಿಳೆ ಗುಲಾಮ ಪುರುಷನ ವಿವಾಹ ಬಂಧ ದಲ್ಲಿರಬೇಕಾಗಿಲ್ಲ. ಆದರೆ ಮುಗೀಸ್‌ರಿಗೆ ಬುರೈದಃರೊಂದಿಗೆ ಅಪಾರ ಪ್ರೇಮವಿತ್ತು

ಬುರೈದಃರ ಈ ತೀರ್ಮಾನದ ಬಳಿಕ ಅವರು ಅಳತೊಡಗಿದರು. ಬುರೈದಃರ ಹಿಂದೆ ಹಿಂದೆಯೇ ಓಡ ತೊಡಗಿದರು. ಈ ದೃಶ್ಯವನ್ನು ಕಂಡು ಪ್ರವಾದಿ(ಸ) ಅವರಿಗೆ ಕನಿಕರ ಬಂತು, "ಬುರೈದಃ ಅಲ್ಲಾಹನನ್ನು ಭಯಪಡು. ಆತ ನಿನ್ನೆಯ ತನಕ ನಿನ್ನ ಪತಿಯಾಗಿದ್ದ. ಅವನಿಂದ ನಿನಗೆ ಮಕ್ಕಳೂ ಆಗಿದ್ದಾರೆ" ಎಂದರು. ಬುರೈದಃ ಕೇಳಿದರು, "ತಾವು ನನಗೆ ಆತನ ಮಡದಿಯಾಗಿರುವಂತೆ ಆಜ್ಞಾಪಿಸುತ್ತಿರುವಿರಾ?" ಆಗ ಪ್ರವಾದಿ(ಸ) ಹೇಳಿದರು, "ಅಲ್ಲ ನಾನು ನಿಮಗೆ ಸಲಹೆ ನೀಡುತ್ತಿರುವೆನು." ಆಗ ಅವರು ಹೇಳಿದರು, "ಹಾಗಾದರೆ, ನನಗೆ ಅವನ ಅಗತ್ಯವಿಲ್ಲ." (ಬುಖಾರಿ)

ಯೋಚಿಸಿ ನೋಡಿ. ಓರ್ವ ದಾಸಿಗೂ ಪ್ರವಾದಿವರ್ಯರ(ಸ) ಆಜ್ಞೆ ಮತ್ತು ಸಲಹೆಯ ವ್ಯತ್ಯಾಸ ಚೆನ್ನಾಗಿ ತಿಳಿದಿತ್ತು. ಮಾತ್ರವಲ್ಲ ತಾನು ತನ್ನ ಹಕ್ಕಿಗಾಗಿ ಮಾಡುವ ನ್ಯಾಯ ಸಮ್ಮತ ಹೋರಾಟವನ್ನು ಇಸ್ಲಾಮೀ ಕಾನೂನು ವಿಫಲ ಗೊಳಿಸಲಾರದು ಎಂಬ ವಿಶ್ವಾಸವೂ ಅವರಲ್ಲಿತ್ತು.

ಪ್ರವಾದಿವರ್ಯರ(ಸ) ಕಾಲದಲ್ಲಿ ಮಹಿಳೆಯರು ನಮಾಝ್‌ಗಾಗಿ ಮಸೀದಿಗೆ ಬರುತ್ತಿದ್ದರು. ಆದರೆ ಹ. ಉಮರ್(ರ) ಅವರಿಗೆ ಕಾರಣಾಂತರದಿಂದ ಅವರು ಮನೆಯಿಂದ ಹೊರಬರುವುದು ಸರಿ ಕಾಣಲಿಲ್ಲ. ಪ್ರವಾದಿವರ್ಯರು(ಸ) ಅದರ ಅನುಮತಿ ನೀಡಿದ್ದುದರಿಂದ ಅದನ್ನು ನಿಷೇಧಿಸಲೂ ಬಯಸಿರಲಿಲ್ಲ. ಸ್ವತಃ ಹ. ಉಮರ್(ರ) ಅವರ ಪತ್ನಿ ಆತಿಕಾ(ರ) ಪ್ರವಾದಿವರ್ಯರ(ಸ) ಅನುಮತಿಯ ಪ್ರಯೋಜನ ಪಡೆದು ಜಮಾಅತ್(ಸಾಮೂಹಿಕ ನಮಾಝ್)ನಲ್ಲಿ ಪಾಲ್ಗೊಳ್ಳುತ್ತಿದ್ದರು. ಒಮ್ಮೆ ಹ. ಉಮರ್(ರ) ಅವರಲ್ಲಿ ಹೀಗೆ ಹೇಳಿದರು, "ಅಲ್ಲಾಹನಾಣೆ! ನಿನ್ನ ಈ ಕೃತ್ಯವು ನನಗೆ ಇಷ್ಟವಿಲ್ಲವೆಂಬುದು ನಿನಗೆ ತಿಳಿದೇ ಇದೆ." ಆಗ ಅವರು ಹೇಳಿದರು, 'ಅಲ್ಲಾಹನಾಣೆ! ನೀವು ನನ್ನನ್ನು ತಡೆಯುವ ತನಕ ನಾನು ಹೋಗುವುದನ್ನು ನಿಲ್ಲಿಸಲಾರೆನು." ಅವರು ಹ. ಉಮರ್(ರ) ಅವರ ಜೀವನದಾದ್ಯಂತ ತಮ್ಮ ಈ ಕ್ರಮವನ್ನು ತೊರೆಯಲಿಲ್ಲ. ಮಸೀದಿಯಲ್ಲಿ ಹ. ಉಮರ್(ರ) ಅವರ ಮೇಲೆ ಮಾರಣಾಂತಿಕ ಹಲ್ಲೆಯಾದಾಗಲೂ ಅವರು ಅಲ್ಲಿದ್ದರು." (ಬುಖಾರಿ)

ಒಮ್ಮೆ ಪ್ರವಾದಿವರ್ಯರ(ಸ) ಮುಂದೆ ಅವರ ಪತ್ನಿಯರು ಉತ್ತಮ ಮತ್ತು ಸುಸ್ಥಿತಿಯ ಜೀವನಾಂಶದ ಬೇಡಿಕೆಯಿಟ್ಟರು. ಈ ರೀತಿಯ ಬೇಡಿಕೆಯು ಅವರ ಸ್ಥಾನಮಾನಕ್ಕೆ ನಿಲುಕುವಂತಹುದಾಗಿರಲಿಲ್ಲ. ಪ್ರವಾದಿ(ಸ) ಅವರು ಅಳವಡಿಸಿದ್ದ ಜೀವನ ಕ್ರಮಕ್ಕೂ ಅದು ವಿರುದ್ಧವಾಗಿತ್ತು. ಆದ್ದರಿಂದ ಪ್ರವಾದಿ(ಸ) ಅವರಿಗೆ ದೊಡ್ಡ ಆಘಾತವಾಯಿತು. ಪ್ರವಾದಿ(ಸ) ಒಂದು ತಿಂಗಳ ಮಟ್ಟಿಗೆ ತಮ್ಮ ಪತ್ನಿಯರಿಂದ ಬೇರ್ಪಟ್ಟಿರುವ ತೀರ್ಮಾನ ಮಾಡಿದರು. ಈ ವಿಷಯ ಹ. ಅಬೂಬಕರ್(ರ) ಮತ್ತು ಹ. ಉಮರ್(ರ) ಅವರಿಗೆ ತಿಳಿದಾಗ ಅವರು ಅತ್ಯಂತ ಕಳವಳಗೊಂಡು ತಮ್ಮ ಪುತ್ರಿಯರಾದ ಹ. ಆಯಿಷಾ ಮತ್ತು ಹ. ಹಫ್ಸಾ(ರ) ಅವರಿಗೆ ಎಲ್ಲ

ರೀತಿಯಲ್ಲಿ ಸಮಜಾಯಿಷಿದರು. ನಿಮ್ಮ ಈ ಬೇಡಿಕೆ ಸರಿಯಲ್ಲವೆಂದು ಅವರಿಗ ಮನಗಾಣಿಸಿದರು. ಅನಂತರ ಇತರ ಪ್ರವಾದಿ ಪತ್ನಿಯರ ಬಳಿಗೆ ಹೋಗಿ ಅವರಿಗೂ ಸಮಜಾಯಿಸ ತೊಡಗಿದರು. ಹ. ಉಮ್ಮು ಸಲಮ(ರ) ಅವರ ಬಳಿ ತಲುಪಿದಾಗ ಅವರು ಹೀಗೆ ಹೇಳಿದರು, "ನಿಮಗೆ ಇಲ್ಲೇನು ಕೆಲಸ? ನಮ್ಮ ಸ್ಥಿತಿ ಪ್ರವಾದಿವರ್ಯರಿಗೆ(ಸ) ಚೆನ್ನಾಗಿ ತಿಳಿದಿದೆ. ಪ್ರವಾದಿ(ಸ) ನಮ್ಮನ್ನು ಅದರಿಂದ ತಡೆಯಬಯಸಿದ್ದರೆ ತಡೆಯುತ್ತಿದ್ದರು. ನಾವು ಪ್ರವಾದಿವರ್ಯರ(ಸ) ಮುಂದೆ ನಮ ಬೇಡಿಕೆಗಳನ್ನಿಡದೆ ಇನ್ನಾರ ಮುಂದೆ ಇಡಬೇಕು. ನಿಮ್ಮ ಮತ್ತು ನಿಮ್ಮ ಪತ್ನಿಯರ ವಿಷಯದಲ್ಲಿ ಯಾರಾದರೂ ಹೀಗೆ ಹಸ್ತಕ್ಷೇಪ ಮಾಡುತ್ತಾರೆಯೇ? ನೀವು ಇಲ್ಲಿಂದ ಹೊರಟು ಹೋಗಿ. ನಾವು ನಿಮಗೆ ಈ ವಿಷಯದಲ್ಲಿ ತೊಂದರೆ ಕೊಡಬಯಸುವುದಿಲ್ಲ.'

**(ತಬಕಾತ್ ಇಬ್ನು ಸಅದ್**

ಪತಿ-ಪತ್ನಿಯರ ವಿಷಯದಲ್ಲಿ ಎಷ್ಟೇ ದೊಡ್ಡ ವ್ಯಕ್ತಿಯಾಗಿದ್ದರೂ ಹಸ್ತಕ್ಷೇಪ ನಡೆಸುವ ಹಕ್ಕನ್ನು ಹೊಂದಿಲ್ಲ ಎಂಬುದನ್ನು ಹ. ಉಮ್ಮು ಸಲಮ(ರ) ತೋರಿಸಿ ಕೊಟ್ಟಿದ್ದಾರೆ. ಜತೆಗೆ ತನ್ನ ಪತಿಯಿಂದ ನ್ಯಾಯಸಮ್ಮತ ಸುಖ-ಸಂತೋಷವನು ಬೇಡುವುದು ಪ್ರತಿಯೊಬ್ಬ ಮಹಿಳೆಯ ಹಕ್ಕಾಗಿದೆಯೆಂದೂ ಅವರು ಸ್ಪಷ್ಟಪಡಿಸಿರುವರು

❖ ❖ ❖

# ಇಸ್ಲಾಮೀ ಸಮಾಜದ ನಿರ್ಮಾಣದಲ್ಲಿ ಸ್ತ್ರೀಯರ ಪಾತ್ರ

ಮುಸ್ಲಿಮ್ ಮಹಿಳೆಯರು ತಮ್ಮ ಧರ್ಮಕ್ಕಾಗಿ ದೊಡ್ಡದೊಡ್ಡ ತ್ಯಾಗಗಳನ್ನು ೕಡಿದ್ದರೆಂಬುದು ಒಂದು ಐತಿಹಾಸಿಕ ಸತ್ಯವಾಗಿದೆ. ಅದಕ್ಕಾಗಿ ಅವರು ಅತ್ಯಂತ ಎಕಟ ಸಂಬಂಧಗಳನ್ನೂ ಬಲಿನೀಡಿದರು. ಕುಟುಂಬ ಮತ್ತು ಗೋತ್ರದೊಂದಿಗೆ ಸಗಳಕ್ಕಿಳಿದರು. ಸಂಕಷ್ಟಗಳನ್ನು ಸಹಿಸಿದರು. ಮನೆಮಾರುಗಳನ್ನು ತೊರೆದರು. ರ್ಮದ ಹಿತಾಸಕ್ತಿಗೆ ವಿರುದ್ಧವಾದ ಎಲ್ಲ ಹಿತಾಸಕ್ತಿಗಳನ್ನು ತ್ಯಜಿಸಿದರು. ತಮ್ಮ ಪ್ರಭುವಿನೊಂದಿಗೆ ಮಾಡಿಕೊಂಡ ನಿಷ್ಠೆಯ ಕರಾರನ್ನು ಕೊನೆಯುಸಿರಿನ ತನಕ ಾಲಿಸಿದರು.

## ಮುಸ್ಲಿಮ್ ಸ್ತ್ರೀಯರ ತ್ಯಾಗಗಳು

ಮಕ್ಕಾ ಜೀವನದ ಪ್ರಾರಂಭ ಘಟ್ಟದಲ್ಲಿ ಸತ್ಯವಿಶ್ವಾಸ ಸ್ವೀಕರಿಸಿದ ಸೌಭಾಗ್ಯವಂತ ಮತ್ತು ಧೈರ್ಯಶಾಲಿ ಕುಟುಂಬಗಳ ಪೈಕಿ ಒಂದು ಅಮ್ಮಾರ್ ಬಿನ್ ಯಾಸಿರ್(ರ) ಅವರ ಕುಟುಂಬವಾಗಿತ್ತು. ಅವರ ತಾಯಿ ಸುಮಯ್ಯ(ರ) ಅಬೂ ಹುದೈಫಾ ಬಿನ್ ಮುಗೀರಾರ ದಾಸಿಯಾಗಿದ್ದರು. ಅವರನ್ನು ಇಸ್ಲಾಮ್ ಧರ್ಮ ತೊರೆಯುವಂತೆ ಮಾಡಲು ಅವರಿಗೆ ಎಲ್ಲ ರೀತಿಯ ಹಿಂಸೆಗಳನ್ನು ನೀಡಲಾಗುತ್ತಿತ್ತು. ಕೊನೆಗೆ ಸತ್ಯಧರ್ಮ ಸ್ವೀಕರಿಸಿದ ಅಪರಾಧಕ್ಕಾಗಿ ಅವರನ್ನು ಅಬೂಜಹಲ್ ಭರ್ಚಿಯಿಂದ ಇರಿದು ಕೊಲೆ ಮಾಡಿದ. ಆದರೆ ಅವರೆಂದೂ ವಿಚಲಿತರಾಗಲಿಲ್ಲ. ಅವರು ಪ್ರವಾದಿಯವರ(ಸ) ಸಂದೇಶವನ್ನು ಸ್ವೀಕರಿಸಿದ ಕಾರಣಕ್ಕಾಗಿ ಹುತಾತ್ಮರಾದ ಪ್ರಥಮ ಮಹಿಳೆಯಾಗಿದ್ದರು.

ಉಮರ್(ರ) ಅವರ ಸೋದರಿ ಫಾತಿಮಾ ಬಿನ್ತಿ ಖತ್ತಾಬ್ ಸತ್ಯವಿಶ್ವಾಸ ಸ್ವೀಕರಿಸಿದಾಗ ಅವರನ್ನು ಹ. ಉಮರ್ ಚೆನ್ನಾಗಿ ಥಳಿಸಿದರು. ಅವರ ಮೈಯೆಲ್ಲಾ ರಕ್ತಮಯವಾಯಿತು. ಆದರೂ ಅವರು ತಮ್ಮ ಪ್ರಭುವಿನೊಂದಿಗೆ ಮಾಡಿಕೊಂಡಿದ್ದ ನಿಷ್ಠೆಯ ಕರಾರಿಗೆ ಯಾವುದೇ ಚ್ಯುತಿ ಬರಲು ಬಿಡಲಿಲ್ಲ. ಉಮರ್ ಅವರ ದಬ್ಬಾಳಿಕೆಗೆ ಉತ್ತರವಾಗಿ ಫಾತಿಮಾ(ರ) ಹೀಗೆ ಹೇಳಿದರು, "ಸಹೋದರಾ! ನಾನಂತೂ ಸತ್ಯವಿಶ್ವಾಸ ಸ್ವೀಕರಿಸಿದ್ದೇನೆ. ಇನ್ನು ನಿಮಗೆ ಇಷ್ಟ ಬಂದಂತೆ ಮಾಡಿರಿ.

ನಾನು ಖಂಡಿತ ಈ ಧರ್ಮವನ್ನು ತೊರೆಯಲಾರೆ."

ಪವಿತ್ರ ಕುರ್‌ಆನಿನ ಭಾಗವನ್ನು ಉಮರ್ ಅವರು ಕೈಗೆತ್ತಿಕೊಳ್ಳಬಯಸಿದಾ ಫಾತಿಮಾ(ರ) ಹೇಳಿದರು, "ಅಣ್ಣಾ! ಅದನ್ನು ಇಟ್ಟು ಬಿಡಿರಿ. ನೀವು ಶುದ್ಧರಾಗೀ ಈ ಗ್ರಂಥವನ್ನು ಶುದ್ಧರಲ್ಲದವರು ಮುಟ್ಟಬಾರದು."

ಅಬೂಸುಫ್ಯಾನ್ ಸತ್ಯವಿಶ್ವಾಸ ಸ್ವೀಕರಿಸುವುದಕ್ಕೆ ಮುಂಚಿನ ಘಟನೆ. ಒ ಅವರು ಮದೀನಾದಲ್ಲಿ ಪ್ರವಾದಿವರ್ಯರನ್ನು(ಸ) ಭೇಟಿಯಾಗಲು ಬಂದಿದ್ದರ ಪ್ರವಾದಿ ಪತ್ನಿಯಾದ ತನ್ನ ಪುತ್ರಿ ಹ. ಉಮ್ಮು ಹಬೀಬಾರನ್ನು(ರ) ಕಾಣಲು ಅವ ಮನೆಗೆ ಹೋದರು. ಮನೆಯಲ್ಲಿದ್ದ ಪ್ರವಾದಿವರ್ಯರ(ಸ) ಹಾಸಿಗೆಯ ಮೇ ಅವರು ಕುಳಿತುಕೊಳ್ಳಬಯಸಿದಾಗ ಮಗಳು ಕೂಡಲೇ ಅದನ್ನು ಮಡಚಿದರ ತಂದೆಗೆ ಇದು ಬಹಳ ಆಶ್ಚರ್ಯ ತಂದಿತು. "ನೀನು ಅದನ್ನು ನನ್ನ ಘನತೆ ತಕ್ಕುದಲ್ಲವೆಂದು ಮಡಚಿಟ್ಟೆಯಾ ಅಥವಾ ನಾನು ಅದರಲ್ಲಿ ಕುಳಿತುಕೊಳ್ಳ ಯೋಗ್ಯನಲ್ಲವೆಂದು ಬಗೆದೆಯಾ?" ಎಂದು ಕೇಳಿದರು. ಮಗಳು ಹೇಳಿದಳ "ಇದು ಅಲ್ಲಾಹನ ಸಂದೇಶವಾಹಕರ ಹಾಸಿಗೆ. ನೀವು ಬಹುದೇವಾರಾಧಕರು ಅಪವಿತ್ರರೂ ಆಗಿರುವಿರಿ. ಈ ಪವಿತ್ರ ಹಾಸಿಗೆಯಲ್ಲಿ ನಿಮ್ಮನ್ನು ಕುಳ್ಳಿರಿಸಿ ಅದನ ನಾನು ಅಪವಿತ್ರ ಮಾಡಬಯಸುವುದಿಲ್ಲ."

ಅಲ್ಲಾಹನ ಶತ್ರುಗಳು ಮತ್ತು ಯುದ್ಧನಿರತರಾದವರೊಡನೆ ಸತ್ಯವಿಶ್ವಾಸಿಗ ಯಾವುದೇ ರೀತಿಯ ಸಂಬಂಧವಿಟ್ಟುಕೊಳ್ಳಬಾರದೆಂದು ಪವಿತ್ರ ಕುರ್‌ಆನ್ ಆದೇಶಿಸಿ ಒಮ್ಮೆ ಹ. ಅಸ್ಮಾ(ರ) ಅವರ ಬಹುದೇವವಿಶ್ವಾಸಿಯಾದ ತಾಯಿ ಕತೀಲಾ ಬಿ ಅಬ್ದುಲ್ ಉಝ್ಝಾ ಉಡುಗೊರೆಗಳೊಂದಿಗೆ ಮಕ್ಕಾದಿಂದ ಮದೀನಾದಲ್ಲಿರು ಅವರ ಮನೆಗೆ ಬಂದರು. ಮನೆಗೆ ಪ್ರವೇಶಿಸಲು ಅವರಿಗೆ ಅನುಮತಿ ಕೊಡುವುದ ಮುಂಚೆ ಪ್ರವಾದಿ(ಸ) ಅವರಲ್ಲಿ ವಿಚಾರಿಸಲು ಜನರನ್ನು ಕಳುಹಿ, "ನಾನು ಅವರನ ಮನೆಯಲ್ಲಿಟ್ಟುಕೊಳ್ಳಬಹುದೆ? ಅವರು ನನ್ನಿಂದ ಸಹಾಯ–ಸಹಕಾರಗಳನ ಬಯಸುತ್ತಾರೆ. ಅವರೊಂದಿಗೆ ಸಹಕಾರ ಮತ್ತು ಸದ್ವರ್ತನೆ ಮಾಡುವುದ ಧರ್ಮಸಮ್ಮತವೇ?" ಎಂದು ವಿಚಾರಿಸಿದರು. ಪ್ರವಾದಿ(ಸ) ಹೌದೆಂದು ಉತ್ತರಿಸಿದರ

ರುಕೈಕಾ ಬಿನ್ತಿ ಅಬೀ ಸೈಗೀ(ರ) ಮಕ್ಕಾದ ಅತ್ಯಂತ ಸಂದಿಗ್ಧ ಘಟ್ಟದ ಇಸ್ಲಾಮ್ ಸ್ವೀಕರಿಸಿದ್ದರು. ಪ್ರವಾದಿ(ಸ) ಅವರನ್ನು ಕೊಲೆ ಮಾಡುವ ಸಂಚ ಹೂಡಲ್ಪಟ್ಟಾಗ ಅವರೇ ಪ್ರವಾದಿವರ್ಯರಿಗೆ(ಸ) ಅದರ ಮುನ್ಸೂಚನೆ ನೀಡಿದ್ದರ ಆಗ ಪ್ರವಾದಿ(ಸ) ರಾತ್ರಿಯ ವೇಳೆಯೇ ಮಕ್ಕಾದಿಂದ ಮದೀನಾದ ಕಡೆಗೆ ವಲ ಹೋಗುವ ನಿರ್ಧಾರ ಮಾಡಿದರು.

ಅವರು ಸತ್ಯವಿಶ್ವಾಸ ಸ್ವೀಕಾರ ಮಾಡಿದ್ದರೂ ಅವರ ಮಗ ಮಖ್ರಮ

ಸತ್ಯನಿಷೇಧದ ಸ್ಥಿತಿಯಲ್ಲೇ ಇದ್ದರು. ತನ್ನ ಮಗನಾಗಿದ್ದರೂ ಆತನ ಅಧಾರ್ಮಿಕ ನಿಲುವನ್ನು ಅವರು ಖಂಡಿಸುತ್ತಲೇ ಇದ್ದರು.

## ಮಹಿಳೆ ಮತ್ತು ಸಾಮಾಜಿಕ ಹೊಣೆಗಾರಿಕೆಗಳು

ಲೋಕದಲ್ಲಿ ಎಲ್ಲ ಕೆಲಸಗಳೂ ಒಂದೇ ರೀತಿ ಇರುವುದಿಲ್ಲ. ಸಣ್ಣ, ದೊಡ್ಡ, ಪ್ರಮುಖ ಮತ್ತು ಅಪ್ರಾಮುಖ್ಯವಾದ ಎಲ್ಲ ರೀತಿಯ ಕೆಲಸಗಳೂ ಇರುತ್ತವೆ. ಒಂದು ಕೆಲಸವು ಯಾವ ರೀತಿಯದ್ದಾಗಿರುತ್ತದೋ ಅದನ್ನು ಮಾಡಲು ಅದೇ ರೀತಿಯ ಸಾಮರ್ಥ್ಯಗಳು, ಬೇಕಾಗುತ್ತವೆ. ಪ್ರತಿಯೊಬ್ಬನಲ್ಲೂ ಎಲ್ಲ ರೀತಿಯ ಕೆಲಸಗಳನ್ನು ಮಾಡುವ ಸಾಮರ್ಥ್ಯ ಇರುವುದಿಲ್ಲ ಎಂಬುದು ಒಂದು ವಾಸ್ತವಿಕತೆಯಾಗಿದೆ. ಒಬ್ಬನು ಒಂದು ಕೆಲಸಕ್ಕೆ ಯೋಗ್ಯನಾಗಿದ್ದರೆ ಇನ್ನೊಂದು ಕೆಲಸಕ್ಕೆ ಅಯೋಗ್ಯನಾಗಿರ ಬಹುದು. ಒಬ್ಬನಲ್ಲಿ ವೈಜ್ಞಾನಿಕ ಸಂಶೋಧನೆಗಳ ಅರ್ಹತೆ ಇದ್ದರೆ ಇನ್ನೊಬ್ಬನಲ್ಲಿ ಸೈನಿಕ ಸಂಘಟನೆಯ ನೈಪುಣ್ಯವಿರುತ್ತದೆ. ಒಬ್ಬನು ಕಲಾವಿದನಾಗುವ ಸಾಮರ್ಥ್ಯ ಹೊಂದಿದ್ದರೆ ಇನ್ನೊಬ್ಬನು ಭಾಷಣಕಾರನಾಗುವ ಸಾಮರ್ಥ್ಯ ಹೊಂದಿರುತ್ತಾನೆ. ಒಬ್ಬನ ದೇಹ ರಚನೆ ಮತ್ತು ಶಕ್ತಿಯು ಕಠಿಣ ಶ್ರಮವನ್ನು ಸಹಿಸಬಲ್ಲುದಾದರೆ ಇನ್ನೊಬ್ಬನು ಅದಕ್ಕೆ ತೀರಾ ಸಮರ್ಥನಾಗಿರುವುದಿಲ್ಲ. ಸಾಮರ್ಥ್ಯಗಳ ಈ ವ್ಯತ್ಯಾಸವು ವ್ಯಕ್ತಿ–ವ್ಯಕ್ತಿಯಲ್ಲಿ ಇರುತ್ತದಾದರೂ ಮನುಷ್ಯರ ಎರಡು ವರ್ಗಗಳಲ್ಲಿ ಈ ಭಿನ್ನತೆಯು ಅತ್ಯಂತ ಸ್ಪಷ್ಟ ಮತ್ತು ಗೋಚರವಾಗಿರುತ್ತದೆ.

## ಮಹಿಳೆಯ ದೌರ್ಬಲ್ಯ

ಇಸ್ಲಾಮಿನ ದೃಷ್ಟಿಯಲ್ಲಿ ಮಹಿಳೆ ಮತ್ತು ಪುರುಷರಲ್ಲಿರುವ ಈ ವ್ಯತ್ಯಾಸವು ವೈಚಾರಿಕವೂ ಕ್ರಿಯಾತ್ಮಕವೂ ಆಗಿದೆ. ಆದ್ದರಿಂದಲೇ ಪ್ರವಾದಿ(ಸ) ಮಹಿಳೆಯರ ಕುರಿತು ಈ ರೀತಿ ಹೇಳಿದ್ದಾರೆ, "ಅವರು ಬುದ್ಧಿ ಮತ್ತು ಧರ್ಮ ಎರಡೂ ವಿಧದಲ್ಲಿ ದುರ್ಬಲರಾಗಿದ್ದಾರೆ." (ಬುಖಾರಿ)

ಇಲ್ಲಿ ಬುದ್ಧಿಯೆಂದರೆ ವಿಚಾರಶಕ್ತಿ ಮತ್ತು ಧರ್ಮ ಎಂದರೆ ದೈಹಿಕ ಸಾಮರ್ಥ್ಯವಾಗಿದೆ. ಅರ್ಥಾತ್, ಈ ಎರಡೂ ದೃಷ್ಟಿಯಲ್ಲಿ ಆಕೆ ಪುರುಷನಿಗಿಂತ ದುರ್ಬಲಳಾಗಿದ್ದಾಳೆ. ಮಹಿಳೆಯರ ಈ ದೌರ್ಬಲ್ಯಗಳನ್ನು ಇಸ್ಲಾಮ್ ಮನ್ನಿಸಿರುವುದು ಮಾತ್ರ ವಲ್ಲ ಜೀವನದ ಎಲ್ಲ ರಂಗಗಳಲ್ಲೂ ಅದನ್ನು ಪರಿಗಣಿಸಿದೆ:

1) ಮುಟ್ಟಾದ ದಿನಗಳಲ್ಲಿ ಆಕೆಯ ಬಾಹ್ಯ ನೈರ್ಮಲ್ಯವು ಕೊನೆಗೊಳ್ಳುತ್ತದೆ. ಜತೆಗೆ ಆಕೆಯ ದೈಹಿಕ ವ್ಯವಸ್ಥೆಯಲ್ಲೂ ಸಾಕಷ್ಟು ಏರುಪೇರಾಗುತ್ತದೆ. ಆ ವೇಳೆ ಆಕೆ ಹೆಚ್ಚಿನ ಗಮನ ಮತ್ತು ಶ್ರಮವನ್ನು ಬಯಸುವ ಯಾವುದೇ ಕಾರ್ಯಕ್ಕೆ ಸಮರ್ಥಳಾಗಿರುವುದಿಲ್ಲ. ಆದ್ದರಿಂದಲೇ ಆ ದಿನಗಳಲ್ಲಿ ನಮಾಝ್‌ನಂತಹ ಅತ್ಯಂತ ಮಹತ್ವಪೂರ್ಣ ಕರ್ತವ್ಯದಿಂದಲೂ ಆಕೆಯನ್ನು ಮುಕ್ತಗೊಳಿಸ ಲಾಗಿದೆ. ಪೂರ್ವೋಕ್ತ

ಪ್ರವಾದಿ ವಚನದಲ್ಲಿ ಆಕೆಯ 'ಧರ್ಮದ ದೌರ್ಬಲ್ಯ'ವನ್ನು ವ್ಯಾಖ್ಯಾನಿಸುತ್ತ ಪ್ರವಾದಿ(ಸ) ಈ ನೈಸರ್ಗಿಕ ದೌರ್ಬಲ್ಯದಿಂದಾಗಿ ಆಕೆಯ ಮೇಲೆ ಆ ದಿನಗಳಲ್ಲಿ ನಮಾಝ್ ಮತ್ತು ಉಪವಾಸ ವ್ರತದ ಭಾರವನ್ನೂ ಹೊರಿಸಲಾಗಿಲ್ಲ ಎಂದಿರುವರು

2) ಹೆರಿಗೆಯ ವೇಳೆ ಆಕೆ ಅದಕ್ಕಿಂತಲೂ ಕಠಿಣ ಪರಿಸ್ಥಿತಿಯನ್ನೆದುರಿಸುತ್ತಾಳೆ ಆ ಸಮಯದಲ್ಲಂತೂ ಆಕೆ ಜೀವನ್ಮರಣ ಹೋರಾಟದಲ್ಲಿ ನಿರತಳಾಗಿರುತ್ತಾಳೆ. ಈ ಸ್ಥಿತಿಯು ಕಳೆದು ಆಕೆ ಸಾಮಾನ್ಯ ಸ್ಥಿತಿಗೆ ಮರಳುವ ತನಕ ಆಕೆಯು ನಮಾಝು ಮಾಡಬಾರದೆಂದು ಇಸ್ಲಾಮ್ ಆದೇಶಿಸುತ್ತದೆ.

3) ಋತುಸ್ರಾವ ಮತ್ತು ಹೆರಿಗೆ ಸ್ರಾವದ ವೇಳೆ ಉಪವಾಸ ವ್ರತ ಕಡ್ಡಾಯವಾದರೆ ಆ ಕರ್ತವ್ಯವನ್ನು ಆಗ ನಿರ್ವಹಿಸಬಾರದು. ಬದಲಾಗಿ ಇತರ ದಿನ ಗಳಲ್ಲಿ ಅದನ್ನು ನಿರ್ವಹಿಸಿದರೆ ಸಾಕು. "ನಮಗೆ ಋತುಸ್ರಾವದ ದಿನಗಳ ಉಪವಾಸ ವ್ರತವನ್ನು ಮತ್ತೆ ನಿರ್ವಹಿಸಲು ಆದೇಶಿಸಲಾಗುತ್ತಿತ್ತು. ಆದರೆ ಆ ದಿನಗಳಲ್ಲಿ ಬಿಟ್ಟು ಹೋದ ನಮಾಝ್‌ಗಳನ್ನು ಮತ್ತೆ ನಿರ್ವಹಿಸಲು ಆದೇಶಿಸ ಲಾಗುತ್ತಿರಲಿಲ್ಲ" ಎಂದು ಹ. ಆಯಿಶಾ(ರ) ಹೇಳಿರುವರು." (ಮುಸ್ಲಿಮ್)

4) ಸರಿಸುಮಾರು ಗರ್ಭಧಾರಣೆ ಮತ್ತು ಮೊಲೆ ಹಾಲುಣಿಸುವ ದಿನಗಳಲ್ಲೂ ಆಕೆಯಲ್ಲಿ ದೌರ್ಬಲ್ಯ ಇರುತ್ತದೆ. ಈ ದಿನಗಳಲ್ಲಿ ಉಪವಾಸ ವ್ರತದಂತಹ ಕಠಿಣ ಆರಾಧನಾ ವಿಧಿಯನ್ನು ನೆರವೇರಿಸುವುದು ಆಕೆಗೆ ಬಹಳ ಕಷ್ಟವಾಗುತ್ತದೆ ಆದ್ದರಿಂದ ಈ ದಿನಗಳ ಉಪವಾಸ ವ್ರತವನ್ನು ಇತರ ದಿನಗಳಲ್ಲಿ ನಿರ್ವಹಿಸುವ ಅನುಮತಿಯನ್ನೂ ಆಕೆಗೆ ನೀಡಲಾಗಿದೆ, "ಅಲ್ಲಾಹನು ಪ್ರಯಾಣಿಕನ ಅರ್ಧ ನಮಾಝುನ್ನು ವಿನಾಯಿತಿಗೊಳಿಸಿರುವನು (ಆತ ನಾಲ್ಕು ರಕಅತ್‌ಗಳ ಸ್ಥಾನದಲ್ಲಿ ಎರಡು ರಕಅತ್‌ಗಳನ್ನು ನಿರ್ವಹಿಸಬಹುದು.) ಗರ್ಭಿಣಿ ಮತ್ತು ಹಾಲುಣಿಸುವವಳಿಗೆ ರಮಝಾನ್‌ನಲ್ಲಿ ಉಪವಾಸ ವ್ರತ ಆಚರಿಸುವುದು ಕಡ್ಡಾಯವಲ್ಲ (ಆಕೆ ಇತರ ತಿಂಗಳುಗಳಲ್ಲಿ ಅದನ್ನು ನಿರ್ವಹಿಸಬಹುದು.)" (ಇಬ್ನುಮಾಜಃ)

5) ದುರ್ಬಲರಿಗೆ ಜಿಹಾದ್‌ನ ಭಾರವಾದ ಹೊಣೆಯಿಂದಲೂ ವಿನಾಯಿತಿ ನೀಡಲಾಗಿದೆ. ಈ ಸಾಲಿನಲ್ಲಿ ವೃದ್ಧರು ಮತ್ತು ಮಕ್ಕಳ ಜತೆಗೆ ಸ್ತ್ರೀಯರೂ ಇದ್ದಾರೆ

ಅಬೂಹುರೈರಾ(ರ) ವರದಿ ಮಾಡಿರುವರು: ಪ್ರವಾದಿ(ಸ) ಹೇಳಿದ್ದಾರೆ "ಮುದುಕರು, ಮಕ್ಕಳು, ದುರ್ಬಲರು ಮತ್ತು ಮಹಿಳೆಯರಿಗೆ ಹಜ್ಜ್ ಮತ್ತು ಉಮ್ರಾ ಜಿಹಾದ್ (ಧರ್ಮಯುದ್ಧ) ಆಗಿದೆ." (ನಸಾಈ)

6) ಹಜ್ಜ್‌ಗೆ ಹೋದಾಗಲೂ ಹೆಜ್ಜೆಹೆಜ್ಜೆಗೂ ಆಕೆಯ ದೌರ್ಬಲ್ಯವನ್ನು ಪರಿಗಣಿಸಿ ಆಕೆಗೆ ವಿನಾಯಿತಿಗಳನ್ನು ನೀಡಲಾಗಿದೆ. ಉದಾ: ದುಲ್‌ಹಜ್ಜ್‌ನ 9ನೆಯ ತಾರೀಕಿನಂದು ಮುಝ್ದಲಿಫಾದಲ್ಲಿ ರಾತ್ರಿ ತಂಗಿ ಮಿನಾಗೆ ಹೊರಡಬೇಕು. ಆದರೆ

ವಾದಿ(ಸ) ಜನಸಂದಣಿಯಿಂದ ತೊಂದರೆಯಾಗದಂತೆ ಮಹಿಳೆಯರಿಗೆ ಮತ್ತು ಕ್ಕಳಿಗೆ ಬೆಳಿಗ್ಗೆಯೇ ಮಿನಾಗೆ ಹೊರಡುವ ಅನುಮತಿ ನೀಡಿದ್ದಾರೆ. ಹಾಗೆಯೇ ನರು ಮಿನಾಗೆ ತಲುಪುವ ಮೊದಲೇ ಜಮ್ರಾಗೆ ಕಲ್ಲು ಹೊಡೆಯುವ ವಿಧಿಯನ್ನು ರ್ಣಗೊಳಿಸುವ ಅನುಮತಿಯನ್ನೂ ಮಹಿಳೆಯರಿಗೆ ನೀಡಲಾಗಿದೆ." (ಬುಖಾರಿ)

## ಹಿಳೆಯ ಸಾಕ್ಷ್ಯ

ಇಸ್ಲಾಮಿನ ದೃಷ್ಟಿಯಲ್ಲಿ ಪುರುಷನು ಬೌದ್ಧಿಕವಾಗಿ ಸ್ತ್ರೀಗಿಂತ ಉನ್ನತನಾಗಿ ವನು. ಆದ್ದರಿಂದಲೇ ಅದು ಸ್ತ್ರೀಯ ಬುದ್ಧಿಗಿಂತ ಪುರುಷನ ಬುದ್ಧಿಶಕ್ತಿಯ ಮೇಲೆ ಚ್ಚು ಭರವಸೆ ಇಡುತ್ತದೆ. ಮಹಿಳೆಯ ಸಾಕ್ಷ್ಯದ ವಿಷಯವು ಇದನ್ನು ಸ್ಪಷ್ಟಪಡಿಸುತ್ತದೆ. ಕೆಂದರೆ ಈ ವಿಷಯವನ್ನು ಪ್ರವಾದಿ(ಸ) ಅವರು ಸ್ತ್ರೀಯರ ಬೌದ್ಧಿಕ ದೌರ್ಬಲ್ಯಕ್ಕೆ ರಾವೆಯ ರೂಪದಲ್ಲಿ ಮುಂದಿರಿಸಿರುವರು. "ಸ್ತ್ರೀಯ ಸಾಕ್ಷ್ಯವು ಪುರುಷನ ಸಾಕ್ಷ್ಯದ ರ್ಧಾಂಶವಾಗಿದೆ." (ಬುಖಾರಿ)

ಸಾಕ್ಷಿಯ ಕುರಿತು ಪವಿತ್ರ ಕುರ್‌ಆನಿನಲ್ಲಿ ಐದು ಕಡೆ ಆದೇಶಗಳು ಬಂದಿವೆ. ವುಗಳ ಪೈಕಿ ಕೇವಲ ಒಂದು ಕಡೆ ಸ್ತ್ರೀಯ ಸಾಕ್ಷ್ಯದ ಸ್ಥಾನಮಾನದ ಕುರಿತು ವರಿಸಲಾಗಿದೆ. ಹಣಕಾಸಿನ ವ್ಯವಹಾರದ ಕುರಿತು ವಿವರಿಸುತ್ತಾ ಅಲ್ಲಾಹ್ ಹೀಗೆ ಳುತ್ತಾನೆ, "ನಂತರ ನಿಮ್ಮ ಪುರುಷರ ಪೈಕಿ ಇಬ್ಬರನ್ನು ಸಾಕ್ಷಿಯಾಗಿರಿಸಿಕೊಳ್ಳಬೇಕು. ಬ್ಬರು ಪುರುಷರು ಸಿಗದಿದ್ದರೆ ಒಬ್ಬ ಪುರುಷನೂ ಇಬ್ಬರು ಸ್ತ್ರೀಯರೂ ಬೇಕು. ಮ ಒಬ್ಬಳು ಮರೆತುಬಿಟ್ಟರೆ ಇನ್ನೊಬ್ಬಳು ನೆನಪಿಗೆ ತರಲಿಕ್ಕಾಗಿ."

(ಪವಿತ್ರ ಕುರ್‌ಆನ್: 2: 282)

ಸ್ತ್ರೀಯ ಸಾಕ್ಷ್ಯದ ಕುರಿತು ಪವಿತ್ರ ಕುರ್‌ಆನ್ ಬಳಸಿರುವ ಪದಗಳಿಂದ ಅನೇಕ ಶ್ನೆಗಳು ಏಳುತ್ತವೆ. ಕೇವಲ ಮಹಿಳೆಯರ ಸಾಕ್ಷ್ಯವು ಸ್ವೀಕಾರಾರ್ಹವೇ? ಕಾರಾರ್ಹವಾದರೆ ಅದು ಎಲ್ಲ ವ್ಯವಹಾರಗಳಿಗೂ ಅನ್ವಯಿಸುತ್ತದೆಯೇ? ಯಾವ ವಹಾರಗಳಲ್ಲಿ ಸಾಕ್ಷಿಯ ಪ್ರಮಾಣ ಎಷ್ಟು? ಅರ್ಥಾತ್ ಸಾಕ್ಷಿ ಹೇಳುವ ಸ್ತ್ರೀಯರು ಷ್ಟಿರಬೇಕು? ಸ್ತ್ರೀಯರ ಸಾಕ್ಷ್ಯವು ಸ್ವೀಕಾರಾರ್ಹವಾಗಬೇಕಾದರೆ ಅವರ ಜತೆ ರುಷರೂ ಇರಬೇಕು ಎಂದಾದರೆ ಈ ಜಂಟಿ ಸಾಕ್ಷ್ಯವು ಎಲ್ಲ ವಿಷಯಗಳ ಣೈರ್ಣಯಕ್ಕೆ ಬುನಾದಿಯಾಗಬಲ್ಲುದೇ? ಅಥವಾ ಕೇವಲ ಕೆಲವು ವಿಷಯಗಳ ರ್ಮಾನ ಮಾತ್ರ ಇದರಿಂದ ಸಾಧ್ಯವೇ?

## ವಲ ಮಹಿಳೆಯರ ಸಾಕ್ಷ್ಯ

ಪುರುಷನಿಗೆ ಅರಿವಿಲ್ಲದಂತಹ ಮಹಿಳೆಯ ವಿಶಿಷ್ಟ ಸಮಸ್ಯೆಗಳ ತೀರ್ಮಾನಕ್ಕೆ ವಲ ಮಹಿಳೆಯರ ಸಾಕ್ಷ್ಯ ಸಾಕಾಗುತ್ತದೆಂಬುದು ಸಮುದಾಯದ ಅಧಿಕಾಂಶ ದ್ವಾಂಸರ ಅಭಿಪ್ರಾಯವಾಗಿದೆ.

ಮಹಿಳೆಯ ಪ್ರತ್ಯೇಕ ಸಮಸ್ಯೆಗಳ ಹೊರತು ಇತರ ಜೀವನ ವ್ಯವಹಾರಗಳ ಹೆಚ್ಚಿನ ವಿದ್ವಾಂಸರು ಕೇವಲ ಮಹಿಳೆಯರ ಸಾಕ್ಷ್ಯವನ್ನು ಸ್ವೀಕರಿಸುವುದಿಲ್ಲ.

ಕೆಲವು ವಿದ್ವಾಂಸರ ಅಭಿಪ್ರಾಯದಂತೆ ಮಹಿಳೆಯರ ವ್ಯವಹಾರಗಳಲ್ಲಿ ಕೇವ ಮಹಿಳೆಯರ ಸಾಕ್ಷ್ಯವು ಯಾವ ಆಧಾರದಲ್ಲಿ ಸ್ವೀಕರಿಸಲ್ಪಡುತ್ತದೋ – ಅದ ಮಾಹಿತಿ ಮಹಿಳೆಯರಿಗೆ ಮಾತ್ರ ಇರುತ್ತದೆ ಎಂಬ ಆಧಾರದಲ್ಲಿ – ಅಂತಹ ಸ್ಥಿ ಎಲ್ಲಿ ಯಾವ ಸಮಸ್ಯೆಯ ಕುರಿತು ನಿರ್ಮಾಣವಾದರೂ ಅವರ ಸಾಕ್ಷ್ಯವನ ಸ್ವೀಕರಿಸಬೇಕು.

## ಸ್ತ್ರೀ–ಪುರುಷರ ಜಂಟಿ ಸಾಕ್ಷ್ಯ

ಕೆಲವು ಮಂದಿ ವಿದ್ವಾಂಸರು ಎಲ್ಲ ರೀತಿಯ ವ್ಯವಹಾರಗಳಲ್ಲಿ ಕೇವ ಸ್ತ್ರೀಯರ ಸಾಕ್ಷ್ಯವೂ ಸ್ವೀಕಾರಾರ್ಹವಾಗಿದೆ ಎನ್ನುತ್ತಾರೆ. ಅವರು ಸ್ತ್ರೀ–ಪುರುಷ ಜಂಟಿ ಸಾಕ್ಷ್ಯವನ್ನೂ ಯಾವುದೇ ಅಳುಕಿಲ್ಲದೆ ಸ್ವೀಕರಿಸುತ್ತಾರೆ.

ಇಸ್ಲಾಮಿನ ದೃಷ್ಟಿಯಲ್ಲಿ ಜೀವನದ ಸಮಸ್ಯೆಗಳು ಎರಡು ರೀತಿಯಲ್ಲಿವೆ. ಕೆಲ ವಿಷಯಗಳಲ್ಲಿ ಮಹಿಳೆಯ ಬುದ್ಧಿ ಮತ್ತು ವಿವೇಕವನ್ನು ಪೂರ್ಣವಾ ಅವಲಂಬಿಸಬಹುದು. ಇನ್ನು ಕೆಲವು ವಿಷಯಗಳಲ್ಲಿ ಆಕೆಯ ವಿವೇಕವು ತ ಬೀಳುವ ಸಾಧ್ಯತೆ ಹೆಚ್ಚಾಗಿದೆ. ಕ್ರಿಯಾತ್ಮಕ ರಂಗದಲ್ಲೂ ಇಸ್ಲಾಮ್ ಇದೇ ರೀತಿ ವಿಂಗಡನೆಯನ್ನು ಮಾಡಿದೆ. ಒಂದೆಡೆ ಅದು ಆಕೆಯನ್ನು ನಾಯಕತ್ವದ ಸ್ಥಾನ ಅರ್ಹವಲ್ಲವೆಂದು ಪರಿಗಣಿಸುತ್ತದೆ. ಏಕೆಂದರೆ ನಾಯಕತ್ವಕ್ಕೆ ಯಾವ ಗು ವಿಶೇಷತೆಗಳ ಅಗತ್ಯವಿದೆಯೋ ಅದು ಆಕೆಯಲ್ಲಿಲ್ಲ. ಇನ್ನೊಂದೆಡೆ ಪ್ರವಾದಿ(ಸ ಅವರ ಸ್ಪಷ್ಟ ಆದೇಶವಿದೆ, "ಮಹಿಳೆಯು ತನ್ನ ಪತಿಯ ಮನೆಯವರ ಮತ್ತು ಅವ ಸಂತತಿಯ ನಾಯಕಿಯಾಗಿದ್ದಾಳೆ. ಅವರ ಬಗ್ಗೆ ಅವಳನ ವಿಚಾರಣೆಗೊಳಪಡಿಸಲಾಗುವುದು." (ಬುಖಾರಿ)

ಮಹಿಳೆಯನ್ನು ಕೇವಲ ಮನೆಯ ನಾಯಕಿಯೆಂದು ಸಾರಿರುವುದು ಏಕೆ ಇದರ ಕಾರಣವನ್ನು ಹಾಫಿಝ್ ಇಬ್ನು ಹಜರ್(ರ) ಹೀಗೆ ಹೇಳಿರುವರ "ಪ್ರವಾದಿ(ಸ) ಅವರು ಆಕೆಯ ಹೊಣೆಗಾರಿಕೆಯನ್ನು ಮನೆಗೆ ಸೀಮಿತಗೊಳಿಸಿ ವರು. ಏಕೆಂದರೆ ಇತರ ಯಾವ ಕಡೆಯೂ ಅವಳ ಕಾರ್ಯ ವ್ಯಾಪ್ತಿಯಿರುವುದಿ ವಿಶೇಷ ಅನುಮತಿಯಿಂದ ಅಲ್ಲಿಗೆ ತಲುಪುವ ಹೊರತು. ಅರ್ಥಾತ್ ಆಕೆ ಕಾರ್ಯಕ್ಷೇತ್ರವು ಮನೆಯೇ ಆಗಿದೆ." (ಫತ್ಹುಲ್ ಬಾರೀ)

ಆದ್ದರಿಂದ ಮನೆಯ ಹೊರಗೆ ಆಕೆಯನ್ನು ಯಾವುದೇ ವಿಷಯ ಹೊಣೆಗಾರಳಾಗಿ ಮಾಡುವ ಪ್ರಶ್ನೆಯೇ ಏಳುವುದಿಲ್ಲ. ಮನೆಯಲ್ಲಿ ಆ ನಾಯಕಿಯಾಗಿರುವುದರ ತಾತ್ಪರ್ಯವೇನೆಂದು ಈಗ ನೋಡೋಣ:

ಇದರ ತಾತ್ಪರ್ಯವೇನೆಂದರೆ ಯಾವ ವ್ಯಕ್ತಿಗಳು ಆಕೆಯ ಪ್ರಭಾವದಲ್ಲಿರುವರೋ ಅವರ ಹಕ್ಕು ಮತ್ತು ಹಿತಾಸಕ್ತಿಗಳನ್ನು ಸಂರಕ್ಷಿಸುವುದು. ಅವರನ್ನು ನೇರ ಮಾರ್ಗದಲ್ಲಿ ನಡೆಸುವುದು. ಅವರನ್ನು ಕೆಟ್ಟ ದಾರಿ ಹಿಡಿಯುವುದರಿಂದ ರಕ್ಷಿಸುವುದು. ಕಾಡಿನಲ್ಲಿ ಕುರುಬನು ತನ್ನ ಕುರಿ ಮಂದೆಯನ್ನು ರಕ್ಷಿಸುವಂತೆ ಅವರ ಲಾಭ–ನಷ್ಟಗಳ ಕುರಿತು ಮೇಲ್ನೋಟ ವಹಿಸುವುದು. ಮಹಿಳೆಯ ಹೊಣೆಯು ಇಲ್ಲಿಗೇ ಮುಗಿಯುವುದಿಲ್ಲ. ಪತಿಯು ಆಕೆಯ ವಶಕ್ಕೆ ಒಪ್ಪಿಸಿರುವ ಸಂಪತ್ತು ಮತ್ತು ಸಾಧನ–ಸಲಕರಣೆಗಳ ರಕ್ಷಣೆಯ ಹೊಣೆಯನ್ನೂ ಆಕೆಗೆ ವಹಿಸಲಾಗಿದೆ.

ಪ್ರವಾದಿ(ಸ) ಉತ್ತಮ ಪತ್ನಿಯ ಒಂದು ಲಕ್ಷಣವನ್ನು ಹೀಗೆ ವಿವರಿಸಿರುವರು, "ಅವನು ಆಕೆಯ ಕಣ್ಣಿನಿಂದ ಮರೆಯಾದರೆ ಆಕೆ ತನ್ನ ಮಾನ ಮತ್ತು ಪತಿಯ ಸೊತ್ತಿನ ವಿಷಯದಲ್ಲಿ ಅವನ ಹಿತಾಕಾಂಕ್ಷಿಯಾಗಿರುವಳು." (ಇಬ್ನುಮಾಜಃ)

ಇನ್ನೂ ಮುಂದುವರಿದು ಮನೆಯ ಎಲ್ಲ ಆಂತರಿಕ ಹೊಣೆಗಳನ್ನು ಆಕೆಗೆ ವಹಿಸಿಕೊಡಲಾಗಿದೆ. ಪ್ರವಾದಿ(ಸ) ಅವರು ಹ. ಫಾತಿಮಾ(ರ) ಮತ್ತು ಹ. ಅಲೀ(ರ) ಅವರ ಮಧ್ಯೆ ಮನೆವಾರ್ತೆಯ ಕೆಲಸಗಳನ್ನು ಯಾವ ರೀತಿ ವಿಂಗಡಿಸಿದ್ದರೆಂದರೆ ಮನೆಯ ಒಳಗಿನ ಕೆಲಸಗಳನ್ನು ಹ. ಫಾತಿಮಾ(ರ) ಮತ್ತು ಮನೆಯ ಹೊರಗಿನ ಕೆಲಸಗಳನ್ನು ಹ. ಅಲೀ(ರ) ಮಾಡಬೇಕಾಗಿತ್ತು.

ಮಹಿಳೆಯ ಈ ಹೊಣೆಗಾರಿಕೆಗಳಿಗೆ ವಿಚಾರ ಮತ್ತು ಕ್ರಿಯೆಯು ಎಷ್ಟು ಸ್ವಾತಂತ್ರ್ಯವನ್ನು ಬಯಸುತ್ತದೋ ಅಷ್ಟರ ವರೆಗೆ ತನ್ನ ನಿರ್ಧಾರದಂತೆ ಕೆಲಸ ಮಾಡುವ ಸ್ವಾತಂತ್ರ್ಯವನ್ನೂ ಆಕೆಗೆ ಕೊಡಲಾಗಿದೆ. ಒಮ್ಮೆ ಹಿಂದ್ ಬಿನ್ತಿ ಉತ್ಬಾ ಎಂದು ಪ್ರವಾದಿವರ್ಯರಲ್ಲಿ(ಸ) ತಮ್ಮ ಪತಿ ಅಬೂಸುಫ್ಯಾನರ ಬಗ್ಗೆ ದೂರಿದರು. ಅವರು ಹಣದ ವಿಷಯದಲ್ಲಿ ಜಿಪುಣತೆ ತೋರುತ್ತಿದ್ದರು. ನನ್ನ ಮತ್ತು ನನ್ನ ಮಕ್ಕಳ ಎಲ್ಲ ಖರ್ಚಿಗೆ ಸಾಕಾಗುವಷ್ಟು ನೀಡುತ್ತಿರಲಿಲ್ಲ. ಆದ್ದರಿಂದ ನನ್ನ ಅವಶ್ಯಕತೆಗಳನ್ನು ಪೂರೈಸಲು ಅವರಿಗೆ ತಿಳಿಯದಂತೆ ಅವರ ಹಣ ತೆಗೆದುಕೊಳ್ಳುವುದಲ್ಲದೆ ಅನ್ಯ ಮಾರ್ಗವಿಲ್ಲ" ಎಂದು ದೂರಿದರು. ಆಗ ಪ್ರವಾದಿ(ಸ), ವಾಡಿಕೆಯಂತೆ ನಿಮ್ಮ ಮತ್ತು ನಿಮ್ಮ ಮಕ್ಕಳ ಆವಶ್ಯಕತೆಗೆ ತಕ್ಕಂತೆ ಅವರ ಸೊತ್ತಿನಿಂದ ಖರ್ಚು ಮಾಡಿರಿ" ಎಂದು ಹೇಳಿದರು. (ಬುಖಾರಿ)

ನಿರ್ದಿಷ್ಟ ಮೇರೆಯೊಳಗಿದ್ದುಕೊಂಡು ಆಕೆ ತನ್ನ ಪತಿಯ ಸೊತ್ತಿನಿಂದ ದಾನ–ಧರ್ಮವನ್ನೂ ಕೊಡಬಹುದು. ಪ್ರವಾದಿ(ಸ) ಹೀಗೆ ಹೇಳಿರುವರು, "ಮಹಿಳೆಯು ಕೆಟ್ಟ ವಿಧಾನದಿಂದಲ್ಲದೆ (ಧರ್ಮಸಮ್ಮತ ಮೇರೆಯೊಳಗಿದ್ದುಕೊಂಡು) ತನ್ನ ಪತಿಯ ಮನೆಯಿಂದ ಖರ್ಚು ಮಾಡಿದರೆ ಅವಳಿಗೆ ಆ ಖರ್ಚಿನ ಪುಣ್ಯ ಸಿಗುತ್ತದೆ. ಪತಿಗೆ ಅವನ ದುಡಿಮೆಯ ಪ್ರತಿಫಲವೂ ಸಿಗುತ್ತದೆ." (ಬುಖಾರಿ)

ಕೌಟುಂಬಿಕ ಜೀವನದಲ್ಲಿ ಮಹಿಳೆಯ ಸಾಮರ್ಥ್ಯಗಳ ಬಗ್ಗೆ ಇಸ್ಲಾಮ ಎಷ್ಟೊಂದು ಭರವಸೆ ಇರಿಸುತ್ತದೆಂದರೆ ಮಕ್ಕಳು ಪ್ರೌಢರಾಗುವ ತನಕ ಅವ ಪಾಲನೆ–ಪೋಷಣೆಗೆ ಆಕೆ ಪುರುಷನಿಗಿಂತ ಹೆಚ್ಚು ಸಮರ್ಥಳು ಮತ್ತು ಅರ್ಹಳ ಎಂದು ಪರಿಗಣಿಸುತ್ತದೆ. ಒಬ್ಬ ಸಹಾಬಿ ತನ್ನ ಪತ್ನಿಗೆ ವಿಚ್ಛೇದನ ನೀಡಿದರು. ಪತ್ನಿಯಿಂದ ಅವರಿಗೆ ಒಂದು ಮಗುವೂ ಇತ್ತು. ಅವರು ಆ ಮಗುವನ್ನು ತಮ ಬಳಿಯಲ್ಲೇ ಇಟ್ಟುಕೊಳ್ಳಬಯಸಿದ್ದರು. ಆದರೆ ಪತ್ನಿಯು ಅದರ ವಿರುದ್ಧ ಪ್ರವಾ ಯವರಲ್ಲಿ(ಸ) ದೂರಿತ್ತರು. ಆಗ ಪ್ರವಾದಿ(ಸ) ಹೀಗೆ ಆದೇಶಿಸಿದರು, "ನೀನು ಮ ಮದುವೆಯಾಗುವ ತನಕ ನೀನೇ ಅದಕ್ಕೆ (ಆ ಮಗುವಿನ ಪಾಲನೆ–ಪೋಷಣೆಗೆ ಹೆಚ್ಚು ಅರ್ಹಳು." (ಅಬೂದಾವೂದ್)

## ಮಹಿಳೆಯರ ಪ್ರತ್ಯೇಕ ಸಂಘಟನೆ

ಸ್ತ್ರೀಗೆ ಪುರುಷನಿಗಿಂತ ಹೆಚ್ಚು ಆದ್ಯತೆ ಕೊಡಲು ಕಾರಣ ಆಕೆ ಮಕ್ಕಳ ತರಬೇ ಮತ್ತು ಪೋಷಣೆ ಉತ್ತಮ ರೀತಿಯಲ್ಲಿ ಮಾಡಬಲ್ಲಳು ಎಂಬುದಾಗಿದೆ. ಆದ್ದರಿಂ ಜೀವನದ ಯಾವ ರಂಗದಲ್ಲಿ ಆಕೆಯ ಸೇವೆಯು ಸಮಾಜಕ್ಕೆ ಉಪಯುಕ್ತವಾ ರುವುದೋ ಆ ರಂಗದಲ್ಲಿ ಆಕೆ ಮುಂದುವರಿಯಬೇಕು. ಈ ಉದ್ದೇಶಕ್ಕಾಗಿ ಆಕೆ ವೈಯಕ್ತಿಕ ಶ್ರಮದ ಜತೆ ಸಾಮೂಹಿಕ ಹೋರಾಟದ ಅನುಮತಿಯೂ ಇದೆ. ಅದ ಮೇಲೆ ಧರ್ಮವು ಯಾವುದೇ ರೀತಿಯ ನಿರ್ಬಂಧ ಹೇರುವುದಿಲ್ಲ. ಪ್ರವಾದಿ(ಸ ಮತ್ತು ನಾಲ್ವರು ಖಲೀಫರುಗಳ(ರ) ಕಾಲದಲ್ಲಿ ಮಹಿಳೆಯರ ಯಾವುದಾದರು ಸಂಘಟನೆ ಇತ್ತೇ ಇಲ್ಲವೇ ಎಂಬ ಚರ್ಚೆ ಇಲ್ಲಿ ಸರಿಯೆನಿಸದು. ಏಕೆಂದರೆ ಒಂದ ಸಂಘಟನೆ ಯಾವ ಕಾರಣಕ್ಕೆ ಮತ್ತು ಯಾವ ಪರಿಸ್ಥಿತಿಯಲ್ಲಿ ಅಸ್ತಿತ್ವಕ್ಕೆ ಬರುತ್ತದೋ ಆ ಕಾರಣ ಮತ್ತು ಪರಿಸ್ಥಿತಿಯೇ ಅಂದು ಇರಲಿಲ್ಲ. ಆದ್ದರಿಂದ ಅಲ್ಲಿ ಮಹಿಳೆಯ ಸಂಘಟನೆ ಮಾತ್ರವಲ್ಲ ಯಾವುದೇ ಸಂಘಟನೆ ಅಸ್ತಿತ್ವದಲ್ಲಿರಲಿಲ್ಲ. ಆದರೆ ವಿಭಿ ಧಾರ್ಮಿಕ ಮತ್ತು ಸಾಮುದಾಯಿಕ ಅಗತ್ಯಗಳಿಗಾಗಿ ಮಹಿಳೆಯರು ಸಭೆ ಸೇರುತ್ತಿದ್ದರ ಮತ್ತು ಕೆಲವೊಮ್ಮೆ ತಮ್ಮ ವೈಚಾರಿಕ ಮತ್ತು ವ್ಯಾವಹಾರಿಕ ಸಮಸ್ಯೆಗಳನ ಸಾಮೂಹಿಕವಾಗಿ ಪ್ರವಾದಿ(ಸ) ಅವರ ಮುಂದೆ ಇರಿಸುತ್ತಿದ್ದರು.

ಒಮ್ಮೆ ಓರ್ವ ಮಹಿಳೆ ಪ್ರವಾದಿ(ಸ) ಅವರಲ್ಲಿ ಮಹಿಳೆಯರಿಗೆ ಎದುರಾಗು ಒಂದು ದೊಡ್ಡ ಸಮಸ್ಯೆಯ ಕುರಿತು ಪ್ರಸ್ತಾಪಿಸಿ ಅದನ್ನು ನೀಗಿಸುವಂ ವಿನಂತಿಸಿದರು. ಇನ್ನೊಂದು ವರದಿಯಲ್ಲಿ ಹಲವು ಮಂದಿ ಮಹಿಳೆಯ ವಿನಂತಿಸಿದರು ಎಂಬ ಪದಗಳಿವೆ. ಹೆಚ್ಚಿನಂಶ ಈ ವಿನಂತಿಯು ಎಲ್ಲ ಮಹಿ ಯರದ್ದಾಗಿರಬೇಕು. ಆದರೆ ಅದನ್ನು ಪ್ರವಾದಿ(ಸ) ಅವರ ಮುಂದೆ ಇರಿಸಲಿಕ್ಕಾ ಯಾರನ್ನಾದರೂ ತಮ್ಮ ಪ್ರತಿನಿಧಿಯಾಗಿ ಮಾಡಿರಬಹುದು. ಮನವಿಯನ ಮುಂದಿಟ್ಟ ಮಹಿಳೆಯ ಪದಗಳಿಂದಲೂ ಇದು ವ್ಯಕ್ತವಾಗುತ್ತದೆ:

“ತಮ್ಮ ಮಾತುಕತೆ ಮತ್ತು ಪ್ರವಚನಗಳಿಂದ ಪುರುಷರು ಪ್ರಯೋಜನ ಪಡೆಯುತ್ತಾರೆ. (ಆದರೆ ನಮಗೆ ಅದರ ಸಂದರ್ಭ ಸಿಗುವುದಿಲ್ಲ.) ಆದ್ದರಿಂದ ತಾವು ನಮಗಾಗಿ ತಮ್ಮ ವೇಳೆಯಲ್ಲಿ ಯಾವುದಾದರೂ ಒಂದು ದಿನವನ್ನು ನಿಶ್ಚಯಿಸಬೇಕು. ಅಂದು ನಾವು ತಮ್ಮ ಸನ್ನಿಧಿಯಲ್ಲಿ ಹಾಜರಾಗುವೆವು. ಅಂದು ಅಲ್ಲಾಹನು ತಮಗೆ ಕಲಿಸಿದ ವಿಷಯಗಳನ್ನು ನಮಗೆ ಬೋಧಿಸಬೇಕು.” ಪ್ರವಾದಿ(ಸ) ಹೇಳಿದರು, “ಸರಿ ನೀವು ಇಂತಿಂತಹ ದಿನ ಇಂತಿಂತಹ ಸ್ಥಳದಲ್ಲಿ ಒಟ್ಟಾಗಬೇಕು” ಅವರು ಒಟ್ಟಾದಾಗ ಪ್ರವಾದಿ(ಸ) ಅವರ ಬಳಿಗೆ ಹೋಗಿ ಅಲ್ಲಾಹನು ಕಲಿಸಿದ ಧರ್ಮದ ಶಿಕ್ಷಣವನ್ನು ಅವರಿಗೆ ನೀಡಿದರು. (ಬುಖಾರಿ)

ಇದೇ ರೀತಿ ಇನ್ನೊಮ್ಮೆ ತಮ್ಮ ಒಂದು ಸಂಶಯವನ್ನು ನೀಗಿಸಲು ಅಸ್ಮಾ ಬಿಂತು ಯಝೀದ್ ಎಂಬ ಅತ್ಯಂತ ಬುದ್ಧಿವಂತ ಮಹಿಳೆಯನ್ನು ತಮ್ಮ ಪ್ರತಿನಿದಿಯಾಗಿ ಮಾಡಿ ಪ್ರವಾದಿವರ್ಯರ(ಸ) ಬಳಿಗೆ ಕಳುಹಿಸಿದರು. ಅವರು ಪ್ರವಾದಿವರ್ಯರ(ಸ) ಬಳಿ ಹೋಗಿ ಈ ರೀತಿ ಅರಿಕೆ ಮಾಡಿಕೊಳ್ಳುತ್ತಾರೆ, “ನಾನು ಮುಸ್ಲಿಮ್ ಮಹಿಳೆಯರ ಒಂದು ಗುಂಪಿನ ಪ್ರತಿನಿಧಿಯಾಗಿ ತಮ್ಮ ಬಳಿಗೆ ಬಂದಿರುವೆನು. ನಾನು ಹೇಳುವುದನ್ನೇ ಅವರೆಲ್ಲರೂ ಹೇಳುತ್ತಾರೆ. ನನ್ನ ಅಭಿಪ್ರಾಯವು ಅವರ ಅಭಿಪ್ರಾಯವೇ ಆಗಿದೆ. ಅಲ್ಲಾಹನು ತಮ್ಮನ್ನು ಸ್ತ್ರೀ–ಪುರುಷರಿಬ್ಬರ ಕಡೆಗೂ ಪ್ರವಾದಿಯಾಗಿ ರವಾನಿಸಿರುವನು. ಆದ್ದರಿಂದ ನಾವೆಲ್ಲ ತಮ್ಮ ಮೇಲೆ ವಿಶ್ವಾಸವಿರಿಸಿ ತಮ್ಮನ್ನು ಅನುಸರಿಸಿದೆವು. ಆದರೆ ಸ್ತ್ರೀ ವರ್ಗಕ್ಕೆ ಸೇರಿದ ನಮ್ಮ ಸ್ಥಿತಿ ಏನಾಗಿದೆಯೆಂದರೆ ನಾವು ಕಟ್ಟುನಿಟ್ಟಿನ ಪರ್ದಾದಲ್ಲಿ ಮನೆಗಳಲ್ಲಿರುತ್ತೇವೆ. ಪುರುಷರ ಬಯಕೆಗಳ ಕೇಂದ್ರವಾಗಿದ್ದೇವೆ. ಅವರ ಮಕ್ಕಳನ್ನು ಹೆರುವವರಾಗಿದ್ದೇವೆ. ಪುರುಷರಿಗೆ ಜುಮಾ ನಮಾಝ್, ಅಂತಿಮ ಯಾತ್ರೆ ಮತ್ತು ಜಿಹಾದ್‌ಗಳಲ್ಲಿ ಭಾಗವಹಿಸುವ ಕಾರಣದಿಂದ ನಮಗಿಂತ ಶ್ರೇಷ್ಠತೆ ನೀಡಲಾಗಿದೆ. ಅವರು ಜಿಹಾದ್‌ಗೆ ಹೋದಾಗ ನಾವು ಅವರ ಸೊತ್ತು–ವಿತ್ತಗಳ ರಕ್ಷಣೆ ಮತ್ತು ಅವರ ಮಕ್ಕಳ ಪಾಲನೆ–ಪೋಷಣೆ ಮಾಡುತ್ತೇವೆ. ಆದ್ದರಿಂದ ಪ್ರವಾದಿವರ್ಯರೇ! ಅವರ ಪುಣ್ಯದಲ್ಲಿ ನಾವು ಪಾಲುದಾರರಾಗುವೆವೇ?” ಪ್ರವಾದಿ(ಸ) ಸಹಾಬಿಗಳ ಕಡೆಗೆ ತಿರುಗಿ ವಿಚಾರಿಸಿದರು, “ಸ್ತ್ರೀಯು ತನ್ನ ಧರ್ಮದ ಬಗ್ಗೆ ಇದಕ್ಕಿಂತ ಉತ್ತಮವಾಗಿ ಪ್ರಶ್ನಿಸುವುದನ್ನು ನೀವಾರೂ ಕೇಳಿರುವಿರಾ?” ಸಹಾಬಿಗಳು ಹೇಳಿದರು, “ಅಲ್ಲಾಹನಾಣೆ ನಾವು ಕೇಳಿಲ್ಲ.” ತರುವಾಯ ಪ್ರವಾದಿ(ಸ) ಅಸ್ಮಾ(ರ)ರನ್ನುದ್ದೇಶಿಸಿ ಹೇಳಿದರು, “ಅಸ್ಮಾ! ನೀವು ಹೋಗಿ ನಿಮ್ಮ ಹಿಂದೆ ಇರುವ ಸ್ತ್ರೀಯರಿಗೆ ತಿಳಿಸಿ, ನೀವು ನಿಮ್ಮ ಪತಿಯಂದಿರ ಜತೆ ಸೌಜನ್ಯದಿಂದ ವರ್ತಿಸುವುದು, ಅವರ ಮೆಚ್ಚುಗೆ ಗಳಿಸುವುದು ಮತ್ತು ಅವರ ಜತೆ ಸಾಮರಸ್ಯದಿಂದಿರಲು ಅವರನ್ನು ಅನುಸರಿಸುವುದು– ನೀವು ಈಗ ಪ್ರಸ್ತಾಪಿಸಿರುವ ಈ ಎಲ್ಲ ಸೇವೆಗಳಿಗೆ ಸಮಾನವಾಗಿದೆ.”

(ಬಝ್ಝಾರ್, ತಬ್ರಾನೀ, ತರ್ಗೀಬ್ ವತ್ತರ್ಹೀಬ್)

ಈ ರೀತಿಯ ಐತಿಹಾಸಿಕ ಘಟನೆಗಳ ಜತೆ ಧರ್ಮದ ಮೂಲಭೂತ ಬೋಧನೆಗಳ ಕಡೆಗೆ ದೃಷ್ಟಿ ಹಾಯಿಸಿದರೆ ಅದು ಮಹಿಳೆಯರ ಪ್ರತ್ಯೇಕ ಸಂಘಟನೆಗೆ ವಿರುದ್ಧವಲ್ಲ. ಬದಲಾಗಿ ಅದನ್ನು ಬೆಂಬಲಿಸುತ್ತದೆಂದು ತಿಳಿದು ಬರುತ್ತದೆ. ಮಹಿಳೆಯರು ನಮಾಝ್‌ಗಾಗಿ ಪ್ರತ್ಯೇಕ ಜಮಾಅತ್ ಮಾಡಬಹುದು ಎಂಬುದು ಇದಕ್ಕಿರುವ ಒಂದು ಪ್ರಬಲ ಪುರಾವೆಯಾಗಿದೆ.

## ಸ್ತ್ರೀ-ಪುರುಷರು ಬೆರೆಯದಂತೆ ನೋಡಿಕೊಳ್ಳುವುದು

ಈ ವಿವರಣೆಗಳಿಂದ ತಿಳಿದು ಬರುವುದೇನೆಂದರೆ ಮಹಿಳೆಯು ತನ್ನ ಪತಿಯ ಅನುಮತಿಯೊಂದಿಗೆ ಮನೆಯಿಂದ ಹೊರಗೂ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಮತ್ತಿತರ ಚಟುವಟಿಕೆಗಳಲ್ಲಿ ಭಾಗವಹಿಸಬಹುದು. ಆದರೆ ಒಂದು ವಿಷಯ ಆಕೆ ಸದಾ ನೆನಪಿನಲ್ಲಿಟ್ಟಿರಬೇಕು. ಇಸ್ಲಾಮ್ ಆಕೆಯ ಮತ್ತು ಪರಪುರುಷರ ಮಧ್ಯೆ ನೀತಿ ಮತ್ತು ಕಾನೂನಿನ ಒಂದು ಗೋಡೆಯನ್ನು ನಿಲ್ಲಿಸಿದೆ. ಮನೆಯನ್ನು ಆಕೆಯ ಪ್ರಮುಖ ಕಾರ್ಯಕ್ಷೇತ್ರವಾಗಿ ಮಾಡಿರುವುದರ ಹಿಂದಿರುವ ಉದ್ದೇಶವೂ ಇದುವೇ ಆಗಿದೆ. ಪರಪುರುಷರೊಂದಿಗೆ ಮುಕ್ತ ಬೆರೆಯುವಿಕೆಯಿಂದ ಯಾವುದೇ ರೀತಿಯ ನೈತಿಕ ಕೆಡುಕು ತಲೆಯೆತ್ತದಿರಲಿ ಎಂಬುದು ಧರ್ಮಶಾಸ್ತ್ರದ ಇಂಗಿತವಾಗಿದೆ. ಅಲ್ಲಾಹನು ನಿಲ್ಲಿಸಿರುವ ಈ ಗೋಡೆಯನ್ನು ಕೆಡವಿ ಯಾವ ಮಹಿಳೆಯಾದರೂ ಯಾವುದೇ ಕ್ಷೇತ್ರದಲ್ಲಿ ಮುಂದುವರಿದರೆ ಆಕೆಯ ಪ್ರತಿಯೊಂದು ಹೆಜ್ಜೆಯು ಇಸ್ಲಾಮಿನ ದೃಷ್ಟಿಯಲ್ಲಿ ದೇವಾಜ್ಞೋಲ್ಲಂಘನೆ ಮತ್ತು ವಿನಾಶದ ಕಡೆಗೆ ಸಾಗುತ್ತದೆ. ಆಕೆಯ ಸಂಕಲ್ಪ ಮತ್ತು ಆಕೆಯ ಉದ್ದೇಶವು ಎಷ್ಟೇ ಪವಿತ್ರ ಮತ್ತು ಪುಣ್ಯದಾಯಕವಾಗಿದ್ದರೂ ಸರಿಯೆ.

ಪ್ರವಾದಿವರ್ಯರಿಗಿಂತ(ಸ) ಹೆಚ್ಚು ದೇವಭಕ್ತ ಮತ್ತು ಸುಶೀಲ ವ್ಯಕ್ತಿ ಬೇರೆ ಯಾರಿರಬಹುದು. ಯಾರ ನೈತಿಕ ಮಟ್ಟವೂ ಅವರನ್ನು ಮೀರಿಸಲು ಸಾಧ್ಯವಿಲ್ಲ. ಅದೇ ರೀತಿ ಪ್ರವಾದಿವರ್ಯರಿಂದ(ಸ) ಇಸ್ಲಾಮಿನ ದೀಕ್ಷೆ ತೊಡಲು ಮತ್ತು ಅವರ ಅನುಸರಣೆಯ ಕರಾರು ಮಾಡಲು ಬರುತ್ತಿದ್ದ ಮಹಿಳೆಯರ ಭಾವನೆಗಳು ಎಷ್ಟು ಪಾವನವಾಗಿತ್ತೆಂಬುದನ್ನು ಊಹಿಸಿ ನೋಡಿ. ಪ್ರವಾದಿ(ಸ) ಪುರುಷರಿಂದ ಈ ಕರಾರು ಹಸ್ತಲಾಘವ ಮಾಡುವ ಮೂಲಕ ಮಾಡುತ್ತಿದ್ದರು. ಆದರೆ ಅವರ ಕೈಯು ಎಂದೂ ಯಾವುದೇ ಪರಸ್ತ್ರೀಯನ್ನು ಮುಟ್ಟಿರಲಿಲ್ಲ. ಮಹಿಳೆಯರಿಂದ ಕೇವಲ ಬಾಯಿಮಾತಿನ ಕರಾರನ್ನೇ ಪಡೆಯಲಾಗುತ್ತಿತ್ತು. **(ಬುಖಾರಿ, ಮುಸ್ಲಿಮ್)**

ಕೆಲವೊಮ್ಮೆ ಸ್ತ್ರೀಯರು ಪ್ರವಾದಿವರ್ಯರೊಂದಿಗೆ(ಸ) ಹಸ್ತಲಾಘವ ಮಾಡಬಯಸಿದಾಗಲೂ ಪ್ರವಾದಿ(ಸ) ಅದಕ್ಕೆ ನಿರಾಕರಿಸುತ್ತಿದ್ದರು, "ನಾನು ಸ್ತ್ರೀಯರೊಂದಿಗೆ ಕೈ ಕುಲುಕುವುದಿಲ್ಲ. ನಾನು ನೂರು ಮಹಿಳೆಯರನ್ನುದ್ದೇಶಿಸಿ ಹೇಳುವುದು ಪ್ರತಿಯೊಬ್ಬ ಮಹಿಳೆಯೊಂದಿಗೆ ಹೇಳಿದಂತೆ (ಆದ್ದರಿಂದ ಪ್ರತಿಯೊಬ್ಬ ಮಹಿಳೆಯಿಂದ

ಪ್ರತ್ಯೇಕ ನಿಷ್ಠೆಯ ಕರಾರು ಪಡೆಯುವ ಅಗತ್ಯವಿಲ್ಲ.)" (ಮುಸ್ನದ್ ಅಹ್ಮದ್)

ಆದ್ದರಿಂದ ಶಿಕ್ಷಣ ತರಬೇತಿಯಾಗಲಿ, ಕಲೆ ಮತ್ತು ಸಂಸ್ಕೃತಿಯಾಗಲಿ ಅಥವಾ ರಾಜಕೀಯ ಮತ್ತು ದೇಶರಕ್ಷಣೆಯ ಕಾರ್ಯವಾಗಲಿ ಎಲ್ಲೂ ಅನ್ಯರಾದ ಸ್ತ್ರೀ-ಪುರುಷರು ಪರಸ್ಪರರನ್ನು ಸ್ಪರ್ಶಿಸುವ ಅವಕಾಶವಿಲ್ಲ. ಆದ್ದರಿಂದಲೇ ಇಸ್ಲಾಮ್‌ನಲ್ಲಿ ಸ್ತ್ರೀ-ಪುರುಷರ ಸಮ್ಮಿಶ್ರ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಲಿ, ಶಿಕ್ಷಣಕ್ಕಾಗಲಿ ಅವಕಾಶವಿಲ್ಲ. ಓರ್ವ ಮುಸ್ಲಿಮ್ ಮಹಿಳೆ ಪರಪುರುಷರ ಜತೆ ಸೈನಿಕ ತರಬೇತಿಯಲ್ಲಾಗಲೀ ಆಟೋಟಗಳಲ್ಲಾಗಲೀ ಭಾಗವಹಿಸುವಂತಿಲ್ಲ. ಪೇಟೆಯಿಂದ ಪಾರ್ಲಿಮೆಂಟ್ ತನಕ ಎಲ್ಲಿಯೂ ಅವರು ಪರಸ್ಪರ ಬೆರೆಯುವುದು ಇಸ್ಲಾಮೀ ಶಿಕ್ಷಣಕ್ಕೆ ವಿರುದ್ಧವಾಗಿದೆ.

ಪ್ರವಾದಿವರ್ಯರ(ಸ) ಭಾಷಣಗಳಲ್ಲಿ ಸ್ತ್ರೀಯರು ಪಾಲ್ಗೊಳ್ಳುತ್ತಿದ್ದರು. ಆದರೆ ಅವರೆಂದೂ ಪುರುಷರ ಜತೆ ಕುಳಿತುಕೊಳ್ಳುತ್ತಿರಲಿಲ್ಲ. ಅವರ ಸಭಾಂಗಣವೇ ಪುರುಷರಿಗಿಂತ ಪ್ರತ್ಯೇಕವಾಗಿರುತ್ತಿತ್ತು.

ಒಂದು ಈದ್ ಪ್ರವಚನದ ಪ್ರಸ್ತಾಪ ಹದೀಸ್‌ಗಳಲ್ಲಿ ಈ ರೀತಿ ಬಂದಿದೆ: ಪ್ರವಾದಿ(ಸ) ನಮಾಝ್ ಮಾಡಿ ಖುತ್‌ಬಾ (ಪ್ರವಚನ) ನೀಡಿದರು. ತರುವಾಯ ಮಹಿಳೆಯರ ಬಳಿಗೆ ಹೋದರು. ಪ್ರವಾದಿಯವರ(ಸ)ಜತೆ ಹ. ಬಿಲಾಲ್(ರ) ಕೂಡಾ ಇದ್ದರು. ಪ್ರವಾದಿಯವರು(ಸ) ಅವರಿಗೆ ಉಪದೇಶ ಮಾಡಿದರು. [ವರದಿ: **ಹ. ಅಬ್ದುಲ್ಲಾ ಬಿನ್ ಅಬ್ಬಾಸ್(ರ) – ಅಹ್ಮದ್, ನಸಾಈ, ದಾರಕುತ್ನೀ, ತಿರ್ಮಿದಿ, ಹಾಕಿಮ್]**

ಇದರಿಂದ ಆ ಸ್ತ್ರೀಯರು ಪುರುಷರ ಜತೆಗೆ ಒಂದೇ ಕಡೆ ಕುಳಿತಿರಲಿಲ್ಲ ವೆಂಬುದು ವ್ಯಕ್ತವಾಗುತ್ತದೆ. ಬದಲಾಗಿ ಪ್ರವಾದಿವರ್ಯರ(ಸ) ಸ್ವರ ಕೇಳಿಸದಷ್ಟು ದೂರದಲ್ಲಿ ಅವರು ಕುಳಿತಿದ್ದರು.

ಇಬ್ಬರು ವ್ಯಕ್ತಿಗಳು ಒಂದು ವ್ಯಾಜ್ಯ ತೆಗೆದುಕೊಂಡು ಪ್ರವಾದಿಯವರ(ಸ) ಬಳಿಗೆ ಬಂದರು. ಅವರಲ್ಲಿ ಒಬ್ಬನು ಪ್ರವಾದಿವರ್ಯರನ್ನುದ್ದೇಶಿಸಿ(ಸ) "ನನ್ನ ಮಗನು ಈತನ ಪತ್ನಿಯ ಜತೆ ವ್ಯಭಿಚಾರವೆಸಗಿದ್ದಾನೆ. ತಾವು ಅಲ್ಲಾಹನ ಆಜ್ಞೆಯ ಪ್ರಕಾರ ಇದರ ತೀರ್ಮಾನ ಮಾಡಿರಿ" ಎಂದು ವಿನಂತಿಸಿದನು. ಪ್ರವಾದಿ(ಸ) ಆತನಿಗೆ 100 ಛಡಿಯೇಟುಗಳನ್ನು ಬಾರಿಸಿ ಅವನನ್ನು ಗಡೀಪಾರು ಮಾಡುವಂತೆ ಆಜ್ಞಾಪಿಸಿದರು. ಆ ಬಳಿಕ ಪ್ರವಾದಿ(ಸ) ಅನೀಸ್ ಎಂಬ ಸಹಾಬಿಯನ್ನುದ್ದೇಶಿಸಿ ಆ ಮಹಿಳೆಯ ಕುರಿತು ಈ ರೀತಿ ಆಜ್ಞಾಪಿಸಿ ದರು. "ಈತನ ಪತ್ನಿಯ ಬಳಿ ಹೋಗಿ ವಿಚಾರಣೆ ನಡೆಸಿರಿ. ಆಕೆ ತಪ್ಪೊಪ್ಪಿ ಕೊಂಡರೆ ಆಕೆಯನ್ನು ಕಲ್ಲೇಟಿನಿಂದ ಸಾಯಿಸಿ. ಹೀಗೆ ಆಕೆ ತಪ್ಪೊಪ್ಪಿಕೊಂಡಳು ಮತ್ತು ಆಕೆಗೆ ಕಲ್ಲೇಟಿನಿಂದ ಸಾಯಿಸುವ ಶಿಕ್ಷೆ ಜಾರಿಗೊಳಿಸಲಾಯಿತು." (ಬುಖಾರಿ, ಮುಸ್ಲಿಮ್)

ಮರಣದಂಡನೆ ಇರುವಂತಹ ಮೊಕದ್ದಮೆಯ ಕುರಿತು ವಿಚಾರಣೆ

ನಡೆಸಲಿಕ್ಕಾಗಿಯೂ ಮಹಿಳೆಯನ್ನು ನ್ಯಾಯಾಲಯಕ್ಕೆ ಕರೆಸಲು ಪ್ರವಾದಿ(ಸ) ಇಷ್ಟಪಡಲಿಲ್ಲ. ವಿಚಾರಣೆ ಮತ್ತು ತೀರ್ಪು ನೀಡಲು ತಮ್ಮ ಓರ್ವ ಪ್ರತಿನಿಧಿಯನ್ನು ಆಕೆ ಇರುವಲ್ಲಿಗೆ ಕಳುಹಿಸಿಕೊಟ್ಟರು.

ಪ್ರವಾದಿವರ್ಯರ(ಸ) ಕಾಲದಲ್ಲಿ ಮಹಿಳೆಯರಿಗೆ ಸಮರ ವಿದ್ಯೆಯನ್ನು ಕಲಿಸುವ ವಿಶೇಷ ಏರ್ಪಾಡಿರಲಿಲ್ಲ. ಆದರೂ ಅಂದಿನ ವಿಶಿಷ್ಟ ಪರಿಸ್ಥಿತಿ ಮತ್ತು ಕಠಿಣ ಜೀವನದ ಕಾರಣ ಮಹಿಳೆಯರು ಸದಾ ಯುದ್ಧಕ್ಕೆ ಸಿದ್ಧರಾಗಿರು ತ್ತಿದ್ದರು ಇಂದು ಕೂಡಾ ಇಸ್ಲಾಮೀ ರಾಷ್ಟ್ರವು ಅವರಿಗೆ ತರಬೇತಿ ನೀಡಿ ಅವರಿಂದಲೂ ಸೈನಿಕ ಸೇವೆಯನ್ನು ಪಡೆಯ ಬಹುದಾಗಿದೆ. ಆದರೆ ಅವರಿಗೆ ತರಬೇತಿ ನೀಡು ವ್ಯವಸ್ಥೆಯಲ್ಲೂ ಅವರು ಪರಪುರುಷರ ಜತೆ ಬೆರೆಯದಂತೆ ನೋಡಿಕೊಳ್ಳಬೇಕು

ಹ. ಆಯಿಶಾ(ರ) ಹೇಳುತ್ತಾರೆ. ಒಂದು ಯುದ್ಧದ ವೇಳೆ ನಾನು ಪ್ರವಾ ಫರ್ಯರ(ಸ) ಜತೆಗಿದ್ದೆ. ಇದು ನಾನು ಸಪೂರ ಮತ್ತು ಚುರುಕು ಆಗಿ ಕಾಲವಾಗಿತ್ತು. ಪ್ರವಾದಿ(ಸ) ಸಹಾಬಿಗಳಿಗೆ ಮುಂದೆ ಹೋಗುವಂತೆ ಆಜ್ಞಾಪಿಸಿದರು ಅವರು ಮುಂದೆ ಹೋದಾಗ ಪ್ರವಾದಿ(ಸ) ನನ್ನಲ್ಲಿ ಹೇಳಿದರು, "ಆಯಿಶಾ! ಬಾ ನಾವಿಬ್ಬರೂ ಓಟದ ಸ್ಪರ್ಧೆ ನಡೆಸೋಣ. ನಾನು ನಿನ್ನನ್ನು ಹಿಂದೆ ಹಾಕುತ್ತೇ ನೋಡು." ಸ್ಪರ್ಧೆ ನಡೆದಾಗ ನಾನೇ ಗೆದ್ದೆ. ಇದನ್ನು ಕಂಡು ಪ್ರವಾದಿ(ಸ) ಮೌ ತಾಳಿದರು. ಅನಂತರ ಕೆಲವು ಕಾಲದ ಬಳಿಕ ನಾನು ಆ ಘಟನೆಯನ್ನು ಮರೆತಿ ಮತ್ತು ನಾನಾಗ ಸಾಕಷ್ಟು ದಪ್ಪಗಾಗಿದ್ದೆ. ಆಗ ಒಮ್ಮೆ ಪ್ರವಾದಿ(ಸ) ಅವರ ಜ ಯಾತ್ರೆಗೆ ಹೊರಟೆ. ಈ ಸಲವೂ ಪ್ರವಾದಿ(ಸ) ಸಹಾಬಿಗಳಿಗೆ ಮುಂದೆ ಹೋಗುವಂ ಆಜ್ಞಾಪಿಸಿದರು. ಅವರು ಮುಂದೆ ಹೋದ ಬಳಿಕ ಪ್ರವಾದಿ(ಸ) ನನ್ನನ್ನು ಓಟ ಸ್ಪರ್ಧೆಗೆ ಕರೆದರು. ಈ ಸಲ ಪ್ರವಾದಿ(ಸ) ಗೆದ್ದರು. ಆಗ ಪ್ರವಾದಿ(ಸ), "ಇದ ಆ ಸೋಲಿನ ಉತ್ತರ" ಎಂದು ಹೇಳಿದರು. (ಅತ್ತಬ್ರೀ, ಅಹ್ಮದ್, ಅಬೂದಾವೂದ್

❖ ❖ ❖

# ಲೈಂಗಿಕ ಸಂಬಂಧಗಳು

ಲೈಂಗಿಕ ಸಂಬಂಧ ಹೇಗಿರಬೇಕು ಎಂಬ ಪ್ರಶ್ನೆಯು ಮಾನವನಷ್ಟೇ ಪುರಾತನ ವಾಗಿದೆ. ಈ ಪ್ರಶ್ನೆಯ ಹಿಂದಿರುವುದು ಲೈಂಗಿಕ ಬಯಕೆ ಮಾತ್ರವಲ್ಲ ಅದರಲ್ಲಿ ಮಾನವ ಸಂತತಿಯ ಅಸ್ತಿತ್ವದ ಭಾವನೆಯೂ ಅಡಕವಾಗಿದೆ. ಏಕೆಂದರೆ ಮಾನವನು ಈ ತನಕ ತನ್ನ ಸಂತಾನ ಪರಂಪರೆಯನ್ನು ಮುಂದುವರಿಸಲು ಲೈಂಗಿಕ ಸಂಬಂಧದ ಹೊರತು ಇನ್ನಾವ ವಿಧಾನವನ್ನೂ ಕಂಡು ಹಿಡಿದಿಲ್ಲ. ಈ ಸಂಬಂಧವು ಮುರಿದು ಹೋದರೆ ಮಾನವ ಸಂತತಿಯ ಪರಂಪರೆಯೂ ಕೊನೆಗೊಂಡೀತು.

ತನಗೆ ಸಂತತಿಯಾಗಬೇಕು ಮತ್ತು ತನ್ನ ಜೀವನದ ಚಟುವಟಿಕೆಗಳಲ್ಲಿ ಅದು ತನಗೆ ನೆರವಾಗಬೇಕೆಂಬ ಅದಮ್ಯ ಬಯಕೆ ಮಾನವನಲ್ಲಿದೆ. ಶತ್ರುವಿನಿಂದ ತನ್ನ ರಕ್ಷಣೆ ಹಾಗೂ ಜೀವನೋಪಾಯವನ್ನು ಗಳಿಸುವುದರಲ್ಲಿ ತನಗೆ ನೆರವಾಗಬೇಕೆಂಬುದೇ ಇದರ ಉದ್ದೇಶ. ಅವನು ತನ್ನ ಈ ಬಯಕೆಯನ್ನು ಈಡೇರಿಸಲು ಹೊರಡುವಾಗ ಅವನ ಮುಂದೆ ಅನೇಕ ಸಮಸ್ಯೆಗಳು ಬರುತ್ತವೆ. ಎಲ್ಲ ಸಂತತಿಯನ್ನೂ ಬಾಕಿ ಉಳಿಸಬೇಕೇ ಅಥವಾ ತನಗೆ ಉಪಯುಕ್ತವಾಗುವವುಗಳನ್ನು ಮಾತ್ರ ಉಳಿಸಿದರೆ ಸಾಕೇ? ಅದನ್ನು ಸಾಕಿ ಸಲಹುವ ಕೆಲಸ ಗಂಡು ಮಾಡಬೇಕೇ, ಹೆಣ್ಣು ಮಾಡಬೇಕೇ ಅಥವಾ ಅವರಿಬ್ಬರೂ ಸೇರಿ ಆ ಹೊಣೆಯನ್ನು ನಿರ್ವಹಿಸಬೇಕೇ? ಸಂಪನ್ಮೂಲಗಳು ಮತ್ತು ಸೊತ್ತು-ವಿತ್ತಗಳು ಅವರ ಮಧ್ಯೆ ಹೇಗೆ ವಿತರಣೆಯಾಗಬೇಕು? ಇವೇ ಮೊದಲಾದ ಸಮಸ್ಯೆಗಳು ವಿಶಾಲವಾಗಿ ಕುಟುಂಬ, ಗೋತ್ರ, ಜನಾಂಗ ಮತ್ತು ರಾಷ್ಟ್ರಗಳು ರೂಪು ತಾಳುತ್ತವೆ. ಕುಟುಂಬ ಮತ್ತು ಗೋತ್ರದ ಜೀವನವು ಕೆಲವೊಮ್ಮೆ ತಾಯಿಯ ಸುತ್ತ ತಿರುಗುತ್ತದೆ. ತಂದೆಯು ದುಡಿದು ಜೀವನೋಪಾಯವನ್ನು ಗಳಿಸಿ ಕೊಡುತ್ತಾನೆ. ತಾಯಿ ಅದನ್ನು ತನ್ನ ಮಕ್ಕಳು ಮತ್ತು ಕುಟುಂಬದ ಇತರ ಸದಸ್ಯರ ಮೇಲೆ ಖರ್ಚು ಮಾಡುತ್ತಾಳೆ. ಸಂತತಿ ಕೂಡಾ ತಾಯಿಯದೆಂದೇ ಪರಿಗಣಿಸಲ್ಪಡುತ್ತದೆ. ಇನ್ನು ಕೆಲವೆಡೆ ಕುಟುಂಬದ ಮೇಲೆ ಪುರುಷನ ನಿಯಂತ್ರಣವಿರುತ್ತದೆ. ಮತ್ತೆ ಕೆಲವೆಡೆ ತಂದೆ-ತಾಯಿಗಳಿಬ್ಬರೂ ಸೇರಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ.

ಸಮಸ್ಯೆಗಳನ್ನು ಬಗೆಹರಿಸುವ ಈ ವಿಭಿನ್ನ ರೂಪಗಳ ಜತೆ ಲೈಂಗಿಕ

ಸಂಬಂಧದ ವಿಧಾನವು ಬದಲಾಗುತ್ತಿರುತ್ತದೆ. ಕೆಲವೆಡೆ ಅದು ಕೇವಲ ಕ್ಷಣಿಕ ಮತ್ತು ತಾತ್ಕಾಲಿಕ ಸಂಬಂಧವಾಗಿರುತ್ತದೆ. ಇನ್ನು ಕೆಲವೆಡೆ ಅದನ್ನು ಶಾಶ್ವತ ಸಂಬಂಧವೆಂದು ಪರಿಗಣಿಸಲಾಗುತ್ತದೆ. ಕೆಲವೆಡೆ ಗಂಡು-ಹೆಣ್ಣಿನ ಸಮ್ಮತಿಯು ಆ ಸಂಬಂಧಕ್ಕೆ ಸಾಕೆನಿಸಿದರೆ ಇನ್ನು ಕೆಲವೆಡೆ ಅದಕ್ಕೆ ಅನೇಕ ಆಚಾರ-ಸಂಪ್ರದಾಯಗಳನ್ನು ಪಾಲಿಸಬೇಕಾಗುತ್ತದೆ. ಕೆಲವೆಡೆ ಓರ್ವ ಮಹಿಳೆಯನ್ನು ಕುಟುಂಬದ ಎಲ್ಲ ಸದಸ್ಯರೂ ಭೋಗಿಸುವ ಹಕ್ಕು ಹೊಂದಿರುತ್ತಾರೆ. ಇನ್ನು ಕೆಲವೆಡೆ ಬಹುಪತ್ನಿತ್ವದ ಸಂಪ್ರದಾಯವು ಜಾರಿಯಲ್ಲಿದ್ದರೆ ಮತ್ತೆ ಕೆಲವೆಡೆ ಏಕಪತ್ನಿತ್ವವನ್ನೇ ಅನುಸರಿಸಲಾಗುತ್ತದೆ. ಒಟ್ಟಿನಲ್ಲಿ ಎಲ್ಲರಿಗೂ ಅನ್ವಯವಾಗುವ ಯಾವುದೇ ಸಾಮಾನ್ಯ ನಿಯಮವಿರಲಿಲ್ಲ.

ಈ ವಿಭಿನ್ನ ಕ್ರಮಗಳು ಆಯಾ ಕಾಲದ ಸಾಮಾಜಿಕ ಮತ್ತು ಆರ್ಥಿಕ ಬೇಡಿಕೆಗಳಿಗನುಗುಣವಾಗಿ ಅಸ್ತಿತ್ವಕ್ಕೆ ಬಂದುವು ಎಂದು ಭಾವಿಸುವುದು ಸರಿಯಲ್ಲ. ಇವುಗಳ ಪೈಕಿ ಕೆಲವನ್ನು ಮನುಷ್ಯನು ಖಂಡಿತ ತನ್ನ ಪರಿಸ್ಥಿತಿಯಿಂದಾಗಿ ಅಳವಡಿಸಿರಬಹುದು. ಆದರೆ ಕೆಲವು ವಿಧಾನಗಳು ಕೇವಲ ವಿಷಯಾಸಕ್ತಿಯ ಶಮನಕ್ಕಾಗಿ ಬಳಕೆಗೆ ಬಂದುವು ಎಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ವಿಷಯಾಸಕ್ತಿಯ ಬೇಡಿಕೆಗಳು ಬಹಳ ಪ್ರಬಲವಾಗಿದ್ದು ಅವುಗಳ ನಿಯಂತ್ರಣ ಅತ್ಯಂತ ಪ್ರಯಾಸಕರವಾಗಿದೆ. ಆದ್ದರಿಂದ ಅದರ ಶಮನದಲ್ಲಿ ಮನುಷ್ಯನು ಸಮಾಜದ ಹಿತಾಸಕ್ತಿಯನ್ನು ಪರಿಗಣಿಸಿರಬಹುದೆಂದು ಭಾವಿಸುವುದು ಸರಿಯಲ್ಲ. ಅನುಭವ ಮತ್ತು ಇತಿಹಾಸದಿಂದ ತಿಳಿದು ಬರುವಂತೆ ಲೈಂಗಿಕ ಬಯಕೆಗಳು ಸಾಮಾಜಿಕ ಹಿತಾಸಕ್ತಿಗಳನ್ನು ಮೀರಿಸುತ್ತವೆ. ಇದರಿಂದಾಗಿ ಸಮಾಜಕ್ಕೆ ಬಹಳ ನಷ್ಟಗಳಾಗಿವೆ. ಸಹಸ್ರಾರು ಜೀವಗಳು ನಾಶವಾಗಿವೆ. ಮನುಷ್ಯರ ಮಧ್ಯೆ ಶಾಂತಿ-ನೆಮ್ಮದಿ ಮಾಯವಾಗಿದೆ. ಶಾಂತಿ-ಸಮಾಧಾನಕ್ಕೆ ಬದಲಾಗಿ ಭಯ ಮತ್ತು ಆತಂಕ ವ್ಯಾಪಿಸಿದೆ. ಇವೆಲ್ಲವೂ ವಿಷಯಾಸಕ್ತಿಯ ಹಿಂದೆ ಬಿದ್ದುದರ ಪರಿಣಾಮವಾಗಿದೆ.

## ಸನ್ಯಾಸ

ಈ ಪರಿಸ್ಥಿತಿಯು ಸನ್ಯಾಸ ಮತ್ತು ಒಂಟಿತನದ ಜೀವನಕ್ಕೆ ನಾಂದಿಯಾಯಿತು. ಶಾಂತಿ, ನೆಮ್ಮದಿ ಮತ್ತು ಮಾನವಕುಲದ ಮೋಕ್ಷವು ಲೈಂಗಿಕ ಬಯಕೆಗಳನ್ನು ಹತ್ತಿಕ್ಕುವುದರಲ್ಲೇ ಅಡಕವಾಗಿದೆ ಎಂದು ಪರಿಗಣಿಸಲಾಯಿತು. ಏಕೆಂದರೆ ಅಸಮಾಧಾನ ಮತ್ತು ಕ್ಷೋಭೆಯ ಈ ಮೂಲ ಚಿಲುಮೆಯನ್ನು ಮುಚ್ಚದೆ ಶಾಂತಿ-ನೆಮ್ಮದಿ ದೊರೆಯಲಾರದು. ಈ ದೃಷ್ಟಿಕೋನಕ್ಕೆ ಯುರೋಪ್, ಈಜಿಪ್ಟ್, ಗ್ರೀಸ್, ಭಾರತ, ಚೀನಾ ಮುಂತಾದ ದೇಶಗಳಲ್ಲಿ ಬಹಳ ಜನಪ್ರಿಯತೆ ಸಿಕ್ಕಿತು. ಇದು ವ್ಯಾಪಕವಾದಲ್ಲೆಲ್ಲಾ ಜನರನ್ನು ಲೈಂಗಿಕ ಆಸಕ್ತಿ ಯಿಂದ ಹಿಂಜರಿಸುವ ಕೆಲಸ ನಿರ್ವಹಿಸಿತು. ಎಷ್ಟರ ವರೆಗೆಂದರೆ ಸ್ತ್ರೀ-ಪುರುಷರು ಪರಸ್ಪರರನ್ನು ದ್ವೇಷಿಸತೊಡಗಿದರು. ಅವರ ಮಧ್ಯೆ ಅಂತರ ಮತ್ತು ಅಗಲಿಕೆಯನ್ನು ಮಾನವೀಯತೆಯ ಉತ್ತುಂಗವೆಂದು ಬಗೆಯಲಾಯಿತು

ಇದನ್ನೇ ಪ್ರಗತಿ ಮತ್ತು ಕಲ್ಯಾಣದ ಮಾರ್ಗವೆಂದು ಪರಿಗಣಿಸಲಾಯಿತು. ಆದರೆ ಇದರ ಪರಿಣಾಮವು ತದ್ವಿರುದ್ಧವಾಯಿತು. ಸನ್ಯಾಸ ಕೈಗೊಂಡವರ ಜೀವನದಿಂದ ನೈಜ ಶಾಂತಿ-ನೆಮ್ಮದಿ ಮಾಯವಾಯಿತು. ಅವರಲ್ಲಿ ಹಲವರು ತಮ್ಮ ಈ ಸಹಜ ಮತ್ತು ಅದಮ್ಯ ಬೇಡಿಕೆಯ ಪೂರೈಕೆಗೆ ತರತರದ ಅಸಹಜ ಮತ್ತು ಅನೈತಿಕ ವಿಧಾನಗಳನ್ನು ಅವಲಂಬಿಸಿದರು. ಇದರಿಂದಾಗಿ ತರತರದ ಮಾನಸಿಕ, ಶಾರೀರಿಕ ಮತ್ತು ಸಾಮಾಜಿಕ ರೋಗಗಳು ವ್ಯಾಪಿಸಿದುವು.

ಲೈಂಗಿಕ ಸಂಬಂಧದಿಂದ ದೂರವಿರುವುದರ ಪರಿಣಾಮವು ಕೇವಲ ಆ ವ್ಯಕ್ತಿಗಷ್ಟೇ ಸೀಮಿತವಾಗಿರುವುದಿಲ್ಲ, ಅದರ ಹಿಂದಿರುವ ಸ್ಫೂರ್ತಿಯು ಅವನ ಸಾಮಾಜಿಕ ಸಂಬಂಧಗಳನ್ನೇ ಮುರಿದು ಹಾಕುತ್ತದೆ. ಲೈಂಗಿಕ ಸಂಬಂಧವು ಮನುಷ್ಯನ ದುಷ್ಕೃತ್ಯದಿಂದಾಗಿ ಅಪವಿತ್ರಗೊಂಡಿರುವುದು ನಿಜ. ಆದರೆ ಅವನ ವೈಯಕ್ತಿಕ ಮತ್ತು ಸಾಮಾಜಿಕ ಸಂಬಂಧಗಳ ಪೈಕಿ ಯಾವುದು ಎಲ್ಲ ರೀತಿಯ ಕೆಡುಕುಗಳಿಂದ ಪೂರ್ಣ ಮುಕ್ತವಾಗಿದೆ? ತಾಯಿ ಮತ್ತು ಮಗುವಿನ ಸಂಬಂಧವು ಅತ್ಯಂತ ಸಹಜ ಸಂಬಂಧ. ಆದರೆ ಅದರಲ್ಲಿ ಕೂಡಾ ಇಂದು ನೂರಾರು ಕೆಡುಕುಗಳು ಕಾಣಿಸಿಕೊಂಡಿವೆ. ಈ ಕೆಡುಕುಗಳ ಕಾರಣದಿಂದಾಗಿ ತಾಯಿಯ ಮಡಿಲಿನಿಂದ ಮಗುವನ್ನು ಕಿತ್ತುಕೊಳ್ಳುವುದು ಸಮಂಜಸವೆನಿಸೀತೇ?

ಕಾಮಾಪೇಕ್ಷೆಯನ್ನು ನಿಗ್ರಹಿಸುವುದರ ಒಂದು ಪರಿಣಾಮ ನಾಗರಿಕತೆಯ ಅವನತಿಯೂ ಆಗಿದೆ. ಏಕೆಂದರೆ ನಾಗರಿಕತೆಯ ಉನ್ನತಿಯಲ್ಲಿ ವಿಷಯಾಸಕ್ತಿಗೂ ಮಹತ್ವದ ಪಾತ್ರವಿದೆ. ಮನುಷ್ಯನು ತನ್ನ ಬಯಕೆ-ಭಾವನೆಗಳ ಈಡೇರಿಕೆಯ ಸರಳ ವಿಧಾನದಿಂದ ಮಾತ್ರ ತೃಪ್ತನಾಗುವುದಿಲ್ಲ. ಅವನು ಅದರಲ್ಲಿ ವೈವಿಧ್ಯತೆ ಮತ್ತು ವಿಲಾಸವನ್ನು ಅರಸುತ್ತಾನೆ. ಪೇಟೆಯ ಮೆರುಗು, ವಿಹಾರಧಾಮಗಳ ಚಿತ್ತಾಕರ್ಷಕ ದೃಶ್ಯಗಳು, ಭವ್ಯ ಕಟ್ಟಡಗಳು ಮತ್ತಿತರ ನಾಗರಿಕತೆಯ ಸಾಧನಾನುಕೂಲತೆಗಳ ಹಿಂದೆ ಅವನ ವಿಷಯಾಸಕ್ತಿಯು ಹೆಚ್ಚಾಗುವಂತಹ ವಾತಾವರಣವಿರಬೇಕು ಎಂಬ ಬಯಕೆಯೂ ಕಾರ್ಯವೆಸಗುತ್ತದೆ.

ಇವೆಲ್ಲಕ್ಕಿಂತಲೂ ಮಿಗಿಲಾಗಿ ಸನ್ಯಾಸ ಜೀವನದ ಅತಿದೊಡ್ಡ ಕೊರತೆಯೇನೆಂದರೆ ಅದು ಮಾನವ ಸಂತತಿಯ ಶತ್ರುವಾಗಿದೆ. ಎರಡು ವರ್ಗಗಳಲ್ಲಿ ಪ್ರಕೃತಿಯು ಪರಸ್ಪರ ಆಕರ್ಷಣೆ ಇಟ್ಟಿರುವುದು ಅವುಗಳ ಮಿಲನದಿಂದ ಮೂರನೆಯ ಒಂದು ಜೀವ ಅಸ್ತಿತ್ವ ಪಡೆಯಬೇಕು ಮತ್ತು ಅವರ ಕಾಲಾನಂತರ ಅವರ ಉತ್ತರಾಧಿಕಾರಿಯಾಗಬೇಕು ಎಂಬುದಾಗಿದೆ. ಆದ್ದರಿಂದ ಈ ನಿಸರ್ಗದತ್ತ ಆಕರ್ಷಣೆಯು ಮಾನವ ಸಂತತಿಯ ಉಳಿವಿಗೆ ಹೇತುವಾಗಬೇಕು. ಆದರೆ ಓರ್ವ ಸನ್ಯಾಸಿಯು ಪ್ರಕೃತಿಯ ಈ ಕರೆಯನ್ನು ತಿರಸ್ಕರಿಸುತ್ತಾನೆ. ಅವನು ತನ್ನ ಅಸ್ತಿತ್ವವೇ ಭೂಮಿಗೆ ಭಾರವೆಂದು ಪರಿಗಣಿಸುತ್ತಾನೆ. ಪ್ರಕೃತಿಯ ಈ ಕರೆಗೆ ಓಗೊಟ್ಟರೆ ತನ್ನ ಆತ್ಮವು ಮಲಿನವಾದೀತೆಂದು ಬಗೆಯುತ್ತಾನೆ.

ಆದ್ದರಿಂದ ಈ ಉದ್ಯಾನವು ನಾಶವಾದರೆ ಆಗಲಿ ನಾನು ನನ್ನನ್ನು ಈ ಸಂಸಾರವೆಂಬ ಮುಳ್ಳಿನಲ್ಲಿ ಸಿಲುಕಿಸಿಕೊಳ್ಳಲು ಸಿದ್ಧವಿಲ್ಲ ಎನ್ನುತ್ತಾನೆ.

## ಮುಕ್ತ ಲೈಂಗಿಕತೆ

ಪುರಾತನ ಕಾಲದಿಂದಲೇ ಸನ್ಯಾಸದ ಜತೆಗೆ ಅದಕ್ಕೆ ವ್ಯತಿರಿಕ್ತವಾದ ಒಂದು ದೃಷ್ಟಿಕೋನವೂ ಕಾರ್ಯವೆಸಗುತ್ತಿರುವುದನ್ನು ನಾವು ಕಾಣುತ್ತೇವೆ. ಅದುವೇ ಮುಕ್ತ ಲೈಂಗಿಕತೆಯ ದೃಷ್ಟಿಕೋನ. ಲೈಂಗಿಕ ಬಯಕೆಯು ಒಂದು ಸಹಜ ಬಯಕೆ, ಇತರ ನೈಸರ್ಗಿಕ ಬಯಕೆಗಳಂತೆ ಇದರ ಪೂರೈಕೆಗೂ ವ್ಯವಸ್ಥೆಯಾಗಬೇಕು. ಇದರಲ್ಲಿ ಸರಿ–ತಪ್ಪು, ಧರ್ಮ–ಅಧರ್ಮದಂತಹ ಬಂಧನಗಳನ್ನು ಹೇರುವುದು ನಿರರ್ಥಕ. ಮನುಷ್ಯನ ಪ್ರಾಕೃತಿಕ ಬಯಕೆಯ ಮೇಲೆ ನಿಯಂತ್ರಣ ಹೇರುವುದು ಅನ್ಯಾಯವಾಗಿದೆ. ಆದ್ದರಿಂದ ಅವನು ಬಯಸುವ ರೀತಿಯಲ್ಲಿ ತನ್ನ ಕಾಮಾಪೇಕ್ಷೆಯನ್ನು ತೀರಿಸುವ ಮುಕ್ತ ಅವಕಾಶ ಮನುಷ್ಯನಿಗಿರಬೇಕು ಎಂಬುದೇ ಅದರ ತಾತ್ಪರ್ಯ.

ಈ ಸಿದ್ಧಾಂತವನ್ನು ಅಂಗೀಕರಿಸಿದ ಮೇಲೆ ಎಲ್ಲ ರೀತಿಯ ಸುಖ–ಭೋಗ ಮತ್ತು ಲೈಂಗಿಕ ಅರಾಜಕತೆಗೆ ಪರವಾನಗಿ ದೊರೆತಂತಾಗುತ್ತದೆ. ಆದ್ದರಿಂದ ವಿವಿಧ ಕಾಲಗಳಲ್ಲಿ ಅದಕ್ಕೆ ಬಹಳ ಪ್ರೋತ್ಸಾಹ ದೊರೆಯಿತು. ಅಲ್ಲಲ್ಲಿ ವೇಶ್ಯಾವಾಟಿಕೆ ಮತ್ತು ಕಾಮಕೇಳಿಯ ಕೇಂದ್ರಗಳು ಸ್ಥಾಪಿತವಾದುವು. ಭೋಗ–ವಿಲಾಸ ವ್ಯಾಪಕವಾಯಿತು. ಅನೈತಿಕ ಸಂಬಂಧ ಮತ್ತು ಅದರ ಪರಿಣಾಮಗಳನ್ನು ಸಸಂತೋಷ ಸ್ವೀಕರಿಸಲಾಯಿತು. ಎಲ್ಲಿಯ ವರೆಗೆಂದರೆ ಈ ಸಿದ್ಧಾಂತದಿಂದಾಗಿ ಸಮಾಜದಲ್ಲಿ ಮುಕ್ತ ಲೈಂಗಿಕತೆಯನ್ನು ಪ್ರೋತ್ಸಾಹಿಸಿ ಬೆಳೆಸುವ ಮತ್ತು ಕಾಮಾಪೇಕ್ಷೆಯನ್ನು ಈಡೇರಿಸುವ ಒಂದು ವರ್ಗವೇ ಅಸ್ತಿತ್ವಕ್ಕೆ ಬಂತು. ಈ ರೀತಿ ಮಾನವ ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ಲೈಂಗಿಕ ಅರಾಜಕತೆಯು ವ್ಯಾಪಕವಾಯಿತು.

ಬೈಬಲ್‌ನ ಪ್ರಸಿದ್ಧ ಕಥೆಯೊಂದಿದೆ: ಒಂದು ದಿನ ಏಸುಕ್ರಿಸ್ತರ ಬಳಿಗೆ ವ್ಯಭಿಚಾರವೆಸಗಿದ ಓರ್ವ ಅಪರಾಧಿ ಮಹಿಳೆಯನ್ನು ತರಲಾಯಿತು. 'ಈ ಹೆಣ್ಣು ವ್ಯಭಿಚಾರ ಮಾಡುತ್ತಿರುವಾಗಲೇ ದಸ್ತಗಿರಿಯಾದವಳು. ಇವಳ ಬಗ್ಗೆ ನೀವೇನು ಹೇಳುತ್ತೀರಿ' ಎಂದು ಏಸುಕ್ರಿಸ್ತರನ್ನು ಕೇಳಲಾಯಿತು. ಆಗ ಏಸುಕ್ರಿಸ್ತರು ಹೇಳಿದರು, 'ನಿಮ್ಮ ಪೈಕಿ ಪಾಪಿಯಲ್ಲದವನು ಆಕೆಗೆ ಮೊದಲು ಕಲ್ಲೆಸೆಯಲಿ...' ಇದನ್ನು ಕೇಳಿ ಹಿರಿಯರಿಂದ ಹಿಡಿದು ಕಿರಿಯರ ತನಕ ಎಲ್ಲರೂ ಒಬ್ಬೊಬ್ಬರಾಗಿ ಅಲ್ಲಿಂದ ಹೊರಟು ಹೋದರು. ಏಕೆಂದರೆ ಅವರ ಪೈಕಿ ಯಾರೂ ಆ ಪಾಪದಿಂದ ಮುಕ್ತರಾಗಿರಲಿಲ್ಲ. **(ಯೋಹಾನನು ಬರೆದ ಸುವಾರ್ತೆ ಭಾಗ– 8)**

ಲೈಂಗಿಕ ಅರಾಜಕತೆಯು ವಿಭಿನ್ನ ಹೆಸರಲ್ಲಿ ಪ್ರಚಲಿತವಿತ್ತು. ಕೆಲವೊಮ್ಮೆ ಅದನ್ನು ಸಾಮಾಜಿಕ ಮತ್ತು ನಾಗರಿಕ ಬೇಡಿಕೆಯೆಂದರೆ, ಇನ್ನು ಕೆಲವೊಮ್ಮೆ ಅದನ್ನು ಪ್ರಕೃತಿಯ

ಬೇಡಿಕೆಯೆಂದು ಹೇಳಲಾಯಿತು. ಮತ್ತೆ ಕೆಲವೊಮ್ಮೆ ಅದು ಧಾರ್ಮಿಕತೆಯ ಸೋಗು ಹಾಕಿತು. ಆದರೆ ಅದರ ಹಿನ್ನೆಲೆಯಲ್ಲಿದ್ದುದು ಸದಾ ಮನುಷ್ಯನ ಕಾಮತೃಷೆಯಾಗಿತ್ತು.

ಪ್ರವಾದಿ ಮುಹಮ್ಮದ್‌ರವರ(ಸ) ಆಗಮನಕ್ಕಿಂತ ಮುಂಚೆ ಅರೇಬಿಯದಲ್ಲಿ ವಿಷಯಾಸಕ್ತಿಯನ್ನು ಈಡೇರಿಸುವ ನಾಲ್ಕು ವಿಧಾನಗಳು ಪ್ರಚಲಿತವಿದ್ದುವು ಎಂದು ಹ. ಆಯಿಶಾ(ರ) ಅವರು ವರದಿ ಮಾಡಿರುವುದಾಗಿ ಬುಖಾರಿ ಮತ್ತು ಅಬೂದಾವೂದ್ ಎಂಬ ಹದೀಸ್ ಗ್ರಂಥಗಳಲ್ಲಿವೆ.

1. ವಿವಾಹ.

2. ಒಬ್ಬ ಪ್ರಸಿದ್ಧ ಮತ್ತು ಕುಲೀನ ವ್ಯಕ್ತಿಯಿಂದ ಗರ್ಭ ಧರಿಸಲಿಕ್ಕಾಗಿ ಪತಿಯು ತನ್ನ ಪತ್ನಿಯನ್ನು ಆತನೊಂದಿಗೆ ರಾತ್ರೆ ಕಳೆಯಲು ಆದೇಶಿಸುತ್ತಿದ್ದ. ಗರ್ಭಧಾರಣೆಯಾಗುವ ತನಕ ಅವನು ಆಕೆಯಿಂದ ದೂರವಿರುತ್ತಿದ್ದ.

3. ಹತ್ತರ ವರೆಗಿನ ಪುರುಷರು ಓರ್ವ ಮಹಿಳೆಯೊಂದಿಗೆ ಸಂಪರ್ಕ ವಿರಿಸುತ್ತಿದ್ದರು. ಅದರಿಂದ ಉಂಟಾಗುವ ಮಗು ಅವರ ಪೈಕಿ ಯಾರದೆಂದು ಮಹಿಳೆ ಹೇಳುತ್ತಾಳೋ ಆ ಮಗು ಆತನದೆಂದೇ ಪರಿಗಣಿಸಲ್ಪಡುತ್ತಿತ್ತು.

4. ವೃತ್ತಿನಿರತ ವೇಶ್ಯೆಯರು. ಅವರೊಂದಿಗೆ ಸಂಪರ್ಕ ಬೆಳೆಸಲು ಎಲ್ಲರಿಗೂ ಮುಕ್ತ ಅವಕಾಶವಿತ್ತು. ಆ ಮಹಿಳೆಯರಿಗೆ ಹುಟ್ಟುವ ಮಕ್ಕಳನ್ನು ವಂಶ ವಿದ್ಯೆಯ ತಜ್ಞರ ಸಲಹೆಯ ಮೇರೆಗೆ ಆಕೆಯೊಂದಿಗೆ ಸಂಪರ್ಕವಿರಿಸಿದ ಯಾವ ಪುರುಷನದ್ದೆಂದು ಸಾರಲಾಗುತ್ತಿತ್ತು. ಅವರು ಅದರ ಪಾಲನೆಯ ಹೊಣೆ ವಹಿಸಲೇ ಬೇಕಾಗಿತ್ತು.

ಸ್ವತಃ ನಮ್ಮ ದೇಶವಾದ ಭಾರತದಲ್ಲೂ ಲೈಂಗಿಕ ಸಂಬಂಧದ ಎಂಟು ವಿಧಾನಗಳು ಪ್ರಚಲಿತವಿದ್ದು ಅವೆಲ್ಲಕ್ಕೂ ಮಾನ್ಯತೆ ಲಭಿಸಿತ್ತು.

ಆದರೆ ಮುಕ್ತ ಲೈಂಗಿಕತೆಗೆ ಆಧುನಿಕ ಯುಗದಲ್ಲಿ ದೊರೆತಷ್ಟು ಜನಪ್ರಿಯತೆ ಎಂದೆಂದೂ ದೊರೆತಿರಲಿಲ್ಲ. ಏಕೆಂದರೆ ಈ ತನಕ ಅನೈತಿಕತೆ ಎಷ್ಟೇ ವ್ಯಾಪಕವಾಗಿದ್ದರೂ ಶೀಲ, ಚಾರಿತ್ರ್ಯ, ಪಾವಿತ್ರ್ಯ ಮತ್ತು ದೇವಭಕ್ತಿಯನ್ನೇ ಮಾನವತೆಯ ಶ್ರೇಷ್ಠತೆಯೆಂದು ಪರಿಗಣಿಸಲಾಗುತ್ತಿತ್ತು. ಮನುಷ್ಯನೂ ಕೆಲವು ಬಯಕೆ–ಬೇಡಿಕೆ, ಒಲವು–ಆಸಕ್ತಿಗಳಿರುವ ಇತರ ಪ್ರಾಣಿಗಳಂತಹ ಒಂದು ಪ್ರಾಣಿಯೆಂಬುದನ್ನು ವೈಚಾರಿಕವಾಗಿ ವಾದಿಸಲು ಪ್ರಯತ್ನ ನಡೆದದ್ದು ಆಧುನಿಕ ಯುಗದಲ್ಲಿ ಮಾತ್ರ. ಅದರ ಪ್ರಕಾರ, ಈ ಬಯಕೆಗಳನ್ನು ಈಡೇರಿಸಿಕೊಳ್ಳಲು ಅವನಿಗೆ ಜೀವನದ ಕೆಲವು ಕ್ಷಣಗಳು ಲಭಿಸಿವೆ. ಅವು ಮುಗಿಯುತ್ತಲೇ ಅವನೂ ಮುಗಿದು ಹೋಗುತ್ತಾನೆ. ಆದ್ದರಿಂದ ಐಷಾರಾಮ ಮತ್ತು ಜೀವನದ ಸವಿಯನ್ನು ಏನು ಅನುಭವಿಸುವುದಿದ್ದರೂ ಅದನ್ನು ಈ ಜೀವಿತಾವಧಿಯಲ್ಲೇ ಅನುಭವಿಸಿ ತೀರಬೇಕು. ಆದ್ದರಿಂದ ಮನುಷ್ಯನು ತನ್ನ ಕಾಮನೆಗಳನ್ನು ಹತ್ತಿಕ್ಕುವ ಅಥವಾ ನಿಯಂತ್ರಿಸುವ ಬದಲು ಅವುಗಳನ್ನು ಗರಿಷ್ಠ

ಮಟ್ಟದಲ್ಲಿ ಪೂರೈಸಲು ಬೇಕಾದ ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಳ್ಳಬೇಕು.

ಸ್ತ್ರೀ–ಪುರುಷರ ಮುಕ್ತ ಲೈಂಗಿಕ ಸಂಬಂಧವನ್ನು ಧರ್ಮವು ಘೋರ ಪಾ ನೀಚ ಕಾರ್ಯ, ಅತ್ಯಂತ ಅಶ್ಲೀಲ ಕೃತ್ಯವೆಂದೆಲ್ಲಾ ಚಿತ್ರಿಸಿದೆ. ಆದರೆ ವಾಸ್ತವದ ಮನುಷ್ಯನು ತನ್ನ ಒಂದು ಸಹಜ ಬಯಕೆಯನ್ನು ಪೂರೈಸುವಲ್ಲಿ ಇರುವಂತಹ ಕೃತ ನಿಯಂತ್ರಣಗಳನ್ನು ಪಾಲಿಸಲಿಲ್ಲವೆಂಬ ಕಾರಣಕ್ಕಾಗಿ ಮಾತ್ರ ಅವನನ್ನು ದೂಷಿಸುವುದ ಸರಿಯಲ್ಲ. ಯಾವುದೇ ಪ್ರಾಣಿಯು ತನ್ನ ಕಾಮನೆಯನ್ನು ಹೇಗೆ ತೀರಿಸುತ್ತದೆಂಬುದ ಪ್ರಶ್ನೆಯೇ ಅಲ್ಲ. ಅದೇ ರೀತಿ ಮನುಷ್ಯನ ಮಟ್ಟಿಗೂ ಈ ನಿಯಂತ್ರಣಗಳ ಪ್ರಶ್ನೆಯ ನಿರರ್ಥಕವಾಗಿದೆ. ಇಲ್ಲಿ ನೋಡಲಿಕ್ಕಿರುವುದು ಬೇರೊಬ್ಬ ವ್ಯಕ್ತಿಗೆ ಅದರಿಂದೇನಾದರ ನಷ್ಟವಾಯಿತೇ ಎಂಬುದು ಮಾತ್ರ. ಅವನ ಯಾವುದೇ ಕೃತ್ಯವು ವ್ಯಕ್ತಿ ಮತ ಸಮಾಜದ ಪಾಲಿಗೆ ಹಾನಿಕರವಾಗುತ್ತಿದ್ದರೆ ಅದನ್ನು ತಡೆಯಲೇ ಬೇಕು. ಅನ್ಯಥ ಅದಕ್ಕೆ ಅನುಮತಿ ನೀಡದಿರುವುದು ಸಮಂಜಸವೆನಿಸುವುದಿಲ್ಲ ಎಂಬುದೇ ಆಧುನಿ ಮುಕ್ತ ಲೈಂಗಿಕ 'ತತ್ವಜ್ಞಾನ'ದ ತಿರುಳು.

ಈ ಸಿದ್ಧಾಂತವು ಮೃಗೀಯತೆಯ ಎಲ್ಲ ಗುಣಗಳನ್ನೂ ಮನುಷ್ಯ ಪ್ರಕೃತಿಯೆಂದ ಸಾರಿದೆ. ಸ್ವೇಚ್ಛೆಯ ದಾಸ್ಯಕ್ಕೆ ಪುರಾವೆಗಳನ್ನು ಒದಗಿಸಲಾಗಿದೆ. ಮನುಷ್ಯನಲ್ಲಿ ಆ ಕೆಡುಕು ಮಾಡುವಾಗಲೆಲ್ಲಾ ಅವನನ್ನು ಚುಚ್ಚುತ್ತಿರುವಂತಹ 'ಆತ್ಮಸಾಕ್ಷಿ' ಎಂ ಮುಳ್ಳನ್ನು ತೆಗೆದುಬಿಟ್ಟು, ವಿಷಯಾಸಕ್ತಿಗೆ ಅವನ ಮನವು ಯಾವುದೇ ಅಳುಕಿಲ್ಲ ಮುಕ್ತವಾಗಬೇಕೆಂಬುದೇ ಇದರ ಉದ್ದೇಶ. ಆದ್ದರಿಂದಲೇ ವಿಷಯಾಸಕ್ತಿಯ ವ್ಯಾಪಕವಾಗುವ ರೀತಿಯಲ್ಲಿ ಅದು ಸಂಸ್ಕೃತಿ–ನಾಗರಿಕತೆಯ ರೂಪರೇಷೆಯನ ತಯಾರಿಸಿದೆ. ಅವನ ಪಂಚೇಂದ್ರಿಯಗಳ ಮೂಲಕ ವಿಷಯಾಸಕ್ತಿಯನ್ನು ಕೆರಳಿಸು ರುವ ಮತ್ತು ಅದರ ಶಮನಕ್ಕೆ ವ್ಯವಸ್ಥೆ ಮಾಡುವ ಎಲ್ಲ ಏರ್ಪಾಟುಗಳೂ ಆಗಿವ ಸ್ತ್ರೀ–ಪುರುಷ ಮಿಲನಕ್ಕಿರುವ ಎಲ್ಲ ನಿಯಂತ್ರಣಗಳನ್ನು ಕಿತ್ತೊಗೆಯಲಾಯಿತ ಅಶ್ಲೀಲ ಸಾಹಿತ್ಯ ಮಾರುಕಟ್ಟೆಯಲ್ಲಿ ವ್ಯಾಪಿಸಿತು. ಶಿಕ್ಷಣ ವ್ಯವಸ್ಥೆಯನ್ನು ನೈತಿಕತೆಯ ಎಲ್ಲ ಮೇರೆಗಳಿಂದಲೂ ಮುಕ್ತಗೊಳಿಸಲಾಯಿತು. ನಗ್ನತೆ ಗೋಡೆಗಳಲ್ಲೂ ಬೀದಿಗಳಲ ಉದ್ಯಾನಗಳಲ್ಲೂ ಬೀಚ್‌ಗಳಲ್ಲೂ ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳಲ ವ್ಯಾಪಿಸಿತು. ಮನುಷ್ಯನಲ್ಲಿರುವ ಕಾಮಾಗ್ನಿಯನ್ನು ಪ್ರಜ್ವಲಿಸುವಂತೆ ಮಾಡುವುದರ ಯಾವ ಕೊರತೆಯನ್ನೂ ಉಳಿಸಲಿಲ್ಲ. ಮದ್ಯ ಮತ್ತು ಮಾದಕ ದ್ರವ್ಯಗಳು ಕಾರ್ಯಕ್ಕೆ ಮತ್ತಷ್ಟು ಸಹಕಾರ ನೀಡುತ್ತಿವೆ.

## ಇಸ್ಲಾಮ್ ಮತ್ತು ಲೈಂಗಿಕ ಸಂಬಂಧ

ಲೈಂಗಿಕತೆಯ ಸಮಸ್ಯೆಯನ್ನು ಬಗೆಹರಿಸುವಲ್ಲಿ ಇಂದು ದೊಡ್ಡದೊ ದಾರ್ಶನಿಕರು ಸೋತಿದ್ದಾರೆ. ಅವರು ನೀತಿ–ನಡವಳಿಕೆಯ ಕಡೆಗೆ ಒಲಿದರೆ ಲೈಂಗಿ

ಬಯಕೆಯನ್ನೇ ಅತಿದೊಡ್ಡ ಪಾಪವೆಂದು ಬಗೆದರು. ಲೈಂಗಿಕ ಆಸಕ್ತಿಗೆ ಮಹತ್ವ ನೀಡಿದಾಗ ನೀತಿ-ನಡವಳಿಕೆಯ ಎಲ್ಲ ಮೇರೆಗಳನ್ನು ಮೀರಿ ನಡೆದರು.

ಮನುಷ್ಯನ ಲೈಂಗಿಕ ಸಮಸ್ಯೆಯನ್ನು ಪೂರ್ಣವಾಗಿ ಪರಿಹರಿಸುವಲ್ಲಿ ಇಸ್ಲಾಮ್ ಮಾತ್ರ ಯಶಸ್ವಿಯಾಗಿದೆ. ಅದು ನೈತಿಕ ಮೌಲ್ಯಗಳಿಗೂ ಯಾವುದೇ ಚ್ಯುತಿಯುಂಟು ಮಾಡುವುದಿಲ್ಲ. ಮನುಷ್ಯನು ಕೇವಲ ಬಯಕೆ-ಭಾವನೆಗಳ ಗುಲಾಮನಾಗಿ ಬಿಡುವು ದರಿಂದಲೂ ಅದು ಆತನನ್ನು ತಡೆಯುತ್ತದೆ. ಮಾತ್ರವಲ್ಲ, ಮನುಷ್ಯ ಸಹಜವಾದ ವಿಷಯಾಸಕ್ತಿಯ ಶಮನಕ್ಕಾಗಿ ಅದು ಧರ್ಮಸಮ್ಮತ ಮತ್ತು ಪ್ರಾಕೃತಿಕ ವಿಧಾನಗಳನ್ನು ಸೂಚಿಸುತ್ತದೆ.

ಲೈಂಗಿಕ ಸಮಸ್ಯೆಯ ಕುರಿತು ಇಸ್ಲಾಮಿನ ಬೋಧನೆಗಳನ್ನು ಐದು ಶೀರ್ಷಿಕೆಗಳಲ್ಲಿ ವಿಂಗಡಿಸಬಹುದು.

1) ಬ್ರಹ್ಮಚರ್ಯೆಯ ಕಲ್ಪನೆಯ ಖಂಡನೆ.

2) ಧರ್ಮಸಮ್ಮತ ಮೇರೆಯೊಳಗಿದ್ದು ಲೈಂಗಿಕ ಬಯಕೆಯನ್ನು ತೀರಿಸಲು ನೆರವಾಗುವುದು.

3) ವ್ಯಭಿಚಾರದ ನಿಷೇಧ.

4) ವ್ಯಕ್ತಿಯ ತರಬೇತಿ.

5) ಸಮಾಜದ ಸುಧಾರಣೆ.

## 1. ಸನ್ಯಾಸ ಮತ್ತು ಬ್ರಹ್ಮಚರ್ಯೆ

ದೇವಭಕ್ತಿಯ ವೈರಾಗ್ಯದ ಕಲ್ಪನೆಯಲ್ಲಿ ಮದುವೆಯಾಗದ ಸ್ತ್ರೀ-ಪುರುಷರು ದೇವ ಸಂಪ್ರೀತಿಯನ್ನು ಹೇಗೆ ಗಳಿಸುವುದು ಎಂಬ ಬಗ್ಗೆಯೇ ಚಿಂತಿತರಾಗಿರುತ್ತಾರೆ. ಆದರೆ ಮದುವೆಯಾದವರು ತಮ್ಮ ಪತ್ನಿ ಅಥವಾ ಪತಿಯನ್ನು ಹೇಗೆ ಸಂತುಷ್ಟಗೊಳಿಸು ವುದು ಎಂಬ ಚಿಂತೆಯಲ್ಲೇ ಇರುತ್ತಾರೆ. ಆದ್ದರಿಂದ ನಿಜವಾದ ದೇವಭಕ್ತನಾಗಬಯಸು ವವನು ಮತ್ತು ಭಕ್ತಿಯ ಮಾರ್ಗದಲ್ಲಿ ಉನ್ನತಿಯನ್ನು ಗಳಿಸಬಯಸುವವನು ಮದುವೆ, ಮಡದಿ, ಮಕ್ಕಳು ಸಂಸಾರವನ್ನೆಲ್ಲಾ ತೊರೆದು ತನ್ನ ಪೂರ್ಣ ಗಮನವನ್ನು ದೇವನತ್ತ ಕೇಂದ್ರೀಕರಿಸಬೇಕು ಎಂಬುದೇ ಈ ಕಲ್ಪನೆಯ ತತ್ವ

ಆದರೆ ದೇವನನ್ನು ಮೆಚ್ಚಿಸಲಿಕ್ಕಾಗಿ ದಾಂಪತ್ಯ ಜೀವನದ ಸಮಸ್ಯೆಗಳಿಂದ ನಿಶ್ಚಿಂತನಾಗಬೇಕೆಂದು ಇಸ್ಲಾಮ್ ಹೇಳುವುದಿಲ್ಲ. ಅದು ದಾಂಪತ್ಯ ಜೀವನವನ್ನು ದೇವ ಸಂಪ್ರೀತಿಯ ಮಾರ್ಗದ ತೊಡಕೆಂದೂ ಭಾವಿಸುವುದಿಲ್ಲ. ಹಾಗಿರುತ್ತಿದ್ದರೆ ಮನುಷ್ಯನು ತನ್ನ ಒಂದು ಪ್ರಾಕೃತಿಕ ಬೇಡಿಕೆಗಾಗಿ ದಾಂಪತ್ಯ ಸಂಬಂಧ ಇಟ್ಟು ಕೊಳ್ಳಲು ನಿರ್ಬಂಧಿತನಾಗುತ್ತಿರಲಿಲ್ಲ. ಹಾಗೆಯೇ ಆ ಸಂಬಂಧವನ್ನೇ ಮಾನವ ಸಂತತಿಯ ಉಳಿವಿನ ಏಕೈಕ ಮಾರ್ಗವೆಂದೂ ಪರಿಗಣಿಸಲಾಗುತ್ತಿರಲಿಲ್ಲ. ಬದಲಾಗಿ

ಈ ಧ್ಯೇಯ ಸಾಧನೆಯ ಇತರ ಧರ್ಮಬದ್ಧ ಮಾರ್ಗಗಳನ್ನು ತೋರಿಸಿ ಕೊಡಲಾಗುತ್ತಿತ್ತು. ಆಗ ಅಲ್ಲಾಹನ ಮೆಚ್ಚುಗೆ ಗಳಿಸಬಯಸುವವರು ಅದನ್ನು ಅನುಸರಿಸಬಹುದಿತ್ತು. ಮನುಷ್ಯ ಪ್ರಕೃತಿಯು ಯಾವ ಕ್ರಿಯೆಗಾಗಿ ಹಾತೊರೆಯುತ್ತಿದೆಯೋ ಅದರಿಂದ ಅವನನ್ನು ತಡೆಯುವುದು ಹಾಗೂ ಅದಕ್ಕೆ ಯಾವುದೇ ಪರ್ಯಾಯ ವ್ಯವಸ್ಥೆಯನ್ನು ಸೂಚಿಸದೆ ಇರುವುದು ಅಲ್ಲಾಹನ ಯುಕ್ತಿ ಮತ್ತು ಜಾಣ್ಮೆಗೆ ವಿರುದ್ಧವಾಗಿದೆ.

ಈ ಲೋಕಕ್ಕೆ ದೇವಸಂಪ್ರೀತಿಯ ಮಾರ್ಗ ತೋರಿಸಲಿಕ್ಕೆ ಬಂದ ಮಹಾ ಪುರುಷರಾದರೂ ಕನಿಷ್ಠಪಕ್ಷ ಬೇರೆ ಯಾವುದಾದರೂ ಧರ್ಮಬದ್ಧ ಮಾರ್ಗದಿಂದ ಹುಟ್ಟುತ್ತಿದ್ದರು. ಈ ಲೋಕದಲ್ಲಿರುವ ತನಕ ಲೈಂಗಿಕ ಸಂಪರ್ಕದಿಂದ, ದಾಂಪತ್ಯ ಜೀವನದಿಂದ ದೂರವಿರುತ್ತಿದ್ದರು. ಆದರೆ ವಾಸ್ತವಿಕತೆಯು ಅದಕ್ಕೆ ತೀರಾ ವ್ಯತಿರಿಕ್ತವಾಗಿದೆ.

"ನಾವು ನಿಮಗಿಂತ ಮುಂಚೆಯೂ ಅನೇಕ ಸಂದೇಶವಾಹಕರನ್ನು ಕಳುಹಿಸಿದ್ದೆವು ಮತ್ತು ಅವರಿಗೆ ಪತ್ನಿಯರನ್ನೂ ಮಕ್ಕಳನ್ನೂ ನೀಡಿದ್ದೆವು."

**(ಪವಿತ್ರ ಕುರ್‌ಆನ್: 13: 38)**

"ವಿವಾಹವು ಪ್ರವಾದಿಗಳ ಸಂಪ್ರದಾಯವಾಗಿತ್ತು" ಎಂದು ಪ್ರವಾದಿ ಮುಹಮ್ಮದ್(ಸ) ಹೇಳಿರುವರು. **(ತಿರ್ಮಿದಿ)**

ಸನ್ಯಾಸವು ದೇವಸಾಮಿಪ್ಯದ ಮಾರ್ಗವೆಂಬುದನ್ನು ಪವಿತ್ರ ಕುರ್‌ಆನ್ ಒಪ್ಪುವುದಿಲ್ಲ. ಕುರ್‌ಆನಿನ ಪ್ರಕಾರ ಇದು ಅಲ್ಲಾಹನ ಸನದು (Sanction) ಇಲ್ಲದೆಯೇ ಮನುಷ್ಯರು ಸ್ವಯಂ ಆವಿಷ್ಕರಿಸಿದ ಒಂದು ಪದ್ಧತಿಯಾಗಿದೆ.

"ಸನ್ಯಾಸವನ್ನು ಅವರು ತಾವೇ ಆವಿಷ್ಕರಿಸಿಕೊಂಡರು. ನಾವು ಅದನ್ನು ಅವರ ಮೇಲೆ ಕಡ್ಡಾಯಗೊಳಿಸಿರಲಿಲ್ಲ. ಆದರೆ ಅಲ್ಲಾಹನ ಸಂಪ್ರೀತಿಯ ಅಭಿಲಾಷೆಯಿಂದ ಸ್ವತಃ ಅವರೇ ಈ ನವೀನಾಚಾರವನ್ನು ಆರಂಭಿಸಿಕೊಂಡರು. ಆದರೆ ಅವರು ಅದನ್ನು ಪಾಲಿಸಬೇಕಾದ ರೀತಿಯಲ್ಲಿ ಪಾಲಿಸಲಿಲ್ಲ."

**(ಪವಿತ್ರ ಕುರ್‌ಆನ್: 57: 27)**

ಪ್ರವಾದಿ(ಸ) ಹೀಗೆ ಹೇಳಿರುವರು, "ವೈವಾಹಿಕ ಜೀವನವನ್ನು ತೊರೆಯುವುದು ಇಸ್ಲಾಮ್‌ನಲ್ಲಿಲ್ಲ." **(ಮುಸ್ನದ್ ಅಹ್ಮದ್, ಅಬೂದಾವೂದ್)**

ಪ್ರವಾದಿ(ಸ) ವಿವಾಹ ಮಾಡದೆ ಇರುವುದನ್ನು ತಡೆದಿರುವರು.

**[ವರದಿ: ಹ. ಆಯಿಶಾ(ರ) – ನಸಾಈ]**

"ಪ್ರವಾದಿ(ಸ) ನಮಗೆ ಅನುಮತಿ ಕೊಡುತ್ತಿದ್ದರೆ ನಾವು ನಮ್ಮನ್ನು ನಪುಂಸಕರಾಗಿ ಮಾಡಿಕೊಳ್ಳುತ್ತಿದ್ದೆವು." **(ಮುಸ್ಲಿಮ್)**

"ಪ್ರವಾದಿ(ಸ) ನಮಗೆ ಮದುವೆ ಮಾಡಿಕೊಳ್ಳುವಂತೆ ಆಜ್ಞಾಪಿಸುತ್ತಿದ್ದರು ಮತ್ತು ವಿವಾಹ ಮಾಡದಿರುವುದರಿಂದ ನಮ್ಮನ್ನು ಬಲವಾಗಿ ತಡೆಯುತ್ತಿದ್ದರು." (ದಾರಿಮಿ)

"ವಿವಾಹವು ನನ್ನ ಕ್ರಮವಾಗಿದೆ. ಯಾರು ನನ್ನ ಕ್ರಮವನ್ನು ಅನುಸರಿಸುವುದಿಲ್ಲವೋ ಅವನು ನನ್ನವನಲ್ಲ." (ಇಬ್ನುಮಾಜಃ)

ಇಸ್ಲಾಮ್ ಧರ್ಮದ ಪ್ರಕಾರ ವಿವಾಹ ಮಾಡಿಕೊಳ್ಳುವುದು ದೇವಭಕ್ತಿ ಮತ್ತು ಧರ್ಮನಿಷ್ಠೆಯ ಬೇಡಿಕೆಯಾಗಿದೆ. ಯಾರು ವೈವಾಹಿಕ ಸಂಬಂಧವನ್ನು ಬೆಳೆಸುತ್ತಾರೋ ಅವರು ತಮ್ಮ ಧರ್ಮನಿಷ್ಠೆಗೆ ಪ್ರಮಾಣ ಒದಗಿಸುತ್ತಾರೆ. ಅದಕ್ಕಾಗಿ ಅವರಿಗೆ ಅಲ್ಲಾಹನ ಬಳಿ ಪುಣ್ಯವಿದೆ.

"ಒಬ್ಬ ಮುಸ್ಲಿಮನು ಅಲ್ಲಾಹನ ಬಳಿ ಪ್ರತಿಫಲವನ್ನು ಬಯಸಿ ತನ್ನ ಮಡದಿ ಮಕ್ಕಳಿಗಾಗಿ ಖರ್ಚು ಮಾಡಿದರೆ ಅದು ಅವನ ಪಾಲಿಗೆ ದಾನವೆಂದು ಪರಿಗಣಿಸಲ್ಪಡುವುದು." (ಬುಖಾರಿ)

ಮಡದಿ ಮಕ್ಕಳಿಗಾಗಿ ಸಂಪಾದಿಸುವುದು ಮತ್ತು ವ್ಯಯಿಸುವುದನ್ನು ಸಾಮಾನ್ಯವಾಗಿ ಲೌಕಿಕ ಕಾರ್ಯವೆಂದು ಪರಿಗಣಿಸಲಾಗುತ್ತದೆ. ಆದ್ದರಿಂದಲೇ ಈ ತಪ್ಪುಕಲ್ಪನೆಯನ್ನು ನಿವಾರಿಸಲಿಕ್ಕಾಗಿ ಪ್ರವಾದಿ(ಸ) ಆ ಖರ್ಚನ್ನು ದಾನವೆಂದು ಸಾರಿರುವರು. ಒಬ್ಬ ವ್ಯಕ್ತಿ ದೇವಮಾರ್ಗದಲ್ಲಿ ದಾನ ಮಾಡಿದಾಗ ಪುಣ್ಯಕ್ಕೆ ಅರ್ಹನಾಗುವಂತೆಯೇ ತನ್ನ ಮಡದಿ ಮಕ್ಕಳಿಗಾಗಿ ತನ್ನ ಸಂಪತ್ತನ್ನು ವ್ಯಯಿಸುವವನೂ ಪುಣ್ಯಕ್ಕೆ ಅರ್ಹನಾಗುತ್ತಾನೆ.

ಇದಕ್ಕಿಂತಲೂ ಮುಂದುವರಿದು ಪ್ರವಾದಿ(ಸ) ಹೀಗೆ ಹೇಳಿರುವರು, "ನೀವು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವ ರೂಪಾಯಿ, ನೀವು ಓರ್ವ ಗುಲಾಮನ ವಿಮೋಚನೆಗಾಗಿ ಖರ್ಚು ಮಾಡುವ ರೂಪಾಯಿ, ಬಡವನಿಗೆ ದಾನ ನೀಡಲಿಕ್ಕಾಗಿ ನೀವು ಖರ್ಚು ಮಾಡುವ ರೂಪಾಯಿ ಹಾಗೂ ನೀವು ನಿಮ್ಮ ಮಡದಿ–ಮಕ್ಕಳಿಗಾಗಿ ವ್ಯಯ ಮಾಡುವ ರೂಪಾಯಿ. ಇವುಗಳ ಪೈಕಿ ನೀವು ನಿಮ್ಮ ಮಡದಿ–ಮಕ್ಕಳಿಗಾಗಿ ವ್ಯಯಿಸುವ ರೂಪಾಯಿಯ ಪುಣ್ಯಫಲವು ಅತ್ಯಧಿಕವಾಗಿದೆ." (ಮುಸ್ಲಿಮ್)

ಇನ್ನೊಂದು ವಚನದಲ್ಲಿ ಹ. ಉಸ್ಮಾನ್ ಬಿನ್ ಮಝ್‌ಊನ್(ರ)ರನ್ನುದ್ದೇಶಿಸಿ ಪ್ರವಾದಿ(ಸ) ಈ ರೀತಿ ಹೇಳಿರುವರು, "ಅಲ್ಲಾಹನನ್ನು ಭಯಪಡಿರಿ. ಏಕೆಂದರೆ ನಿಮ್ಮ ಮೇಲೆ ಅಲ್ಲಾಹನ ಹಕ್ಕಿರುವಂತೆ ನಿಮ್ಮ ಮಡದಿ–ಮಕ್ಕಳ ಹಕ್ಕೂ ಇದೆ. ನಿಮ್ಮ ಅತಿಥಿಗಳ ಮತ್ತು ಸ್ವಯಂ ನಿಮ್ಮ ಶರೀರದ ಹಕ್ಕೂ ಇದೆ. ಆದ್ದರಿಂದ ಈ ಎಲ್ಲ ಹಕ್ಕುಗಳನ್ನು ತೀರಿಸಲು ಪ್ರಯತ್ನಿಸಿರಿ." (ಮುಸ್ನದ್ ಅಹ್ಮದ್).

ಅರ್ಥಾತ್ ಅಲ್ಲಾಹನ ಹಕ್ಕುಗಳನ್ನು ಕಡೆಗಣಿಸುವವನು ಅಪರಾಧಿ ಯಾಗಿರುವಂತೆ ವೈವಾಹಿಕ ಹಕ್ಕುಬಾಧ್ಯತೆಗಳ ಬಗ್ಗೆ ಅಲಕ್ಷ್ಯ ತೋರುವವನೂ ಅಲ್ಲಾಹನ ಬಳಿ ವಿಚಾರಣೆಗೆ ಅರ್ಹವಾದಂತಹ ಅಪರಾಧವೆಸಗುತ್ತಾನೆ.

## 2. ಧರ್ಮಬದ್ಧವಾಗಿ ಕಾಮಾಪೇಕ್ಷೆಯನ್ನು ತೀರಿಸುವುದು

ಸನ್ಯಾಸದ ಒಲವು ಇರುವ ಎಲ್ಲ ಧರ್ಮಗಳೂ ದಾಂಪತ್ಯ ಜೀವನವನು ದೇವ ಭಕ್ತಿಗೆ ವಿರುದ್ಧವೆನ್ನುತ್ತವೆ. ಆದರೆ ಪ್ರವಾದಿ(ಸ) ಹೀಗೆ ಹೇಳಿರುವರು, "ನೀಷ ನಿಮ್ಮ ಪತ್ನಿಯೊಂದಿಗೆ ಸಂಸರ್ಗ ನಡೆಸುವುದು ಕೂಡಾ ದಾನವಾಗಿದೆ." (ಮುಸ್ಲಿಮ್

ಸರ್ಪ ಮತ್ತು ಚೇಳಿನಂತೆ ಮಹಿಳೆಯಿಂದಲೂ ದೂರವಿರಬೇಕೆಂದು ಬೋಧಿಸು ಮಿಥ್ಯ ಸಿದ್ಧಾಂತಗಳನ್ನು ಇಸ್ಲಾಮ್ ವಿರೋಧಿಸುತ್ತದೆ. ಏಕೆಂದರೆ ಪುರುಷನ ಪ್ರಕೃತಿದತ್ತವಾಗಿಯೇ ಸ್ತ್ರೀಯ ಕಡೆಗೆ ಒಲವುಳ್ಳವನಾಗಿದ್ದಾನೆ. ಅವನು ಆಕೆಯಿಂ ದೂರವಿರಬೇಕಾದರೆ ಅನೈಸರ್ಗಿಕ ವಿಧಾನದಿಂದ ತನ್ನ ಸಹಜ ಒಲವನು ನಿಗ್ರಹಿಸಬೇಕಾಗುತ್ತದೆ.

ಮನುಷ್ಯನು ಸಾಮಾನ್ಯವಾಗಿ ತನ್ನ ಭಾವ ವಿಕಾರಗಳಿಗೆ ಬಲಿಯಾಗುತ್ತಾ ಕೇವಲ ಕೆಲವೇ ಮಂದಿ ಅವುಗಳನ್ನು ನಿಯಂತ್ರಿಸಬಲ್ಲರು. ಅನ್ಯಥಾ ಹೆಚ್ಚಿನ ಜನರ ಧರ್ಮಬದ್ಧ ಮತ್ತು ಪ್ರಾಕೃತಿಕ ವಿಧಾನಗಳು ಇಲ್ಲದಿರುವಾಗ ತಮ್ಮ ವಿಷಯಾಸಕ್ತಿಯ ಶಮನಕ್ಕಾಗಿ ನಿಷಿದ್ಧ ಮತ್ತು ಅನೈಸರ್ಗಿಕ ವಿಧಾನಗಳನ್ನು ಕೈಗೊಳ್ಳುತ್ತಾರೆ. ಇವುಗಳ ವ್ಯಭಿಚಾರ, ಸಲಿಂಗರತಿಯಂತಹ ಹೇಯ ಕೃತ್ಯಗಳು ಸೇರಿವೆ. ಇದರಿಂ ತಡೆಯಲಿಕ್ಕಾಗಿಯೇ ಇಸ್ಲಾಮ್ ವಿವಾಹದ ಆಜ್ಞೆ ನೀಡಿದೆ. ಏಕೆಂದರೆ ಅದರ ಪ್ರಕಾ ವಿವಾಹವು ಲೈಂಗಿಕ ಬಯಕೆಯ ಈಡೇರಿಕೆಯ ಧರ್ಮಬದ್ಧ ಮತ್ತು ಸಹ ಕ್ರಮವಾಗಿದೆ.

ಪ್ರವಾದಿ(ಸ) ಈ ರೀತಿ ಹೇಳಿರುವರು, "ನಿಮ್ಮ ಪೈಕಿ ಒಬ್ಬ ವ್ಯಕ್ತಿಯು ವಿವಾ ಮಾಡಿಕೊಳ್ಳುವ ಸಾಮರ್ಥ್ಯವಿದ್ದೂ ವಿವಾಹ ಮಾಡದೆ ಇದ್ದರೆ ಅವನು ನಮ್ಮವನಲ್ಲ.

(ದಾರಿಮೀ

ಒಂದು ವೇಳೆ ಸ್ವತಂತ್ರ ಮಹಿಳೆಯೊಂದಿಗೆ ವಿವಾಹವಾಗುವ ಸಾಮರ್ಥ್ಯವಿಲ್ಲದಿದ್ದ ದಾಸಿಯನ್ನಾದರೂ ವಿವಾಹ ಮಾಡಿಕೊಳ್ಳಬಹುದೆಂದು ಆದೇಶಿಸುತ್ತದೆ.

"ನಿಮ್ಮಲ್ಲಾರಾದರೂ ಕುಲೀನ ಮುಸ್ಲಿಮ್ ಸ್ತ್ರೀ(ಮುಹ್ಸನಾತ್)ಯರೊಂದಿ ವಿವಾಹ ಮಾಡಿಕೊಳ್ಳುವಷ್ಟು ಸ್ಥಿತಿವಂತನಾಗಿರದಿದ್ದರೆ ನಿಮ್ಮ ಸ್ವಾಧೀನವಿರು ವಿಶ್ವಾಸಿನಿಯರಾದ ದಾಸಿಯರ ಪೈಕಿ ಯಾರೊಂದಿಗಾದರೂ ವಿವಾಹ ಮಾಡಿಕೊಳ್ಳಲಿ.

(ಪವಿತ್ರ ಕುರ್‌ಆನ್: 4: 25

ಕೆಲವೊಮ್ಮೆ ಮನುಷ್ಯನು ವೈವಾಹಿಕ ಜೀವನದ ಹೊಣೆಯನ್ನು ಹೊರಲಾರ ಪರಿಸ್ಥಿತಿಯಲ್ಲಿ ಸಿಲುಕಿರುತ್ತಾನೆ. ಇಂತಹ ಪರಿಸ್ಥಿತಿಯಲ್ಲಿ ಹೆಚ್ಚೆಚ್ಚು ಉಪವಾಸ ವ್ರ ಆಚರಿಸುವಂತೆ ಶರೀಅತ್ ಆದೇಶಿಸಿದೆ. ಈ ರೀತಿ ಅಲ್ಲಾಹನ ಸ್ಮರಣೆಯ ಗುರಾ ಯೊಂದಿಗೆ ಅವನು ತನ್ನ ಕಾಮ ವಿಕಾರಗಳನ್ನು ಎದುರಿಸಲು ಶಕ್ತನಾಗಬಲ್ಲನ

ಎಂಬುದೇ ಉದ್ದೇಶ. ಮಾತ್ರವಲ್ಲ ಶರೀರದಲ್ಲಿ ಎಷ್ಟು ಹೆಚ್ಚು ಶಕ್ತಿ ಇರುವುದೋ ಅಷ್ಟೇ ಅವನ ಕಾಮ ವಿಕಾರವೂ ಪ್ರಬಲವಾಗಿರುವುದು. ಉಪವಾಸ ವ್ರತದಿಂದ ದೇಹವು ದುರ್ಬಲವಾಗುವುದರೊಂದಿಗೆ ಮನುಷ್ಯನ ವಿಷಯಾಸಕ್ತಿಯೂ ಕುಂದುತ್ತದೆ.

ಪ್ರವಾದಿ(ಸ) ಈ ರೀತಿ ಆದೇಶಿಸಿರುವರು, "ಯುವಕರೇ! ನಿಮ್ಮ ಪೈಕಿ ವಿವಾಹದ ಸಾಮರ್ಥ್ಯ ಉಳ್ಳವನು ವಿವಾಹ ಮಾಡಿಕೊಳ್ಳಲೇಬೇಕು. ಏಕೆಂದರೆ ಅದು ದೃಷ್ಟಿಯನ್ನು ತಗ್ಗಿಸಿಡುತ್ತದೆ. (ಪರಸ್ತ್ರೀಯರನ್ನು ನೋಡುವುದರಿಂದ ತಡೆಯುತ್ತದೆ) ಮತ್ತು ಗುಪ್ತಾಂಗಗಳನ್ನು (ವ್ಯಭಿಚಾರದಿಂದ) ರಕ್ಷಿಸುತ್ತದೆ. ಆದರೆ ಯಾರಿಗೆ ಅದರ ಸಾಮರ್ಥ್ಯವಿಲ್ಲವೋ ಅವನು ಉಪವಾಸ ವ್ರತ ಆಚರಿಸಬೇಕು. ಏಕೆಂದರೆ ಉಪವಾಸ ವ್ರತವು ಅವನ ಪಾಲಿಗೆ (ಪಾಪಗಳಿಂದ ರಕ್ಷಿಸುವ) ಗುರಾಣಿಯಾಗಿದೆ."

[ವರದಿ: ಹ. ಅಬ್ದುಲ್ಲಾ ಬಿನ್ ಮಸ್‌ಊದ್(ರ) – ಬುಖಾರಿ]

## 3. ವ್ಯಭಿಚಾರದ ನಿಷೇಧ

ಲೈಂಗಿಕ ಬಯಕೆಯ ಶಮನಕ್ಕೆ ಇಸ್ಲಾಮ್ ಒಂದು ವಿಧಾನವನ್ನು ನಿರ್ಣಯಿಸಿದೆ. ಈ ವಿಧಾನವನ್ನು ಅನುಸರಿಸಲು ಅದು ಆದೇಶಿಸುತ್ತದೆ. ಅದರ ಹೊರತು ವಿಷಯಾಸಕ್ತಿಯ ಶಮನಕ್ಕಿರುವ ಎಲ್ಲ ಮಾರ್ಗಗಳನ್ನು ಅದು ನಿಷೇಧಿಸಿದೆ. ಅವುಗಳ ಹತ್ತಿರ ಸುಳಿಯಲಿಕ್ಕೂ ಇಸ್ಲಾಮ್ ಅನುಮತಿ ನೀಡುವುದಿಲ್ಲ.

ಅಲ್ಲಾಹನು ಈ ರೀತಿ ಆದೇಶಿಸಿದ್ದಾನೆ, "ವ್ಯಭಿಚಾರದ ಹತ್ತಿರವೂ ಸುಳಿಯಬೇಡಿರಿ. ಅದು ಅತಿ ಹೀನ ಕಾರ್ಯ ಮತ್ತು ಅತ್ಯಂತ ಕೆಟ್ಟ ಮಾರ್ಗ."

(ಪವಿತ್ರ ಕುರ್‌ಆನ್: 17: 32)

ಅದರಲ್ಲಿ ಸತ್ಯವಿಶ್ವಾಸಿಗಳ ಗುಣ–ವಿಶೇಷವನ್ನು ಹೀಗೆ ವಿವರಿಸಲಾಗಿದೆ, "ಅವರು ದೊಡ್ಡದೊಡ್ಡ ಪಾಪಕಾರ್ಯಗಳಿಂದ ಮತ್ತು ಅಶ್ಲೀಲ ಕಾರ್ಯಗಳಿಂದ ದೂರವಿರುವವರೂ ಸಿಟ್ಟು ಬಂದಾಗ ಕ್ಷಮಿಸಿ ಬಿಡುವವರೂ ಆಗಿರುತ್ತಾರೆ."

(ಪವಿತ್ರ ಕುರ್‌ಆನ್: 42: 37)

ವ್ಯಭಿಚಾರವಂತೂ ಮಹಾ ಪಾಪ ಕಾರ್ಯವಾಗಿದೆ. ಆದ್ದರಿಂದ ಅವರು ಅದರಿಂದ ಸಂಪೂರ್ಣ ಮುಕ್ತರಾಗಿರುತ್ತಾರೆ.

"ಅವರು ಅಲ್ಲಾಹನ ಹೊರತು ಇತರ ಯಾವ ಆರಾಧ್ಯರನ್ನೂ ಪ್ರಾರ್ಥಿಸುವುದಿಲ್ಲ. ಅಲ್ಲಾಹನು ಗೌರವಿಸಿರುವ ಯಾವ ಜೀವವನ್ನೂ ಅನ್ಯಾಯವಾಗಿ ಸಂಹರಿಸುವುದಿಲ್ಲ. ವ್ಯಭಿಚಾರವೆಸಗುವುದೂ ಇಲ್ಲ. ಈ ಕಾರ್ಯಗಳನ್ನು ಯಾರೇ ಮಾಡಿದರೂ ಅವನು ತನ್ನ ಪಾಪಗಳ ಫಲವನ್ನು ಪಡೆಯುವನು." (ಪವಿತ್ರ ಕುರ್‌ಆನ್: 25: 68)

ಪವಿತ್ರ ಕುರ್‌ಆನ್ ಯಶಸ್ವೀ ಸತ್ಯವಿಶ್ವಾಸಿಗಳ ಒಂದು ಗುಣವನ್ನು ಈ ರೀತಿ

ವಿವರಿಸಿದೆ, "ನಿಮ್ಮ ಪತ್ನಿಯರು ಹಾಗೂ ತಮ್ಮ ಅಧೀನವಿರುವ ದಾಸಿಯ
ಹೊರತು ಇತರರಿಂದ ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳುತ್ತಾರೆ. ಅವರಿಂ
ರಕ್ಷಿಸದಿದ್ದುದರಲ್ಲಿ ಅವರು ದೂಷಣೀಯರಲ್ಲ. ಆದರೆ ಇದರ ಹೊರತು ಇನ್ನೇನನ್ನಾದರು
ಬಯಸುವವರು ಅತಿರೇಕವೆಸಗುವವರಾಗಿದ್ದಾರೆ." (ಪವಿತ್ರ ಕುರ್‌ಆನ್: 23: 5–

## ನಿಷೇಧಕ್ಕೆ ಕಾರಣ

ಲೈಂಗಿಕ ಸಂಬಂಧವನ್ನು ಈ ರೀತಿ ನಿರ್ಬಂಧಿಸುವುದಕ್ಕೆ ಕಾರಣವೇನು
ಅದನ್ನು ಮುಕ್ತವಾಗಿಡುವುದರಿಂದ ಆಗುವ ನಷ್ಟಗಳೇನು ಎಂದು ನೀವು ಪ್ರಶ್ನಿಸಬಹುದ

ಪವಿತ್ರ ಕುರ್‌ಆನ್ ಈ ಪ್ರಶ್ನೆಗೆ ವಿವರವಾದ ಉತ್ತರ ನೀಡಿದೆ.

"ಅಲ್ಲಾಹನು ನಿಮಗಿಂತ ಮುಂಚೆ ಗತಿಸಿ ಹೋದ ಸಜ್ಜನರು ಅನುಸರಿಸುತ್ತಿ
ವಿಧಾನಗಳನ್ನು ನಿಮಗೆ ತೋರಿಸಿಕೊಡಲಿಕ್ಕೂ ಅವುಗಳಂತೆ ನಿಮ್ಮನ್ನು ನಡೆಸಲಿಕ
ಇಚ್ಛಿಸುತ್ತಾನೆ. ಅವನು ತನ್ನ ಕೃಪೆಯೊಂದಿಗೆ ನಿಮ್ಮ ಕಡೆಗೆ ಲಕ್ಷ್ಯವಿಡಲು ಉದ್ದೇಶಿಸುತ್ತಾ
ಅಲ್ಲಾಹನು ಸರ್ವಜ್ಞನೂ ಮಹಾ ಧೀಮಂತನೂ ಆಗಿರುತ್ತಾನೆ. ಅಲ್ಲಾಹನಂತೂ ತ
ಕೃಪೆಯೊಂದಿಗೆ ನಿಮ್ಮ ಕಡೆ ಲಕ್ಷ್ಯವಿಡಲು ಬಯಸುತ್ತಾನೆ. ಆದರೆ ತನ್ನ ದೇಹೇ
ಗಳನ್ನನುಸರಿಸುವವರು, ನೀವು ಸನ್ಮಾರ್ಗವನ್ನು ಬಿಟ್ಟು ಬಹುದೂರ ತೊಲಗಬೇಕೆಂ
ಇಚ್ಛಿಸುತ್ತಾರೆ. ಅಲ್ಲಾಹನು ನಿಮ್ಮ ಮೇಲಿನ ಬಾಧ್ಯತೆಗಳನ್ನು ಹಗುರಗೊಳಿ
ಬೇಕೆಂದಿಚ್ಛಿಸುತ್ತಾನೆ. ಏಕೆಂದರೆ ಮನುಷ್ಯನು ದುರ್ಬಲನಾಗಿ ಸೃಷ್ಟಿಸಲ್ಪಟ್ಟಿದ್ದಾನೆ.
(ಪವಿತ್ರ ಕುರ್‌ಆನ್: 4: 26–2

ಸೂರಃ ಅನ್ನೂರ್‌ನಲ್ಲಿ ವ್ಯಭಿಚಾರದ ನಿಷೇಧ ಮತ್ತು ಇತರ ಸಾಮಾಜಿ
ನಿಯಮಗಳನ್ನು ವಿವರಿಸಿದ ಬಳಿಕ ಹೀಗೆ ಹೇಳಲಾಗಿದೆ:

"ನಾವು ಸುಸ್ಪಷ್ಟ ಮಾರ್ಗದರ್ಶನ ನೀಡುವ ಸೂಕ್ತಗಳನ್ನು ನಿಮ್ಮ ಬಳಿ
ಕಳುಹಿಸಿದ್ದೇವೆ. ನಿಮಗಿಂತ ಮುಂಚೆ ಗತಿಸಿದ ಜನಾಂಗಗಳ ಬೋಧಪ್ರದ ದೃಷ್ಟಾಂ
ಗಳನ್ನೂ ಭಯವಿರಿಸಿಕೊಳ್ಳುವವರಿಗೆ ಉಪದೇಶಗಳನ್ನೂ ನಾವು ನಿಮ್ಮ ಮುಂದಿರಿ
ದ್ದೇವೆ. ಅಲ್ಲಾಹನು ಭೂಮಿ–ಆಕಾಶಗಳ ಪ್ರಕಾಶವಾಗಿರುವನು. (ವಿಶ್ವದಲ್ಲಿ) ಅವ
ಪ್ರಕಾಶದ ಉಪಮೆ ಹೀಗಿದೆ: ಒಂದು ಗೋಡೆಗೂಡಿನಲ್ಲಿ ಒಂದು ದೀಪವನ್ನಿಡಲಾಗಿ
ದೀಪವು ಒಂದು ಗಾಜಿನ ಬುರುಡೆಯೊಳಗಿದೆ. ಬುರುಡೆಯು ಮುತ್ತಿನಂತೆ ಹೊ
ಯುವ ತಾರೆಯಂತಿದೆ. ಆ ದೀಪವನ್ನು ಪೌರ್ವಾತ್ಯವೂ ಪಾಶ್ಚಿಮಾತ್ಯವೂ ಅಲ್ಲ
ಇಪ್ಪೆಯ (Olive) ಒಂದು ಸಮೃದ್ಧ ಮರದ ಎಣ್ಣೆಯಿಂದ ಬೆಳಗಿಸಲಾಗುತ್ತ

---

* ದಾಸಿಯರೆಂದರೆ ಯುದ್ಧದಲ್ಲಿ ಸೆರೆಯಾಳುಗಳಾಗಿ ಸಿಗುವ ಸ್ತ್ರೀಯರು. ಯುದ್ಧ ಕೈದಿಗಳ ವಿನಿಮ
ನಡೆಯದಿದ್ದರೆ, ಇಸ್ಲಾಮೀ ಸರಕಾರದ ವತಿಯಿಂದ ಅವರನ್ನು ಯಾರದಾದರೂ ಒಡೆತನಕ್ಕೆ ಕೊ
ಬಿಡಲಾಗುತ್ತದೆ.

ಅದರ ಎಣ್ಣೆಗೆ ಬೆಂಕಿ ತಾಗದಿದ್ದರೂ ಅದು ತಾನಾಗಿಯೇ ಪ್ರಜ್ವಲಿಸುತ್ತದೆ. (ಹೀಗೆ) ಪ್ರಕಾಶದ ಮೇಲೆ ಪ್ರಕಾಶ(ವನ್ನು ವೃದ್ಧಿಸುವ ಎಲ್ಲಾ ಸಾಧನಗಳು ಒಟ್ಟುಗೂಡಿರುತ್ತದೆ). ಅಲ್ಲಾಹನು ತಾನಿಚ್ಛಿಸಿದವರಿಗೆ ತನ್ನ ಪ್ರಕಾಶದೆಡೆಗೆ ಮಾರ್ಗದರ್ಶನ ನೀಡುತ್ತಾನೆ. ಅವನು ಜನರಿಗೆ ಉಪಮೆಗಳ ಮೂಲಕ ಮನವರಿಕೆ ಮಾಡಿಸುತ್ತಾನೆ. ಅಲ್ಲಾಹ್ ಸಕಲ ವಸ್ತುಗಳನ್ನೂ ಬಲ್ಲವನಾಗಿರುತ್ತಾನೆ." (ಪವಿತ್ರ ಕುರ್‌ಆನ್: 24: 34–35)

ಈ ವಚನಗಳಿಂದ ಕೆಲವು ವಾಸ್ತವಿಕತೆಗಳು ನಮ್ಮ ಮುಂದೆ ಬರುತ್ತವೆ:

ಅಲ್ಲಾಹನ ಕರುಣೆಗೆ ಪಾತ್ರರಾದವರು ಮುಕ್ತ ಲೈಂಗಿಕತೆಯ ಬದಲು ಅಲ್ಲಾಹನು ನಿರ್ಣಯಿಸಿದ ಮೇರೆಯೊಳಗಿದ್ದುಕೊಂಡು ತಮ್ಮ ಬಯಕೆಯನ್ನು ಪೂರ್ತಿಗೊಳಿಸುತ್ತಿದ್ದರು. ಆ ಮಹಾನ್ ವ್ಯಕ್ತಿಗಳು ಮಾನವತೆಯ ನೌಕೆಯನ್ನು ಭಾವ–ವಿಕಾರ ಮತ್ತು ವಿಷಯಾಸಕ್ತಿಯ ಸುಳಿಯಿಂದ ಹೊರತಂದು ಅದನ್ನು ಬುದ್ಧಿ–ವಿವೇಕದ ದಡಕ್ಕೇರಿಸಿದರು. ಅವರು ಮಾನವೀಯತೆಯನ್ನು ಚೆನ್ನಾಗಿ ಗೌರವಿಸಿದರು. ಅದಕ್ಕೆ ವಿಜಯದ ಮಾರ್ಗವನ್ನು ತೋರಿಸಿ ಕೊಟ್ಟರು. ಜೀವನದಲ್ಲಿ ಸೋಲಿನ ಕಾರಣಗಳಾವುವು ಎಂಬುದನ್ನು ತಿಳಿಸಿದರು. ಅವರ ಪ್ರಯತ್ನಗಳಿಂದಾಗಿ ಲೋಕದಲ್ಲಿ ಭಾವನೆ ಮತ್ತು ಬುದ್ಧಿ ಹಾಗೂ ಉದ್ವೇಗ ಮತ್ತು ಪ್ರಜ್ಞೆಗಳ ಮಧ್ಯೆ ಸಮತೋಲನವಿರುವ ಒಂದು ಸಮಾಜವು ಅಸ್ತಿತ್ವಕ್ಕೆ ಬಂತು. ಅವರ ತರಬೇತಿಯಿಂದ ಭಾವ–ವಿಕಾರಗಳಲ್ಲಿ ಮುಳುಗಿ ಹೋದವರು ಕಾಲದ ದೊಡ್ಡದೊಡ್ಡ ದಾರ್ಶನಿಕರಾದರು. ಅಜ್ಞಾನಿಗಳಲ್ಲಿ ತಿಳುವಳಿಕೆ ಮೂಡಿತು. ಅವರ ಭಾವನೆಗಳು ಪರಿಶುದ್ಧವಾದುವು. ಅವರ ಶೀಲ–ಚಾರಿತ್ರ್ಯಗಳು ಲೋಕಕ್ಕೆ ಮಾದರಿಯಾದುವು.

ಇನ್ನೊಂದು ವಾಸ್ತವಿಕತೆ ಏನೆಂದರೆ ಯಾವ ಜನಾಂಗವು ಲೈಂಗಿಕ ಅರಾಜಕತೆಯಲ್ಲಿ ಮುಳುಗಿತೋ ಅದು ಸೋಲುಂಡಿತು. ಕೈ ಹಿಡಿಯುವವರೂ ಇಲ್ಲದ ಅಂಧನಂತೆ ಅದು ವಿನಾಶ ಕೂಪದಲ್ಲಿ ಬಿದ್ದು ನಾಶವಾಯಿತು. ಭಾವ–ವಿಕಾರಗಳ ಸುಳಿಗಾಳಿಯು ಅವರ ವಿವೇಕದ ದೀಪವನ್ನು ಆರಿಸಿ ಬಿಟ್ಟಿದೆ. ಆದ್ದರಿಂದ ಹುಚ್ಚರಂತೆ ಅವರ ಎಲ್ಲ ಕೆಲಸಗಳು ಅರ್ಥಹೀನವಾಗಿರುತ್ತವೆ. ಇದು ಇತಿಹಾಸದ ತೀರ್ಪು. ಈ ತೀರ್ಪನ್ನು ಅದು ಅನೇಕ ಸಲ ಪುನರಾವರ್ತಿಸಿದೆ.

ಮೂರನೆಯದಾಗಿ ಈ ಕಾನೂನಿನ ಮೂಲಕ ಪವಿತ್ರ ಕುರ್‌ಆನ್ ಮಾನವನನ್ನು ವಿಷಯಾಸಕ್ತಿಯ ದಾಸನಾಗುವುದರ ಬದಲು ಅಲ್ಲಾಹನ ದಾಸನಾಗಬೇಕೆಂದು ಬಯಸುತ್ತದೆ. ತನ್ಮೂಲಕ ಅವನು ಆತನ ಅಪಾರ ಅನುಗ್ರಹಗಳಿಗೆ ಪಾತ್ರನಾಗುತ್ತಾನೆ. ಶಾಂತಿ–ನೆಮ್ಮದಿಯ ಜೀವನವು ಅವನಿಗೆ ಲಭಿಸುತ್ತದೆ. ಎಲ್ಲ ರೀತಿಯ ನೋವು–ನರಳಿಕೆಯಿಂದ ಅವನು ಮುಕ್ತನಾಗುತ್ತಾನೆ. ಆದರೆ ಸ್ವೇಚ್ಛೆ ಮತ್ತು ವಿಷಯಾಸಕ್ತಿಯ ದಾಸರು ಇಡೀ ಲೋಕವನ್ನೇ ಸ್ವೇಚ್ಛೆಯ ಗುಲಾಮರಾಗಿ ಮಾಡಬಯಸುತ್ತಾರೆ.

ನಾಲ್ಕನೆಯದಾಗಿ ಅಲ್ಲಾಹನು ಲೈಂಗಿಕ ಸಂಬಂಧವನ್ನು ಪೂರ್ಣವಾಗಿ ನಿಷೇಧಿಸಿಲ್ಲ. ಅದಕ್ಕೆ ಕೇವಲ ನಿಯಂತ್ರಣವನ್ನು ಹೇರಿದ್ದಾನೆ. ಅವನು ಮನುಷ್ಯನ ಮುಂದೆ ಲೈಂಗಿಕ ಬಯಕೆಯ ಈಡೇರಿಕೆಯ ಧರ್ಮಬದ್ಧ ಮಾರ್ಗವನ್ನು ತೆರೆದಿಟ್ಟಿದ್ದಾನೆ. ಒಂದು ವೇಳೆ ಈ ಮಾರ್ಗವು ಮುಚ್ಚಿದರೆ ಮನುಷ್ಯನ ಭಾವ-ವಿಕಾರಗಳ ಮಹಾಪೂರವು ಎಲ್ಲ ಮೇರೆಗಳನ್ನೂ ಮೀರುತ್ತಿತ್ತು. ಏಕೆಂದರೆ ಮನುಷ್ಯನು ಸ್ವಭಾವತಃ ದುರ್ಬಲನಾಗಿದ್ದಾನೆ. ಅವನು ತನ್ನ ಭಾವ-ವಿಕಾರಗಳನ್ನು ಪೂರ್ಣವಾಗಿ ನಿಗ್ರಹಿಸಲು ಅಶಕ್ತನಾಗಿದ್ದಾನೆ. ಈ ರೀತಿ ಅಲ್ಲಾಹನು ಮನುಷ್ಯನ ದೌರ್ಬಲ್ಯಗಳನ್ನು ಗಣನೆಗೆ ತೆಗೆದುಕೊಂಡು ತನ್ನ ಕಾನೂನನ್ನು ಸರಳಗೊಳಿಸಿರುವನು.

ಐದನೆಯದಾಗಿ ದೇವಭಕ್ತಿ, ಧರ್ಮನಿಷ್ಠೆ, ಶೀಲ-ಚಾರಿತ್ರ್ಯಗಳು ಪ್ರಕೃತಿಯ ಬೇಡಿಕೆಯಾಗಿದೆ. ಇದು ಮನುಷ್ಯನ ಅಂತರಾಳದಿಂದ ಏಳುವ ಸ್ವರವಾಗಿದೆ. ಆದ್ದರಿಂದಲೇ ಶೀಲ-ಚಾರಿತ್ರ್ಯಗಳು ಎಂದೂ ಮನುಷ್ಯ ಪ್ರಕೃತಿಗೆ ಪರಕೀಯವೆನಿಸುವುದಿಲ್ಲ. ಬದಲಾಗಿ ಅದು ಆ ಗುಣಗಳನ್ನು ಸ್ವಾಗತಿಸುತ್ತದೆ. ಅವುಗಳನ್ನು ಅಳವಡಿಸುವುದರಿಂದ ಮನುಷ್ಯನ ಅಂತಃಕರಣವು ಪುಳಕಿತಗೊಂಡು ಪ್ರಕಾಶಮಾನವಾಗುತ್ತದೆ. ತನ್ಮೂಲಕ ಆತನು ಜೀವನದಲ್ಲಿ ಯಶಸ್ಸನ್ನು ಗಳಿಸುತ್ತಾನೆ.

## 4. ವ್ಯಕ್ತಿಯ ತರಬೇತಿ

ಮನುಷ್ಯನು ಸ್ವಭಾವತಃ ಒಳ್ಳೆಯವನಾಗಿದ್ದಾನೆ. ಆದ್ದರಿಂದ ಅವನ ಆತ್ಮಸಾಕ್ಷಿಯು ಎಲ್ಲ ರೀತಿಯ ಸ್ವೇಚ್ಛಾಚಾರಗಳಿಂದ ಅವನನ್ನು ತಡೆಯುತ್ತದೆ. ಪ್ರಕೃತಿಯು ಮನುಷ್ಯನೊಳಗೆ ಎಲ್ಲ ರೀತಿಯ ಬಾಹ್ಯ ಪ್ರಭಾವಗಳ ಹೊರತಾಗಿಯೂ ಕೆಡುಕನ್ನು ದ್ವೇಷಿಸುವಂತಹ ಶಕ್ತಿಯನ್ನು ಇರಿಸಿದೆ. ಹಲವೊಮ್ಮೆ ಮನುಷ್ಯನು ಈ ಶಕ್ತಿಯ ಮುಂದೆ ಶರಣಾಗಬೇಕಾಗುತ್ತದೆ. ಅನ್ಯಥಾ ಇಂದಿನ ಯುಗದಲ್ಲಿ ಕೆಡುಕನ್ನು ಅತ್ಯಾಕರ್ಷಕ ಮತ್ತು ಮಾಂತ್ರಿಕ ರೂಪದಲ್ಲಿ ಮುಂದಿಡುತ್ತಿರುವಾಗ ಒಳಿತಿನ ಕಲ್ಪನೆ ಕೂಡಾ ಮನಸ್ಸಿನಿಂದ ಅಳಿದು ಹೋಗುತ್ತದೆ.

ಈ ಅಂತರಾಳದ ಶಕ್ತಿಯ ಪೈಕಿ ಒಂದು ಅವನ ಆತ್ಮಸಾಕ್ಷಿಯಾಗಿದೆ. ಈ ಅಂತಃಕರಣವು ಸತ್ಕಾರ್ಯವೆಸಗಿದಾಗ ಅವನನ್ನು ಹೊಗಳುತ್ತದೆ ಮತ್ತು ದುಷ್ಕರ್ಮವೆಸಗಿದಾಗ ಹಳಿಯುತ್ತದೆ. ಪಾಪದ ಕಲೆಯು ಅವನ ಔನ್ನತ್ಯವನ್ನು ಮಣ್ಣುಗೂಡಿಸುತ್ತದೆ. ಪ್ರಕೃತಿಯು ಅವನಿಗೆ ದಯಪಾಲಿಸಿರುವ ಉನ್ನತ ಸ್ಥಾನದಿಂದ ಅವನನ್ನು ಅವನತಿಯೆಡೆಗೆ ಸಾಗಿಸುತ್ತದೆ.

ಆತ್ಮಸಾಕ್ಷಿಯ ಈ ಸ್ವರವು ಕೆಡುಕಿನ ಹಾದಿಯ ಅತಿದೊಡ್ಡ ತಡೆಯಾಗಿದೆ. ಆದರೆ ಅದಕ್ಕೆ ಕಿವಿಗೊಡದೆ ನಿರಂತರ ಅದನ್ನು ಅದುಮಿಡಲು ಪ್ರಯತ್ನಿಸಿದರೆ ಈ ಸ್ವರವು ಕ್ಷೀಣವಾಗುತ್ತದೆ. ಇಸ್ಲಾಮ್ ತನ್ನ ಬೋಧನೆಗಳ ಮೂಲಕ ಆತ್ಮಸಾಕ್ಷಿಯನ್ನು

ಇನ್ನಷ್ಟು ಜಾಗೃತಗೊಳಿಸಿ ಕಾನೂನಿನ ಭಯ, ಅಪಕೀರ್ತಿಯ ಭೀತಿ ಮತ್ತು ಸಮಾಜದ ಒತ್ತಡದ ರಕ್ಷಣೆಗಳೂ ಇಲ್ಲದಾಗ ಅದು ಕೆಡುಕುಗಳಿಂದ ಅವನನ್ನು ತಡೆಯುವಂತೆ ಮಾಡುತ್ತದೆ.

ಒಬ್ಬ ವ್ಯಕ್ತಿ ಪ್ರವಾದಿವರ್ಯರ(ಸ) ಬಳಿಗೆ ಬಂದು 'ಪುಣ್ಯ ಮತ್ತು ಪಾಪ'ದ ವಾಸ್ತವಿಕತೆಯ ಕುರಿತು ವಿಚಾರಿಸಿದರು. ಆಗ ಪ್ರವಾದಿ(ಸ) ಈ ರೀತಿ ಹೇಳಿದರು, 'ಪುಣ್ಯವು ಸಚ್ಚಾರಿತ್ರ್ಯವಾಗಿದೆ ಮತ್ತು ಪಾಪವು ನಿಮ್ಮೊಳಗೆ ಆತಂಕವನ್ನುಂಟು ಮಾಡುವ ಮತ್ತು ಜನರಿಗೆ ತಿಳಿಯುವುದು ನಿಮಗೆ ಇಷ್ಟವಲ್ಲದಂತಹ ಕೆಲಸವಾಗಿದೆ."

[ವರದಿ: ನುವಾಸ್ ಬಿನ್ ಸಿಮ್‌ಆನ್(ರ) – ತಿರ್ಮಿದಿ]

ಪುಣ್ಯ ಅಥವಾ ಒಳಿತುಗಳು ಶೀಲ ಮತ್ತು ಚಾರಿತ್ರ್ಯದ ಫಲವಾಗಿದೆ. ಆದರೆ ಪಾಪ ಅಥವಾ ಕೆಡುಕಿನಲ್ಲಿ ಆಕರ್ಷಣೆ ಮತ್ತು ಸೌಂದರ್ಯವಿರುವುದಿಲ್ಲ. ಅದು ಮನಸ್ಸು ಮತ್ತು ಅಂತಃಕರಣಕ್ಕೆ ಮುಳ್ಳಿನಂತೆ ಚುಚ್ಚುತ್ತದೆ. ತಾನು ಪಾಪ ಮಾಡುತ್ತಿರುವಾಗ ಜನರು ನೋಡುವುದನ್ನಾಗಲೀ ಅದು ಬಹಿರಂಗಗೊಳ್ಳುವು ದಾಗಲೀ ಯಾರಿಗೂ ಇಷ್ಟವಾಗಲಾರದು. ಆದರೆ ಓರ್ವ ಸಜ್ಜನ ವ್ಯಕ್ತಿಯ ಮನಸ್ಸು ಈ ಆತಂಕ ಮತ್ತು ಭೀತಿಯಿಂದ ಮುಕ್ತವಾಗಿರುತ್ತದೆ. ಅವನಿಗೆ ತನ್ನ ಕರ್ಮಗಳ ಬಗ್ಗೆ ಎಂದೂ ವಿಷಾದ ಮತ್ತು ನಾಚಿಕೆ ಉಂಟಾಗುವುದಿಲ್ಲ. ತಾನು ಜೀವನದಲ್ಲಿ ಏನನ್ನು ಮಾಡಬೇಕೋ ಅದನ್ನು ಮಾಡಿರುವೆನೆಂಬ ಧನ್ಯತಾ ಭಾವನೆ ಅವನಲ್ಲಿರುತ್ತದೆ.

ಸತ್ಯವಿಶ್ವಾಸವು ಮನುಷ್ಯನಲ್ಲಿ ಇದೇ ಗುಣವನ್ನು ಉಂಟುಮಾಡುತ್ತದೆ. ಪ್ರವಾದಿ(ಸ) ಈ ರೀತಿ ಹೇಳಿರುವರು, "ನಿನ್ನ ಸತ್ಕರ್ಮ ನಿನಗೆ ಸಂತೋಷವನ್ನೂ ದುಷ್ಕರ್ಮ ನಿನಗೆ ವಿಷಾದವನ್ನೂ ಉಂಟು ಮಾಡಿದರೆ ನೀನು ಸತ್ಯವಿಶ್ವಾಸಿಯಾಗಿರುವಿ."

(ಮಿಷ್ಕಾತ್–ಅಹ್ಮದ್)

## ಲಜ್ಜಾಗುಣ

ಮನುಷ್ಯನಲ್ಲಿ ತನ್ನ ಘನತೆಯ ಪ್ರಜ್ಞೆ ಜಾಗೃತವಾಗಿ ಆತ್ಮಸಾಕ್ಷಿಯು ಜೀವಂತವಾಗಿದ್ದರೆ ಆತ ತನ್ನ ಘನತೆಗೆ ತಕ್ಕುದಲ್ಲದ ಯಾವುದೇ ಕೆಲಸ ಮಾಡಲು ಹೇಸುತ್ತಾನೆ. ಪಾಪಕಾರ್ಯದಿಂದ ನಾಚಿ ಅವನ ತಲೆ ತಗ್ಗಿ ಬಿಡುತ್ತದೆ. ಈ ನಾಚಿಕೆ ಮತ್ತು ಲಜ್ಜೆಯ ಗುಣವು ಕ್ಷೀಣವಾದರೆ ಮನುಷ್ಯನನ್ನು ಕೆಡುಕಿನಿಂದ ತಡೆಯುವ ಎಲ್ಲ ಶಕ್ತಿಗಳೂ ದುರ್ಬಲಗೊಳ್ಳುತ್ತವೆ. ಪ್ರವಾದಿ ವಚನವೊಂದು ಈ ರೀತಿ ಇದೆ:

"ಗತ ಪ್ರವಾದಿಗಳ ಬೋಧನೆಗಳ ಯಾವ ಅಂಶವು ಜನರಿಗೆ ತಲುಪಿದೆಯೋ ಅವುಗಳಲ್ಲಿ – ನಿನ್ನಲ್ಲಿ ನಾಚಿಕೆ ಇಲ್ಲವಾಗಿ ಬಿಟ್ಟರೆ ನೀನು ಬಯಸಿದ್ದೆಲ್ಲವನ್ನೂ ಮಾಡು– ಎಂಬುದೂ ಒಂದಾಗಿದೆ."

[ವರದಿ: ಹ. ಅಬೂ ಮಸ್‌ಊದ್(ರ) – ಬುಖಾರಿ, ಅಬೂದಾವೂದ್]

ನಾಚಿಕೆ ಮತ್ತು ಅಭಿಮಾನದ ಶಿಕ್ಷಣವನ್ನು ಎಲ್ಲ ಪ್ರವಾದಿಗಳೂ ತಪ್ಪ
ನೀಡಿರುವುದರ ಕಾರಣವೇನಿರಬಹುದು? ಅದನ್ನು ಈ ಒಂದು ಘಟನೆಯ ಮೂ
ತಿಳಿಯೋಣ:

ಒಮ್ಮೆ ಹ. ಸಅದ್(ರ)ರು ಪ್ರವಾದಿವರ್ಯರಲ್ಲಿ(ಸ) ಈ ರೀತಿ ಹೇಳಿ ದ
"ಅಲ್ಲಾಹನ ಸಂದೇಶವಾಹಕರೇ! ಯಾರಾದರೂ ತನ್ನ ಪತ್ನಿಯ ಮಾನಭ
ಮಾಡುವುದನ್ನು ಕಂಡಾಗ ಅವನ ಸ್ವಾಭಿಮಾನವು ಕುರ್‌ಆನಿನ ಆದೇಶದ ಪ್ರಕ
ನಾಲ್ಕು ಮಂದಿ ಸಾಕ್ಷಿಗಳನ್ನು ಹುಡುಕುತ್ತಾ ಹೋಗಲು ಅನುಮತಿಸೀತೇ? ದುರದ
ವಶಾತ್ ಇಂತಹ ಪರಿಸ್ಥಿತಿ ನನಗೆ ಎದುರಾದರೆ ನಾನು ಆ ಧೂರ್ತನನ್ನು ಅ
ಕೊಂದುಬಿಡುವೆನು." ಈ ಸ್ವಾಭಿಮಾನದ ಮಾತುಗಳನ್ನು ಕೇಳಿ ಪ್ರವಾದಿ(ಸ) ಅಲ್ಲಿ
ಸಭಿಕರನ್ನುದ್ದೇಶಿಸಿ ಹೀಗೆ ಹೇಳಿದರು, "ನಿಮಗೆ ಸಅದ್‌ರ(ರ) ಸ್ವಾಭಿಮಾನದ ಬ
ಆಶ್ಚರ್ಯವಾಗುತ್ತಿದೆಯೇ? ಅಲ್ಲಾಹನಾಣೆ! ನಾನು ಅದಕ್ಕಿಂತಲೂ ಹೆಚ್ಚು ಸ್ವಾಭಿಮಾ
ಮತ್ತು ಅಲ್ಲಾಹನು ನನಗಿಂತ ಹೆಚ್ಚು ಸ್ವಾಭಿಮಾನಿಯಾಗಿದ್ದಾನೆ. ತನ್ನ
ಸ್ವಾಭಿಮಾನದಿಂದಾಗಿಯೇ ಅವನು ಎಲ್ಲ ಬಹಿರಂಗ ಮತ್ತು ಗುಪ್ತ ಅಶ್ಲೀ
ಕಾರ್ಯಗಳನ್ನು ನಿಷೇಧಿಸಿರುವನು." (ಬುಖಾರಿ, ಅಬೂದಾವೂದ್)

ಓರ್ವ ಧೂರ್ತ ಮತ್ತು ನೀಚ ವ್ಯಕ್ತಿ ಕೂಡಾ ತನ್ನನ್ನು ಹಾಗೆಂ
ಕರೆಯುವುದನ್ನು ಇಷ್ಟಪಡುವುದಿಲ್ಲ. ಹಾಗಿರುವಾಗ ಸರ್ವೋನ್ನತನಾದ ಅಲ್ಲಾಹ
ಪರಿಪಾವನ ಅಸ್ತಿತ್ವವು ಕೆಡುಕು ಮತ್ತು ಅಶ್ಲೀಲತೆಯನ್ನು ಇಷ್ಟಪಡುವುದಾದರ
ಹೇಗೆ? ಅವನು ಮಾನವನಿಗೆ ಅಶ್ಲೀಲತೆ ಮತ್ತು ಕೆಡುಕಿನ ಆದೇಶ ನೀಡಿಯಾನ
ಆದ್ದರಿಂದಲೇ ಅವನು ಎಲ್ಲ ಕಾಲಗಳಲ್ಲಿಯೂ ತನ್ನ ಪ್ರವಾದಿಗಳ ಮೂಲಕ ಎ
ರೀತಿಯ ಕೆಡುಕು ಮತ್ತು ಅಶ್ಲೀಲ ಕಾರ್ಯಗಳಿಂದ ಜನರನ್ನು ತಡೆದಿರುವ

ಅಲ್ಲಾಹನ ಈ ಲಜ್ಜಾಗುಣ ಒಬ್ಬ ವ್ಯಕ್ತಿಯಲ್ಲಿ ಎಷ್ಟರ ಮಟ್ಟಿಗಿರುತ್ತದೋ ಅಷ
ಮಟ್ಟಿಗೆ ಅವನು ಅಶ್ಲೀಲತೆಗಳಿಂದ ದೂರವಿರುವನು.

"ಪ್ರವಾದಿ(ಸ) ಪರ್ದಾಧಾರಿ ಕುಮಾರಿಯರಿಗಿಂತಲೂ ಹೆಚ್ಚು ನಾಚ
ಸ್ವಭಾವದವರಾಗಿದ್ದರು. ನಾಚಿಗೆಕೇಡಿನ ಯಾವುದಾದರೂ ಸನ್ನಿವೇಶ ಎದುರಾದ
ಅವರು ಅದರ ಪ್ರಸ್ತಾಪ ಮಾಡುವುದನ್ನೂ ಇಷ್ಟಪಡುತ್ತಿರಲಿಲ್ಲ. ಅವರ(
ಅಪ್ರಸನ್ನತೆಯನ್ನು ನಾವು ಅವರ(ಸ) ಮುಖದಲ್ಲಿ ಕಾಣುತ್ತಿದ್ದೆವು." (ಮುಸ್ಲಿಮ

ಪ್ರವಾದಿ(ಸ) ನಾಚಿಕೆ-ಲಜ್ಜೆಗಳನ್ನು ಯಾವ ರೀತಿ ಜಗತ್ತಿಗೆ ಬೋಧಿಸಿದ
ಎಂಬುದನ್ನು ಈ ಕೆಳಗಿನ ಪ್ರವಾದಿವಚನಗಳು ಸ್ಪಷ್ಟಪಡಿಸುತ್ತವೆ: ಬಹ್‌ಝ್ ಬಿ
ಹಕೀಮ್(ರ) ತಮ್ಮ ತಂದೆಯ ಮೂಲಕ ತಮ್ಮ ತಾತನಿಂದ ಈ ರೀತಿ ವರ
ಮಾಡಿರುವರು:

ನಾನು ಪ್ರವಾದಿವರ್ಯರಲ್ಲಿ(ಸ) "ನಾವು ಎಲ್ಲಿ ನಮ್ಮ ಗುಪ್ತಾಂಗಗಳನ್ನು* ಮರೆಸಬೇಕು ಮತ್ತು ಎಲ್ಲಿ ಮರೆಸಬೇಕಾಗಿಲ್ಲ" ಎಂದು ಕೇಳಿದೆ. ಆಗ ಪ್ರವಾದಿ(ಸ) ಹೇಳಿದರು, "ನಿಮ್ಮ ಗುಪ್ತಾಂಗಗಳನ್ನು ನಿಮ್ಮ ಮಡದಿ ಮತ್ತು ದಾಸಿಯ ಹೊರತು ಇನ್ನಾರ ಮುಂದೆಯೂ ಬಹಿರಂಗಗೊಳಿಸಬೇಡಿರಿ." ನಾನು ವಿಚಾರಿಸಿದೆ, "ಅಲ್ಲಾಹನ ಸಂದೇಶವಾಹಕರೇ(ಸ)! ಜನರು ಪರಸ್ಪರ ಒಟ್ಟು ಸೇರಿರುವಾಗ ಮತ್ತು ಒಬ್ಬ ವ್ಯಕ್ತಿಗೆ ಅವನ ಗುಪ್ತಾಂಗಗಳನ್ನು ಪೂರ್ಣವಾಗಿ ಮರೆಸುವುದು ಸಾಧ್ಯವಾಗದೇ ಹೋದಾಗ ಏನು ಮಾಡಬೇಕು?" ಪ್ರವಾದಿ(ಸ) ಹೇಳಿದರು, "ಯಾರೂ ನಿಮ್ಮ ಗುಪ್ತಾಂಗಗಳನ್ನು ಕಾಣದಂತೆ ಸಾಧ್ಯವಿದ್ದಷ್ಟು ಜಾಗ್ರತೆ ವಹಿಸಿರಿ." ನಾನು ಮತ್ತೆ ಕೇಳಿದೆ, "ಪ್ರವಾದಿ ವರ್ಯರೇ(ಸ)! ಒಬ್ಬನು ಏಕಾಂತದಲ್ಲಿರುವಾಗಲೂ ನಗ್ನನಾಗಬಾರದೇ?" ಪ್ರವಾದಿ(ಸ) ಹೇಳಿದರು, "ಅವನ ಬಳಿ ಅಲ್ಲಾಹನಂತೂ ಖಂಡಿತ ಇರುತ್ತಾನೆ ಮತ್ತು ನಾಚಿಕೆ ಪಡಲು ಆತನು ಜನರಿಗಿಂತ ಹೆಚ್ಚು ಅರ್ಹನಾಗಿರುತ್ತಾನೆ." (ತಿರ್ಮಿದಿ)

ಪ್ರವಾದಿ(ಸ) ಹೇಳಿದರು, "ನಿಮ್ಮ ಪೈಕಿ ಯಾರಾದರೂ ತನ್ನ ಪತ್ನಿಯ ಜತೆ ಸಂಸರ್ಗ ನಡೆಸುವಾಗಲೂ ಮರೆಮಾಡಿಕೊಳ್ಳಬೇಕು ಮತ್ತು ಇಬ್ಬರೂ ಈ ಸ್ಥಿತಿಯಲ್ಲಿ ಕತ್ತೆಗಳಂತೆ ನಗ್ನರಾಗಿ ಬಿಡಬಾರದು."

[ವರದಿ: ಉತ್ಬಾ ಬಿನ್ ಅಬ್ದಿಸ್ಸಲ್ಮಿ(ರ) – ಇಬ್ನುಮಾಜಃ]

ಈ ಬೋಧನೆಗಳು ಲಜ್ಜೆ ಮತ್ತು ನಾಚಿಕೆಯ ಸ್ಥಾನಮಾನವನ್ನು ಎಷ್ಟು ಉನ್ನತಗೊಳಿಸಿತೆಂದರೆ ಆಧುನಿಕ ಜಗತ್ತಿಗೆ ಅದನ್ನು ಊಹಿಸಲಿಕ್ಕೂ ಸಾಧ್ಯವಿಲ್ಲ.

ಪ್ರವಾದಿವರ್ಯರ(ಸ) ಅತ್ಯಂತ ಪ್ರೀತಿಯ ಪತ್ನಿ ಹ. ಆಯಿಶಾ(ರ) ಹೇಳುತ್ತಾರೆ, "ನಾನು ಪ್ರವಾದಿವರ್ಯರ(ಸ) ಗುಪ್ತಾಂಗಗಳನ್ನು ಎಂದೂ ಕಂಡಿಲ್ಲ."

(ಮುಸ್ನದ್ ಅಹ್ಮದ್, ಇಬ್ನುಮಾಜಃ)

ಸಂಸ್ಕೃತಿ–ಸಭ್ಯತೆ ಹಾಗೂ ಲಜ್ಜೆ–ನಾಚಿಕೆಗಳ ಇದೊಂದು ಮಾದರಿಯಾಗಿದೆ. ಆಧುನಿಕ ನಗ್ನ ಸಂಸ್ಕೃತಿಯು ಇನ್ನೊಂದು ಮಾದರಿಯನ್ನು ನಮ್ಮ ಮುಂದಿಡುತ್ತದೆ. ಒಂದೆಡೆ ದಾಂಪತ್ಯ ಸಂಬಂಧಗಳ ಸಹಜ ಮೇರೆಯೊಳಗೂ ಲಜ್ಜೆ–ನಾಚಿಕೆಗಳು ಪಾಲಿಸಲ್ಪಡುತ್ತಿದ್ದರೆ ಇನ್ನೊಂದೆಡೆ ಸ್ತ್ರೀ–ಪುರುಷರಿಬ್ಬರೂ ನಗ್ನರಾಗಿ ಪೇಟೆಗಳಲ್ಲಿ ಸುತ್ತುತ್ತಾರೆ. ಒಂದೆಡೆ ಬಾಯಿಯಿಂದ ಒಂದು ಅಸಭ್ಯ–ಅಶ್ಲೀಲ ಮಾತೂ ಹೊರಡುವುದಿಲ್ಲ. ಇನ್ನೊಂದೆಡೆ ಪ್ರೀತಿ–ಸಾಹಿತ್ಯ ಮತ್ತು ಅಶ್ಲೀಲ ಹಾಡುಗಳು ಎಲ್ಲ ಪರಿಸರಗಳಲ್ಲೂ ಮೊಳಗುತ್ತಿವೆ. ಈ ಎರಡು ಗುಣಗಳ ಪೈಕಿ ಯಾವುದು ಮನುಷ್ಯನನ್ನು ಪಾಪಕೂಪದಿಂದ ರಕ್ಷಿಸಬಲ್ಲುದು ಎಂಬುದನ್ನು ನೀವೇ ಯೋಚಿಸಿ.

* ಮೂಲದಲ್ಲಿ 'ಔರತ್' ಎಂಬ ಪದ ಬಳಸಲಾಗಿದ್ದು, ಗಂಡಸರ ಪಾಲಿಗೆ ನಾಭಿಯಿಂದ ಮೊಣಕಾಲಿನ ತನಕದ ಅಂಗಗಳು ಅದರಲ್ಲಿ ಶಾಮೀಲಾಗಿದೆ.

## ಪರಲೋಕ ವಿಚಾರಣೆ

ಪರಲೋಕ ವಿಚಾರಣೆಯ ಚಿಂತೆ ಮತ್ತು ಅಲ್ಲಿ ಶಿಕ್ಷೆಗೊಳಗಾಗುವ ಭಯವು ಮನುಷ್ಯನ ಸಹಜ ಗುಣವಾದ ಲಜ್ಜೆಗೆ ಅಮರತ್ವವನ್ನು ನೀಡುತ್ತದೆ. ಲಜ್ಜೆಯನ್ನು ಜೀವಂತವಿರಿಸಿ. ಬೆಳೆಸಲು ಬೇಕಾಗುವ ನೈಜ ಶಕ್ತಿಯದು. ಇತರರ ಮುಂದೆ ನಿಂದ್ಯನಾಗುವುದರ ಬಗ್ಗೆ ಮನುಷ್ಯನು ಸಹಜವಾಗಿಯೇ ಭಯಪಡುತ್ತಾನೆ. ಈ ಭೀತಿಯೇ ಅವನನ್ನು ಕೆಡುಕಿನಿಂದ ಮತ್ತು ಅಶ್ಲೀಲ ಕಾರ್ಯಗಳಿಂದ ದೂರವಿರಿಸುವ ನೈಜ ಸಾಧನವಾಗಿದೆ. ಮನುಷ್ಯನು ಇಹಲೋಕವನ್ನೇ ಸರ್ವಸ್ವ ವೆಂದು ಬಗೆದರೆ; ಛೀಮಾರಿ, ನಿಂದೆ ಹಾಗೂ ಸ್ತುತಿ, ಹೊಗಳಿಕೆಗಳಿರುವುದು ಇಲ್ಲಿ ಮಾತ್ರವೆಂದು ಭಾವಿಸಿದರೆ; ಇಹಲೋಕದ ನಂತರ ತನ್ನ ಕರ್ಮಗಳ ವಿಚಾರಣೆ ನಡೆಯುವ ಪ್ರಮೇಯವೇ ಇಲ್ಲವೆಂದು ಕಲ್ಪಿಸಿ ಕೊಂಡರೆ; ಜನರ ಕಣ್ಣು ತಪ್ಪಿಸಿ ಅಪರಾಧವೆಸಗುವ ಅನೇಕ ಕ್ಷೇತ್ರಗಳನ್ನು ಅವನು ಕಂಡುಕೊಳ್ಳುತ್ತಾನೆ ಅಥವಾ ಯಾವುದಾದರೂ ಕೆಡುಕು ಅವನ ಪಾಲಿಗೆ ಕೆಡುಕಾಗಿಯೇ ಉಳಿಯದಷ್ಟು ಸುಂದರ ಮತ್ತು ಚಿತ್ತಾಕರ್ಷಕವಾಗಿದ್ದು, ಅದುವೇ ಪುಣ್ಯವಾಗಿ ಮಾರ್ಪಡಬಹುದು. ಅವನನ್ನು ಹಳಿಯುವ ಮತ್ತು ಅಪರಾಧಗಳಿಂದ ತಡೆಯುವ ಶಕ್ತಿಗಳೇ ನಿಶ್ಶಸ್ತ್ರ ಗೊಳ್ಳಬಹುದು. ಇದಕ್ಕೆ ವ್ಯತಿರಿಕ್ತವಾಗಿ ಇಸ್ಲಾಮ್, ಮನುಷ್ಯನಲ್ಲಿ ವಿಶ್ವದ ಕಣಕಣ ವನ್ನೂ ಸದಾ ವೀಕ್ಷಿಸುತ್ತಿರುವ ಒಬ್ಬ ಪ್ರಭುವಿನ ಮೇಲೆ ದೃಢ ನಂಬಿಕೆಯನ್ನು ಮೂಡಿಸುತ್ತದೆ. ಮಾನವನ ಕರ್ಮಗಳ ಯಾವ ಕ್ಷೇತ್ರವೂ ಅವನ ದೃಷ್ಟಿಯಿಂದ ಮರೆಯಾಗಲಾರದು. ಮನುಷ್ಯ ಹೃದಯದ ಮಿಡಿತವನ್ನೂ ಆತನ ನರನಾಡಿಗಳನ್ನೂ

ಆ ಜಗದೊಡೆಯನು ಅರಿಯುತ್ತಾನೆ. ಒಂದು ದಿನ ಖಂಡಿತ ಬರಲಿಕ್ಕಿದೆ. ಅಂದು ನನ್ನ ವಿಚಾರಣೆ ಜಗತ್ತಿನಲ್ಲಿ ಆದಿಯಿಂದ ಅಂತ್ಯದ ತನಕ ಹುಟ್ಟಿದ್ದ ಎಲ್ಲ ವ್ಯಕ್ತಿಗಳ ಮುಂದೆ ನಡೆಯಲಿಕ್ಕಿದೆ. ಆ ಸರ್ವಜ್ಞ ಮತ್ತು ಸೂಕ್ಷ್ಮಜ್ಞಾನಿಯ ಮುಂದೆ ನನಗೆ ನನ್ನ ಪ್ರತಿಯೊಂದು ಕರ್ಮದ ಲೆಕ್ಕಾಚಾರ ಸಮರ್ಪಿಸಲಿಕ್ಕಿದೆ ಎಂಬ ನಂಬಿಕೆಯು ಮನುಷ್ಯನನ್ನು ನಿಂದೆ ಮತ್ತು ಅಪಚಾರಕ್ಕೆ ಈಡು ಮಾಡುವ ಎಲ್ಲ ರೀತಿಯ ಅಶ್ಲೀಲ ಕಾರ್ಯಗಳಿಂದ ಮತ್ತು ಕೆಡುಕುಗಳಿಂದ ತಡೆಯುತ್ತದೆ.

ಇಂದು ಮೂರ್‍ನಾಲ್ಕು ವ್ಯಕ್ತಿಗಳ ಮುಂದೆ ನಮ್ಮ ಯಾವುದಾದರೂ ಅಪರಾಧವು ಬಹಿರಂಗವಾದರೆ ನಾಚಿಕೆಯಿಂದ ನಮ್ಮ ತಲೆ ತಗ್ಗುತ್ತದೆ. ಪಶ್ಚಾತ್ತಾಪ ಮತ್ತು ಖೇದದ ಕಣ್ಣೀರಿನಿಂದ ಗಂಟಲು ಕಟ್ಟುತ್ತದೆ. ನಾಳೆ ಇಡೀ ಜಗತ್ತಿನ ಮನುಷ್ಯರು ಮತ್ತು ತನ್ನೊಡೆಯನ ಮುಂದೆ ತನ್ನ ಜೀವನ ವೃತ್ತಾಂತದ ಪೂರ್ಣ ಚಿತ್ರವು ಬರಲಿಕ್ಕಿದೆಯೆಂಬ ವಿಶ್ವಾಸ ಒಬ್ಬನಲ್ಲಿ ಮೂಡಿದರೆ ಅವನೆಷ್ಟು ಜಾಗ್ರತೆಯಿಂದ ತನ್ನ ಚಾರಿತ್ರ್ಯವನ್ನು ಕಾಪಾಡುವನು ಎಂಬುದನ್ನು ಯೋಚಿಸಿ ನೋಡಿ. ಈ ನಂಬಿಕೆಯನ್ನು ಹೆಚ್ಚಿಸಲು ಪವಿತ್ರ ಕುರ್‌ಆನಿನಲ್ಲಿ ಅಲ್ಲಲ್ಲಿ ಪರಲೋಕದ ವೃತ್ತಾಂತವನ್ನು ವಿವರಿಸಲಾಗಿದೆ.

ಅಕ್ರಮವೆಸಗಿದವರು ಅಂದು ಅತ್ಯಂತ ಖೇದ ಮತ್ತು ದುಃಖಕ್ಕೆ ಒಳಗಾಗುವರೆಂಬ ಚಿತ್ರವನ್ನು ಅದು ಮನುಷ್ಯನಲ್ಲಿ ಮೂಡಿಸುತ್ತದೆ. ಅದೇ ರೀತಿ ಉತ್ತಮ ಪರಿಣಾಮದ ಅತ್ಯಂತ ಮನಮೋಹಕ ಚಿತ್ರವನ್ನೂ ಅದು ಮುಂದಿಡುತ್ತದೆ. ಇದರಿಂದ ಮನುಷ್ಯನ ಮನದಲ್ಲಿ ಪಾಪದ ಬಗ್ಗೆ ಭಯಾಶಂಕೆ ಮತ್ತು ಒಳಿತಿನ ಬಗ್ಗೆ ಒಲವು ಮೂಡುತ್ತದೆ.

"ಹಲವು ಮುಖಗಳು ಅಂದು ಕಾಂತಿಪೂರ್ಣವಾಗಿರುವುವು. ಪ್ರಸನ್ನವಾಗಿಯೂ ಆನಂದತುಂದಿಲವಾಗಿಯೂ ಇರುವುವು. ಮತ್ತೆ ಕೆಲವು ಮುಖಗಳ ಮೇಲೆ ಅಂದು ಧೂಳು ಮತ್ತು ಕಪ್ಪು ಕವಿದಿರುವುದು. ಇವರೇ ದುಷ್ಕರ್ಮಿಗಳಾದ ಸತ್ಯನಿಷೇಧಿಗಳು."

(ಪವಿತ್ರ ಕುರ್‌ಆನ್: 80: 38–42)

"ಒಳಿತಿನ ಮಾರ್ಗ ಹಿಡಿದವರಿಗೆ ಒಳಿತಿದೆ. ಇನ್ನೂ ಹೆಚ್ಚಿನ ಅನುಗ್ರಹವಿದೆ. ಅವರ ಮುಖಕ್ಕೆ ಕಳಂಕವಾಗಲಿ ಅವರಿಗೆ ಅವಮಾನವಾಗಲಿ ಆಗದು. ಅವರು ಸ್ವರ್ಗಕ್ಕೆ ಹಕ್ಕುದಾರರು. ಅಲ್ಲಿ ಅವರು ಸದಾಕಾಲ ವಾಸಿಸುವರು. ಪಾಪ ಗಳಿಸಿದವರು ಅವರ ಪಾಪಗಳಿಗೆ ತಕ್ಕಂತೆ ಪ್ರತಿಫಲ ಪಡೆಯುವರು. ಅವಮಾನವು ಅವರನ್ನಾವರಿಸು ವುದು, ಅವರನ್ನು ಅಲ್ಲಾಹನಿಂದ ರಕ್ಷಿಸುವವನಾರೂ ಇರಲಾರನು. ಅವರ ಮುಖ ಗಳ ಮೇಲೆ ನಿಶಾಂಧಕಾರದ ಕಪ್ಪು ಪರದೆಗಳು ಬಿದ್ದಿರುವಂತೆ ಕತ್ತಲೆ ಕವಿದಿರುವುದು. ಅವರು ನರಕಕ್ಕೇ ಹಕ್ಕುದಾರರು. ಅದರಲ್ಲಿ ಅವರು ಸದಾಕಾಲ ವಾಸಿಸುವರು."

(ಪವಿತ್ರ ಕುರ್‌ಆನ್: 10: 26–27)

ಏಕದೇವನಾದ ಅಲ್ಲಾಹನ ಮೇಲಿನ ವಿಶ್ವಾಸ ಹಾಗೂ ಪರಲೋಕ ವಿಶ್ವಾಸವು ಓರ್ವ ಸತ್ಯವಿಶ್ವಾಸಿಯ ನಂಬಿಕೆಯ ಆಧಾರಗಳಾಗಿವೆ. ಅವನ ಎಲ್ಲ ಕರ್ಮಗಳೂ ಅದೇ ಅಕ್ಷದ ಸುತ್ತ ಸುತ್ತುತ್ತಿರುತ್ತವೆ. ಆ ನಂಬಿಕೆ ಹೃದಯಾಂತರಾಳ ದಲ್ಲಿ ರೂಢಮೂಲವಾಗಿ ಬಿಟ್ಟರೆ ಪಾಪದ ಬಗ್ಗೆ ಕಲ್ಪಿಸಿಕೊಂಡರೂ ಅವನ ಆತ್ಮವು ಚಡಪಡಿಸುತ್ತದೆ. ಅವನ ಪಾಲಿಗೆ ಕೆಡುಕುಗಳು ಸಂತೋಷ ಮತ್ತು ನೆಮ್ಮದಿದಾಯಕವಾಗಿರದೆ ಅದು ಅವನ ಮನಸ್ಸನ್ನು ಚುಚ್ಚುವ ಮತ್ತು ಅವನಿಗೆ ಉಸಿರುಕಟ್ಟಿದ ಅನುಭವವಾಗುವ ಹೇತುವಾಗುತ್ತದೆ.

ಪವಿತ್ರ ಕುರ್‌ಆನಿನಲ್ಲಿ ಪ್ರವಾದಿ ಯೂಸುಫ್(ಅ) ಅವರ ಪಾಠದಾಯಕ ವೃತ್ತಾಂತವನ್ನು ವಿವರಿಸಲಾಗಿದೆ. ಮನಸ್ಸಿನಲ್ಲಿ ದೇವಭಯ ಬಂದುಬಿಟ್ಟರೆ, ಕಣ್ಣು ಗಳಿಗೆ ವಿಶ್ವದೊಡೆಯನಾದ ಅಲ್ಲಾಹನ ದಿವ್ಯದರ್ಶನದ ಭಾಗ್ಯ ಲಭಿಸಿದರೆ ಆ ವ್ಯಕ್ತಿಯನ್ನು ಜಗತ್ತಿನ ಯಾವ ಸೌಂದರ್ಯವೂ ವಂಚಿಸಲಾರದು. ಈಜಿಪ್ಟ್‌ನ ಸುರಸುಂದರಿಯರು ತಮ್ಮ ಸೌಂದರ್ಯ, ಒನಪು–ವೈಯಾರಗಳಿಂದ ಪ್ರವಾದಿ ಯೂಸುಫ್(ಅ) ಅವರನ್ನು ತಮ್ಮ ಮೋಹದ ಬಲೆಗೆ ಬೀಳಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಯೂಸುಫ್(ಅ) ಅಲ್ಲಾಹನ ಭಯದಿಂದ ನಡುಗುತ್ತಾರೆ.

ಅವನ ಮುಂದೆ ಕೈಚಾಚಿ ಈ ಮೋಸದ ಜಾಲದಿಂದ ಮತ್ತು ಈಜಿಪ್ಟ್‌ನ ಸುರಸುಂದರಿಯರ ಮೋಹದ ಬಿರುಗಾಳಿಯಿಂದ ತನ್ನ ಪಾದಗಳಲ್ಲಿ ಕಂಪನ ಉಂಟಾಗದಿರಲಿ ಎಂದು ಪ್ರಾರ್ಥಿಸುತ್ತಾರೆ. ನಾನಂತೂ ಯಾವ ಸಂಕಷ್ಟವನ್ನಾದರೂ ಅನುಭವಿಸಿಯೇನು ಆದರೆ ನನ್ನ ಚಾರಿತ್ರ್ಯ ಮತ್ತು ಶೀಲದ ಪಾವಿತ್ರ್ಯಕ್ಕೆ ಕಳಂಕ ತಟ್ಟಲು ಬಿಡಬೇಡ ಎಂದು ಜಗದೊಡೆಯನಲ್ಲಿ ಮೊರೆಯಿಡುತ್ತಾರೆ.

ಯೂಸುಫ್ ಹೇಳಿದರು, "ಓ ನನ್ನ ಪ್ರಭೂ ಇವರು ನನ್ನಿಂದ ಬಯಸುವ ಕಾರ್ಯಕ್ಕಿಂತ ನನಗೆ ಸೆರೆಮನೆಯೇ ಲೇಸು. ನೀನು ಇವರ ಕುತಂತ್ರಗಳನ್ನು ನೀಗಿಸದಿದ್ದರೆ ನಾನು ಅವರ ಬಲೆಯಲ್ಲಿ ಬಿದ್ದು ಹೋಗುವೆನು ಮತ್ತು ಅಜ್ಞಾನಿಗಳಲ್ಲಿ ಸೇರಿ ಹೋಗುವೆನು." (ಪವಿತ್ರ ಕುರ್‌ಆನ್: 12: 33)

ಚಿಂತನೆ ಮತ್ತು ದೃಷ್ಟಿಕೋನದ ಈ ವ್ಯತ್ಯಾಸವನ್ನು ಗಮನಿಸಿರಿ. ಒಂದೆಡೆ ಕಾಮ–ಪ್ರೇಮಗಳೆಂಬ ಮನುಷ್ಯನ ಸ್ವೇಚ್ಛೆಯನ್ನು ಪೂರೈಸಲು ನೂರಾರು ಕುತಂತ್ರಗಳನ್ನು ಹೂಡಲಾಗುತ್ತಿದೆ. ಸಹಸ್ರಾರು ವಿಧಾನಗಳಿಂದ ಮೋಸ ವಂಚನೆಗಳ ಜಾಲವನ್ನು ಹರಡಲಾಗುತ್ತಿದೆ. ದೇವಭಕ್ತಿ, ಧರ್ಮನಿಷ್ಠೆಯ ಲೋಕವನ್ನು ಅಂಧಕಾರಮಯಗೊಳಿಸಲು ಎಲ್ಲ ರೀತಿಯ ಪ್ರಯತ್ನಗಳನ್ನೂ ಮಾಡಲಾಗುತ್ತದೆ. ಇನ್ನೊಂದೆಡೆ, ಇದೇ ಮೂಳೆ–ಮಾಂಸಗಳ, ಬಯಕೆ–ಭಾವನೆಗಳ ಮನುಷ್ಯನು ವಿಶ್ವದ ಎಲ್ಲ ಸೌಂದರ್ಯ ಮತ್ತು ಪ್ರಲೋಭನೆಗಳನ್ನೂ ಓಲೈಕೆಗಳನ್ನೂ ನಿರಾಕರಿಸುತ್ತಾನೆ. ಜೈಲಿನ ಶಿಕ್ಷೆಯ ಕಾಠಿಣ್ಯವನ್ನು ಅನುಭವಿಸುವುದು ಅವರ ಪಾಲಿಗೆ ಸಹ್ಯವಾಗುತ್ತದೆ. ಲೋಕದ ಎಲ್ಲ ಐಷಾರಾಮದ ಜತೆ ಅಶ್ಲೀಲತೆಯ ಮಾಲಿನ್ಯವಿರುವಾಗ ಅದರತ್ತ ಕಣ್ಣೆತ್ತಿಯೂ ನೋಡುವುದಿಲ್ಲ. ಈಗ ನೀವೇ ಹೇಳಿ. ಯಾವನೇ ಸರ್ವಜ್ಞ ಮತ್ತು ವಿವರಪೂರ್ಣ ಅಸ್ತಿತ್ವದ ವಿಚಾರಣೆಯ ದೃಢನಂಬಿಕೆ ಇಲ್ಲದೆಯೇ ಈ ಅತ್ಯದ್ಭುತ ಚಾರಿತ್ರ್ಯ ಅಸ್ತಿತ್ವಕ್ಕೆ ಬರುವುದು ಸಾಧ್ಯವೇ? ಯಾವ ಹೃದಯವು ಈ ದೃಢನಂಬಿಕೆಯಿಂದ ವಿರಹಿತವಾಗಿದೆಯೋ ಅದು ಬಯಕೆ–ಭಾವನೆಗಳ ಈ ಮಹಾಪೂರದೆದುರು ಬಂಡೆಕಲ್ಲಿನಂತೆ ಸ್ಥಿರವಾಗಿರುವುದು ಸಾಧ್ಯವೇ?

ಹ. ಮರ್ಯಮ್(ಅ) ಅವರ ಮುಂದೆ ಅಚಾನಕಾಗಿ ಓರ್ವ ಸುಂದರ ದೃಢಕಾಯ ಮಧ್ಯವಯಸ್ಕ ಮನುಷ್ಯ ಪ್ರತ್ಯಕ್ಷನಾಗುತ್ತಾನೆ. ಏಕಾಂತದಲ್ಲಿ ಅವರು ಆತನನ್ನು ಕಂಡ ಕೂಡಲೇ ದೇವಭಯದಿಂದ ಕಂಪಿಸುತ್ತಾರೆ.

ಮರ್ಯಮ್(ಅ) ಥಟ್ಟನೆ, "ನೀನೊಬ್ಬ ದೇವಭಯವುಳ್ಳವನಾಗಿದ್ದರೆ ನಾನು ನಿನ್ನಿಂದ ದಯಾಮಯನಾದ ಅಲ್ಲಾಹನ ಅಭಯ ಯಾಚಿಸುತ್ತೇನೆ" ಎಂದರು. ಆಗ ಅವನು, "ನಾನು ನಿಮ್ಮ ಪ್ರಭುವಿನ ದೂತನಾಗಿರುತ್ತೇನೆ ಮತ್ತು ನಿಮಗೆ ಓರ್ವ ಪವಿತ್ರ ಬಾಲಕನನ್ನು ಕೊಡಲಿಕ್ಕಾಗಿ ಬಂದಿರುತ್ತೇನೆ" ಎಂದನು.

(ಪವಿತ್ರ ಕುರ್‌ಆನ್: 19: 20)

ಹ. ಮರ್ಯಮ್(ಅ) ಆಶ್ಚರ್ಯಚಕಿತರಾಗಿ ಈ ರೀತಿ ಕೇಳುತ್ತಾರೆ, "ನನ್ನನ್ನು ುರುಷನಾರೂ ಮುಟ್ಟದೆ ಇರುವಾಗ ನನ್ನಲ್ಲಿ ಬಾಲಕನಾಗುವುದು ಹೇಗೆ? ುನೇನೂ ದುರಾಚಾರಿ ಸ್ತ್ರೀಯಲ್ಲ." (ಪವಿತ್ರ ಕುರ್‌ಆನ್: 19: 20)

ಪ್ರವಾದಿ(ಸ) ಹೇಳುತ್ತಾರೆ, "ಅಲ್ಲಾಹನು ತನ್ನ ನೆರಳಿನ ಹೊರತು ಯಾವ ರಳೂ ಇಲ್ಲದ ಆ ದಿನ ಏಳು ವಿಧದ ಜನರಿಗೆ ನೆರಳನ್ನು ದಯಪಾಲಿಸುವನು. ಆ ್ತಿ ಒಬ್ಬನು ತನ್ನ ಯೌವನವನ್ನು ಅಲ್ಲಾಹನ ದಾಸ್ಯ-ಆರಾಧನೆಗಳಲ್ಲಿ ಕಳೆದಿರುವ ನು. ಇನ್ನೊಬ್ಬನು ಓರ್ವ ಕುಲೀನೆ (ಉನ್ನತ ಸ್ಥಾನಮಾನದ) ಅತ್ಯಂತ ಸುಂದರಿ ುದ ಮಹಿಳೆಯು ವ್ಯಭಿಚಾರಕ್ಕೆ ಆಹ್ವಾನ ನೀಡಿದಾಗ– ನಾನು ಈ ಪಾಪವನ್ನೆಸಗಲು ಲ್ಲಾಹನನ್ನು ಭಯಪಡುತ್ತೇನೆಂದು ಹೇಳಿ ಅದನ್ನು ತಿರಸ್ಕರಿಸಿದವನಾಗಿರುವನು. ುತ್ತೊಬ್ಬನು ಏಕಾಂತದಲ್ಲಿ ಅಲ್ಲಾಹನನ್ನು ಸ್ಮರಿಸಿ ತನ್ನ ದುಷ್ಕರ್ಮಗಳ ಬಗ್ಗೆ ಯೋಚಿಸಿ ಶ್ಚಾತ್ತಾಪದ ಕಣ್ಣೀರಿಳಿಸಿದವನಾಗಿರುವನು." (ಬುಖಾರಿ, ಮುಸ್ಲಿಮ್, ತಿರ್ಮಿದಿ)

ಇದು ಪರಲೋಕ ವಿಚಾರಣೆಯ ಭಯವಿರುವ ಮನುಷ್ಯನಲ್ಲುಂಟಾಗುವ ಚಾರಿತ್ರ್ಯ ುಗಿದೆ. ಇಸ್ಲಾಮ್ ವಿಶ್ವಾಸಿಗಳಲ್ಲಿ ಇಂತಹ ಆದರ್ಶ ಚಾರಿತ್ರ್ಯವನ್ನು ಬೆಳೆಸಬಯಸುತ್ತದೆ.

## ಪರಾಧದ ಸ್ಪಷ್ಟಕಲ್ಪನೆ

ಇಸ್ಲಾಮಿನಲ್ಲಿ ಅಪರಾಧದ ಕುರಿತು ಒಂದು ಸ್ಪಷ್ಟವಾದ ಕಲ್ಪನೆಯಿದೆ. ಸತ್ಯ–ಸತ್ಯ, ಒಳಿತು–ಕೆಡುಕುಗಳ ಸ್ಪಷ್ಟ ಕಲ್ಪನೆಯಿದೆ. ಅದು ಸತ್ಯಮಾರ್ಗದ ಪ್ರಯಾಣಿಕನನ್ನು ುಧಕಾರಗಳಲ್ಲಿ ಅಲೆದಾಡಲು ಬಿಡುವುದಿಲ್ಲ. ಒಬ್ಬನು ಮೋಕ್ಷ ಗಳಿಸಬೇಕಾದರೆ ್ಕರ್ಮ ಮತ್ತು ದುಷ್ಕರ್ಮಗಳ ವ್ಯತ್ಯಾಸವನ್ನರಿಯುವ ಶಕ್ತಿ ಅವನಿಗಿರಬೇಕು. ುರಾದರೂ ಪಥಭ್ರಷ್ಟತೆ ಮತ್ತು ಸ್ವಚ್ಛಂಧತೆಯನ್ನೇ ಚಿಂತನೆ ಮತ್ತು ದೃಷ್ಟಿಕೋನದ ್ಸತ್ಯವೆಂದು ಬಗೆದರೆ ಅದರ ಪರಿಣಾಮ ಏನಾಗಲಿಕ್ಕಿದೆ ಎಂಬುದು ಕೂಡಾ ವನಿಗೆ ತಿಳಿದಿರಬೇಕು. ಇಂತಹ ವಿವರವಾದ ಮಾರ್ಗದರ್ಶನವನ್ನು ಜೀವನದ ಇರ ವ್ಯವಹಾರಗಳಂತೆ ಅದು ದಾಂಪತ್ಯ ಸಂಬಂಧದ ಬಗೆಗೂ ನೀಡಿದೆ. ಇಬ್ಬರ ುಧ್ಯೆ ಸಂಬಂಧದಲ್ಲಿ ಅಲ್ಲಾಹನ ಮೆಚ್ಚುಗೆಗೆ ಹೇತುವಾಗುವಂತಹದ್ದು ಯಾವುದು ತ್ತು ಅವನ ಕ್ರೋಧಕ್ಕೆ ಪಾತ್ರಗೊಳಿಸುವ ಹಾಗೂ ಉಭಯ ಲೋಕಗಳಲ್ಲಿ ಸೋಲು ುಗೂ ನಷ್ಟಕ್ಕೆ ಕಾರಣವಾಗುವಂತಹದ್ದು ಯಾವುದು ಎಂದು ತಿಳಿಸಿದೆ.

## ್ಷಪರೀಕ್ಷೆ

ಜೀವನವೆಂಬ ಪರೀಕ್ಷಾ ಕೊಠಡಿಯಲ್ಲಿ ಕಾಮದ ಬಯಕೆಯು ವ್ಯಕ್ತಿಯ ಸತ್ವ ುೀಕ್ಷೆಯ ಒಂದು ಸಾಧನವಾಗಿದೆ ಎಂಬುದನ್ನು ಅದು ಮೊದಲೇ ತಿಳಿಸಿ ತುತ್ತದೆ. ಸ್ತ್ರೀ–ಪುರುಷರ ಮಧ್ಯೆ ಇರುವ ಅಪಾರ ಆಕರ್ಷಣೆಯು ಸತ್ಯಾರಾಧಕ ನವಾ ವಿಷಯಾಸಕ್ತಿಯ ಆರಾಧಕರ ಪೈಕಿ ಅವನು ಯಾವುದಕ್ಕೆ ಸೇರಿದವನು

ಎಂಬುದನ್ನು ಸುಲಭದಲ್ಲಿ ತೀರ್ಮಾನಿಸಿಬಿಡುತ್ತದೆ. ಒಂದೆಡೆ ಭಾವನೆಗಳ ಕೋಲಾಹ ವಿದೆ. ಇನ್ನೊಂದೆಡೆ ದೇವಭಯ ಹಾಗೂ ಬುದ್ಧಿವಿವೇಕ ಹಾಗೂ ಪ್ರಕೃತಿಂ ಬೇಡಿಕೆಯಿದೆ. ಈ ಸಂಘರ್ಷವು ಮನುಷ್ಯನ ಸತ್ಯವಿಶ್ವಾಸದ ಒರೆಗಲ್ಲಾಗಿರುವುದ

ಪ್ರವಾದಿ(ಸ) ಹೀಗೆ ಹೇಳಿರುವರು, "ನಾನು ನನ್ನ ಕಾಲಾನಂತರ ಪುರುಷ ಪಾಲಿಗೆ ಸ್ತ್ರೀಯರಿಗಿಂತ ಹೆಚ್ಚು ಹಾನಿಕಾರಕವಾದ ಸತ್ವಪರೀಕ್ಷೆಯನ್ನು ಬಿಟ್ಟಿಲ್ಲ.'
**(ಬುಖಾರಿ, ಮುಸ್ಲಿಮ್, ತಿರ್ಮಿದಿ, ನಸಾಈ, ಇಬ್ನುಮಾಜಃ, ಮುಸ್ನದ್ ಅಹ್ಮದ**

"ಪ್ರತಿದಿನ ಬೆಳಿಗ್ಗೆ ಇಬ್ಬರು ದೇವಚರರು ಹೀಗೆ ಘೋಷಿಸುತ್ತಾರೆ: ಪುರುಷ ಪಾಲಿಗೆ ಸ್ತ್ರೀಯರು ಮತ್ತು ಸ್ತ್ರೀಯರ ಪಾಲಿಗೆ ಪುರುಷರು ವಿನಾಶಕಾರಿಗಳಾಗಿದ್ದಾರೆ
(ಇಬ್ನುಮಾಜ

## ವ್ಯಭಿಚಾರದ ಪರಿಣಾಮ

ಇಸ್ಲಾಮ್ ಪಾಪಗಳ ವಿರುದ್ಧ ಮನುಷ್ಯನಲ್ಲಿರುವ ಈ ಅಂತಃಕರಣವ ಬಡಿದೆಬ್ಬಿಸಿ ಸುಮ್ಮನಾಗುವುದಿಲ್ಲ. ಪಾಪ-ಪುಣ್ಯ, ಸತ್ಯ-ಅಸತ್ಯ, ಒಳಿತು-ಕೆಡುಕುಗ ಬಗ್ಗೆ ಸ್ಪಷ್ಟವಾದ ಕಲ್ಪನೆಯನ್ನೂ ನೀಡುತ್ತದೆ. ಸತ್ಯಮಾರ್ಗದ ಪ್ರಯಾಣಿಕನನ್ನು ಅ ಅಂಧಕಾರಗಳಲ್ಲಿ ಅಲೆದಾಡಲು ಬಿಡುವುದಿಲ್ಲ. ಮೋಕ್ಷವನ್ನು ಬಯಸುವವ ಮುಂದೆ ಅದು ಪಾಪವೇನು-ಪುಣ್ಯವೇನು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಯಾರಾದರ ದುರ್ಮಾರ್ಗ ಮತ್ತು ಸ್ವಚ್ಛಂದತೆಯನ್ನೇ ಬುದ್ಧಿ-ವಿವೇಕಗಳ ಉನ್ನತಿಯೆಂ ಬಗೆದರೆ, ಅವನ ಮುಂದೆ ಬರಲಿರುವ ಪರಿಣಾಮವನ್ನು ಅದು ಸ್ಪಷ್ಟಪಡಿಸುತ್ತ

ಈ ವಿಸ್ತೃತ ಮಾರ್ಗದರ್ಶನವನ್ನು ಅದು ಜೀವನ ಮತ್ತು ಅದ ವ್ಯವಹಾರಗಳಂತೆಯೇ ಸ್ತ್ರೀ-ಪುರುಷ ಸಂಬಂಧಗಳ ಬಗ್ಗೆಯೂ ನೀಡುತ್ತದೆ. ಪೈಕಿ ಯಾವುದು ದೇವನ ಮೆಚ್ಚುಗೆಗೆ ಪಾತ್ರವಾಗುತ್ತವೆ ಮತ್ತು ಯಾವುದು ಅವ ಕ್ರೋಧವನ್ನು ಆಹ್ವಾನಿಸುತ್ತದೆಯೆಂಬುದನ್ನು ಸ್ಪಷ್ಟಪಡಿಸುತ್ತದೆ.

ಪತಿ-ಪತ್ನಿಯರು ಪರಸ್ಪರರ ಪಾಲಿಗೆ ಫಿತ್ನ (ಪರೀಕ್ಷಾ ಸಾಧನ) ಆಗಿದ್ದಾ ಅವರ ಮಧ್ಯೆ ಇರುವ ಅಮಿತ ಆಕರ್ಷಣೆಯು ಅವರನ್ನು ಸತ್ಯಾರಾಧನೆ ಮ ಸ್ವೇಚ್ಛೆಯ ಆರಾಧಕನ ಮಧ್ಯ ಮಾರ್ಗದಲ್ಲಿ ತಂದು ನಿಲ್ಲಿಸುತ್ತದೆ. ಅದು ಮನುಷ್ಯ ಸತ್ಯವಿಶ್ವಾಸದ ಘೋಷಣೆಯನ್ನು ಒರೆಗೆ ಹಚ್ಚುವ ಸಾಧನವಾಗಿ ಮಾರ್ಪಡುತ್ತ

"ನನ್ನ ನಂತರ ಪುರುಷರ ಪಾಲಿಗೆ ಸ್ತ್ರೀಯರಿಗಿಂತ ದೊಡ್ಡ ಪರೀಕ್ಷಾ ಸಾಧ ವನ್ನು ನಾನು ಬಿಟ್ಟಗಲಲಿಲ್ಲ" ಎಂದು ಪ್ರವಾದಿವರ್ಯರು(ಸ) ಹೇಳಿದ್ದಾರೆ. (ಬುಖಾ

## ವ್ಯಭಿಚಾರದ ಗತಿ

"ಅವರು ಅಲ್ಲಾಹನ ಹೊರತು ಇತರ ಯಾವ ಆರಾಧ್ಯನನ್ನೂ ಪ್ರಾರ್ಥಿಸುವುದಿ

ಅಲ್ಲಾಹನು ಗೌರವಿಸಿರುವ ಯಾವ ಜೀವನವನ್ನೂ ಅನ್ಯಾಯವಾಗಿ ಸಂಹರಿಸುವುದಿಲ್ಲ. ವ್ಯಭಿಚಾರವೆಸಗುವುದೂ ಇಲ್ಲ. ಈ ಕಾರ್ಯಗಳನ್ನು ಯಾರೇ ಮಾಡಿದರೂ ಅವನು ತನ್ನ ಪಾಪಗಳ ಫಲವನ್ನು ಪಡೆಯುವನು. ನಿರ್ಣಾಯಕ ದಿನದಂದು ಅವನಿಗೆ ಇಮ್ಮಡಿ ಯಾತನೆ ನೀಡ ಲಾಗುವುದು ಮತ್ತು ಅವನು ಅದರಲ್ಲೇ ಸದಾ ಅವಮಾನಿತನಾಗಿ ಬಿದ್ದು ಕೊಂಡಿರುವನು." (ಪವಿತ್ರ ಕುರ್‌ಆನ್: 25: 68–69)

ಪ್ರವಾದಿ ಮುಹಮ್ಮದ್(ಸ) ಹೇಳಿದರು, "ಇಹಲೋಕವು ಒಂದು ಮಧುರ ಮತ್ತು ಸಸ್ಯಶ್ಯಾಮಲ ವಸ್ತುವಾಗಿದೆ. ಅಲ್ಲಾಹನು ನಿಮ್ಮನ್ನು ಅದೇ ಆಕರ್ಷಕ ಲೋಕದ ವಾರೀಸುದಾರನಾಗಿ ಮಾಡಲಿರುವನು. ನೀವು ಯಾವ ರೀತಿ ಅಲ್ಲಿ ಕಾರ್ಯಾಚರಿಸುತ್ತೀರೆಂದು ಆತನು ನೋಡಬಯಸುತ್ತಾನೆ. ಆದ್ದರಿಂದ ನೀವು ಇಹಲೋಕದ ಬಣ್ಣದ ಬದುಕಿಗೆ ಮಾರು ಹೋಗಬೇಡಿರಿ. ಮಹಿಳೆಯರ ಬಗ್ಗೆ ಭಯಪಡಿರಿ. ಏಕೆಂದರೆ ಇಸ್ರೇಲ್ ಜನಾಂಗದ ಪಾಲಿಗೆ ಮಹಿಳೆ ಅತಿದೊಡ್ಡ ಪರೀಕ್ಷಾ ಸಾಧನವಾಗಿ ಮಾರ್ಪಟ್ಟಿದ್ದಳು." [ವರದಿ: ಅಬೂಸಈದ್(ರ) –ಬುಖಾರಿ]

ಭೂಮಿಯ ಆಡಳಿತಾಧಿಕಾರವನ್ನು (ಖಿಲಾಫತ್) ಅಲ್ಲಾಹನು ತನ್ನ ಉನ್ನತ ಚಾರಿತ್ರ್ಯ ಮತ್ತು ಉತ್ತಮ ಶೀಲದ ವ್ಯಕ್ತಿಗಳಿಗೇ ದಯಪಾಲಿಸುತ್ತಾನೆ. ಮನುಷ್ಯನಾಗಿ ತಮ್ಮ ಶೀಲ–ಚಾರಿತ್ರ್ಯದ ಪಾವಿತ್ರ್ಯವನ್ನು ದೇವಚರರಂತೆ ಪಾವನವಾಗಿರಿಸಿದವರಿಗೇ ಅದನ್ನು ದಯಪಾಲಿಸುತ್ತಾನೆ. ಆದರೆ ಯಾವ ಮನುಷ್ಯನು ಈ ಚಾರಿತ್ರ್ಯ ರತ್ನಗಳಿಂದ ವಿರಹಿತನಾಗಿರುತ್ತಾನೋ ಅವನು ಅಲ್ಲಾಹನ ಈ ಮಹಾನ್ ಅನುಗ್ರಹದಿಂದ ವಂಚಿತ ನಾಗುತ್ತಾನೆ. ದೂರದೃಷ್ಟಿಯಿದ್ದವನೇ ಅದರಿಂದ ಪಾಠ ಕಲಿಯಬಲ್ಲನು. ಅದರ ಸ್ವೇಚ್ಛಾಚಾರವು ಅದನ್ನು ಹೇಗೆ ವಿನಾಶಕೂಪಕ್ಕೆ ತಳ್ಳೀತು ಎಂಬುದನ್ನು ಅರಿಯಬೇಕು.

## ಸಚ್ಚಾರಿತ್ರ್ಯದ ಪ್ರತಿಫಲ

ಈ ವಿನಾಶದಿಂದ ರಕ್ಷಣೆ ಹೇಗೆ ಸಾಧ್ಯ ಎಂಬುದು ಈಗ ಉಳಿದಿರುವ ಪ್ರಶ್ನೆ. ಮನುಷ್ಯ ವ್ಯಭಿಚಾರಕ್ಕೆ ಇಳಿಯುವುದೇಕೆ ಎಂಬ ಇನ್ನೊಂದು ಪ್ರಶ್ನೆಗೆ ಉತ್ತರ ಸಿಕ್ಕಿದರೆ ಈ ಪ್ರಶ್ನೆಗೂ ಉತ್ತರ ಸಿಗುತ್ತದೆ. ಅವನಿಗೆ ವ್ಯಭಿಚಾರದಲ್ಲಿ ಸುಖಭೋಗ ಸಿಗುತ್ತದೆ. ಅವನ ಕಾಮನೆಗಳು ಶಮನವಾಗುತ್ತವೆ. ಅವನಿಗೆ ಶಾಂತಿ ದೊರೆಯುತ್ತದೆ. ಎರಡನೆಯದಾಗಿ ಆತ ಸುಶೀಲ ಬದುಕು ಸಾಗಿಸಲು ಸಮರ್ಥನಲ್ಲ. ಆದ್ದರಿಂದ ವ್ಯಭಿಚಾರಕ್ಕೆ ಬಲಿ ಬೀಳುತ್ತಾನೆ. ಇದರಿಂದ ಅವನಿಗೆ ಮುಕ್ತಿ ದೊರಕಬೇಕಾದರೆ ಅವನಿಗೆ ಸಮಾಜ ನಿರ್ಮಿಸಿರುವ ಮಿಥ್ಯ ಚಿಂತನೆ ಮತ್ತು ನಂಬಿಕೆಗಳಿಂದ, ಶಿಕ್ಷಣ–ತರಬೇತಿಯಿಂದ, ಸಂಸ್ಕೃತಿ–ಸಭ್ಯತೆಯಿಂದ ಮುಕ್ತಿ ದೊರೆಯಬೇಕು. ಇದನ್ನು ಮಾಡುವ ತನಕ ಅವನು ತನ್ನ ಶೀಲವನ್ನು ಕಾಪಾಡಲು ಶಕ್ತನಾಗುವುದಿಲ್ಲ.

ಆದ್ದರಿಂದ ವ್ಯಭಿಚಾರ ಮತ್ತು ಅದರ ಪರಿಣಾಮದಿಂದ ರಕ್ಷಣೆ ಸಿಗಬೇಕಾದರೆ

ಎರಡು ವಿಷಯಗಳ ಅಗತ್ಯವಿದೆ. ಅವನ ಮುಂದೆ ಪಾಪದ ಬಣ್ಣದ ಲೋಕವು ತನ್ನ ಮೆರುಗನ್ನು ಕಳಕೊಳ್ಳಬೇಕು. ಅದರ ಆಕರ್ಷಣೆ ಕೊನೆಗೊಳ್ಳಬೇಕು. ಎರಡನೆಯ ದಾಗಿ ಅವನ ಮುಂದೆ ಸರಿಯಾದ ಮಾರ್ಗ ತೆರೆದಿರಬೇಕು. ಅದರ ಮೂಲಕ ಅವನು ತನ್ನ ಭಾವನೆಗಳ–ಕಾಮನೆಗಳ ಮುಂದೆ ನಿಶ್ಶಸ್ತ್ರನಾಗಿರಬಾರದು. ಸರಿಯಾದ ಮಾರ್ಗವು ಅವನ ಪಾಲಿಗೆ ಹೆಚ್ಚು ಆಕರ್ಷಕವಾಗಬೇಕು. ಅವನ ಕಣ್ಣು ಧರ್ಮವಿರೋಧಿ ಮಾರ್ಗವನ್ನು ಅರಸುವಂತಾಗಬಾರದು.

ಪಾಪಗಳನ್ನು ನಿಸ್ತೇಜಗೊಳಿಸಲಿಕ್ಕಾಗಿ ಇಸ್ಲಾಮ್ ಅದಕ್ಕಿಂತಲೂ ಹೆಚ ರೋಚಕ ಮತ್ತು ಆಕರ್ಷಕ ಜೀವನದ ಕಲ್ಪನೆಯನ್ನು ನೀಡಿದೆ. ಅದರ ಆಕರ್ಷಣೆಯ ಅಸೀಮ ಮತ್ತು ಅದರ ಆಡಂಬರಗಳು ಅನಂತವಾಗಿವೆ.

ಒಂದೆಡೆ ಅದು ವ್ಯಭಿಚಾರ ಮತ್ತು ಸ್ವೇಚ್ಛಾಚಾರದಿಂದ ರಕ್ಷಿಸಿದರೆ ಇನ್ನೊಂದೆ ಸ್ವರ್ಗದಲ್ಲಿ ಅದಕ್ಕಿಂತಲೂ ರೋಚಕವಾದ ಸುರಸುಂದರಿಯರಾದ ಕನ್ಯೆಯರೊಂದಿ ನಿತ್ಯ ಬಾಳುವ ಆಶ್ವಾಸನೆ, ಆಮಿಷ ನೀಡುತ್ತದೆ. ಅದರ ಕಲ್ಪನೆ ಕೂಡಾ ಕೇವಲ ಬುದ್ಧಿ–ವಿವೇಕದ ವ್ಯಾಪ್ತಿಗೆ ಮೀರಿದುದಾಗಿದೆ.

ಆ ವಿಶ್ವಾಸ, ಶ್ರದ್ಧೆ ಮತ್ತು ಆ ಸಿದ್ಧಾಂತವು ಶಾಶ್ವತ ಬದುಕಿನ ಗಳಿಕೆಗಾ ಈ ಕ್ಷಣಿಕ ಬದುಕನ್ನು ಅದರ ಸರ್ವ ಆಕರ್ಷಣೆಗಳನ್ನು ತ್ಯಾಗ ಮಾಡುವಂ ಅವನನ್ನು ಪ್ರೇರೇಪಿಸುತ್ತದೆ.

## ವಿವಾಹದ ಉದ್ದೇಶ

ವ್ಯಭಿಚಾರದ ಈ ಎರಡನೆಯ ಪ್ರೇರಣೆಯನ್ನು ಕೊನೆಗೊಳಿಸಲಿಕ್ಕಾಗಿಯೆ ಇಸ್ಲಾಮ್ ಧರ್ಮಸಮ್ಮತವಾದ ವೈವಾಹಿಕ ಬಂಧನದಲ್ಲಿ ಏರ್ಪಡುವ ವಿಷಯವನು ಅತ್ಯಂತ ಸರಳ ಮತ್ತು ನಿರಾಡಂಬರಗೊಳಿಸಿದೆ. ಅದಕ್ಕೆ ಜನರನ್ನು ಪ್ರೇರೇಪಿಸಿದ ಅದು ಅವರನ್ನು ಪಾಪಕೂಪದಿಂದ ರಕ್ಷಿಸುವ ಸಾಧನವಾಗಬಲ್ಲುದು ಎಂಬುದನ ಅವರಿಗೆ ಮನವರಿಕೆ ಮಾಡಿ ಕೊಡುತ್ತದೆ. ಅದರ ಪ್ರಕಾರ ವಿವಾಹದ ಉದ್ದೇ ಮನೆಯಲ್ಲೂ ಒಬ್ಬಳನ್ನು ಇಟ್ಟುಕೊಳ್ಳುವುದಲ್ಲ. ಅದು ಆಕೆಯ ಚಾರಿತ್ರ್ಯ ಮತ ಶೀಲವನ್ನು ಕಾಪಾಡುವ ಬೇಲಿಯಾಗಿದೆ. ಅದನ್ನೇ ಕುರ್‌ಆನ್ ಈ ರೀತಿ ಹೇಳಿದ

"ಅವರನ್ನು ವಿವಾಹ ಬಂಧನದಲ್ಲಿಡಬೇಕು. ಸ್ವಚ್ಛಂದ ಲೈಂಗಿಕತೆ ಸಲ್ಲದು.
(ಪವಿತ್ರ ಕುರ್‌ಆನ್: 4: 24

"ಅವರು ವಿವಾಹ ಬಂಧನದಲ್ಲಿರಬೇಕು. ಮುಕ್ತ ಲೈಂಗಿಕ ಸಂಬಂ ಹೊಂದಿರಬಾರದು."
(ಪವಿತ್ರ ಕುರ್‌ಆನ್: 4: 25

ಇಲ್ಲಿ ಪವಿತ್ರ ಕುರ್‌ಆನ್ 'ಇಹ್ಸಾನ್' ಮತ್ತು 'ಇಸ್ಫಾಹ್' ಎಂಬ ಎರಡ

ಪದಗಳನ್ನು ಬಳಸಿದೆ. 'ಸಫಹ್' ಎಂದರೆ ಸುರಿಯುವುದು, ಹರಿಸುವುದು. ವ್ಯಭಿಚಾರವು ವೈವಾಹಿಕ ಬಂಧನದಿಂದ ಮುಕ್ತವಾಗಿ ತನ್ನ ಪೌರುಷ ಮತ್ತು ಸಾಮರ್ಥ್ಯವನ್ನು ನೀರಿನಂತೆ ಪೋಲು ಮಾಡುವ ಒಂದು ವಿಧಾನವಾಗಿದೆ. ಆದ್ದರಿಂದ ಅದರ ಮುಂದೆ ಯಾವುದೇ ತಡೆಯಿಲ್ಲ.

ವ್ಯಭಿಚಾರವನ್ನು ನಿಷೇಧಿಸುವ ಮೂಲಕ ಇಸ್ಲಾಮ್ ಎರಡು ಮುಖ್ಯ ಉದ್ದೇಶಗಳನ್ನು ಸಾಧಿಸಬಯಸುತ್ತದೆ. ಮೊದಲನೆಯದಾಗಿ ಮನುಷ್ಯನು ತನ್ನ ಲೈಂಗಿಕ ಬಯಕೆಗಳನ್ನು ಈಡೇರಿಸುವಲ್ಲಿ ಸ್ವೇಚ್ಛಾಚಾರಿಯಾಗಬಾರದು. ಅವನು ಕೆಲವು ಮೇರೆಗಳನ್ನು ಪಾಲಿಸಬೇಕು. ಎರಡನೆಯದಾಗಿ ಈ ನಿರ್ಬಂಧವು ಅವನ ಮಾನವನ್ನು ಕಾಪಾಡುವ ಸಾಧನವಾಗಬೇಕು. ಆದ್ದರಿಂದ ಕುರ್‌ಆನ್ ವಿವಾಹಕ್ಕೆ 'ಇಹ್ಸಾನ್' ಎಂಬ ಪದವನ್ನು ಬಳಸಿದೆ. ಇದರ ಮೂಲ 'ಹಿಸ್ನ್' (ಭದ್ರಕೋಟೆ) ಆಗಿದೆ. ಮನುಷ್ಯನು ವಿವಾಹ ಮಾಡಿಕೊಳ್ಳುವ ಮೂಲಕ ತನ್ನನ್ನು ಅಶ್ಲೀಲತೆಯಿಂದ ರಕ್ಷಿಸಿಕೊಳ್ಳಲಿಕ್ಕೆ ಒಂದು ಭದ್ರಕೋಟೆಯನ್ನು ನಿರ್ಮಿಸಿಕೊಳ್ಳುತ್ತಾನೆ.

ಇದನ್ನು ಒಂದು ಪ್ರವಾದಿ ವಚನವು ಹೀಗೆ ಸ್ಪಷ್ಟಪಡಿಸುತ್ತದೆ:

"ನಿಮ್ಮ ಪೈಕಿ ಓರ್ವನನ್ನು ಒಬ್ಬ ಸ್ತ್ರೀಯ ಸೌಂದರ್ಯ ಆಕರ್ಷಿಸಿದ್ದು ಆಕೆಯೆಡೆಗೆ ಆತನ ಹೃದಯವು ವಾಲಿದರೆ ಆತನು ತನ್ನ ಪತ್ನಿಯ ಬಳಿಗೆ ಹೋಗಿ ಸಹಶಯನ ನಡೆಸಲಿ. ತನ್ಮೂಲಕ ಅವನ ಮನದಲ್ಲಿ ಮೂಡಿದ ಕೆಟ್ಟ ಭಾವನೆಗಳು ದೂರವಾಗಬಹುದು." (ಮುಸ್ಲಿಮ್, ತಿರ್ಮಿದಿ)

## ಉದ್ದೇಶ ಸಾಧನೆಯಲ್ಲಿ ದಂಪತಿಗಳ ಸಹಕಾರ

ಆದ್ದರಿಂದ ದಂಪತಿಗಳು ಈ ಉದ್ದೇಶ ಸಾಧನೆಗೆ ಪರಸ್ಪರ ಸಹಕರಿಸಬೇಕೆಂದು ಇಸ್ಲಾಮ್ ಬಯಸುತ್ತದೆ. ಮಾನಹಾನಿಗೆ ಕಾರಣವಾಗುವ ಯಾವ ಮಾರ್ಗವನ್ನೂ ಅನುಸರಿಸಬಾರದು.

ಪ್ರವಾದಿ(ಸ) ಈ ರೀತಿ ಹೇಳಿರುವರು, "ಒಬ್ಬನು ತನ್ನ ಪತ್ನಿಯನ್ನು ಸಹಶಯನಕ್ಕಾಗಿ ಕರೆದು ಆಕೆ ಬಾರದೆ ಇದ್ದರೆ ಆ ಕಾರಣಕ್ಕಾಗಿ ಪತಿಯು ರಾತ್ರಿಯಿಡೀ ಆಕೆಯ ಬಗ್ಗೆ ವಿರಸ ಹೊಂದಿದರೆ ಅಂತಹ ಸ್ತ್ರೀಯ ಮೇಲೆ ಮಲಕ್‌ಗಳು ರಾತ್ರಿಯಿಡೀ ಶಾಪ ಹಾಕುತ್ತಿರುತ್ತಾರೆ."

[ವರದಿ: ಹ. ಅಬೂಹುರೈರಾ(ರ) – ಬುಖಾರಿ, ಮುಸ್ಲಿಮ್, ಅಬೂದಾವೂದ್]

ಇನ್ನೊಂದು ಸಂದರ್ಭದಲ್ಲಿ ಪ್ರವಾದಿ(ಸ) ಈ ರೀತಿ ಹೇಳಿರುವರು, "ಒಬ್ಬನು ತನ್ನ ಪತ್ನಿಯನ್ನು ಸಹಶಯನಕ್ಕಾಗಿ ಕರೆದರೆ ಆಕೆ ಕೂಡಲೇ ಬರ ಬೇಕು. ಆಕೆ ಊಟ ತಯಾರಿಸುತ್ತಿದ್ದರೂ ಸರಿಯೆ." (ವರದಿ: ತಿರ್ಮಿದಿ, ಇಬ್ನುಮಾಜಃ, ಬೈಹಕಿ)

ಇಸ್ಲಾಮ್ ಈ ಬೇಡಿಕೆಯನ್ನು ಕೇವಲ ಪುರುಷರ ಮುಂದಿಡುವುದಿಲ್ಲ ಬದಲಾಗಿ ಪುರುಷನೂ ಪತ್ನಿಯ ಬಯಕೆಯನ್ನು ತೀರಿಸಬೇಕೆಂದು ಆದೇಶಿಸುತ್ತದೆ ಅನ್ಯಥಾ ಆತ ಒಂದು ದೊಡ್ಡ ಬಾಧ್ಯತೆಯನ್ನು ನೆರವೇರಿಸದಂತಾಗುತ್ತದೆ.

ಅಬ್ದುರ್ರಹ್ಮಾನ್ ಅಲ್‌ಜಝ್ರಿ ಈ ರೀತಿ ಬರೆದಿರುವರು, "ನಾಲ್ಕೂ ಕರ್ಮಶಾಸ್ತ್ರಗ ಪ್ರಕಾರ ಪುರುಷನ ಮೇಲೆ ಆತನ ಶಕ್ತಿಗೆ ಅನುಸಾರ ಮಹಿಳೆಯ (ಬಯಕೆಯನ ಈಡೇರಿಸಿ) ಮಾನವನ್ನು ಕಾಪಾಡಬೇಕಾದ ಕರ್ತವ್ಯವೂ ಇದೆ. ಅದೇ ರೀತಿ ಮಹಿಳೆಯನ್ನು ಪತಿಯು ತನ್ನ ಬಯಕೆಯನ್ನು ತೀರಿಸಲು ಕರೆದಾಗ ಸೂಕ್ತವೂ ಧರ್ಮಸಮ್ಮತವೂ ಆದ ಯಾವುದಾದರೂ ಕಾರಣವಿಲ್ಲದೆ ಆಕೆ ಆತನ ಈ ಬೇಡಿಕೆಯನ್ನು ತಿರಸ್ಕರಿಸಬಾರದು." (ಅಲ್ ಫಿಖ್ಹು ಅಲಾ ಮದಾಬಿಲ್ ಅರ್‌ಬಅ)

ಹ. ಉಮರ್(ರ) ತಮ್ಮ ಒಂದು ಪ್ರವಚನದಲ್ಲಿ ಹೀಗೆ ಹೇಳಿದ್ದಾರೆ, "ಈ ಮಾನಿನಿಯರ ಮಾನವನ್ನು ಕಾಪಾಡಿರಿ."

ಇಮಾಮ್ ಇಬ್ನು ತೀಮಿಯ್ಯಾ(ರ) ಅವರು ಮಹಿಳೆಯ ಈ ಹಕ್ಕಿಗೆ ಅಶನ ವಸನ ಮತ್ತು ವಸತಿಯ ಹಕ್ಕಿಗಿಂತಲೂ ಹೆಚ್ಚು ಪ್ರಾಶಸ್ತ್ಯ ನೀಡಿರುವರು.

(ಮುಸ್ನದ್ ಅಹ್ಮದ್

ಅಜ್ಞಾನ ಕಾಲದ ಅರಬರಲ್ಲಿ ರೂಢಿಯಲ್ಲಿದ್ದ ಸಂಪ್ರದಾಯದಂತೆ ಒಬ್ಬ ವ್ಯ ತನ್ನ ಪತ್ನಿಯನ್ನು ಸತಾಯಿಸ ಬಯಸಿದಾಗ ಆಕೆಗೆ ಆಗಾಗ ತಲಾಕ್ ಕೊಟ್ಟು ಪುನ ಮರಳಿ ಪಡೆಯುತ್ತಾ ಆಕೆಯನ್ನು ತ್ರಿಶಂಕು ಸ್ಥಿತಿಯಲ್ಲಿರಿಸಿ ಬಿಡುತ್ತಿದ್ದನು. ಅದ ಅವರು ಅನುಸರಿಸುತ್ತಿದ್ದ ವಿಧಾನವನ್ನು ಇಸ್ಲಾಮಿ ಪಾರಿಭಾಷಿಕದಲ್ಲಿ 'ಈಲಾ ಎನ್ನಲಾಗುತ್ತದೆ. ಪತಿಯು ತನ್ನ ಪತ್ನಿಯನ್ನು ತನ್ನ ತಾಯಿ ಅಥವಾ ಸೋದರಿ ಸಮಾನವೆಂದು ಸಾರುವುದು. ಇದರಿಂದಾಗಿ ಆಕೆ ವಿವಾಹಿತಳಾಗಿದ್ದೂ ಪತಿಯಿಲ್ಲದವಳಂತೆ ದಿನ ದೂಡುತ್ತಿದ್ದಳು. ಇಂತಹ ಸ್ಥಿತಿಯಲ್ಲಿ ಆಕೆಗೆ ತನ್ನ ಲೈಂಗಿ ಬಯಕೆಯನ್ನು ಈಡೇರಿಸಲು ವ್ಯಭಿಚಾರದ ಹೊರತು ಅನ್ಯ ಮಾರ್ಗವಿರಲಿಲ್ಲ

ಈ ಪೈಕಿ ಮೊದಲನೆಯ ಕ್ರಮವು ಇಸ್ಲಾಮ್‌ನ ಪ್ರಕೃತಿಗೆ ತೀರಾ ಭಿನ್ನವಾಗಿತ್ತು ಆದ್ದರಿಂದ ಅದನ್ನು ಇಸ್ಲಾಮ್ ನಿಷೇಧಿಸಿತು. ಏಕೆಂದರೆ ಪತಿ–ಪತ್ನಿಯರಿಬ್ಬರು ಪರಸ್ಪರರ ಮಾನವನ್ನು ರಕ್ಷಿಸುವ ಹೊಣೆ ವಹಿಸಿದ್ದರು. ಆಕೆಯನ್ನು ತಾಯಿ ಸೋದರಿಯಂತೆ ಎಂದು ಪರಿಗಣಿಸುವುದು ಎಷ್ಟು ದೊಡ್ಡ ಅಪರಾಧವಾಗಿ ಯೆಂಬುದನ್ನು ಯೋಚಿಸಿ ನೋಡಿರಿ. ಆದ್ದರಿಂದ ಪವಿತ್ರ ಕುರ್‌ಆನಿನಲ್ಲಿ 'ಝಿಹಾರ ಎಂದು ಕರೆಯಲಾಗಿರುವ ಈ ಪದ್ಧತಿಯನ್ನು ತೊಡೆದು ಹಾಕಿ ಎಲ್ಲ ಪರಿಸ್ಥಿತಿಯಲ್ಲ ಪತ್ನಿಯು 'ಪತ್ನಿ'ಯಾಗಿಯೇ ಉಳಿಯುವಳು ಎಂದು ಸಾರಿ ಹೇಳಿತು. ಇಂತಹ ಹಾನಿಕಾರಕ ಪದಗಳನ್ನು ಹೊರಡಿಸಿದ್ದಕ್ಕಾಗಿ ಇಸ್ಲಾಮ್ ಆತನಿಗೆ ಶಿಕ್ಷೆಯ ರೂಪದ

ಪ್ರಾಯಶ್ಚಿತ್ತ ಮಾಡಬೇಕೆಂದು ಹೇಳಿತು.

'ಈಲಾ' ಮಾಡುವವರಿಗೆ ಗರಿಷ್ಠ ನಾಲ್ಕು ತಿಂಗಳ ಸಮಯಾವಕಾಶ ನೀಡಲಾಯಿತು. ಈ ಮಧ್ಯೆ ಪತಿಯು ಪತ್ನಿಗೆ ಸಹಶಯನದ ಹಕ್ಕನ್ನು ನೀಡದಿದ್ದರೆ, ಆತ ಆಕೆಯನ್ನು ಕೈಬಿಟ್ಟಿದ್ದಾನೆಂದು ಪರಿಗಣಿಸಲಾಗುವುದು. ಆಮೇಲೆ ಸ್ತ್ರೀಯು ತನಗೆ ಹೊಸ ಜೀವನ ಸಂಗಾತಿಯನ್ನು ಹುಡುಕಲೂ ಸ್ವತಂತ್ರಳಾಗಿರುವಳು.

ಈ ಬಗ್ಗೆ ಇರುವ ಮೂರನೆಯ ಸಿದ್ಧಾಂತವೇನೆಂದರೆ ಪತಿಯು ಪತ್ನಿಯ ಜತೆಯೂ ಸಲಿಂಗಕಾಮಿಗಳು ಮಾಡುವಂತೆ ಮಾಡಬಾರದು. ಅನ್ಯಥಾ ಆಕೆಯು ಆ ಹಕ್ಕಿನಿಂದ ವಂಚಿತಳಾಗುವಳು ಮತ್ತು ಆ ಧೂರ್ತನು ತನ್ನ ಕಾಮದ ಶೀಟೆಯನ್ನು ತೀರಿಸಿಕೊಳ್ಳುವನು. ತನ್ನ ಪತ್ನಿಯ ಗುದದ್ವಾರದ ಮೂಲಕ ತನ್ನ ಕಾಮನೆಯನ್ನು ತೀರಿಸುವ ಪುರುಷನನ್ನು ಪ್ರವಾದಿ(ಸ) ಶಪಿಸಿರುವರು. "ತನ್ನ ಪತ್ನಿಯ ಗುದದ್ವಾರದ ಮೂಲಕ ತನ್ನ ಬಯಕೆಯನ್ನು ತೀರಿಸಿದವನನ್ನು ಅಲ್ಲಾಹನು ಕಣ್ಣೆತ್ತಿಯೂ ನೋಡಲಾರನು."

[ವರದಿ: ಹ. ಅಬೂಹುರೈರಾ(ರ) - ಅಬೂದಾವೂದ್]

## ಸ್ಥೈರ್ಯಕ್ಕೆ ಸಹಾಯಕವಾಗುವ ವಿಷಯಗಳು

ನಿಕಾಹ್‌ನ ಈ ಉದ್ದೇಶಕ್ಕೆ ಪೂರಕವಾಗುವ ಎಲ್ಲ ಉಪಾಯಗಳನ್ನೂ ಇಸ್ಲಾಮ್ ಅನುಸರಿಸುತ್ತದೆ ಮತ್ತು ಮದುವೆಯಾಗಿಯೂ ಒಂಟಿ ಜೀವನ ನಡೆಸುವ ಪರಿಸ್ಥಿತಿಯಿಂದ ಅವನನ್ನು ಮುಕ್ತಗೊಳಿಸುತ್ತದೆ.

1. ನೈಜ ಪ್ರೇಮವೇ ದಂಪತಿಗಳನ್ನು ಪರಸ್ಪರ ಆಕರ್ಷಿಸುವ ಮತ್ತು ಒಂದುಗೂಡಿಸುವ ಸಾಧನವಾಗಿದೆ. "ಇಬ್ಬರು ಪ್ರೇಮಿಗಳಿಗೆ ನಿಕಾಹ್‌ಗಿಂತ ಉತ್ತಮವಾದ ಬೇರೊಂದು ವಿಷಯವಿಲ್ಲ" ಎಂದು ಪ್ರವಾದಿ(ಸ) ಹೇಳಿರುವುದಾಗಿ ಇಬ್ನುಮಾಜಃ ವರದಿ ಮಾಡಿರುವರು.

2. ಧರ್ಮಸಮ್ಮತ ವೈವಾಹಿಕ ಬಂಧನದಲ್ಲಿ ಆಕರ್ಷಣೆಯನ್ನು ಹೆಚ್ಚಿಸಲಿಕ್ಕಾಗಿ ಅದು ಪ್ರಾಯದ ಹೊಂದಾಣಿಕೆಯನ್ನೂ ಪರಿಗಣಿಸುತ್ತದೆ. ಏಕೆಂದರೆ ದಂಪತಿಗಳ ಮಧ್ಯೆ ಪ್ರಾಯದ ಅಂತರ ಹೆಚ್ಚಾಗಿದ್ದರೆ ಅವರಲ್ಲಿ ಪರಸ್ಪರ ಆಕರ್ಷಣೆ ಇರಲಾರದು.

3. ಈ ಉದ್ದೇಶಕ್ಕಾಗಿ ಧರ್ಮಶಾಸ್ತ್ರವು ಪರಸ್ತ್ರೀಯರತ್ತ ನೋಡುವುದನ್ನೂ ಅನುಮತಿಸಿದೆ.

4. ವೈವಾಹಿಕ ಜೀವನದಲ್ಲಿ ಪತ್ನಿಯು ಶೃಂಗಾರ ಮಾಡಿಕೊಳ್ಳುವುದನ್ನು ಇಸ್ಲಾಮ್ ಪ್ರೋತ್ಸಾಹಿಸುತ್ತದೆ.

5. ಪತ್ನಿಯನ್ನು ಕೇವಲ ಭೋಗದ ವಸ್ತುವೆಂದು ಪರಿಗಣಿಸದೆ ಆಕೆಯ

ಬಯಕೆ–ಭಾವನೆಗಳನ್ನು ಗೌರವಿಸಬೇಕೆಂದು ಪತಿಗೆ ಆದೇಶಿಸುತ್ತದೆ.

6. ಪರಸ್ಪರ ಉತ್ತಮ ವ್ಯವಹಾರ ಮತ್ತು ಉನ್ನತ ಚಾರಿತ್ರ್ಯದ ಪ್ರದರ್ಶನವನ್ನೂ ಇಸ್ಲಾಮ್ ಮೆಚ್ಚಿಕೊಂಡಿದೆ. ಅವರಲ್ಲಿರುವ ಮಧುರ ಬಾಂಧವ್ಯವನ್ನು ಪ್ರೋತ್ಸಾಹಿಸುವ ಎಲ್ಲ ಕಾರ್ಯಗಳನ್ನೂ ಅದು ಆದೇಶಿಸುತ್ತದೆ.

## ಮುನ್ನೆಚ್ಚರಿಕೆಯ ಕ್ರಮಗಳು

ಈ ಎಲ್ಲ ಉಪಾಯಗಳ ಹೊರತಾಗಿಯೂ ಲೈಂಗಿಕ ಬಯಕೆಯೆಂಬ ಬಿರುಗಾಳಿಯು ಯಾವ ಕ್ಷಣದಲ್ಲೂ ಶೀಲ–ಚಾರಿತ್ರ್ಯಗಳ ಲೋಕವನ್ನು ವಿನಾಶಕೂಪಕ್ಕೆ ಸಾಗಿಸಲಾರದೆಂದು ಹೇಳಬರುವುದಿಲ್ಲ. ಆದ್ದರಿಂದ ಧರ್ಮಸಂಹಿತೆಯು ಅದಕ್ಕೆ ಕೆಲವು ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಂಡಿದೆ. ವ್ಯಭಿಚಾರದ ಹತ್ತಿರವೂ ಸುಳಿಯಬಾರದೆಂದು ಪವಿತ್ರ ಕುರ್‌ಆನಿನಲ್ಲಿ ಆದೇಶಿಸಲಾಗಿದೆ.

"ವ್ಯಭಿಚಾರದ ಹತ್ತಿರವೂ ಸುಳಿಯಬೇಡಿರಿ. ಅದು ಅತಿ ಹೀನ ಕಾರ್ಯ ಮತ್ತು ಅತ್ಯಂತ ಕೆಟ್ಟ ಮಾರ್ಗ." (ಪವಿತ್ರ ಕುರ್‌ಆನ್: 17: 32)

ಪ್ರವಾದಿ(ಸ) ಅವರು ಈ ರೀತಿ ಹೇಳಿರುವರು, "ಆದಮರ ಮಕ್ಕಳ ವ್ಯಭಿಚಾರದ ಹಲವು ರೂಪಗಳಿವೆ, ಕಣ್ಣಿನ ವ್ಯಭಿಚಾರ, ಕಾಲಿನ ವ್ಯಭಿಚಾರ, ಚಿತ್ತದ ವ್ಯಭಿಚಾರ, ಬಯಕೆ–ಕಾಮನೆಗಳ ವ್ಯಭಿಚಾರ. ಕೊನೆಯಲ್ಲಿ ಗುಪ್ತಾಂಗವು ಇವುಗಳಿಗೆ ಪ್ರಮಾಣ ಒದಗಿಸುತ್ತದೆ ಅಥವಾ ಅವುಗಳನ್ನು ನಿರಾಕರಿಸುತ್ತದೆ."

(ಅಬೂದಾವೂದ್, ಮುಸ್ಲಿಮ್, ಬುಖಾರಿ ಇತ್ಯಾದಿ)

ಇತರ ಕಡೆಗಳಲ್ಲಿ ಧರ್ಮಸಂಹಿತೆಯು ಅದರ ವಿವರಗಳನ್ನು ನೀಡಿದೆ. ಆ ಮುನ್ನೆಚ್ಚರಿಕೆಯ ಕ್ರಮಗಳ ಕುರಿತು ಅಭ್ಯಸಿಸೋಣ.

## ದೃಷ್ಟಿಯನ್ನು ತಗ್ಗಿಸಿಡುವುದು

ಪ್ರಕೃತಿಯು ಮನುಷ್ಯನನ್ನು ಸೌಂದರ್ಯಪ್ರಿಯನಾಗಿ ಸೃಷ್ಟಿಸಿದೆ. ಆತ ವಿಶ್ವದ ಪ್ರತಿಯೊಂದು ವಸ್ತುವಿನಲ್ಲೂ ಆ ಸೌಂದರ್ಯವನ್ನು ಹುಡುಕುತ್ತಿರುತ್ತಾನೆ. ಅವನ ಈ ಅಭಿರುಚಿಯನ್ನು ಪೂರೈಸದಿರುವುದು ಮಾನವೀಯತೆಯ ಮೇಲೆ ಎಸಗುವ ಘೋರ ಅನ್ಯಾಯವಾದೀತು. ಆದರೆ ದೃಷ್ಟಿಯ ಉಡಾಳತೆಯು ಮಾನವನನ್ನು ಕಾಮಪಿಪಾಸುವಾಗಿ ಮಾರ್ಪಡಿಸುತ್ತದೆ. ಆದ್ದರಿಂದ ಪವಿತ್ರ ಕುರ್‌ಆನ್ ಸತ್ಯವಿಶ್ವಾಸಿಗಳಿಗೆ ಈ ರೀತಿ ಆದೇಶಿಸುತ್ತದೆ,

"ಪೈಗಂಬರರೇ, ಸತ್ಯವಿಶ್ವಾಸಿಗಳೊಡನೆ ತಮ್ಮ ದೃಷ್ಟಿಗಳನ್ನು ಕೆಳಗಿರಿಸಿ ಕೊಳ್ಳಲಿಕ್ಕೂ ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳಲಿಕ್ಕೂ ಹೇಳಿರಿ. ಇದು ಅವರ ಪಾಲಿಗೆ ಹೆಚ್ಚು ಪರಿಶುದ್ಧವಾದ ಕ್ರಮವಾಗಿದೆ. ಅಲ್ಲಾಹನು ಅವರು ಮಾಡುವುದೆಲ್ಲವನ್ನೂ ಅರಿಯುವವ

ಾಗಿದ್ದಾನೆ. ಪೈಗಂಬರರೇ, ಸತ್ಯವಿಶ್ವಾಸಿನಿಯರೊಡನೆ ಹೇಳಿರಿ – ಅವರು ತಮ್ಮ ೃಷ್ಟಿಗಳನ್ನು ಕೆಳಗಿರಿಸಿಕೊಳ್ಳಲಿ ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳಲಿ."

(ಪವಿತ್ರ ಕುರ್‌ಆನ್: 24: 30–31)

ಇದನ್ನೇ ಪ್ರವಾದಿ(ಸ) ಅವರು ಹೀಗೆ ಹೇಳಿರುವರು, "ಓ ಅಲೀ(ರ)! ದೃಷ್ಟಿಯ ಂದೆ ದೃಷ್ಟಿಯನ್ನು ಓಡಿಸಬೇಡಿ. ಪ್ರಥಮ (ಆಕಸ್ಮಿಕ) ದೃಷ್ಟಿಯು ನಿಮ್ಮ ಪಾಲಿಗೆ ಮಾರ್ಹವಾದೀತು. ಆದರೆ ದ್ವಿತೀಯ ದೃಷ್ಟಿಯ ಹಕ್ಕು ನಿಮಗೆ ಯಾವ ಕಾರಣಕ್ಕೂ ಲ್ಲ." (ಅಬೂದಾವೂದ್, ತಿರ್ಮಿದಿ)

ಉರ್ದು ಕವಿಯೊಬ್ಬರು ಇದನ್ನು ಬಹಳ ಮನೋಜ್ಞವಾಗಿ ಒಂದು ದ್ವಿಪದಿಯಲ್ಲಿ ವರಿಸಿದ್ದಾರೆ:

ಜಲ್ವೋಂಕೆ ಇಸ್ ಹುಜೂಮ್ ಮೆ ಲಾಝಿಮ್ ಹೈ ಇಹ್ತಿಯಾತ್
ಸಹ್ವೆ ನಝರ್ ಮುಆಫ್ ಹೈ ಕಸ್ದೆ ನಝರ್ ಹರಾಮ್

.(ಸೌಂದರ್ಯದ ಈ ಜನಜಂಗುಳಿಯಲ್ಲಿ ಮುನ್ನೆಚ್ಚರಿಕೆಯು ಬಹಳ ಅಗತ್ಯವಾಗಿದೆ. ಕಸ್ಮಿಕ ದೃಷ್ಟಿಯು ಕ್ಷಮಾರ್ಹವಾಗಿದ್ದು ಬೇಕೆಂತಲೇ ನೋಡುವುದು ನಿಷಿದ್ಧವಾಗಿದೆ.)

ವಿವಾಹ ನಿಷಿದ್ಧ ಸಂಬಂಧಗಳಲ್ಲಿ ಪರಸ್ಪರ ಮುಕ್ತ ಮಿಲನವನ್ನು ಇಸ್ಲಾಮ್ ಾಕಾಗಿ ಅನುಮತಿಸಿದೆಯೆಂದರೆ ಇಲ್ಲಿ ನೈಜ ಪ್ರೀತಿಯು ಗಾಢ ವಾಗಿರುತ್ತದೆ. ನ್ನು ಯಾವನಾದರೂ ಧೂರ್ತ ಇದನ್ನು ಕೂಡಾ ಕಾಮದ ದೃಷ್ಟಿಯಾಗಿ ಾರ್ಪಡಿಸಿದರೆ ಅದನ್ನು ಶರೀಅತ್ ನಿಷೇಧಿಸುತ್ತದೆ:

ಅನ್ಯ ಮಹಿಳೆಯರನ್ನು ನೋಡುವಂತೆ ಒಬ್ಬನು ತನ್ನ ತಾಯಿ, ಸೋದರಿ ಥವಾ ಮಗಳನ್ನು ಕಾಮದ ದೃಷ್ಟಿಯಿಂದ ನೋಡಿದರೆ ಅದು ನಿಷಿದ್ಧವೆಂಬುದು ರ್ವಸಮ್ಮತ ವಿಷಯ.

## ್ರವಣ ಮಾಧ್ಯಮ

ದೃಷ್ಟಿಯಂತೆ ಶ್ರವಣ ಕೂಡಾ ಮನುಷ್ಯನ ಕಾಮವಿಕಾರಗಳನ್ನು ಕೆರಳಿಸ ಲ್ಲುದು. ಉತ್ತಮ ಶ್ರವಣವು ಮನುಷ್ಯನಲ್ಲಿ ಉತ್ತಮ ಗುಣಗಳನ್ನು ಬೆಳೆಸಿದರೆ ಟ್ಟ ಶ್ರವಣವು ಮನುಷ್ಯನಲ್ಲಿ ಕೆಟ್ಟ ಗುಣಗಳನ್ನು ಬೆಳೆಸುತ್ತದೆ. ಇಸ್ಲಾಮ್ ಈ ಪೈಕಿ ೊದಲನೆಯದನ್ನು ಪ್ರೋತ್ಸಾಹಿಸಿ ಎರಡನೆಯದನ್ನು ನಿಷೇಧಿಸುತ್ತದೆ.

## ಾಲಗೆಯ ರಕ್ಷಣೆ

ನಾಲಗೆಯ ಬಗ್ಗೆ ಮನುಷ್ಯನು ಹೆಚ್ಚು ಅನಿಯಂತ್ರಿತನಾಗಿರುತ್ತಾನೆ. ನಮ್ಮ ಾಲಗೆಯಿಂದ ಹೊರಡುವ ಮಾತು ಅಂತರಿಕ್ಷದಲ್ಲಿ ಲೀನವಾಗಿ ಬಿಡುವುದಿಲ್ಲ. ಅವು

ನಮ್ಮ ಚಿಂತನೆ ಮತ್ತು ವಿಚಾರಗಳಲ್ಲಿ ಪ್ರತಿಬಿಂಬಿತವಾಗುತ್ತದೆ. ನಾಲಗೆಯ ಈ ಪ್ರಭಾವವು ದೃಶ್ಯ ಮತ್ತು ಶ್ರವಣ ಮಾಧ್ಯಮಕ್ಕಿಂತಲೂ ವಿಶಾಲ ಮತ್ತು ಆಳವಾಗಿದೆ. ಒಂದು ವೇಳೆ ಈ ಮಹಾನ್ ಶಕ್ತಿಯು ಹತೋಟಿ ಮೀರಿದರೆ ಅದು ನಿಮ್ಮ ವೈಯಕ್ತಿಕ ಜೀವನದಲ್ಲಿ ಮತ್ತು ಸಾಮಾಜಿಕ ಬದುಕಿನಲ್ಲಿ ಎಂತಹ ದುಷ್ಪರಿಣಾಮವನ್ನು ಬೀರಬಲ್ಲುದೆಂಬುದನ್ನು ಊಹಿಸಿ ನೋಡಿ.

ಪ್ರವಾದಿವರ್ಯರು(ಸ) ಈ ರೀತಿ ಹೇಳಿರುವರು, "ಒಬ್ಬನು ತನ್ನ ನಾಲಗೆ ಮತ್ತು ಗುಪ್ತಾಂಗವನ್ನು ಹತೋಟಿಯಲ್ಲಿಡುವುದನ್ನು ಖಾತ್ರಿಪಡಿಸಿದರೆ ನಾನು ಅವನಿಗೆ ಸ್ವರ್ಗದ ವಾಗ್ದಾನ ನೀಡುವೆನು."

[ವರದಿ: ಹ. ಸಹಲ್ ಬಿನ್ ಸಅದ್(ರ) – ಬುಖಾರಿ, ತಿರ್ಮಿದಿ]

ಇನ್ನೊಂದು ಸಂದರ್ಭದಲ್ಲಿ ಅವರು(ಸ) ಹೀಗೆ ಹೇಳಿರುವರು, "ಯಾರನ್ನು ಅಲ್ಲಾಹನು ನಾಲಗೆ ಮತ್ತು ಗುಪ್ತಾಂಗದ ಕೇಡಿನಿಂದ ರಕ್ಷಿಸಿದನೋ ಅವನು ಸ್ವರ್ಗವನ್ನು ಪ್ರವೇಶಿಸುವನು." (ತಿರ್ಮಿದಿ)

## ವಸ್ತ್ರಧಾರಣೆ

ನಗ್ನತೆಯು ಈ ಯುಗದ ಒಂದು ದೊಡ್ಡ ಕ್ಷೋಭೆಯಾಗಿದೆ. ಅದು ಮನುಷ್ಯನಿಗೆ ವಿಷಯಾಸಕ್ತಿಯ ಹುಚ್ಚು ಹಿಡಿಸುವ ಮೂಲಕ ಅವನ ಭಾವನಾ ಲೋಕಕ್ಕೆ ಕಿಚ್ಚಿಟ್ಟಿದೆ. ಗಂಡು–ಹೆಣ್ಣಿನ ಮಧ್ಯೆ ಪ್ರಕೃತಿಯು ಸಹಜವಾಗಿಯೇ ಆಕರ್ಷಣೆಯನ್ನಿರಿಸಿದೆ. ಆಧುನಿಕ ನಗ್ನ ಸಂಸ್ಕೃತಿಯು ಈ ಆಕರ್ಷಣೆಯನ್ನು ನೂರುಪಟ್ಟು ವೃದ್ಧಿಸಿದೆ. ಇದರಿಂದಾಗಿ ಮನುಷ್ಯನು ಅತ್ಯಾಚಾರ, ಅನಾಚಾರ, ವ್ಯಭಿಚಾರಗಳಿಂದ ದೂರ ಉಳಿಯುವುದು ಅಸಾಧ್ಯವಾಗಿ ಬಿಟ್ಟಿದೆ. ಆದ್ದರಿಂದ ಅಶ್ಲೀಲತೆ ಮತ್ತು ವ್ಯಭಿಚಾರದ ಈ ಬಲಿಷ್ಠ ಪ್ರೇರಕ ಶಕ್ತಿಯನ್ನು ಮೂಲದಲ್ಲೇ ಚಿವುಟಿ ಹಾಕಬೇಕಾದುದು ಪ್ರಕೃತಿಯ ಬೇಡಿಕೆಯಾಗಿದೆ.

ಆದರೆ ಆಧುನಿಕ ಸಂಸ್ಕೃತಿಯು ಅರೆನಗ್ನತೆಯಿಂದ ಪೂರ್ಣ ನಗ್ನತೆಯೆಡೆಗೆ ದಾಪುಗಾಲು ಹಾಕುತ್ತಾ ಸಾಗಿದೆ. ನಗ್ನತೆಯ ಈ ಸಂಸ್ಕೃತಿಯಲ್ಲಿ ಮನುಷ್ಯನ ಶೀಲ ಚಾರಿತ್ರ್ಯಗಳೆಲ್ಲವೂ ಕೊಚ್ಚಿ ಹೋಗಿವೆ. ಈಗ ಬಟ್ಟೆಯು ಸ್ತ್ರೀಯ ಮಟ್ಟಿಗೆ ಪ್ರಗತಿಯ ಮಾರ್ಗದ ಅತಿದೊಡ್ಡ ತೊಡಕಾಗಿದೆ. ಇಸ್ಲಾಮ್ ವ್ಯಭಿಚಾರವನ್ನು ಕಠಿಣವಾಗಿ ನಿಷೇಧಿಸಿದೆ; ಎಲ್ಲ ಪರಿಸ್ಥಿತಿಯಲ್ಲೂ ಮನುಷ್ಯನನ್ನು ಅದರಿಂದ ದೂರ ಉಳಿಸಬಯಸುತ್ತದೆ. ಆದ್ದರಿಂದಲೇ ಅದು ಈ ನಗ್ನತೆಯ ಮಹಾಪೂರ ವನ್ನು ತಡೆಯುವ ಸುಭದ್ರ ಅಣೆಕಟ್ಟನ್ನು ನಿರ್ಮಿಸಿದೆ. ಅದು ಸ್ತ್ರೀ–ಪುರುಷರಿಗೆ ಕನಿಷ್ಠ ಉಡುಪನ್ನು ನಿಗದಿಗೊಳಿಸಿ ಅದನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಆದೇಶಿಸಿದೆ.

ಇಸ್ಲಾಮ್ ನಗ್ನತೆಯನ್ನು ಎಷ್ಟು ವಿನಾಶಕಾರಿಯೆಂದು ಪರಿಗಣಿಸುತ್ತದೆ

ಎಂಬುದನ್ನು ಒಂದು ಪ್ರವಾದಿ ವಚನದಿಂದ ತಿಳಿಯಬಹುದಾಗಿದೆ:

"ಮಹಿಳೆಯು ತನ್ನ ಪತಿಯ ಮನೆಯ ಹೊರತು ಇತರ ಯಾವುದೇ ಕಡೆಯಲ್ಲಿ ತನ್ನ ಬಟ್ಟೆಗಳನ್ನು ಬಿಚ್ಚಿದರೆ ಆಕೆ ತನ್ನ ಮತ್ತು ತನ್ನ ಪ್ರಭುವಿನ ಮಧ್ಯೆಯಿರುವ ಸಂಬಂಧವನ್ನು ಕಡಿದು ಹಾಕುತ್ತಾಳೆ."

[ವರದಿ: ಹ. ಆಯಿಶಾ(ರ) –ಮುಸ್ನದ್ ಅಹ್ಮದ್]

## ಪರಸ್ತ್ರೀಯ ಜತೆ ಏಕಾಂತದಲ್ಲಿರುವುದು ನಿಷಿದ್ಧ

ಮಾನರಕ್ಷಣೆಯ ಹಾದಿಯಲ್ಲಿ ಇನ್ನೊಂದು ಘಟ್ಟವೂ ಬರುತ್ತದೆ. ಅದು ಬೀದಿ ಕಾಮುಕತೆ, ವಿಕಾರ ಕೆರಳಿಸುವ ಪದ್ಯಗಳು, ಅಶ್ಲೀಲ ಸಂಭಾಷಣೆ ಮತ್ತು ನಗ್ನತೆಗಿಂತಲೂ ಹೆಚ್ಚು ಅಪಾಯಕಾರಿಯಾಗಿದೆ. ಅದುವೇ ಪರಸ್ತ್ರೀಯ ಜತೆ ಏಕಾಂತದಲ್ಲಿರುವುದು. ಅವರಿಬ್ಬರ ಮಧ್ಯೆ 'ಹಿಜಾಬ್' (ಪರ್ದಾ) ಇಲ್ಲದಾಗ ಅದು ಇನ್ನಷ್ಟು ಅಪಾಯಕಾರಿಯಾಗುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮನುಷ್ಯನನ್ನು ಕೆಡುಕಿನಿಂದ ರಕ್ಷಿಸುವ ಯಾವುದೇ ಬಾಹ್ಯ ಒತ್ತಡವಿರುವುದಿಲ್ಲ. ಆದ್ದರಿಂದ ಅವನು ತನ್ನ ವಿಷಯಾಸಕ್ತಿಯ ಬಲಿಪಶುವಾಗುವುದು ಖಚಿತವಾಗುತ್ತದೆ.

ಮನುಷ್ಯನ ಈ ದೌರ್ಬಲ್ಯವನ್ನು ಮನಗಂಡು ಇಸ್ಲಾಮ್ ವಿವಾಹ ನಿಷಿದ್ಧ ವಲ್ಲದ ಅನ್ಯಸ್ತ್ರೀಯ ಜತೆ ಏಕಾಂತದಲ್ಲಿರುವುದನ್ನು ನಿಷೇಧಿಸಿದೆ. ಪ್ರವಾದಿ ವರ್ಯರು(ಸ) ಹೀಗೆ ಹೇಳಿರುವರು:

"ಯಾವ ಮಹಿಳೆಯ ಜತೆ ಆಕೆಯ ವಿವಾಹ ನಿಷಿದ್ಧ ಪುರುಷರಾರೂ ಇಲ್ಲವೋ ಅಂಥವರ ಬಳಿಗೆ ಹೋಗದಿರಿ. ಏಕೆಂದರೆ ಶೈತಾನನು ಮನುಷ್ಯನೊಳಗೆ ರಕ್ತದಂತೆ ಹರಿಯುತ್ತಿರುತ್ತಾನೆ." [ವರದಿ: ಹ. ಜಾಬಿರ್(ರ) – ಮುಸ್ಲಿಮ್, ತಿರ್ಮಿದಿ]

## 5. ಸಮಾಜ ಸುಧಾರಣೆ

ಪ್ರತಿಯೊಂದು ಸಮಾಜಕ್ಕೆ ಕೆಲವು ಮೂಲಭೂತ ಬೇಡಿಕೆಗಳಿರುತ್ತವೆ. ಇದನ್ನು ಪೂರೈಸುವುದು ಸಮಾಜ ಬಾಂಧವರಿಗೆ ಅನಿವಾರ್ಯವಾಗುತ್ತದೆ. ಈ ಬೇಡಿಕೆಗಳನ್ನು ಈಡೇರಿಸದೆ ಇರುವುದು ಸಮಾಜದ ವಿರುದ್ಧ ಬಂಡಾಯ ಹೂಡುವುದಕ್ಕೆ ಸಮಾನವಾಗಿದೆ. ಒಂದು ಸಮಾಜವು ಈ ಬೇಡಿಕೆಗಳನ್ನು ಕೈಬಿಟ್ಟರೆ ಅಥವಾ ಜನರು ಅದನ್ನು ಪಾಲಿಸುವಂತೆ ಮಾಡಲು ಅಶಕ್ತವಾದರೆ ಅದರ ಅಸ್ತಿತ್ವವೇ ಉಳಿಯುವುದಿಲ್ಲ.

ಇಸ್ಲಾಮೀ ಸಮಾಜಕ್ಕೂ ಕೆಲವು ಮೂಲಭೂತ ಬೇಡಿಕೆಗಳಿವೆ. ಆ ಬೇಡಿಕೆಗಳನ್ನು ಪೂರೈಸಬೇಕಾದುದು ಸತ್ಯವಿಶ್ವಾಸಿಗಳೆಲ್ಲರ ಕರ್ತವ್ಯವಾಗಿದೆ. ಪವಿತ್ರ ಕುರ್‌ಆನ್ ಅದನ್ನು ಹಲವೆಡೆ ವಿವರಿಸಿದೆ. ಆ ಪೈಕಿ ಒಂದು ಈ ಕೆಳಗಿನಂತಿದೆ:

"ಸತ್ಯವಿಶ್ವಾಸಿಗಳೇ, ಸತ್ಯವಿಶ್ವಾಸಿನಿಯರು ವಲಸೆ ಮಾಡಿ ನಿಮ್ಮ ಬಳಿಗೆ ಬಂದರೆ

(ಅವರು ಸತ್ಯವಿಶ್ವಾಸಿನಿಯರೆಂಬ ಕುರಿತು) ಪರೀಕ್ಷಿಸಿಕೊಳ್ಳಿರಿ. ಅವರ ಸತ್ಯವಿಶ್ವಾಸದ ನಿಜ ಸ್ಥಿತಿಯನ್ನು ಅಲ್ಲಾಹನೇ ಚೆನ್ನಾಗಿ ಬಲ್ಲನು. ಅವರು ಸತ್ಯವಿಶ್ವಾಸಿನಿಯರೆಂದು ನಿಮಗೆ ತಿಳಿದು ಬಂದಾಗ ಅವರನ್ನು ಸತ್ಯನಿಷೇಧಿಗಳೆಡೆಗೆ ಮರಳಿಸಬೇಡಿರಿ. ಅವರು ಸತ್ಯನಿಷೇಧಿಗಳ ಪಾಲಿಗೆ ಧರ್ಮಬದ್ಧರಲ್ಲ ಮತ್ತು ಸತ್ಯ ನಿಷೇಧಿಗಳು ಅವರ ಪಾಲಿಗೂ ಧರ್ಮಬದ್ಧರಲ್ಲ. ಅವರ ಸತ್ಯನಿಷೇಧಿ ಗಂಡಂದಿರು ಅವರಿಗೆ ಕೊಟ್ಟಿದ್ದ 'ವಿವಾಹ ಧನ'ವನ್ನು ಅವರಿಗೆ ಮರಳಿಸಿರಿ. ನೀವು ಅವರ ವಿವಾಹ ಧನವನ್ನು ಪಾವತಿ ಮಾಡಿದ ಮೇಲೆ ನೀವು ಅವರೊಂದಿಗೆ ವಿವಾಹ ಮಾಡುವುದರಲ್ಲೇನೂ ದೋಷವಿಲ್ಲ ಮತ್ತು ನೀವು ಕೂಡಾ ಸತ್ಯನಿಷೇಧಿ ಸ್ತ್ರೀಯ ರನ್ನು ನಿಮ್ಮ ವಿವಾಹ ಬಂಧನದಲ್ಲಿ ತಡೆದಿರಿಸಿಕೊಳ್ಳಬೇಡಿರಿ. ನೀವು ನಿಮ್ಮ ಸತ್ಯನಿಷೇಧಿ ಪತ್ನಿಯರಿಗೆ ಕೊಟ್ಟಿದ್ದ ವಿವಾಹ ಧನವನ್ನು ಮರಳಿ ಪಡೆದುಕೊಳ್ಳಿರಿ ಮತ್ತು ಸತ್ಯನಿಷೇಧಿಗಳು ತಮ್ಮ ಮುಸ್ಲಿಮ್ ಪತ್ನಿಯರಿಗೆ ಕೊಟ್ಟಿದ್ದ ವಿವಾಹ ಧನವನ್ನು ಮರಳಿ ಪಡೆದುಕೊಳ್ಳಲಿ. ಇದು ಅಲ್ಲಾಹನ ಆದೇಶವಾಗಿದೆ. ಅವನು ನಿಮ್ಮ ನಡುವೆ ತೀರ್ಮಾನ ಮಾಡುತ್ತಾನೆ. ಅವನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ."

**(ಪವಿತ್ರ ಕುರ್‌ಆನ್: 60: 10)**

ಹ. ಉಬಾದಾ ಬಿನ್ ಸಾಮಿತ್(ರ) ಹೇಳುತ್ತಾರೆ: "ಪ್ರವಾದಿ(ಸ) ಮಹಿಳೆಯರಿಂದ ಪ್ರತಿಜ್ಞೆ ಸ್ವೀಕರಿಸುತ್ತಿದ್ದಂತೆಯೇ ನಮ್ಮಿಂದಲೂ ಕರಾರು ಪಡೆಯುತ್ತಿದ್ದರು. 1. ನಾವು ಅಲ್ಲಾಹನೊಂದಿಗೆ ಯಾರನ್ನೂ ಭಾಗೀದಾರರಾಗಿ ಮಾಡಬಾರದು. 2. ಕಳ್ಳತನ ಮಾಡಬಾರದು. 3. ವ್ಯಭಿಚಾರವೆಸಗಬಾರದು. 4. ನಮ್ಮ ಮಕ್ಕಳನ್ನು ಕೊಲ್ಲಬಾರದು ಮತ್ತು 5. ನಾವು ಪರಸ್ಪರರ ಮೇಲೆ ಆರೋಪ ಹೊರಿಸಬಾರದು." **(ಮುಸ್ಲಿಮ್)**

ಈ ಪ್ರತಿಜ್ಞಾ ವಚನವನ್ನು ಕೇಳಿದ ಪ್ರತಿಯೊಬ್ಬ ವ್ಯಕ್ತಿಯೂ ಇಸ್ಲಾಮೀ ಸಮಾಜವೆಂದರೆ ಯಾವುದು ಎಂದು ಹೇಳಬಲ್ಲನು. ಈ ಪರಿಸರದಲ್ಲಿ ಯಾವ ರೀತಿಯ ಜನರು ಉಂಟಾಗುತ್ತಾರೆಂಬುದೂ ಎಲ್ಲರಿಗೂ ವ್ಯಕ್ತವಾಗುತ್ತದೆ. ಏಕೆಂದರೆ ಸಮಾಜವೇ ವ್ಯಕ್ತಿಗಳ ಚಟುವಟಿಕೆಗಳಿಗೆ ರಂಗ ಒದಗಿಸುತ್ತದೆ ಮತ್ತು ಆ ಚಟುವಟಿಕೆಗಳಿಗೆ ಒಂದು ಮೇರೆಯನ್ನು ನಿಶ್ಚಯಿಸುತ್ತದೆ. ಅವನು ಆ ಬೇಲಿಯನ್ನು ದಾಟಿದರೆ ಸಮಾಜವು ಅವನನ್ನು ಕೈ ಬಿಡುತ್ತದೆ. ಆದ್ದರಿಂದ ಸಮಾಜದ ವಿಚಾರ ಮತ್ತು ಒಲವುಗಳ ಗಾಢವಾದ ಪ್ರಭಾವ ವ್ಯಕ್ತಿಯ ಜೀವನದ ಮೇಲೆ ಬೀಳುತ್ತದೆ.

"ಅನಂತರ ನಾವು 'ಲೂತ್'ರನ್ನು ಸಂದೇಶವಾಹಕರನ್ನಾಗಿ ಮಾಡಿ ಕಳುಹಿಸಿದೆವು. ಅವರು ತಮ್ಮ ಜನಾಂಗವನ್ನುದ್ದೇಶಿಸಿ ಹೇಳಿದ ಸಂದರ್ಭವನ್ನು ಸ್ಮರಿಸಿರಿ. ನೀವು ನಿಮಗಿಂತ ಮುಂಚೆ ಜಗತ್ತಿನಲ್ಲಿ ಇನ್ನಾರೂ ಮಾಡಿರದಂತಹ ಅಶ್ಲೀಲ ಕಾರ್ಯವನ್ನೆಸಗುವ ಲಜ್ಜಾಹೀನರಾಗಿಬಿಟ್ಟಿರಾ? ನೀವು ಸ್ತ್ರೀಯರನ್ನು ಬಿಟ್ಟು ಪುರುಷರೊಂದಿಗೆ ನಿಮ್ಮ ಕಾಮಾಭಿಲಾಷೆಯನ್ನು ನೀಗಿಸಿಕೊಳ್ಳುತ್ತೀರಾ? ವಾಸ್ತವದಲ್ಲಿ

ನೀವು ಸ್ಪಷ್ಟವಾಗಿ ಹದಮೀರುವವರಾಗಿರುತ್ತೀರಿ. ಆದರೆ, ಆ ಜನಾಂಗದ ಉತ್ತರ, 'ಇವರನ್ನು ನಮ್ಮ ನಾಡಿನಿಂದ ಹೊರಕ್ಕಟ್ಟಿರಿ, ಭಾರಿ ಪರಿಶುದ್ಧರಾಗುತ್ತಾರಿವರು!' ಎಂಬುದರ ವಿನಾ ಇನ್ನೇನೂ ಇರಲಿಲ್ಲ." (ಪವಿತ್ರ ಕುರ್‌ಆನ್: 7: 80–82)

ಆದ್ದರಿಂದ ನೀವು ನಿಮ್ಮ ಮತ್ತು ಮಾನವಕುಲದ ಪಾಲಿಗೆ ಅಶ್ಲೀಲತೆ ಮತ್ತು ವ್ಯಭಿಚಾರವನ್ನು ಹಾನಿಕಾರಕವೆಂದು ಪರಿಗಣಿಸುವುದಾದರೆ ಪ್ರಸಕ್ತ ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಲು ಪ್ರಯತ್ನಿಸಬೇಕು. ಶೀಲ, ಮಾನ ಮತ್ತು ಸಭ್ಯತೆಯಿರುವ ಒಂದು ಪರಿಸರದ ನಿರ್ಮಾಣಕ್ಕೆ ಪ್ರಯತ್ನಶೀಲರಾಗಬೇಕು.

ಪ್ರಸಕ್ತ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಚ್ಚಿನ ಕಡೆ ವ್ಯಭಿಚಾರವು ನಿಷಿದ್ಧ ವಾಗಿದೆ. ಆದರೆ ಅಲ್ಲಿನ ವಿಚಾರ-ಸಿದ್ಧಾಂತ, ಶಿಕ್ಷಣ-ತರಬೇತಿ, ಸಂಸ್ಕೃತಿ ಸಭ್ಯತೆ ಗಳೆಲ್ಲವೂ ಈ ಕಾನೂನನ್ನು ಉಲ್ಲಂಘಿಸಲು ವ್ಯಕ್ತಿಯನ್ನು ಪ್ರೇರೇಪಿಸುತ್ತವೆಯೇ ಹೊರತು ಅದನ್ನು ಪಾಲಿಸಲು ಪ್ರೇರೇಪಿಸುವುದಿಲ್ಲ. ಅಶ್ಲೀಲ ಸಾಹಿತ್ಯ, ನಗ್ನ ಚಿತ್ರಗಳು, ಗುಪ್ತಾಂಗವನ್ನು ಮರೆಸದಂತಹ ನಗ್ನ ಉಡುಪು, ಸ್ತ್ರೀ-ಪುರುಷರ ಮುಕ್ತ ಮಿಲನ, ನೃತ್ಯ-ಸಂಗೀತ ಇತ್ಯಾದಿಗಳೆಲ್ಲವೂ ವ್ಯಭಿಚಾರಕ್ಕೆ ಪೂರಕವಾಗಿವೆಯೇ. ಹೊರತು ಮಾರಕವಲ್ಲ.

ಇಸ್ಲಾಮ್‌ನ ವೈಶಿಷ್ಟ್ಯವೇನೆಂದರೆ ಅದು ಕಾನೂನು ರಚಿಸುವುದಕ್ಕೆ ಮುಂಚೆಯೇ ಅದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸುತ್ತದೆ. ಯಾವುದೇ ಸಿದ್ಧಾಂತವನ್ನು ಕಾರ್ಯರೂಪಕ್ಕೆ ತರುವ ಮೂರು ಶಕ್ತಿಗಳಿವೆ. ವಿಚಾರ-ಸಿದ್ಧಾಂತಗಳ ಶಕ್ತಿ, ಸಾಮಾಜಿಕ ಇಚ್ಛಾ ಶಕ್ತಿ, ಕಾನೂನಿನ ಶಕ್ತಿ. ಇನ್ನು, ಇಸ್ಲಾಮ್ ಸಮಾಜವನ್ನು ಸುಶೀಲ ಮತ್ತು ಚಾರಿತ್ರ್ಯವಂತವಾಗಿ ಮಾಡಲು ಈ ಶಕ್ತಿಗಳನ್ನು ಹೇಗೆ ಬಳಸುತ್ತದೆ ಎಂಬುದನ್ನು ನೋಡೋಣ.

## ಸಿದ್ಧಾಂತಗಳ ಶಕ್ತಿ

ಒಂದು ಸಮಾಜದ ವಿಜಯವು ಅದನ್ನು ಆಳುತ್ತಿರುವ ಸಿದ್ಧಾಂತಗಳಲ್ಲಿ ಅಡಕವಾಗಿದೆ. ಸಿದ್ಧಾಂತಗಳು ಟೊಳ್ಳು ಮತ್ತು ದುರ್ಬಲವಾಗಿದ್ದರೆ ಲೋಕದ ಯಾವ ಶಕ್ತಿಯೂ ಅದಕ್ಕೆ ಪರ್ಯಾಯವಾಗಲಾರದು. ಜಗತ್ತಿನಲ್ಲಿ ಲಕ್ಷಗಟ್ಟಲೆ ಕಾನೂನುಗಳು, ನಿಯಮ-ನಿಬಂಧನೆಗಳು ರಚಿಸಲ್ಪಟ್ಟಿವೆ. ಆದರೆ ಅದು ಮನುಷ್ಯನನ್ನು ಪಥಭ್ರಷ್ಟತೆಯಿಂದ ರಕ್ಷಿಸಲು ಶಕ್ತವಾಗಲಿಲ್ಲ. ಏಕೆಂದರೆ ಅದರ ಬಳಿ ಮನುಷ್ಯರನ್ನು ಒಂದು ಸಂವಿಧಾನಕ್ಕೆ ಬದ್ಧವಾಗಿ ಇರಿಸುವ ಸಾಮರ್ಥ್ಯವಿಲ್ಲ. ಇಸ್ಲಾಮ್ ಮಾತ್ರ ಇಂತಹ ತತ್ವ-ಸಿದ್ಧಾಂತವನ್ನು ನೀಡುತ್ತದೆ. ಅದು ಅಂತರಂಗ-ಬಹಿರಂಗ, ರಾತ್ರಿ-ಹಗಲು ಎನ್ನದೆ ಅವನ ಮೇಲೆ ಆಧಿಪತ್ಯ ನಡೆಸುತ್ತಿರುತ್ತದೆ.

ಪವಿತ್ರ ಕುರ್‌ಆನ್ ಹೀಗೆ ಹೇಳುತ್ತದೆ, "ನೀವು ಪ್ರತ್ಯಕ್ಷ ಮತ್ತು ಪರೋಕ್ಷ

ಪಾಪಕಾರ್ಯಗಳಿಂದ ದೂರವಿರಿ. ಪಾಪ ಗಳಿಸುವವರು ತಮ್ಮ ಗಳಿಕೆಯ ಪ್ರತಿಫಲವನ್ನು ಪಡೆದೇ ತೀರುವರು." (ಪವಿತ್ರ ಕುರ್‌ಆನ್: 6: 120)

ಇನ್ನೊಂದೆಡೆ ಹೀಗಿದೆ, "ಪೈಗಂಬರರೇ! ಇವರೊಡನೆ ಹೇಳಿರಿ: ಈ ಕಾರ್ಯಗಳನ್ನು ನನ್ನ ಪ್ರಭು ನಿಷಿದ್ಧಗೊಳಿಸಿದ್ದಾನೆ – ಲಜ್ಜಾಹೀನ ಕಾರ್ಯಗಳು ಅವು ಬಹಿರಂಗವಾಗಿರಲಿ, ರಹಸ್ಯವಾಗಿರಲಿ." (ಪವಿತ್ರ ಕುರ್‌ಆನ್: 6: 151)

ಅಶ್ಲೀಲತೆ, ನಗ್ನತೆ, ಅತ್ಯಾಚಾರ, ಅನಾಚಾರಗಳಿಗೆ ಅದು ಯಾವ ರೂಪದ್ದೇ ಆಗಿರಲಿ ಇಸ್ಲಾಮೀ ಸಮಾಜದಲ್ಲಿ ಮನ್ನಣೆ ದೊರೆಯಲಾರದು. ಏಕೆಂದರೆ ಇಸ್ಲಾಮ್ ಮನುಷ್ಯನನ್ನು ಆ ರೀತಿ ಶಿಕ್ಷಣ, ಬೋಧನೆ ಹಾಗೂ ತರಬೇತಿಗಳಿಂದ ಸಜ್ಜುಗೊಳಿಸುತ್ತದೆ.

ಪ್ರವಾದಿ(ಸ) ಈ ರೀತಿ ಹೇಳಿರುವರು, "ಯಾರು ರಣರಂಗಕ್ಕೆ ಹೋಗದೆ ತಮ್ಮ ಮನೆಗಳಲ್ಲೇ ಉಳಿದಿರುತ್ತಾರೋ ಅವರ ಪಾಲಿಗೆ ಮುಜಾಹಿದ್‌ಗಳ (ಹೋರಾಟಗಾರರ) ಮಹಿಳೆಯರು ಅವರ ತಾಯಂದಿರಂತೆ ಗೌರವಾರ್ಹರಾಗಿದ್ದಾರೆ. ಯುದ್ಧದಲ್ಲಿ ಪಾಲ್ಗೊಳ್ಳದವರ ಪೈಕಿ ಯಾರಾದರೂ ಯಾವನೇ ಸೈನಿಕನ ಮನೆ ಮಂದಿಯ ಯೋಗ ಕ್ಷೇಮವನ್ನು ನೋಡಿಕೊಳ್ಳುವ ಹೊಣೆ ವಹಿಸಿ ಕೊಂಡು ಅದರಲ್ಲಿ ಚ್ಯುತಿ ಮಾಡಿದರೆ ಆತನನ್ನು ಕಿಯಾಮತ್ ದಿನದಂದು ಆ ಸೈನಿಕನ ಮುಂದೆ ನಿಲ್ಲಿಸಲಾಗುವುದು. ಆತ ಅವನ ಪುಣ್ಯಗಳಲ್ಲಿ ಎಷ್ಟು ಬೇಕೋ ಅಷ್ಟು ತೆಗೆದುಕೊಳ್ಳುವನು. ಆಗ ಆ ಅಪರಾಧಿಯ ಅವಸ್ಥೆ ಏನಾಗುವುದೆಂದು ಯೋಚಿಸಿ ನೋಡಿರಿ." [ವರದಿ: ಸುಲೈಮಾನ್ ಬಿನ್ ಬುರೈದ(ರ) – ಮುಸ್ಲಿಮ್]

"ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡುವವನಿಗೆ ಯಾರಾದರೂ ಯುದ್ಧ ಸಾಮಗ್ರಿಗಳನ್ನು ಒದಗಿಸಿದರೆ ಅವನೂ ಆ ಜಿಹಾದ್‌ನಲ್ಲಿ ಭಾಗವಹಿಸಿದಂತೆ ಮತ್ತು ಯಾರಾದರೂ ಒಬ್ಬ ಸೈನಿಕನ ಮನೆಮಂದಿಯ ಯೋಗ ಕ್ಷೇಮವನ್ನು ಚೆನ್ನಾಗಿ ನೋಡಿಕೊಂಡರೆ ಅವನೂ ಜಿಹಾದ್‌ನಲ್ಲಿ ಭಾಗವಹಿಸಿದಂತೆ."

[ವರದಿ: ಝೈದ್ ಬಿನ್ ಖಾಲಿದ್(ರ) –ಬುಖಾರಿ, ಮುಸ್ಲಿಮ್]

## ಶೀಲ–ಚಾರಿತ್ರ್ಯದ ಮಹತ್ವ

ಸಮಾಜದ ಬುನಾದಿಯು ಇಷ್ಟು ಪರಿಶುದ್ಧ ವಿಚಾರಗಳು ಮತ್ತು ಪಾವನ ಭಾವನೆಗಳ ಮೇಲೆ ಇರುವಾಗ ಅದರಲ್ಲಿ ಚಾರಿತ್ರ್ಯಕ್ಕೆ ಹೆಚ್ಚಿನ ಮಹತ್ವವಿರುವುದು ಸಹಜ. ಮಾನ–ಮರ್ಯಾದೆ, ಶೀಲ–ಚಾರಿತ್ರ್ಯಗಳು ಅಲ್ಲಿ ಕೇವಲ ಉಪದೇಶಗಳಾಗಿ ಉಳಿಯದೆ ಕಾನೂನಿನ ಶಕ್ತಿ ಮತ್ತು ರಾಜಕೀಯ ಪ್ರಭಾವವೂ ಅದಕ್ಕಿರುವುದು. ಇಂತಹ ಸಮಾಜದಲ್ಲಿ ಮಾನಹರಣದ, ಬಲಾತ್ಕಾರದ ಯತ್ನ ನಡೆದರೆ ಅದನ್ನು ತಡೆಯಲು ಕೊಲೆ ಮಾಡಬೇಕಾಗಿ ಬಂದರೂ ಅದಕ್ಕೆ ಅನುಮತಿಯಿದೆ. ಮಾನಹಾನಿಯ

ಯತ್ನ ಮತ್ತು ವ್ಯಭಿಚಾರವು ದಂಡನಾರ್ಹ ಅಪರಾಧವಾಗಿರುವಂತೆ ವ್ಯಭಿಚಾರದ ಮಿಥ್ಯಾರೋಪವೂ ಶಿಕ್ಷಾರ್ಹ ಅಪರಾಧವಾಗಿದೆ. ಪವಿತ್ರ ಕುರ್‌ಆನ್ ಈ ರೀತಿ ಸಾರುತ್ತದೆ, "ಯಾರು ಸುಶೀಲೆಯರ ಮೇಲೆ ಆರೋಪ ಹೊರಿಸು ತ್ತಾರೋ, ಆ ಬಳಿಕ ನಾಲ್ಕು ಸಾಕ್ಷಿಗಳನ್ನು ತರುವುದಿಲ್ಲವೋ ಅವರಿಗೆ ಎಂಭತ್ತು ಛಡಿಯೇಟು ಕೊಡಿರಿ ಮತ್ತು ಅವರ ಸಾಕ್ಷ್ಯವನ್ನು ಎಂದಿಗೂ ಸ್ವೀಕರಿಸಬೇಡಿರಿ. ಅವರು ಸ್ವಯಂ ಕರ್ಮಭ್ರಷ್ಟರು." (ಪವಿತ್ರ ಕುರ್‌ಆನ್: 24: 4)

## ವ್ಯಭಿಚಾರಿಗಳ ನಿಂದೆ

ಒಂದೆಡೆ ಇಸ್ಲಾಮೀ ಸಮಾಜವು ವ್ಯಭಿಚಾರದ ಸುಳ್ಳು ಆರೋಪವನ್ನು ಶಿಕ್ಷಾರ್ಹವೆಂದು ಸಾರಿದರೆ ಇನ್ನೊಂದೆಡೆ ವೇಶ್ಯಾವೃತ್ತಿಯನ್ನು ಅತ್ಯಂತ ನೀಚ ಮತ್ತು ನಿಂದ್ಯವೆಂದು ಪರಿಗಣಿಸುತ್ತದೆ. ಅಂತಹ ವೃತ್ತಿಯಲ್ಲಿ ನಿರತರಾದವರಿಗೆ ಸಮಾಜದಲ್ಲಿ ಅದು ಯಾವುದೇ ಸ್ಥಾನಮಾನವನ್ನು ಕಲ್ಪಿಸುವುದಿಲ್ಲ. ಅದು ಅಂತಹ ವ್ಯಕ್ತಿಗಳಿಗೆ ನೀಡುವ ಸ್ಥಾನದ ಕುರಿತು ಹೀಗೆ ಹೇಳಲಾಗಿದೆ, "ವ್ಯಭಿಚಾರಿಯು ವ್ಯಭಿಚಾರಿಣಿಯೊಂದಿಗೆ ಅಥವಾ ಬಹುದೇವ ವಿಶ್ವಾಸಿನಿಯೊಂದಿಗೆ ಹೊರತು ವಿವಾಹವಾಗದಿರಲಿ ಮತ್ತು ವ್ಯಭಿಚಾರಿಣಿಯೊಂದಿಗೆ ವ್ಯಭಿಚಾರಿ ಅಥವಾ ಬಹುದೇವ ವಿಶ್ವಾಸಿಯ ಹೊರತು ವಿವಾಹವಾಗದಿರಲಿ. ಇದನ್ನು ಸತ್ಯವಿಶ್ವಾಸಿಗಳ ಮೇಲೆ ನಿಷಿದ್ಧಗೊಳಿಸಲಾಗಿದೆ."
(ಪವಿತ್ರ ಕುರ್‌ಆನ್: 24: 3)

## ಬ್ರಹ್ಮಚರ್ಯೆಯ ಅಂತ್ಯ

ನೀವು ಒಂದು ಕುಟುಂಬದ ಸದಸ್ಯರಾಗಿದ್ದರೆ ಅದರ ಪಾಲನೆ–ಪೋಷಣೆ, ಅಶನ–ವಸನ–ವಸತಿ ಮಾತ್ರ ನಿಮ್ಮ ಹೊಣೆಗಾರಿಕೆಯಲ್ಲ. ಬದಲಾಗಿ ಅದರ ಶೀಲ–ಚಾರಿತ್ರ್ಯವನ್ನು ಕಾಪಾಡುವುದು ಕೂಡಾ ನಿಮ್ಮ ಹೊಣೆಗಾರಿಕೆಯಾಗಿದೆ. ಆದ್ದರಿಂದ ಅವರ ಲೈಂಗಿಕ ಬಯಕೆಗಳ ಕಾನೂನುಬದ್ಧ ಈಡೇರಿಕೆಯ ಸೂಕ್ತ ವ್ಯವಸ್ಥೆಯನ್ನು ತಕ್ಕ ಸಮಯಕ್ಕೆ ಮಾಡುವುದು ಕೂಡಾ ನಿಮ್ಮ ಕರ್ತವ್ಯವಾಗಿದೆ.

"ನಿಮ್ಮಲ್ಲಿ ಒಂಟಿಯಾಗಿರುವವರ ಮತ್ತು ನಿಮ್ಮ ದಾಸ–ದಾಸಿಯರಲ್ಲಿ ಸಜ್ಜನರಾಗಿರುವವರ ವಿವಾಹ ಮಾಡಿಬಿಡಿರಿ." (ಪವಿತ್ರ ಕುರ್‌ಆನ್: 24: 32)

ಈ ಆಜ್ಞೆಯ ನೇರ ಸಂಬೋಧಿತರು ಹೆತ್ತವರು, ಸಂರಕ್ಷಕರು ಮತ್ತು ಸರಕಾರವಾಗಿದ್ದರೂ ಇಸ್ಲಾಮೀ ಸಮಾಜದಲ್ಲಿ ಯಾರೂ ಬ್ರಹ್ಮಚರ್ಯೆ ಮತ್ತು ಒಂಟಿತನದ ಜೀವನ ಸಾಗಿಸದಂತೆ ನೋಡಿಕೊಳ್ಳಬೇಕಾದುದು ಆ ಸಮಾಜದ ಪ್ರತಿಯೊಬ್ಬ ಪ್ರಜ್ಞಾವಂತ ಸದಸ್ಯನ ಕರ್ತವ್ಯವಾಗಿದೆ. ಯಾರೂ ತಮ್ಮ ದೇಹೇಚ್ಛೆಗಳ ಈಡೇರಿಕೆಗೆ ವಾಮ ಮಾರ್ಗವನ್ನು ಹಿಡಿಯುವಂತಾಗಬಾರದು.

## ನಾಲ್ಕು ಮಂದಿ ಪತ್ನಿಯರನ್ನಿರಿಸಿಕೊಳ್ಳುವ ಅನುಮತಿ!

ಪುರುಷರಲ್ಲಿ ಮುಪ್ಪಿನ ತನಕವೂ ಲೈಂಗಿಕ ಆಸಕ್ತಿಯು ಶಕ್ತಿಯುತವಾಗಿರುತ್ತದೆ ಆದರೆ ಸ್ತ್ರೀಗೆ ಆಗಾಗ ಎದುರಾಗುವ ದೈಹಿಕ-ಮಾನಸಿಕ ಪರಿಸ್ಥಿತಿಯಿಂದಾಗಿ ಈ ಆಸಕ್ತಿಯು ಆಕೆಯಲ್ಲಿ ಕಡಿಮೆಯಾಗುತ್ತದೆ. ಮಾತ್ರವಲ್ಲ ಕೆಲವೊಮ್ಮೆ ದೀರ್ಘಾವಧಿಯ ತನಕ ಈ ಪರಿಸ್ಥಿತಿಯು ಮುಂದುವರಿಯುತ್ತದೆ. ಆಕೆ ಎಲ್ಲ ಸಂದರ್ಭಗಳಲ್ಲೂ ಪುರುಷನ ಬಯಕೆಯನ್ನು ತೀರಿಸುವ ಪರಿಸ್ಥಿತಿಯಲ್ಲಿರುವುದಿಲ್ಲ. ಆದ್ದರಿಂದ ಇಸ್ಲಾಮೀ ಸಮಾಜವು ನ್ಯಾಯಪಾಲನೆ ಮತ್ತು ಸಾಮರ್ಥ್ಯದ ಶರತ್ತಿನೊಂದಿಗೆ ಪುರುಷನಿಗೆ ನಾಲ್ಕರ ತನಕ ಪತ್ನಿಯರನ್ನು ಹೊಂದಲು ಅನುಮತಿ ನೀಡುತ್ತದೆ.

"ಸ್ತ್ರೀಯರಲ್ಲಿ ನಿಮಗೆ ಮೆಚ್ಚಿದ ಇಬ್ಬರನ್ನೋ ಮೂವರನ್ನೋ ನಾಲ್ವರನ್ನೋ ವಿವಾಹ ಮಾಡಿಕೊಳ್ಳಿರಿ. ಆದರೆ ಅವರೊಂದಿಗೆ ನ್ಯಾಯ ಪಾಲಿಸಲಾರಿರೆಂಬ ಆಶಂಕೆ ನಿಮಗಿದ್ದರೆ ಒಬ್ಬ ಸ್ತ್ರೀಯನ್ನು ಮಾತ್ರ (ವಿವಾಹವಾಗಿರಿ) ಅಥವಾ ನಿಮ್ಮ ವಶಕ್ಕೆ ಬಂದ ಸ್ತ್ರೀಯರನ್ನು ಸ್ವೀಕರಿಸಿಕೊಳ್ಳಿರಿ. ಅನ್ಯಾಯದಿಂದ ತಪ್ಪಿಸಿಕೊಳ್ಳಲು ಇದು ಹೆಚ್ಚು ಉತ್ತಮ."

(ಪವಿತ್ರ ಕುರ್‌ಆನ್: 4: 3)

ವ್ಯಕ್ತಿಯೊಬ್ಬನು ಒಂದಕ್ಕಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿದ್ದರೆ ಅವರ ಮಧ್ಯೆ ಅನ್ನ, ಬಟ್ಟೆ, ಆಶ್ರಯ ಮತ್ತು ಸಹಶಯನದಲ್ಲಿ ಸಮಾನತೆಯನ್ನು ಪಾಲಿಸುವುದು ಅವನ ಮೇಲೆ ಕಡ್ಡಾಯವಾಗಿದೆ.

## ಮಹಿಳೆಗೆ ಮರುವಿವಾಹದ ಹಕ್ಕು

ಮಹಿಳೆಯ ಪ್ರಕೃತಿ ಪುರುಷನ ಪ್ರಕೃತಿಗಿಂತ ಭಿನ್ನವಾಗಿದೆ. ಆದ್ದರಿಂದ ಓರ್ವ ಮಹಿಳೆಗೆ ಒಂದಕ್ಕಿಂತ ಹೆಚ್ಚು ಪತಿಯಂದಿರು ಇರುವುದನ್ನು ಇಸ್ಲಾಮ್ ಸರಿಯೆಂದು ಪರಿಗಣಿಸುವುದಿಲ್ಲ. ಆದರೆ ಅದು ಆಕೆಯನ್ನು ತನ್ನ ಲೈಂಗಿಕ ಬಯಕೆಯ ಈಡೇರಿಕೆಯ ಧರ್ಮಸಮ್ಮತ ವಿಧಾನದಿಂದ ಎಂದೂ ವಂಚಿತ ಗೊಳಿಸುವುದಿಲ್ಲ. ಆದ್ದರಿಂದ ಪುರುಷನ ವಿವಾಹದಷ್ಟೇ ಮಹತ್ವವನ್ನು ಅದು ಸ್ತ್ರೀಯ ವಿವಾಹಕ್ಕೂ ಕಲ್ಪಿಸುತ್ತದೆ. ವಿಧವೆಯಾಗಿ ಅಥವಾ ವಿಚ್ಛೇದಿತಳಾಗಿ ಆಕೆ ದಾಂಪತ್ಯದಿಂದ ವಂಚಿತವಾದರೆ ಕೂಡಲೇ ಆಕೆಯ ಮರು ವಿವಾಹದ ಏರ್ಪಾಡು ಮಾಡುವಂತೆ ಅದು ಸಮಾಜಕ್ಕೆ ಆದೇಶಿಸುತ್ತದೆ.

ಪ್ರವಾದಿವರ್ಯರ(ಸ) ಮತ್ತು ಅವರ ನಾಲ್ಕು ಮಂದಿ ಆಪ್ತ ಸಂಗಾತಿಗಳ(ರ) ಆಡಳಿತ ಕಾಲದಲ್ಲಿ ಅತ್ಯಂತ ಸುಲಭವಾಗಿ ಇಂತಹ ಮಹಿಳೆಯರ ಮರು ವಿವಾಹವಾಗುತ್ತಿತ್ತು. ಆತಿಕಾ ಬಿನ್ತಿ ಝೈದ್‌ರ ವಿವಾಹ ಹ. ಅಬೂಬಕರ್(ರ) ಅವರ ಪುತ್ರ ಅಬ್ದುಲ್ಲಾ(ರ)ರೊಂದಿಗಾಯಿತು. ಕಾರಣಾಂತರದಿಂದ ಹ. ಅಬೂಬಕರ್(ರ) ಅವರು ಅಬ್ದುಲ್ಲಾರಿಗೆ ತನ್ನ ಪತ್ನಿಯನ್ನು ವಿಚ್ಛೇದಿಸುವಂತೆ ಸಲಹೆಯಿತ್ತರು.

ಅಬ್ದುಲ್ಲಾ(ರ) ತನ್ನ ತಂದೆಯ ಸಲಹೆಯಂತೆ ಪತ್ನಿಗೆ ತಲಾಕ್ ನೀಡಿದರು. ಆದರೆ ಅವರಿಗೆ ಅದು ಅತ್ಯಂತ ಅಪ್ರಿಯವಾಗಿತ್ತು. ಅವರು ಆತಿಕರನ್ನು(ರ) ಬಹಳ ಪ್ರೀತಿಸುತ್ತಿದ್ದರು. ಈ ವಿಷಯ ಹ. ಅಬೂಬಕರ್(ರ) ಅವರಿಗೆ ತಿಳಿದಾಗ ಅವರು ಅಬ್ದುಲ್ಲಾರಿಗೆ ಆತಿಕಾರನ್ನು ಮರುವಿವಾಹವಾಗುವ ಅನುಮತಿ ನೀಡಿದರು. ಅವರು ಸಂತೋಷದಿಂದ ಹಾಗೆ ಮಾಡಿದರು. ಆದರೆ ತಾಯಿಫ್‌ನ ಯುದ್ಧದಲ್ಲಿ ಅಬ್ದುಲ್ಲಾ(ರ) ಹುತಾತ್ಮರಾದರು. ಅನಂತರ ಆತಿಕರ ವಿವಾಹ ಝೈದ್ ಬಿನ್ ಖತ್ತಾಬ್‌ರೊಂದಿಗಾಯಿತು. ಅವರು ಯಮಾಮದಲ್ಲಿ ಹುತಾತ್ಮರಾದಾಗ ಹ. ಉಮರ್(ರ) ಅವರನ್ನು ವಿವಾಹವಾದರು. ಹ. ಉಮರ್(ರ) ಅವರ ಕಾಲಾನಂತರ ಹ. ಝುಬೈರ್(ರ) ಆತಿಕಾರನ್ನು ವಿವಾಹವಾದರು. ಹ. ಝುಬೈರ್(ರ) ಅವರು ಹುತಾತ್ಮರಾದ ಬಳಿಕ ಹ. ಅಲೀ(ರ) ಅವರು ಆತಿಕರನ್ನು ವಿವಾಹವಾಗುವ ಪ್ರಸ್ತಾಪ ಮಾಡಿದರು. ಆದರೆ ಆತಿಕ(ರ) ಅವರೇ ಅದನ್ನು ತಿರಸ್ಕರಿಸಿದರು.

ಸುಹೈಲಾ ಬಿನ್ತಿ ಸುಹೈಲ್(ರ) ಅವರ ವಿವಾಹವು ಒಬ್ಬರ ನಂತರ ಒಬ್ಬರಂತೆ ನಾಲ್ಕು ಮಹಾನ್ ವ್ಯಕ್ತಿಗಳೊಂದಿಗೆ ಆಯಿತು. ಹ: ಹುದೈಫಾ(ರ), ಹ. ಅಬ್ದುರ್ರಹ್ಮಾನ್ ಬಿನ್ ಔಫ್(ರ), ಅಬ್ದುಲ್ಲಾ ಬಿನ್ ಅಲ್ ಅಸ್‌ವದ್(ರ) ಮತ್ತು ಶಿಮಾಖ್ ಬಿನ್ ಸಈದ್.

ಇದೇ ರೀತಿ ಅಬ್ದುಲ್ಲಾ ಬಿನ್ ಉಬೈಯ ಪುತ್ರಿ ಜಮೀಲಾರ ವಿವಾಹವು ಹನ್‌ಝುಲ(ರ) ಅವರೊಂದಿಗಾಯಿತು. ಅವರು ಉಹುದ್ ಯುದ್ಧದಲ್ಲಿ ಹುತಾತ್ಮರಾದಾಗ ಸಾಬಿತ್ ಬಿನ್ ಕೈಸ್ ಅವರನ್ನು ವಿವಾಹವಾದರು. ಅವರ ಕಾಲಾನಂತರ ಮಾಲಿಕ್ ಬಿನ್ ದಖ್‌ಷಮ್ ಮತ್ತು ಕೊನೆಗೆ ಜಮೀಲಾ(ರ) ಹಬೀಬ್ ಬಿನ್ ಯಸಾಫ್‌ರ ವಿವಾಹ ಬಂಧನದಲ್ಲಿದ್ದರು.

ಅಸ್ಮಾ ಬಿನ್ತಿ ಉಮೈಸ್‌ರ ಪ್ರಥಮ ವಿವಾಹ ಹ. ಅಲೀ(ರ) ಅವರ ಸೋದರ ಹ. ಜಅಫರ್(ರ)ರೊಂದಿಗಾಯಿತು. ಅವರ ನಿಧನಾನಂತರ ಹ. ಅಬೂಬಕರ್(ರ) ಮತ್ತು ಅವರ ಬಳಿಕ ಹ. ಅಲೀ(ರ) ಅವರನ್ನು ವಿವಾಹವಾದರು.

ಹ. ಅಲೀ(ರ) ಅವರ ಮಗಳು ಉಮ್ಮು ಕುಲ್ಸೂಮ್(ರ) ಅವರ ವಿವಾಹ ಹ. ಉಮರ್(ರ) ಅವರೊಂದಿಗಾಯಿತು. ಹ. ಉಮರ್(ರ) ಹುತಾತ್ಮರಾದ ನಂತರ ಹ. ಔಸ್ ಬಿನ್ ಜಾಫರ್(ರ) ಅವರೊಂದಿಗೆ ಅವರ ವಿವಾಹವಾಯಿತು. ಔಸ್ ಬಿನ್ ಜಾಫರ್‌ರ(ರ) ನಿಧನಾನಂತರ ಅವರ ಸೋದರ ಅಬ್ದುಲ್ಲಾರವರು ಉಮ್ಮು ಕುಲ್ಸೂಮ್(ರ) ಅವರನ್ನು ವಿವಾಹವಾದರು.

ಪ್ರವಾದಿವರ್ಯರ(ಸ) ಮತ್ತು ಅವರ ಆಪ್ತ ಸಂಗಾತಿಗಳ(ರ) ಆಡಳಿತ ಕಾಲದಲ್ಲಿ ಮಹಿಳೆಯ ಪುನರ್ವಿವಾಹವನ್ನು ಕೆಟ್ಟದೆಂದೋ ಅಥವಾ ಅಪ್ರಿಯ

ವೆಂದೋ ಭಾವಿಸಲಾಗುತ್ತಿರಲಿಲ್ಲ. ಆದ್ದರಿಂದ ಅನೇಕ ಮಹಿಳೆಯರು ಒಂದಕ್ಕಿಂ ಹೆಚ್ಚು ವಿವಾಹವಾಗಿದ್ದರು. ನಾವಿಲ್ಲಿ ಯಾವುದೇ ಹುಡುಕಾಟ ಮತ ಸಂಶೋಧನೆಯಿಲ್ಲದೆಯೇ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದೇವೆ. ನಿಜವಾ ಇಂತಹ ಘಟನೆಗಳು ಅಸಂಖ್ಯವಾಗಿದ್ದು ಅವುಗಳನ್ನು ಇಲ್ಲಿ ವಿವರಿಸಲಸಾಧ್ಯವಾಗಿದ

## ವಿವಾಹ ಭಂಗಗೊಳಿಸುವ ಅಧಿಕಾರ

ಮನುಷ್ಯನಿಗೆ ಮಾನ-ಮರ್ಯಾದೆಯ ಜೀವನ ಸಾಗಿಸಲಿಕ್ಕೆ ನೆರವಾಗುವುದೆ ಇಸ್ಲಾಮ್ ಧರ್ಮದ ಪ್ರಕಾರ ವಿವಾಹದ ಅತ್ಯಂತ ಪ್ರಮುಖ ಉದ್ದೇಶವಾಗಿದ ಈ ಉದ್ದೇಶ ಈಡೇರಬೇಕಾದರೆ ಪತಿ-ಪತ್ನಿಯರಿಬ್ಬರೂ ಪರಸ್ಪರರ ಲೈಂಗಿ ಬಯಕೆಯನ್ನು ಪೂರೈಸುವ ಸ್ಥಿತಿಯಲ್ಲಿರಬೇಕು. ಆದ್ದರಿಂದ ಅವರ ಪೈಕಿ ಯಾರಾದರು ಈ ಸಾಮರ್ಥ್ಯವನ್ನು ಕಳಕೊಂಡಿದ್ದರೆ ಇಸ್ಲಾಮ್ ಇಬ್ಬರಿಗೂ ವಿವಾಹ ಬಂಧನವನ ಭಂಗಗೊಳಿಸುವ ಅಧಿಕಾರ ನೀಡುತ್ತದೆ.

ಹ. ಉಮರ್(ರ), ಹ. ಅಲೀ(ರ) ಮತ್ತಿತರ ಸಹಾಬಿಗಳು ಮತ ತಾಬಿಈಗಳ(ರ) ಅಭಿಪ್ರಾಯದಂತೆ ಲೈಂಗಿಕ ಬಯಕೆ ಪೂರೈಸುವ ಸಾಮರ್ಥ್ಯ ಕೊರತೆ ಮಾತ್ರವಲ್ಲ, ಕುಷ್ಠರೋಗ, ತೊನ್ನು, ಅಂಧತ್ವ, ಹುಚ್ಚು ಇತ್ಯಾ ಕಾಯಿಲೆಗಳಿದ್ದಾಗಲೂ ಪತಿ-ಪತ್ನಿಯರು ಬೇರ್ಪಡುವ ಹಕ್ಕುಳ್ಳವರಾಗಿದ್ದಾರೆ.

ಇಮಾಮ್ ಇಬ್ನ್ ಕಯ್ಯಿಮ್(ರ) ಅವರ ಅಭಿಪ್ರಾಯದಂತೆ ಈ ನಿಯಮವ ಪತಿ-ಪತ್ನಿಯರು ಪರಸ್ಪರರನ್ನು ದ್ವೇಷಿಸುವ ಹಾಗೂ ಅವರ ಮಧ್ಯೆ ಕರುಣೆ ಮತ ವಾತ್ಸಲ್ಯದ ಸಂಬಂಧ ಕಡಿದು ಹೋಗುವ ಸ್ಥಿತಿ ಉಂಟಾಗುವ ಯಾವುದೆ ನ್ಯೂನತೆಯು ದಂಪತಿಗಳಿಗೆ ವಿವಾಹ ಭಂಗದ ಅಧಿಕಾರವನ್ನು ನೀಡುತ್ತದೆ."

(ಝಾದುಲ್ ಮಆದ್ ಸಂ- 4, ಪುಟ: 43

## ವಿವಾಹ ಸಂಬಂಧದ ಪಾವಿತ್ರ್ಯ

ಒಂದೆಡೆ ಇಸ್ಲಾಮ್ ಉದ್ದೇಶರಹಿತ ವೈವಾಹಿಕ ಬಂಧನವನ್ನು ಮುರಿಯು ಅಧಿಕಾರ ದಂಪತಿಗಳಿಗೆ ನೀಡುತ್ತದೆ. ಇನ್ನೊಂದೆಡೆ ವೈವಾಹಿಕ ಬಂಧನವನ ಬಲಿಷ್ಠಗೊಳಿಸಲು ಮತ್ತು ಅವುಗಳ ಪಾವಿತ್ರ್ಯವನ್ನು ಕಾಪಾಡಲು ಬೋಧಿಸುತ್ತದೆ ಅನ್ಯಥಾ ಮನುಷ್ಯನು ನಿತ್ಯ ಒಬ್ಬ ಹೊಸ ಸಂಗಾತಿಯ ಹುಡುಕಾಟದ ತೊಡಗುವನು. ಇಂದು ಜನರಲ್ಲಿ ಲೈಂಗಿಕ ಅರಾಜಕತೆ ವ್ಯಾಪಕವಾಗಲು ಕಾರಣ ಅವರೆಲ್ಲರಿಗೆ ತಮ್ಮ ಬಯಕೆಯನ್ನು ಪೂರ್ಣಗೊಳಿಸಲು ಧರ್ಮಬದ್ಧ ಮಾರ್ಗ ವಿಲ್ಲವೆಂದಲ್ಲ. ಬದಲಾಗಿ ಅವರು ಅದನ್ನು ತಮ್ಮ ಕಾಮನೆಗಳ ಬೆಂಕಿಯನ ತಣಿಸಲು ತಮ್ಮ ಬಳಿ ಶಾಶ್ವತವಾಗಿ ಇರುವ ಉಪಾಧಿಯೆಂದು ಪರಿಗಣಿಸುತ್ತಾರೆ ವೈವಾಹಿಕ ಬಂಧನದ ಹೊರಗೆ ತಮ್ಮ ವಿಷಯಾಸಕ್ತಿಯನ್ನು ತೀರಿಸುವುದ

ಸರಿಯಲ್ಲವೆಂಬ ಕಲ್ಪನೆಯೇ ಅವರಲ್ಲಿಲ್ಲ. ಅವರ ಕಾಮಾಸಕ್ತಿಯ ಕೇಂದ್ರವು ಇಂದು ಒಬ್ಬರಾಗಿದ್ದರೆ ನಾಳೆ ಇನ್ನೊಬ್ಬರಾಗಿರುತ್ತಾರೆ. ಆದ್ದರಿಂದಲೇ ಇಂದು ಸಾಮಾನ್ಯವಾಗಿ ಮಾರ್ಗದಲ್ಲಿ ನಡೆಯುತ್ತಿರುವ ಒಬ್ಬ ಗೂಂಡಾನನ್ನು ಜರೆಯುವಾಗ ಒಬ್ಬ ವ್ಯಕ್ತಿಯು ಎಷ್ಟು ಹಿಂದೆ ಮುಂದೆ ನೋಡುತ್ತಾನೋ ಅಷ್ಟೂ ಅಳುಕು ತನ್ನ ಜೀವನ ಸಂಗಾತಿಯನ್ನು ವಿಚ್ಛೇದಿಸುವಾಗ ಆತನಿಗೆ ಇರುವುದಿಲ್ಲ.

ಇಸ್ಲಾಮ್ ಈ ಕಲ್ಪನೆಯನ್ನೇ ದ್ವೇಷಿಸುತ್ತದೆ. ಅದನ್ನು ನಿವಾರಿಸಲು ತೀವ್ರವಾಗಿ ಪ್ರಯತ್ನಿಸುತ್ತದೆ. ವಿವಾಹವು ಅದರ ಬಳಿ ಅತ್ಯಂತ ಪವಿತ್ರವಾದ ಬಂಧನ. ಬೇಕಾದಷ್ಟು ಕಾಲ ತನ್ನ ಬಯಕೆಯನ್ನು ಈಡೇರಿಸಿ, ಬೇಡವೆನಿಸಿದಾಗ ಬಿಸಾಕಿಬಿಡಲು ಅದೇನೂ ಮೇಲಂಗಿಯಲ್ಲ. ಒಬ್ಬನು ಪ್ರತಿದಿನ ಒಂದು ಹೊಸ ವಿವಾಹ ಮತ್ತು ಹೊಸ ಸಂಬಂಧವನ್ನು ಬಯಸಿದರೆ ಅವನಿಗೂ ವೇಶ್ಯಾವಾಟಿಕೆಗೆ ಭೇಟಿ ನೀಡುವವನಿಗೂ ವ್ಯತ್ಯಾಸವಾದರೂ ಏನಿದೆ?

ಈ ಅಪವಿತ್ರ ಭಾವನೆಯ ವಿರುದ್ಧ ಇಸ್ಲಾಮಿನ ಶಿಕ್ಷಣವು ಬಹಳ ಕಠಿಣವಾಗಿದೆ. ಒಮ್ಮೆ ಪ್ರವಾದಿ(ಸ) ಹೀಗೆ ಹೇಳಿದ್ದರು, "ಯಾವ ಮಹಿಳೆಯು ವಿನಾಕಾರಣ ತನ್ನ ಪತಿಯಿಂದ ವಿಚ್ಛೇಧನ ಪಡೆಯುತ್ತಾಳೋ ಆಕೆ ಕಪಟವಿಶ್ವಾಸಿಯಾಗಿದ್ದಾಳೆ."

(ನಸಾಈ)

ಇನ್ನೊಮ್ಮೆ ಅವರು ಹೀಗೆಂದಿದ್ದರು, "ಯಾವ ಮಹಿಳೆ ನೈಜ ಕಾರಣ ವೇನೂ ಇಲ್ಲದೆ ತನ್ನ ಪತಿಯಿಂದ ತಲಾಕ್ ಬಯಸುತ್ತಾಳೋ ಆಕೆಯ ಪಾಲಿಗೆ ಸ್ವರ್ಗದ ಸುವಾಸನೆಯೂ ನಿಷಿದ್ಧವಾಗಿದೆ." (ತಿರ್ಮಿದಿ)

ಮತ್ತೊಂದು ಪ್ರವಾದಿ ವಚನ ಹೀಗಿದೆ, "ಒಬ್ಬನು ಓರ್ವ ಮಹಿಳೆಯನ್ನು ವಿವಾಹವಾಗಿ ತನ್ನ ಬಯಕೆಯನ್ನು ಈಡೇರಿಸಿಕೊಂಡ ನಂತರ ಆಕೆಯ ಮಹ್ರನ್ನು ಕಬಳಿಸಿ ಆಕೆಗೆ ತಲಾಕ್ ನೀಡುವುದು ಅಲ್ಲಾಹನ ಬಳಿ ಅತಿದೊಡ್ಡ ಅಪರಾಧವಾಗಿದೆ."

(ಹಾಕಿಮ್)

ವಿವಾಹ ಸಂಬಂಧದ ಪಾವಿತ್ರ್ಯವನ್ನು ಕಾಪಾಡುವ ಹೊಣೆ ಕೇವಲ ವ್ಯಕ್ತಿಗಳ ಮೇಲೆ ಇರುವುದಲ್ಲ. ಅದು ಸಮಾಜದ ಮೇಲೂ ಇದೆ. ಅನೈತಿಕ ಸಂಬಂಧವನ್ನು ಖಂಡಿಸುವಾಗ ಧರ್ಮಬದ್ಧ ವೈವಾಹಿಕ ಸಂಬಂಧದ ಪಾವಿತ್ರ್ಯ ವನ್ನು ಕಾಪಾಡುವುದು ಕೂಡಾ ಅದರ ಕರ್ತವ್ಯವಾಗಿದೆ. ಒಬ್ಬನ ವಿವಾಹ ಬಂಧನದಲ್ಲಿರುವ ಮಹಿಳೆಯು ಸಮಾಜದ ಇತರೆಲ್ಲ ವ್ಯಕ್ತಿಗಳ ಪಾಲಿಗೆ ಮಾತೃ ಸಮಾನಳೆಂದು ಇಸ್ಲಾಮ್ ಸಾರುತ್ತದೆ. ಪವಿತ್ರ ಕುರ್‌ಆನ್ ಎಲ್ಲ ವಿವಾಹಿತ ಮಹಿಳೆಯರನ್ನೂ ಮುಸ್ಲಿಮರ ಪಾಲಿಗೆ ಹರಾಮ್(ನಿಷಿದ್ಧ)ಗೊಳಿಸಿದೆ. ಈ ನಿಷೇಧವನ್ನು ಮುರಿಯುವ ಯಾವುದೇ ಪ್ರಯತ್ನವು ಇಸ್ಲಾಮ್‌ನ ದೃಷ್ಟಿಯಲ್ಲಿ ಅತ್ಯಂತ ನಿಂದ್ಯ ಮತ್ತು ಖಂಡನೀಯವಾಗಿದೆ.

ಪ್ರವಾದಿ(ಸ) ಹೇಳಿದ್ದಾರೆ, "ಓರ್ವ ಮಹಿಳೆಯನ್ನು ಆಕೆಯ ಪತಿಯಿಂದ ಅಥವಾ ಓರ್ವ ಗುಲಾಮನನ್ನು ಆತನ ಒಡೆಯನಿಂದ ಬೇರ್ಪಡಿಸಲು ಯತ್ನಿಸುವ ವ್ಯಕ್ತಿ ನಮ್ಮವನಲ್ಲ." (ಅಬೂದಾವೂದ್)

ಇಮಾಮ್ ಇಬ್ನ್ ತೀಮಿಯ್ಯಾ ಹೀಗೆ ಹೇಳಿರುವರು, "ಒಬ್ಬನು ಯಾರದೋ ಮಡದಿಯ ಜತೆ ಸ್ವಯಂ ವಿವಾಹವಾಗಲಿಕ್ಕಾಗಿ ಅಥವಾ ಆಕೆಯನ್ನು ಇನ್ನಾರಿಗೋ ವಿವಾಹ ಮಾಡಿಸಲಿಕ್ಕಾಗಿ ಆಕೆಯ ಪತಿಯನ್ನು ಕೊಂದರೆ – ಆ ಸಂಚಿನಲ್ಲಿ ಮಹಿಳೆಯು ಭಾಗವಹಿಸಿರಲಿ, ಇಲ್ಲದಿರಲಿ ಎರಡೂ ರೂಪಗಳಲ್ಲಿ ಧರ್ಮದ ತತ್ವ ಮತ್ತು ಸ್ಫೂರ್ತಿಯ ಬೇಡಿಕೆಯೇನೆಂದರೆ ಆ ವ್ಯಕ್ತಿಗೆ ಆಕೆಯನ್ನು ವಿವಾಹ ಮಾಡುವ ಹಕ್ಕನ್ನು ಕೊಡಬಾರದು." (ಇಕಾಮತುದ್ದಲೀಲ್... ಪುಟ: 147–148)

## ಸಾಮಾಜಿಕ ಪ್ರಜ್ಞೆ

ಮನುಷ್ಯ ಸ್ವಭಾವತಃ ಸಂಘಜೀವಿ. ಅವನು ತನ್ನ ಸಮಾಜದ ಮೇಲೆ ಪ್ರಭಾವ ಬೀರುತ್ತಾನೆ. ಅದರ ಪ್ರಭಾವಕ್ಕೆ ಒಳಗಾಗುತ್ತಾನೆ. ಅವನಲ್ಲಿ ಚಾರಿತ್ರ್ಯದ ಜ್ಯೋತಿಯಿದ್ದರೆ ಅದು ಖಂಡಿತ ಅವನ ಪರಿಸರವನ್ನು ಬೆಳಗುವುದು. ಅವನು ದುಶ್ಶೀಲನೂ ದುಃಸ್ವಭಾವಿಯೂ ಆಗಿದ್ದರೆ ಅದು ಕೂಡಾ ಅವನ ವ್ಯಕ್ತಿತ್ವಕ್ಕೆ ಮಾತ್ರ ಸೀಮಿತವಾಗಿರಲಾರದು. ಅದು ಹರಡುತ್ತದೆ. ಈ ರೀತಿ ಮನುಷ್ಯನು ತನ್ನ ಶೀಲ–ಚಾರಿತ್ರ್ಯಗಳಿಂದ ಇತರರ ಉನ್ನತಿ ಅಥವಾ ಅವನತಿಗೆ ಕಾರಣವಾಗುತ್ತಾನೆ. ತಾನು ಸಮಾಜದ ಚಾರಿತ್ರ್ಯದ ಮೇಲ್ವಿಚಾರಕ, ಸಂರಕ್ಷಕ ಎಂಬ ಪ್ರಜ್ಞೆ ಅವನಲ್ಲಿ ಮೂಡಿದಾಗ ಸಚ್ಚಾರಿತ್ರ್ಯವು ಸಾರ್ವತ್ರಿಕವಾಗಬಲ್ಲುದು.

ಇಸ್ಲಾಮ್ ಮನುಷ್ಯನಲ್ಲಿ ಈ ಪ್ರಜ್ಞೆಯನ್ನು ಮೂಡಿಸಿ ಬೆಳೆಸುತ್ತದೆ. ನಿನ್ನ ಚಾರಿತ್ರ್ಯದ ನಿರ್ಮಾಣ ಮಾತ್ರ ನಿನ್ನ ಧ್ಯೇಯವಲ್ಲ. ಇತರರ ಸುಧಾರಣೆಯೂ ನಿನ್ನ ಕರ್ತವ್ಯವಾಗಿದೆ. ನೀನು ಚಾರಿತ್ರ್ಯವಂತನಾದರೆ ಮಾತ್ರ ಸಾಲದು. ಚಾರಿತ್ರ್ಯದ ಶಿಕ್ಷಕನಾಗಿರಬೇಕು. ಪ್ರವಾದಿ(ಸ) ಈ ರೀತಿ ಹೇಳಿರುವರು, "ತಿಳಿಯಿರಿ! ನಿಮ್ಮ ಪೈಕಿ ಪ್ರತಿಯೊಬ್ಬರೂ ಮೇಲ್ವಿಚಾರಕರಾಗಿದ್ದಾರೆ. ನಿಮ್ಮ ಪೈಕಿ ಪ್ರತಿಯೊಬ್ಬನಲ್ಲಿಯೂ ಆತನ ಅಧೀನವಿರುವವರ ಕುರಿತು ಪ್ರಶ್ನಿಸಲಾಗುವುದು. ಜನನಾಯಕನು ಜನರ ಮೇಲ್ವಿಚಾರಕನಾಗಿದ್ದು ಅವನು ಅವರ ಕುರಿತು ಪ್ರಶ್ನಿಸಲ್ಪಡುವನು. ಪುರುಷನು ತನ್ನ ಮನೆಮಂದಿಯ ಮೇಲ್ವಿಚಾರಕನಾಗಿದ್ದಾನೆ. ಅವನು ತನ್ನ ಅಧೀನವಿರುವವರ ಕುರಿತು ಪ್ರಶ್ನಿಸಲ್ಪಡುವನು. ಮಹಿಳೆಯು ತನ್ನ ಪತಿಯ ಮನೆ ಮತ್ತು ಅವನ ಮಕ್ಕಳ ಮೇಲ್ವಿಚಾರಕಿಯಾಗಿರುವಳು. ಅವಳನ್ನು ಅವರ ಕುರಿತು ಪ್ರಶ್ನಿಸಲಾಗುವುದು. ಗುಲಾಮನು ತನ್ನ ಒಡೆಯನ ಸೊತ್ತಿನ ಮೇಲ್ವಿಚಾರಕನಾಗಿರುವನು. ಆ ಸೊತ್ತಿನ ಕುರಿತು ಅವನನ್ನು ಪ್ರಶ್ನಿಸಲಾಗುವುದು. ಚೆನ್ನಾಗಿ ಕೇಳಿರಿ! ನಿಮ್ಮ ಪೈಕಿ ಪ್ರತಿ

ನೊಬ್ಬನೂ ಮೇಲ್ವಿಚಾರಕನಾಗಿರುವನು. ನಿಮ್ಮ ಪೈಕಿ ಪ್ರತಿಯೊಬ್ಬನನ್ನೂ ಅವನ ಧೀನದಲ್ಲಿರುವವರ ಕುರಿತು ವಿಚಾರಣೆಗೊಳಪಡಿಸಲಾಗುವುದು." (ಬುಖಾರಿ)

ಸಮಾಜದ ಒತ್ತಡವು ಬಹಳ ತೀವ್ರವಾಗಿರುತ್ತದೆ. ಅದು ಅನೈತಿಕತೆಗೆ ನುಮತಿ ನೀಡದಿದ್ದರೆ ಅದಕ್ಕಾರೂ ಧೈರ್ಯ ಮಾಡಲಾರರು. ಸಮಾಜದ ಒಟ್ಟು ಾತಾವರಣವು ಕೆಟ್ಟರೆ ಎಲ್ಲೆಡೆಯೂ ಅನೈತಿಕತೆ ತಾಂಡವವಾಡತೊಡಗುತ್ತದೆ. ೀತಿ–ಚಾರಿತ್ರ್ಯ ಗಳು ಅಳಿದು ಹೋಗುತ್ತದೆ. ಇಸ್ಲಾಮ್ ಸಮಾಜದ ನೈತಿಕ ಪ್ರಜ್ಞೆಯನ್ನು ಸದಾ ಜಾಗೃತ ವಿಡುತ್ತದೆ. ಆದ್ದರಿಂದ ಅದು ಸಾಮಾನ್ಯ ಅನೈತಿಕತೆಯನ್ನೂ ಹಿಸುವುದಿಲ್ಲ.

ಮಹಿಳೆಯೊಬ್ಬಳು ಸುಗಂಧ ದ್ರವ್ಯವನ್ನು ಚೆನ್ನಾಗಿ ಹಚ್ಚಿ ಮಾರ್ಗದಲ್ಲಿ ೋಗುತ್ತಿದ್ದಳು. ಹ. ಅಬೂಹುರ್ರೈರಾ(ರ) ಆಕೆಯನ್ನು ಕಂಡು, "ಮಸೀದಿಯಿಂದ ರುತ್ತಿರುವಿರಾ?" ಎಂದು ವಿಚಾರಿಸಿದರು. ಆಕೆ ಹೌದೆಂದಾಗ ಮತ್ತೆ ಕೇಳಿದರು, ಮಸೀದಿಗೆ ಹೋಗಲಿಕ್ಕಾಗಿಯೇ ನೀವು ಈ ಸುಗಂಧ ದ್ರವ್ಯವನ್ನು ಬಳಸಿದ್ದೀರಾ?" ಹಿಳೆ ಹೌದೆಂದಾಗ ಹ. ಅಬೂಹುರ್ರೈರಾ(ರ) ಆಕೆಯನ್ನು ಜರೆಯುತ್ತಾ ಹೀಗೆ ೇಳಿದರು, "ನಾನು ನನ್ನ ಪ್ರೀತಿಯ ಅಬುಲ್ ಕಾಸಿಮ್(ಸ) ಈ ರೀತಿ ೇಳುವುದನ್ನು ಕೇಳಿದ್ದೇನೆ: ಪರಿಮಳ ಪೂಸಿಕೊಂಡು ಮಸೀದಿಗೆ ಹೋಗುವ ಹಿಳೆಯ ನಮಾಝನ್ನು – ಆಕೆ ಜನಾಬತ್‌ಗೆ ಸ್ನಾನ ಮಾಡಿದಂತೆ ಸ್ನಾನ ಾಡಿಕೊಳ್ಳುವ ತನಕ – ಅಲ್ಲಾಹನು ಸ್ವೀಕರಿಸುವುದಿಲ್ಲ." (ಅಬೂದಾವೂದ್)

ಒಮ್ಮೆ ಉಮ್ಮುದ್ದರ್ದಾರನ್ನು ಸಾರ್ವಜನಿಕ ಸ್ನಾನಗೃಹದಿಂದ ಬರುತ್ತಿರುವುದನ್ನು ಡು ಪ್ರವಾದಿ(ಸ) ಅವರನ್ನು ಸಾರ್ವಜನಿಕ ಸ್ನಾನ ಗೃಹಕ್ಕೆ ಹೋಗುವುದರಿಂದ ತೆಯುತ್ತಾ ಹೀಗೆ ಹೇಳಿದರು, "ಯಾವ ಮಹಿಳೆಯು ತನ್ನ ಮನೆಯ ಹೊರತು ೇರೆ ಕಡೆ ಬಟ್ಟೆ ಕಳಚುತ್ತಾಳೋ ಆಕೆ ತನ್ನ ಮತ್ತು ಅಲ್ಲಾಹನ ಮಧ್ಯೆ ಇರುವ ರದೆಯನ್ನು ಹರಿದೊಗೆಯುತ್ತಾಳೆ." (ಮುಸ್ನದ್ ಅಹ್ಮದ್)

"ಯಾರೊಂದಿಗೆ ಮನುಷ್ಯನ ಸಾಮಾಜಿಕ, ಕೌಟುಂಬಿಕ ಅಥವಾ ಸಹವಾಸದ ಬಂಧ ಇದೆಯೋ ಅವರ ನೈತಿಕತೆಯ ಮೇಲ್ನೋಟವನ್ನು ವಹಿಸಬೇಕೆಂದು ಮ ಆತನಿಗೆ ಆದೇಶಿಸುತ್ತದೆ. ಈ ಸಂಬಂಧಗಳು ಎಷ್ಟು ಗಾಢ ಮತ್ತು ಲಿಷ್ಟವಾಗಿರುವುದೋ ಮನುಷ್ಯನ ಹೊಣೆಗಾರಿಕೆಯೂ ಅಷ್ಟೇ ಹೆಚ್ಚಾಗುತ್ತದೆ. ದ್ದರಿಂದ ಇಸ್ಲಾಮಿನ ದೃಷ್ಟಿಯಲ್ಲಿ ತನ್ನ ಆಪ್ತರೊಬ್ಬರ ಮಾನಹಾನಿಯು ಮನುಷ್ಯನ ತ್ಯಂತ ಕರಾಳ ದುಷ್ಕೃತ್ಯವಾಗಿದೆ. ಅಂತಹ ವ್ಯಕ್ತಿಗೆ ಮರಣದಂಡನೆ ವಿಧಿಸಬೇಕೆಂದು ವು ವಿದ್ವಾಂಸರು ಹೇಳುತ್ತಾರೆ." (ಝಾದುಲ್ ಮಆದ್ ಭಾಗ– 3 ಪುಟ: 272)

ನೆರೆಯಲ್ಲಿರುವವನ ಪತ್ನಿಯ ಮಾನಹಾನಿಯು ಇಂತಹುದೇ ಆಗಿದೆ.

ಅಬ್ದುಲ್ಲಾ ಬಿನ್ ಮಸ್‌ಊದ್ ವರದಿ ಮಾಡುತ್ತಾರೆ: ಒಬ್ಬನು ಪ್ರವಾದಿ(ಸ ಅವರಲ್ಲಿ ಹೀಗೆ ಪ್ರಶ್ನಿಸಿದನು, "ಅಲ್ಲಾಹನ ಬಳಿ ಅತಿದೊಡ್ಡ ಅಪರಾಧ ಯಾವುದು? ಪ್ರವಾದಿ(ಸ) ಹೇಳಿದರು, "ಅಲ್ಲಾಹನೇ ಒಬ್ಬಂಟಿಯಾಗಿ ನಿನ್ನನ್ನು ಸೃಷ್ಟಿಸಿರುವಾ ಆತನ ಜತೆ ಯಾರನ್ನಾದರೂ ಸಹಭಾಗಿಯಾಗಿ ಮಾಡುವುದು ಅತಿದೊ ಅಪರಾಧವಾಗಿದೆ." ಆತ ಪ್ರಶ್ನಿಸಿದ "ಅನಂತರ ಯಾವ ಅಪರಾಧ?" "ನೀನ ನಿನ್ನ ಮಗುವನ್ನು ಅದು ನಿನ್ನ ಆಹಾರದಲ್ಲಿ ಪಾಲುದಾರನಾಗುವುದೆಂಬ ಭಯದಿಂ ವಧಿಸುವುದು ಅದರ ನಂತರದ ಅತಿ ದೊಡ್ಡ ಅಪರಾಧವಾಗಿದೆ." ಆ ವ್ಯಕ್ತಿ ಪುನ ಪ್ರಶ್ನಿಸಿದ, "ಈ ಎರಡು ಅಪರಾಧಗಳ ನಂತರ ಯಾವುದು ಅತಿದೊಡ್ಡ ಅಪರಾಧ? ಆಗ ಪ್ರವಾದಿ(ಸ) ಹೇಳಿದರು, "ನೀನು ನಿನ್ನ ನೆರೆಯಾತನ ಪತ್ನಿಯೊಂದಿ ವ್ಯಭಿಚಾರ ಮಾಡುವುದು." (ಮಿಷ್ಕಾತ್, ಬುಖಾರಿ, ಮುಸ್ಲಿಮ್)

ವ್ಯಭಿಚಾರವು ಎಲ್ಲ ಸ್ಥಿತಿಯಲ್ಲೂ ಒಂದು ಅಪರಾಧವಾಗಿದೆ. ಅತ್ಯಂತ ಹೀ ಅಪರಾಧ. ಆದರೆ ಯಾರಾದರೂ ಅತ್ಯಧಿಕ ಮಾನರಕ್ಷಕನಾದ ವ್ಯಕ್ತಿ ಈ ನೀ ಕೃತ್ಯವನ್ನು ಮಾಡಿದರೆ ಅದರ ಕೇಡು ಹತ್ತುಪಟ್ಟು ಅಧಿಕವಾಗುತ್ತದೆ.

ಒಮ್ಮೆ ಪ್ರವಾದಿ(ಸ) ತಮ್ಮ ಸಂಗಾತಿಗಳೊಂದಿಗೆ ಕೇಳಿದರು, "ವ್ಯಭಿಚಾರ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಸಹಾಬಿಗಳು ಹೇಳಿದರು, "ಅಲ್ಲಾಹನು ಮ ಆತನ ಪ್ರವಾದಿಯು ಅದನ್ನು ನಿಷೇಧಿಸಿರುವರು ಮತ್ತು ಅದು ಕಿಯಾಮತ್‌ನ ತನ ನಿಷಿದ್ಧವಾಗಿಯೇ ಇರುವುದು." ಪ್ರವಾದಿ(ಸ) ಹೇಳಿದರು, "ಹತ್ತು ಮಂ ಮಹಿಳೆಯರ ಜತೆ ವ್ಯಭಿಚಾರವೆಸಗುವುದು– ಒಬ್ಬ ಮನುಷ್ಯನು ತನ್ನ ನೆರೆಯಾತ ಪತ್ನಿಯ ಜತೆ ವ್ಯಭಿಚಾರ ಮಾಡುವುದಕ್ಕಿಂತ ತುಲನಾತ್ಮಕವಾಗಿ ಹಗುರವಾ ಅಪರಾಧವಾಗಿದೆ." (ಮುಸ್ನದ್ ಅಹ್ಮದ್)

## ಇಸ್ಲಾಮೀ ಕಾನೂನು

ಇನ್ನು ಇಸ್ಲಾಮೀ ಕಾನೂನು ಸಮಾಜವನ್ನು ಲೈಂಗಿಕ ಅರಾಜಕತೆಯಿಂ ಹೇಗೆ ರಕ್ಷಿಸುತ್ತದೆಂಬುದನ್ನು ನೋಡೋಣ:

## 1. ಶಾಶ್ವತ ವಿವಾಹ ನಿಷಿದ್ಧರು

ಮನುಷ್ಯನು ಹುಟ್ಟಿದ ಕೂಡಲೇ ಕಣ್ಣು ತೆರೆಯುವುದು ತನ್ನ ತಂದೆ–ತಾಯಿ ಸೋದರ–ಸೋದರಿ ಮತ್ತು ಆಪ್ತ ಬಂಧುಗಳ ಮುಂದೆ. ಇದು ಆತನ ಪಾಲನೆ ಪೋಷಣೆಯಾಗುವ ಅತ್ಯಂತ ಸಮೀಪದ ವಾತಾವರಣ. ಈ ವಾತಾವರಣವನ ಅವನು ಸ್ವಯಂ ಸೃಷ್ಟಿ ಮಾಡುವುದಿಲ್ಲ. ಅದು ಅವನಿಗೆ ಪ್ರಕೃತಿದತ್ತವಾಗಿ ಲಭಿಸುತ್ತ ಈ ವಾತಾವರಣವನ್ನು ಅವನಿಂದ ಕಸಿದರೆ ಅವನ ನಿಷ್ಕಾಮ ಸೇವೆಗೆ ಬೇರಾ ವಾತಾವರಣವನ್ನೂ ಅವನು ಸೃಷ್ಟಿಸಲಾರ. ಬೇರೆಲ್ಲಿಯೂ ಅವನಿಗೆ ಅವನ ಸುಖ

ಃಖಗಳನ್ನು ತನ್ನ ಸುಖ–ದುಃಖವೆಂದು ಭಾವಿಸುವ, ಜೀವನದ ಎಲ್ಲ ಘಟ್ಟಗಳಲ್ಲಿ ಅವನ ನೈಜ ಹಿತೈಷಿಯಾಗಿರುವ ಜನರು ಸಿಗಲಾರರು. ಆದ್ದರಿಂದಲೇ ಈ ವಾತಾವರಣವನ್ನು ಅವನು ತನ್ನ ಶ್ರದ್ಧೆ ಮತ್ತು ಪ್ರೇಮದ ಕೇಂದ್ರವಾಗಿರುವ ಅತ್ಯಂತ ಪವಿತ್ರ ಕ್ಷೇತ್ರವೆಂದು ಭಾವಿಸುತ್ತಾನೆ.

ಆದ್ದರಿಂದ ಈ ಕ್ಷೇತ್ರದಲ್ಲಿರುವ ತಾಯಿ, ಮಲತಾಯಿ, ಹಾಲುಣಿಸುವ ತಾಯಿ, ಮಾತೃ–ಪಿತೃ ಸೋದರಿಯರು, ಸೋದರಿಯರು, ಸೋದರ–ಸೋದರಿ ಪುತ್ರಿಯರು ಅವನ ಪಾಲಿಗೆ ಶಾಶ್ವತವಾಗಿ ನಿಷಿದ್ಧವಾಗಿದ್ದಾರೆ. ಅವರೊಂದಿಗೆ ವಿವಾಹವನ್ನು ನಿಷಿದ್ಧಗೊಳಿಸಲಾಗಿದೆ. ಆದ್ದರಿಂದ ಈ ಕ್ಷೇತ್ರದಲ್ಲಿ ಅವನು ಮುಕ್ತವಾಗಿ ಬೆರೆತು ಬಾಳಿದರೂ ಲೈಂಗಿಕ ಅರಾಜಕತೆಗೆ ಒಳಗಾಗುವ ಯಾವುದೇ ಭೀತಿ ಇರುವುದಿಲ್ಲ.

## 2. ಗುಪ್ತ ಸಂಬಂಧಗಳ ನಿಷೇಧ

ಈ ಕ್ಷೇತ್ರದ ಹೊರಗೆ ಇಸ್ಲಾಮೀ ಕಾನೂನು ಮನುಷ್ಯನಿಗೆ ಲೈಂಗಿಕ ಸಂಬಂಧದ ಅನುಮತಿ ನೀಡುತ್ತದೆ. ಆದರೆ ಅದು ಆ ಸಂಬಂಧದಿಂದ ಅನಿವಾರ್ಯವಾಗುವ ಎಲ್ಲ ಹೊಣೆಗಾರಿಕೆಗಳನ್ನು ವಹಿಸುವ ಶರತ್ತಿನೊಂದಿಗೆ ಮಾತ್ರ. ಇದಕ್ಕಾಗಿ ಈ ಸಂಬಂಧವು ಗುಪ್ತವಾಗಿರದೆ ಸಾರ್ವಜನಿಕ ಘೋಷಣೆಯೊಂದಿಗೆ ಸಮಾಜದ ಕಣ್ಣ ಮುಂದೆ ನಡೆಯಬೇಕು. ಇದನ್ನೇ ನಿಕಾಹ್ ಅಥವಾ ವಿವಾಹವೆನ್ನಲಾಗುತ್ತದೆ. ಲೈಂಗಿಕ ಸಂಬಂಧದ ಕುರಿತು ಚರ್ಚಿಸುತ್ತಾ ಪವಿತ್ರ ಕುರ್‌ಆನ್ ಸ್ಪಷ್ಟವಾಗಿ ಸಾರುತ್ತದೆ:

"ರಹಸ್ಯ ಕಾಮುಕರನ್ನು ಅರಸದವರು." (ಪವಿತ್ರ ಕುರ್‌ಆನ್: 4: 25)

"ರಹಸ್ಯ ಕಾಮುಕರಾಗದವರು." (ಪವಿತ್ರ ಕುರ್‌ಆನ್: 5: 5)

ಮನುಷ್ಯನು ಈ ಸಂಬಂಧವನ್ನು ರಹಸ್ಯವಾಗಿರಿಸುವುದೇಕೆ? ಸಮಾಜದ ಒತ್ತಡದಿಂದ ಪಾರಾಗಲು; ವಾತಾವರಣವು ಹೇರುವ ಬಂಧನಗಳಿಂದ ಮುಕ್ತವಾಗಲು; ಏಕೆಂದರೆ ಈ ಒತ್ತಡ ಮತ್ತು ಬಂಧನಗಳು ಅವನ ಸ್ವಚ್ಛಂದತೆಯ ಹಾದಿಯ ತೊಡಕಾಗಿವೆ. ಇವುಗಳನ್ನು ಮುರಿದರೆ ಅವನು ಯಾವ ಕಣಿವೆಯಲ್ಲೂ ಮುಕ್ತವಾಗಿ ಹಾರೆದಾಡಬಹುದು. ಆ ಸಂಬಂಧ ಮತ್ತು ಅದರ ಪರಿಣಾಮಗಳಿಗೆ ಯಾವ ಬಣ್ಣಬೇಕಾದರೂ ಕೊಡಬಹುದು. ಇಸ್ಲಾಮ್ ಮನುಷ್ಯನನ್ನು ಈ ಸ್ವಚ್ಛಂದತೆಯಿಂದ ತಡೆಯುತ್ತದೆ.

"ಒಮ್ಮೆ ಹ. ಉಮರ್(ರ)ರ ಮುಂದೆ ಒಂದು ನಿಕಾಹ್‌ನ ಮೊಕದ್ದಮೆ ಬಂತು. ಅದಕ್ಕೆ ಸಾಕ್ಷಿಯಾಗಿ ಒಬ್ಬ ಪುರುಷ ಮತ್ತು ಓರ್ವ ಸ್ತ್ರೀ ಮಾತ್ರ ಇದ್ದರು. ಉಮರ್(ರ) ಹೇಳಿದರು, "ಇದು ರಹಸ್ಯ ವಿವಾಹವಾಗಿದೆ. ಇದನ್ನು ನಾನು ಅನುಮೋದಿಸಲಾರೆ. ಪ್ರವಾದಿ(ಸ) ಅಥವಾ ಹ. ಅಬೂಬಕರ್(ರ) ಅವರ ಯಾವುದಾದರೂ ಮಾದರಿ

ನನ್ನ ಮುಂದಿರುತ್ತಿದ್ದರೆ ನಾನು (ಇದನ್ನು ವ್ಯಭಿಚಾರವೆಂದು ಸಾರಿ) ಇವರಿಗೆ ಕಲ್ಲೇಟಿನಿಂ ಕೊಲ್ಲುವ ಶಿಕ್ಷೆಯನ್ನು ವಿಧಿಸುತ್ತಿದೆ." (ಮುವತ್ತಾ ಇಮಾಮ್ ಮಾಲಿಕ್)

## 3. ವೇಶ್ಯಾವಾಟಿಕೆಗೆ ತಡೆ

ಲೈಂಗಿಕ ಸಂಬಂಧಗಳ ಬಗ್ಗೆ ಧರ್ಮಸಮ್ಮತ ಮೇರೆಗಳೊಳಗೆ ಇರಬೇಕೆಂ ಜನರನ್ನು ಒತ್ತಾಯಪಡಿಸಬೇಕಾದರೆ ವ್ಯಭಿಚಾರಕ್ಕೆ ಪ್ರೇರಣೆ ನೀಡುವ ಮಾಧ್ಯಮಗಳ ಸಮಾಜದಿಂದ ಅಳಿಸಿ ಹಾಕುವುದು ಅನಿವಾರ್ಯ. ಮನುಷ್ಯನನ್ನು ಆಚಾ ವಿಚಾರಗಳ ಅರಾಜಕತೆಯಲ್ಲಿ ಸಿಲುಕಿಸಬಲ್ಲ ಎಲ್ಲ ಮಾರ್ಗಗಳೂ ಮುಚ್ಚಲ್ಪಡಬೇಕ ಇದರ ಹೊರತು ಮನುಷ್ಯನು ಸರಿ ದಾರಿಯಲ್ಲಿರುವುದು ಅಸಂಭವ. ಒಂದಲ್ಲೊಂ ಸಂದರ್ಭದಲ್ಲಿ ಅನೈತಿಕ ರೀತಿಯಲ್ಲಿ ಅದು ಹೆಜ್ಜೆ ಹಾಕಿಯೇ ತೀರುವುದು.

ಈ ಉದ್ದೇಶಕ್ಕಾಗಿ ಇಸ್ಲಾಮ್ ಸಮಾಜವನ್ನು ವೇಶ್ಯಾವಾಟಿಕೆಯ ಮಾಲಿ ದಿಂದ ಮುಕ್ತಗೊಳಿಸುತ್ತದೆ. ಈ ಹತಭಾಗ್ಯರು ಯಾವ ವ್ಯವಸ್ಥೆಯ ಆಧಾರದ ತಮ್ಮ ಈ ಕಸುಬನ್ನು ಮುಂದುವರಿಸುತ್ತಾರೋ ಆ ವ್ಯವಸ್ಥೆಯನ್ನೇ ಇಸ್ಲಾಮ್ ಅಳಿ ಬಿಡುತ್ತದೆ.

ಅಜ್ಞಾನ ಕಾಲದ ಅರೇಬಿಯನ್ ಸಂಸ್ಕೃತಿಯಲ್ಲಿ ಇಂತಹ ವೇಶ್ಯಾವಾಟಿಕೆಗ ಕ್ರಮಬದ್ಧವಾಗಿ ಸ್ಥಾಪಿತವಾಗಿದ್ದುವು. ಅಲ್ಲಿ ತಮ್ಮ ಕಾಮತೀಟೆಯನ್ನು ತೀರಿಸಿಕೊಳ್ಳ ಎಲ್ಲರಿಗೂ ಮುಕ್ತ ಅವಕಾಶವಿತ್ತು. ಬಂಡವಾಳಶಾಹಿಗಳು ತಮ್ಮ ದಾಸಿಯರನ್ನು ವೃತ್ತಿಗೆ ಇಳಿಸುತ್ತಿದ್ದರು. ತನ್ಮೂಲಕ ತಮ್ಮ ಮಾನದ ಬೆಲೆ ತೆತ್ತು ಅವರು ತ ಯಜಮಾನರ ಬೊಕ್ಕಸ ತುಂಬಬೇಕಾಗಿತ್ತು. ಪವಿತ್ರ ಕುರ್‌ಆನ್ ಈ ನೀ ವೃತ್ತಿಯನ್ನು ಒಮ್ಮೆಗೇ ನಿಷೇಧಿಸಿತು,

"ನಿಮ್ಮ ದಾಸಿಯರು ಸ್ವತಃ ಸುಶೀಲೆಯರಾಗಿರಲು ಬಯಸುವಾಗ ಅವರನ ಲೌಕಿಕ ಲಾಭಗಳಿಗಾಗಿ ವೇಶ್ಯಾವೃತ್ತಿಗೆ ನಿರ್ಬಂಧಿಸಬೇಡಿರಿ."

(ಪವಿತ್ರ ಕುರ್‌ಆನ್: 24: 3

ಕೆಲವೊಮ್ಮೆ ಯಜಮಾನನು ದಾಸಿಯನ್ನು ನೇರವಾಗಿ ವೇಶ್ಯಾವೃತ್ತಿ ಒತ್ತಾಯಿಸುತ್ತಿರಲಿಲ್ಲ. ಆದರೆ ಆಕೆಯ ಮೇಲೆ ದಿನಕ್ಕೆ, ವಾರಕ್ಕೆ ಅಥವಾ ತಿಂಗಳಿ ಇಂತಿಷ್ಟು ಮೊತ್ತ ತನಗೆ ನೀಡಬೇಕೆಂದು ವಿಧಿಸುತ್ತಾನೆ. ಈ ಬೃಹತ್ ಮೊತ್ತವನ ಆಕೆ ಧರ್ಮಸಮ್ಮತವಾದ ಯಾವುದೇ ದುಡಿಮೆಯಿಂದ ಗಳಿಸಿ ಕೊಡುವು ಸಾಧ್ಯವಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಆಕೆ ಮೈಮಾರುವ ಕಸುಬಿಗೆ ಇಳಿಯೇ ಬೇಕಾಗುತ್ತಿತ್ತು. ಪ್ರವಾದಿ(ಸ) ಇಂತಹ ಅಮಾನವೀಯ ಅಧಿಕಾರವನ್ನೇ ಜನರಿಂ ಕಸಿದುಕೊಂಡರು. ದಾಸಿಯಾದವಳನ್ನು ಯಾವುದಾದರೂ ಧರ್ಮಸಮ್ಮತ ದುಡಿಮೆ ಹಚ್ಚಲು ಮತ್ತು ಅದರಿಂದ ಬರುವ ಸಂಬಳವನ್ನು ಪಡೆಯಲು ಮಾತ್ರ ಅವನಿ

ಅಧಿಕಾರವಿದೆ ಎಂದು ಅವರು ಸ್ಪಷ್ಟವಾಗಿ ಸಾರಿದರು.

ದಾಸಿಯ 'ದುಡಿಮೆ'ಯನ್ನು ತಿನ್ನುವುದರಿಂದ ಪ್ರವಾದಿ(ಸ) ತಡೆದಿರುವರು- ಆಕೆ ತನ್ನ ಕೈಯಿಂದ ಯಾವುದಾದರೂ ಸೇವೆ ಸಲ್ಲಿಸಿ ಗಳಿಸುವುದರ ಹೊರತು." ಪ್ರವಾದಿ(ಸ) ತಮ್ಮ ಬೆರಳುಗಳನ್ನು ತೋರಿಸುತ್ತಾ, "ಉದಾಹರಣೆಗೆ ರೊಟ್ಟಿ ಬೇಯಿಸುವುದು, ಹತ್ತಿ ನೂಲುವುದು, ಕಸೂತಿ ಕೆಲಸ ಮಾಡುವುದು" ಎಂದರು.

**[ವರದಿ: ರಾಫಿಅ್ ಬಿನ್ ರಿಫಾಅ(ರ) – ಅಬೂದಾವೂದ್]**

"ಪ್ರವಾದಿ(ಸ) ದಾಸಿಯ ದುಡಿಮೆಯನ್ನು ಆಕೆ ಅದನ್ನು ಹೇಗೆ ಗಳಿಸಿರುವಳೆಂಬುದನ್ನು ಖಚಿತವಾಗಿ ತಿಳಿಯದೆ ತಿನ್ನುವುದನ್ನೂ ನಿಷೇಧಿಸಿರುವರು."

**[ವರದಿ: ಹ. ಸಾಫಿಅ್ ಬಿನ್ ಖದೀಜ್(ರ) –ಅಬೂದಾವೂದ್]**

ಅಜ್ಞಾನ ಕಾಲದಲ್ಲಿ ವೇಶ್ಯಾವಾಟಿಕೆಗೆ ದಾಸಿಯರೇ ಇಳಿಯುತ್ತಿದ್ದರು. ಆದ್ದರಿಂದ ಪ್ರಸ್ತುತ ಸೂಕ್ತ ಮತ್ತು ಪ್ರವಾದಿ ವಚನಗಳಲ್ಲಿ ಆಕೆಯನ್ನು ಆ ಕಸುಬಿನಿಂದ ದೂರವಿಡಲು ಪ್ರಯತ್ನಿಸಲಾಗಿದೆ.

ಆಧುನಿಕ ಸಂಸ್ಕೃತಿಯು 'ಸಭ್ಯ' ಮತ್ತು 'ಕುಲೀನ' ಕುಟುಂಬಗಳ ಹೆಣ್ಣು ಮಕ್ಕಳನ್ನೂ ಈ 'ವ್ಯಾಪಾರ'ದಲ್ಲಿ ತೊಡಗಿಸಿದರೆ ಇಸ್ಲಾಮ್ ಅದನ್ನೂ ನಿಷೇಧಿಸುತ್ತದೆ. ಇಸ್ಲಾಮಿನ ಬೋಧನೆಗಳು ಅದನ್ನು ಅಪವಿತ್ರ, ಮಾಲಿನ್ಯ ಮತ್ತು ನೀಚವೆಂದು ಸಾರಿ ನಿಷೇಧಿಸುತ್ತದೆ. ಇಸ್ಲಾಮ್ ಯಾವುದೇ ವೃತ್ತಿಯನ್ನು ಮಾಡುವವರ ಮುಖ-ಚಹರೆ, ಸ್ಥಾನ-ಮಾನ, ಕುಲ-ಗೋತ್ರಗಳನ್ನು ಪರಿಗಣಿಸುವು ದಿಲ್ಲ. ಬದಲಾಗಿ ಅವರು ಮಾಡುವ ವೃತ್ತಿಯನ್ನು ನೋಡುತ್ತದೆ. ಅದು ನೈತಿಕ ವಾದರೆ ಎಲ್ಲರಿಗೂ ನೈತಿಕವೇ. ಅದು ಅನೈತಿಕವಾದರೆ ಯಾರಿಗೂ ಅದನ್ನು ಮಾಡುವ ಅವಕಾಶವನ್ನು ಅದು ಕೊಡುವುದಿಲ್ಲ.

"ನಾಯಿಯ ಬೆಲೆ ಮತ್ತು ವೇಶ್ಯಾವೃತ್ತಿಯಿಂದ ಬರುವ ಆದಾಯವನ್ನು ಉಪಯೋಗಿಸುವುದರಿಂದ ಪ್ರವಾದಿ(ಸ) ತಡೆದಿರುವರು."

**[ವರದಿ: ಹ. ಮಸ್‌ಊದ್ ಅನ್ಸಾರಿ(ರ) –ಬುಖಾರಿ, ಮುಸ್ಲಿಮ್]**

ಇನ್ನೊಂದು ಪ್ರವಾದಿ ವಚನದಲ್ಲಿ, "ವ್ಯಭಿಚಾರಿಣಿಯ ಆದಾಯವು ಕೊಳಕು ಮತ್ತು ಅಶುದ್ಧವಾಗಿದೆ" ಎಂದು ಹೇಳಲಾಗಿದೆ.

## 4. ಮುಕ್ತ ಮಿಲನಕ್ಕೆ ಕಡಿವಾಣ

ಒಬ್ಬ ವ್ಯಕ್ತಿ ವೇಶ್ಯಾವಾಟಿಕೆ ಮತ್ತು ಅಶ್ಲೀಲತೆಯ ಕೇಂದ್ರಗಳಿಂದ ಕಣ್ಣು ಮುಚ್ಚಿಕೊಂಡು ಮುಂದೆ ಸಾಗಬಹುದು. ಆದರೆ ಇಡೀ ಸಮಾಜ ಅನೈತಿಕತೆಯ ಕೇಂದ್ರವಾಗಿ ಮಾರ್ಪಟ್ಟರೆ ಆತ ಎಲ್ಲಿಗೆ ಹೋಗಬೇಕು. ತನ್ನ ಶೀಲ-ಚಾರಿತ್ರ್ಯದ

ತರಬೇತಿಗಾಗಿ ಯಾವ ಲೋಕವನ್ನು ಕಟ್ಟಬೇಕು? ಇಂದಿನ ಮನುಷ್ಯನ ಸ್ಥಿತಿಯೇನು? ಪೇಟೆಯ ವ್ಯಾಪಾರಿಯಾಗಲಿ, ಕಾರ್ಖಾನೆಯ ಕಾರ್ಮಿಕನಾಗಲಿ, ಕಾಲೇಜಿನ ವಿದ್ಯಾರ್ಥಿಯಾಗಲಿ, ಕಛೇರಿಯ ಗುಮಾಸ್ತನಾಗಲಿ, ಆತ ಯಾವುದೇ ಹೋಟೇಲ್‌ನಲ್ಲಿ ಕುಳಿತಿರಲಿ, ಉದ್ಯಾನದಲ್ಲಿ ವಿಹರಿಸುತ್ತಿರಲಿ ಎಲ್ಲೆಡೆ 'ಅಪೋಸಿಟ್ ಸೆಕ್ಸ್' ಅವನ ಸುಪ್ತ ಕಾಮನೆಗಳನ್ನು ಕೆರಳಿಸುತ್ತಿರುತ್ತದೆ. ಆಧುನಿಕ ಸಂಸ್ಕೃತಿಯು ಸ್ತ್ರೀ–ಪುರುಷರ ಜಂಟಿ ಕಾರ್ಯಕ್ಷೇತ್ರದಿಂದ ಜೀವನದ ಯಾವ ರಂಗವನ್ನೂ ಹೊರತುಪಡಿಸಿಲ್ಲ. ಮಾತ್ರವಲ್ಲ, ಈ ಮಿಲನವನ್ನು ಎಷ್ಟು ಆಕರ್ಷಕ ಮತ್ತು ವರ್ಣಮಯಗೊಳಿಸಿದೆಯೆಂದರೆ ಹೆಜ್ಜೆಹೆಜ್ಜೆಗೂ ದೃಷ್ಟಿ ದಾರಿತಪ್ಪುತ್ತದೆ. ಮನುಷ್ಯನ ನಿರ್ಧಾರ ಶಕ್ತಿಯು ಸೋತು ಹೋಗುತ್ತದೆ. ಇದರ ಪರಿಣಾಮವಾಗಿ ಸಮಾಜ ದಲ್ಲಿ ಕಾಮದಾಹ ಮತ್ತು ಲೈಂಗಿಕ ತೃಷೆಯ ವಾತಾವರಣವು ವ್ಯಾಪಕವಾಗಿದೆ. ಮನುಷ್ಯನ ವಿಷಯಾಸಕ್ತಿಯು ಎಲ್ಲೆಡೆ ಭಿಕ್ಷಾಪಾತ್ರೆ ಹಿಡಿದು ತಿರುಗಾಡುತ್ತಿರುವಂತೆ ಭಾಸವಾಗುತ್ತದೆ.

ಸ್ತ್ರೀ–ಪುರುಷರ ಮುಕ್ತ ಮಿಲನವನ್ನು ಪ್ರತಿಬಂಧಿಸುವ ತನಕ ಸಮಾಜವು ಈ ಸ್ಥಿತಿಯಿಂದ ಮುಕ್ತಿ ಪಡೆಯದು. ಹತ್ತಿ ಮತ್ತು ಬೆಂಕಿಯು ಜತೆಗಿದ್ದರೆ ವಿನಾಶವು ಕಟ್ಟಿಟ್ಟ ಬುತ್ತಿ. ಇಸ್ಲಾಮ್ ಮಹಿಳೆಯ ಕಾರ್ಯಕ್ಷೇತ್ರವನ್ನು ಸಂಪೂರ್ಣವಾಗಿ ಪ್ರತ್ಯೇಕಿಸಿದೆ. ಆದ್ದರಿಂದ ಆಕೆಗೆ ಇಸ್ಲಾಮಿ ಸಮಾಜದಲ್ಲಿ ಬೆರೆಯುವ ಅವಕಾಶವೇ ವಿರಳವಾಗಿರುತ್ತವೆ. ಎಂದಾದರೂ ಜತೆಗೂಡಿ ಕೆಲಸ ಮಾಡುವುದು ಅನಿವಾರ್ಯವಾದರೆ ಪರಸ್ಪರ ಬೆರೆಯುವುದರಿಂದ ದೂರವಿರಬೇಕು ಎಂದು ಇಸ್ಲಾಮ್ ಕಟ್ಟಾಜ್ಞೆ ನೀಡುತ್ತದೆ.

ಇಬ್ಬರು ಸ್ತ್ರೀಯರ ಮಧ್ಯೆ ನಡೆಯುವುದರಿಂದ ಪುರುಷನನ್ನು ಪ್ರವಾದಿ(ಸ) ತಡೆದಿರುವರು." [ವರದಿ: ಹ. ಅಬ್ದುಲ್ಲಾ ಬಿನ್ ಉಮರ್(ರ) –ಅಬೂದಾವೂದ್]

ಒಮ್ಮೆ ಸ್ತ್ರೀ–ಪುರುಷರು ಬೆರೆಯುವುದನ್ನು ಕಂಡು ಪ್ರವಾದಿ(ಸ) ಸ್ತ್ರೀಯರಿಗೆ ಈ ರೀತಿ ಆದೇಶ ನೀಡಿದರು, "ಹಿಂದೆ ಹೋಗಿರಿ. ನಿಮಗೆ ಮಧ್ಯ ಮಾರ್ಗವನ್ನು ವಶಪಡಿಸುವ ಅಧಿಕಾರವಿಲ್ಲ. ನೀವು ರಸ್ತೆಯ ಅಕ್ಕಪಕ್ಕದಲ್ಲೇ ನಡೆಯಬೇಕು."

(ಅಬೂದಾವೂದ್)

ಇದರ ಪರಿಣಾಮವಾಗಿ ಮಹಿಳೆಯರು ರಸ್ತೆಯ ಅಕ್ಕಪಕ್ಕದಲ್ಲಿ ಗೋಡೆಗಳಿಗೆ ತಾಗಿಕೊಂಡು ನಡೆದಾಡತೊಡಗಿದರು. ಕೆಲವೊಮ್ಮೆ ಅವರ ವಸ್ತ್ರವು ಗೋಡೆಗೆ ಸಿಕ್ಕಿಕೊಳ್ಳುತ್ತಿತ್ತು." (ಅಬೂದಾವೂದ್)

ಒಮ್ಮೆ ಹ. ಉಮರ್(ರ) ಪೇಟೆಯಲ್ಲಿ ಸಂಚರಿಸುತ್ತಿದ್ದರು. ಒಬ್ಬನು ಸ್ತ್ರೀಯೊಬ್ಬಳ ಜತೆ ಸಂಭಾಷಣೆಯಲ್ಲಿ ನಿರತವಾಗಿರುವುದು ಅವರಿಗೆ ಗೋಚರಿಸಿತು. ಉಮರ್(ರ) ಆತನಿಗೆ ಛಡಿಯೇಟು ಬಾರಿಸತೊಡಗಿದರು. ಆತ ಹೇಳಿದ, "ಅಮಿರುಲ್

ಮುಅ್‌ಮಿನೀನ್ ಇದು ನನ್ನ ಪತ್ನಿ" ಇದನ್ನು ಕೇಳಿ ಅವರು ತನ್ನ ಕೃತ್ಯಕ್ಕೆ ಮರುಗುತ್ತಾ ಹೀಗೆಂದರು, "ನಾನು ನಿನ್ನ ಮೇಲೆ ಅತಿರೇಕವೆಸಗಿದೆ. ನೀನು ಬೇಕಾದರೆ ನನ್ನಲ್ಲಿ ಪ್ರತೀಕಾರ ತೀರಿಸಬಹುದು." ಆಗ ಆತ ಹೇಳಿದ, "ನಾನು ತಮ್ಮನ್ನು ಕ್ಷಮಿಸಿದೆ." (ಮುಸ್ನದ್ ಅಹ್ಮದ್)

ಶರೀಅತ್ ಅಥವಾ ಧರ್ಮಶಾಸ್ತ್ರವು ಕೇವಲ ಸ್ತ್ರೀ-ಪುರುಷರು ಮುಕ್ತವಾಗಿ ಬೆರೆಯುವುದನ್ನು ತಡೆಯುವುದಲ್ಲ. ಅದು ಇನ್ನಷ್ಟು ಮುಂದುವರಿದು ಸ್ತ್ರೀಯರು ಅತ್ಯಾಕರ್ಷಕ ವಸ್ತ್ರ ಧರಿಸಿ, ಶೃಂಗಾರ ಮಾಡಿಕೊಂಡು ಮಾರ್ಗದಲ್ಲಿ ತಿರುಗಾಡು ವುದನ್ನೂ ತನ್ಮೂಲಕ ಸಮಾಜದ ಪವಿತ್ರ ವಾತಾವರಣದಲ್ಲಿ ಅನೈತಿಕತೆಯ ರೋಗಾಣುಗಳನ್ನು ಹರಡುವುದನ್ನೂ ತಡೆಯುತ್ತದೆ. ಪ್ರವಾದಿ(ಸ) ಹೀಗೆ ಹೇಳಿ ದ್ದಾರೆ, "ಪ್ರತಿಯೊಂದು ಕಣ್ಣು ಕೂಡಾ ವ್ಯಭಿಚಾರವೆಸಗುತ್ತದೆ. (ಆದ್ದರಿಂದ ಸ್ತ್ರೀಯರು ಪುರುಷರ ಕಣ್ಣು ತಪ್ಪಿಸಿ ನಡೆಯಬೇಕು.) ಆ ಮಹಿಳೆ ಸುಗಂಧ ದ್ರವ್ಯ ಲೇಪಿಸಿಕೊಂಡು ಯಾವುದಾದರೂ ಸಭೆಯ ಮಧ್ಯೆ ನಡೆದರೆ ಆಕೆ ಇಂತಿಂಥವಳಾಗಿದ್ದಾಳೆ. ಅಂದರೆ ವ್ಯಭಿಚಾರಿಣಿ." [ವರದಿ: ಹ. ಅಬೂಮೂಸಾ(ರ) – ತಿರ್ಮಿದಿ]

"ಪರಿಮಳ ದ್ರವ್ಯವನ್ನು ಬಳಸಿದ ಸ್ತ್ರೀ ನಮ್ಮ ಜತೆ ಇಶಾ ನಮಾಝ್‌ನಲ್ಲಿ ಭಾಗವಹಿಸದಿರಲಿ." [ವರದಿ: ಹ. ಅಬೂಹುರೈರಾ(ರ) – ಅಬೂದಾವೂದ್]

ವಿಭಿನ್ನ ಪ್ರವಾದಿ ವಚನಗಳ ಆಧಾರದಲ್ಲಿ ವಿದ್ವಾಂಸರ ಅಭಿಪ್ರಾಯದಂತೆ ಸ್ತ್ರೀಯರಿಗೆ ಮಸೀದಿಗೆ ಹೋಗುವ ಅನುಮತಿಯು ಈ ಕೆಳಗಿನ ಶರತ್ತುಗಳೊಂದಿಗೆ ನೀಡಲಾಗಿದೆ ಎಂದು ಸುಪ್ರಸಿದ್ಧ ಕರ್ಮಶಾಸ್ತ್ರ ವಿದ್ವಾಂಸರಾದ ಇಮಾಮ್ ನವವಿಯವರು ಹೇಳಿರುವರು,

"ಪರಿಮಳ ದ್ರವ್ಯ ಬಳಸಿರಬಾರದು. ಶೃಂಗಾರ ಮಾಡಿರಬಾರದು. ಕಾಲಿಗೆ ಗೆಜ್ಜೆಯಂತಹ ಆಭರಣ ಧರಿಸಿರಬಾರದು. ಆಕರ್ಷಕ ಮೇಲುಡುಗೆಯನ್ನು ಧರಿಸಿರಬಾರದು. ಪುರುಷರೊಂದಿಗೆ ಬೆರೆಯಬಾರದು. ಯುವತಿಯಾಗಿರಬಾರದು. ಕ್ಷೋಭೆಗೆ ಕಾರಣವಾಗುವಂತಿರಬಾರದು. ರಸ್ತೆಯು ಸುರಕ್ಷಿತವಾಗಿದ್ದು ಯಾವುದೇ ಗಲಭೆ-ಅಶಾಂತಿಯ ಆಶಂಕೆ ಇರಬಾರದು. ಇಂತಹುದೇ ಶರತ್ತುಗಳನ್ನು ವಿದ್ವಾಂಸರು ವಿವರಿಸಿರುತ್ತಾರೆ." (ಶರಹು ಮುಸ್ಲಿಮ್ ಸಂ. – 1 ಪುಟ: 183)

## 5. ಅಶ್ಲೀಲತೆಯ ಪ್ರಚಾರಕ್ಕೆ ತಡೆ

ಅನೈತಿಕ ಸಂಬಂಧಗಳ ಪ್ರಚಾರವು ಸ್ತ್ರೀ-ಪುರುಷರ ಅನಿರ್ಬಂಧಿತ ಮಿಲನಕ್ಕಿಂತಲೂ ಕಡಿಮೆ ಅಪಾಯಕಾರಿಯೇನಲ್ಲ. ಮನುಷ್ಯನ ವಿಚಾರ ಮತ್ತು ಭಾವನೆಗಳನ್ನು ರೂಪಿಸುವಲ್ಲಿ ಮತ್ತು ಕೆಡಿಸುವಲ್ಲಿ ಮಾಧ್ಯಮವು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮನುಷ್ಯನ ಬಳಿಯಿರುವ ವಿಚಾರ ಮತ್ತು ಭಾವನೆಗಳ ಬಂಡವಾಳವನ್ನು

ಎಲ್ಲಿ ಎಷ್ಟಂಶ ತೊಡಗಿಸಬೇಕೆಂಬುದನ್ನು ಅದು ತಿಳಿಸುತ್ತದೆ. ಯಾವ ಬಂಡವಾಳವನ್ನು ಯಾವ ಭಾವನೆಗಳ ಪೂರೈಕೆಗೆ ತೊಡಗಿಸಬೇಕೆಂಬುದನ್ನೂ ಅದು ನಿರ್ಧರಿಸುತ್ತದೆ.

ಸುಶೀಲ–ಸಚ್ಚಾರಿತ್ರ್ಯದ ಬದುಕು ಸಾಗಿಸಬೇಕಾದರೆ ಅನೈತಿಕತೆಯೆಡೆಗೆ ಆಹ್ವಾನಿಸುವ ನಾಲಗೆಯನ್ನು ಕತ್ತರಿಸಿ ಹಾಕಬೇಕು. ಮಾಧ್ಯಮದ ಮೂಲಕ ವ್ಯಭಿಚಾರದ ಪ್ರಚಾರ ಆಗದಂತೆ ನೋಡಿಕೊಳ್ಳಬೇಕು. ಸಮಾಜದಲ್ಲಿರುವ ಶಿಕ್ಷಣ ಸಂಸ್ಥೆಗಳಿಗೆ ಮಾನ–ಶೀಲಗಳ ಕಲ್ಪನೆಯೇ ಇಲ್ಲದಿರುವಾಗ ರೇಡಿಯೋ, ಟಿ.ವಿ. ಮತ್ತು ಮುದ್ರಣ ಮಾಧ್ಯಮವು ಅನೈತಿಕತೆ–ಅಶ್ಲೀಲತೆಯ ಪ್ರಚಾರ ವಸ್ತುವಾಗಿರುವಾಗ, ಕಲೆ–ಸಾಹಿತ್ಯದ ಹೆಸರಲ್ಲಿ ಕೆಡುಕನ್ನು ಹರಡುತ್ತಿರುವಾಗ ಮನುಷ್ಯನು ತನ್ನ ವಿಷಯಾಸಕ್ತಿಯ ಅನುಸರಣೆ ಮಾಡದಿರುವುದಾದರೂ ಹೇಗೆ? ಭಾವನೆಗಳನ್ನು ಉದ್ರೇಕಿಸುವ ಅಸಂಖ್ಯ ಶಕ್ತಿಗಳಿರುವಾಗ ಮನುಷ್ಯನು ತನ್ನ ಮಾನವನ್ನು ಕಾಪಾಡಿಕೊಳ್ಳುವುದಾದರೂ ಹೇಗೆ? ರಾತ್ರಿ–ಹಗಲು, ಮನೆ–ಪೇಟೆ, ಅಂತರಂಗ ಮತ್ತು ಬಹಿರಂಗ ಎಂಬ ವ್ಯತ್ಯಾಸವಿಲ್ಲದೆ ಎಲ್ಲೆಡೆ ವಿಷಯಾಸಕ್ತಿಗೆ ಪ್ರೇರಣೆ ದೊರೆಯುತ್ತಿರುವಾಗ ಮನುಷ್ಯನು ಪಾಪಕೃತ್ಯಗಳಿಂದ ತನ್ನನ್ನು ತಡೆದಿರಿಸಿಕೊಳ್ಳುವು ದಾದರೂ ಹೇಗೆ?

ಪ್ರವಾದಿ ಮುಹಮ್ಮದ್(ಸ) ಅವರ ಆಗಮನಕ್ಕೆ ಮುಂಚಿನ ಅರೇಬಿಯದ ಸ್ಥಿತಿಯೂ ಇದುವೇ ಆಗಿತ್ತು. ಅವರ ಸಭೆ–ಸಮಾರಂಭಗಳಲ್ಲಿ ಚಾರಿತ್ರ್ಯ ಮತ್ತು ಸಭ್ಯತೆಯ ತೇಜೋವಧೆಗೆ ಸಿದ್ಧತೆಗಳು ನಡೆಯುತ್ತಿದ್ದುವು. ಕವಿಯು ತನ್ನ ಕವಿತೆಗಳ ಮೂಲಕ ಕಾಮಾಸಕ್ತಿಯನ್ನು ಕೆರಳಿಸುವ ಕಾರ್ಯದಲ್ಲಿ ನಿರತನಾಗಿದ್ದ. ಸಾಹಿತಿಯು ಅನೈತಿಕ ಸಂಬಂಧದ ವಿವಿಧ ಘಟ್ಟಗಳನ್ನು ರಂಗುರಂಗಾಗಿ ಅತ್ಯಂತ ಅಶ್ಲೀಲ ಭಾಷೆಯಲ್ಲಿ ವಿವರಿಸುತ್ತಿದ್ದ. ಒಬ್ಬ ಸಭ್ಯ ಮನುಷ್ಯನು ಅದನ್ನು ನಾಲಗೆಯಿಂದ ಉಚ್ಚರಿಸಲೂ ಸಾಧ್ಯವಿರಲಿಲ್ಲ.

ಇಸ್ಲಾಮ್ ಅನೈತಿಕತೆ ಮತ್ತು ಅಶ್ಲೀಲತೆಯ ಎಲ್ಲ ಪ್ರಚಾರ ಮಾಧ್ಯಮಗಳನ್ನೂ ಅದು ಲೇಖನಿಯ ಮೂಲಕವಾಗಲಿ, ಕಲೆ, ಸಂಸ್ಕೃತಿಯ ಪ್ರದರ್ಶನಗಳ ಮೂಲಕವಾಗಲಿ ನಿಷೇಧಿಸಿತು. ಅದರ ಪ್ರಚಾರವು ಸಭೆಯಲ್ಲಾಗಲೀ ವೈಯಕ್ತಿಕ ಭೇಟಿಯ ವೇಳೆಯಾಗಲೀ ಅಪರಾಧವೆಂದೇ ಪರಿಗಣಿಸಲ್ಪಟ್ಟಿತು. ಅದು ಅತ್ಯಂತ ಹೀನ ಅಪರಾಧ. ಅದನ್ನು ಯಾವ ರೀತಿಯಲ್ಲೂ ಸಹಿಸಲಾಗದು.

"ಸತ್ಯವಿಶ್ವಾಸ ಸ್ವೀಕರಿಸಿಕೊಂಡವರ ಸಮೂಹದಲ್ಲಿ ಅಶ್ಲೀಲತೆ ಹರಡಬೇಕೆಂದು ಬಯಸುವವರು ಇಹಲೋಕದಲ್ಲೂ ಪರಲೋಕದಲ್ಲೂ ವೇದನಾಯುಕ್ತ ಶಿಕ್ಷೆಗೆ ಅರ್ಹರಾಗಿದ್ದಾರೆ. ಅಲ್ಲಾಹನು ಬಲ್ಲವನು. ನೀವು ಬಲ್ಲವರಲ್ಲ."

(ಪವಿತ್ರ ಕುರ್‌ಆನ್: 24: 19)

ಅತಾ ತಾಬಿಈ ಅವರು ಹೀಗೆ ಹೇಳಿರುವರು, "ಅಶ್ಲೀಲತೆಯನ್ನು ಹರಡುವವರಿಗೆ

ಕಠಿಣ ಶಿಕ್ಷೆ ನೀಡಬೇಕು. ಅವರು ಹೇಳುತ್ತಿರುವುದು ಸತ್ಯವಾಗಿದ್ದರೂ ಸರಿಯೆ."

(ಅಲ್ ಮುಹಲ್ಲಾ – ಇಬ್ನ್ ಹಝ್ಮ್ ಸಂ– 11 ಪುಟ: 281)

ಕೆಲವರು ಪತಿ–ಪತ್ನಿಯರ ಸಂಬಂಧದ ವಿವಿಧ ಘಟ್ಟಗಳನ್ನು, ಸ್ಥಿತಿಗತಿಗಳನ್ನು ರಂಗುರಂಗಾಗಿ ವಿವರಿಸುತ್ತಾರೆ. ಇದರಿಂದ ಕೇಳುಗನ ಮೃಗೀಯ ಬಯಕೆಗಳು ಕೆರಳುತ್ತವೆ. ಪ್ರವಾದಿ(ಸ) ಅದನ್ನೂ ಕಟುವಾಗಿ ಖಂಡಿಸಿರುವರು.

"ತನ್ನ ಪತ್ನಿಯೊಂದಿಗೆ ಸಂಸರ್ಗ ನಡೆಸಿ ಅದರ ರಹಸ್ಯಗಳನ್ನು ಪ್ರಚುರ ಮಾಡುತ್ತಾ ತಿರುಗುವವನ ಗತಿಯು ಕಿಯಾಮತ್ (ನಿರ್ಣಾಯಕ) ದಿನದಂದು ಎಲ್ಲ ಮನುಷ್ಯರ ಪೈಕಿ ಅತ್ಯಂತ ನಿಕೃಷ್ಟವಾಗಿರುವುದು." (ಮುಸ್ಲಿಮ್)

ಒಮ್ಮೆ ಪ್ರವಾದಿವರ್ಯರು(ಸ) ನಮಾಝ್‌ನ ನಂತರ ಸಭಿಕರನ್ನು ಪ್ರಶ್ನಿಸಿದರು, "ನಿಮ್ಮ ಪೈಕಿ ಯಾರಾದರೂ ತನ್ನ ಪತ್ನಿಯೊಂದಿಗೆ ಸಂಸರ್ಗ ನಡೆಸುವಾಗ ಅವನು ಒಂದು ಪರದೆಯನ್ನು ಇಳಿಬಿಟ್ಟು ಬಾಗಿಲುಗಳನ್ನು ಮುಚ್ಚಿಕೊಳ್ಳುತ್ತಾನಲ್ಲವೇ?" ಜನರು ಹೌದೆಂದರು. ತರುವಾಯ ಪ್ರವಾದಿ(ಸ) ಹೀಗೆ ವಿಚಾರಿಸಿದರು, "ಆ ಬಳಿಕ ಅವನು ಜನರ ಮಧ್ಯೆ ಕುಳಿತು ಈ ಸಂಬಂಧದ ವಿವರಗಳ ಬಗ್ಗೆ ಮಾತನಾಡುವುದಿಲ್ಲವೇ?" ಇದನ್ನು ಕೇಳಿ ಎಲ್ಲರೂ ಮೌನ ವಹಿಸಿದರು. ಇದೇ ಪ್ರಶ್ನೆಯನ್ನು ಅವರು ಇನ್ನೊಮ್ಮೆ ಮಹಿಳೆಯರನ್ನುದ್ದೇಶಿಸಿ ಕೇಳಿದರು. ಅಲ್ಲಿಯೂ ಮೌನ ಆವರಿಸಿತು. ಆದರೆ ಓರ್ವ ಯುವತಿ ಎದ್ದು ನಿಂತು ಹೇಳಿದಳು, "ಯಾ ರಸೂಲುಲ್ಲಾಹ್! ಸ್ತ್ರೀ–ಪುರುಷರೆಲ್ಲರೂ ಪರಸ್ಪರ ಇಂತಹ ಮಾತುಕತೆ ನಡೆಸುತ್ತಿರುತ್ತಾರೆ." ಯುವತಿಯ ಉತ್ತರ ಕೇಳಿ ಪ್ರವಾದಿ(ಸ) ಈ ರೀತಿ ಹೇಳಿದರು, "ಅದರ ಉಪಮೆ ಹೇಗೆಂದು ನಿಮಗೆ ತಿಳಿದಿದೆಯೇ? ಅದರ ಉಪಮೆ ಹೀಗಿದೆ: ಒಂದು ಕೇರಿಯಲ್ಲಿ ಒಂದು ಹೆಣ್ಣು ಪಿಶಾಚಿಯ ಭೇಟಿ ಒಂದು ಗಂಡು ಪಿಶಾಚಿಯೊಂದಿಗಾಗುತ್ತದೆ ಮತ್ತು ಅದು ಅದರ ಜೊತೆ ತನ್ನ ಬಯಕೆಯನ್ನು ಜನರ ಕಣ್ಣ ಮುಂದೆಯೇ ತೀರಿಸಲಾರಂಭಿಸುತ್ತದೆ. ತಿಳಿಯಿರಿ! (ಅಶ್ಲೀಲತೆ ಮತ್ತು ಅನೈತಿಕತೆಯ ಪ್ರಚಾರವು ಎಲ್ಲಾ ರೀತಿಯಿಂದಲೂ ಆಗುತ್ತದೆ. ಅದು ಶೃಂಗಾರಗಳಲ್ಲಿಯೂ ಆಗುತ್ತದೆ ಆದ್ದರಿಂದ) ಪುರುಷರು ಸುಗಂಧವಿರುವ ಆದರೆ ಬಣ್ಣವಿಲ್ಲದ 'ಅತ್ತರ್' ಮಾತ್ರ ಬಳಸಬೇಕು ಮತ್ತು ಸ್ತ್ರೀಯರು ಬಣ್ಣ ಇರುವ ಆದರೆ ಸುಗಂಧ ಹರಡದ 'ಅತ್ತರ್' ಮಾತ್ರ ಬಳಸುವುದು ಸೂಕ್ತ." (ಅಬೂದಾವೂದ್)

## 6. ದಂಡ ಸಂಹಿತೆ

ಈ ಎಲ್ಲ ಸುಧಾರಣೆಗಳ ನಂತರ ಯಾವುದೇ ವ್ಯಕ್ತಿ ಅಥವಾ ಸಮೂಹವು ಶೀಲ–ಚಾರಿತ್ರ್ಯ, ಮಾನ–ಮರ್ಯಾದೆಗಳ ಮಾರ್ಗದ ಕಲ್ಲೆಂದು ಸಾಬೀತಾದರೆ ಇಸ್ಲಾಮ್ ಅದನ್ನು ಕಿತ್ತೊಗೆಯಲು ಸರ್ವಶಕ್ತಿಯನ್ನೂ ಉಪಯೋಗಿಸುತ್ತದೆ.

ಮಾನವೀಯತೆಯ ನೌಕೆಯನ್ನು ಕೆಡುಕಿನ ಸುಳಿಯಲ್ಲಿ ಸಿಲುಕಿಸುವ ಯಾವ ಪ್ರಯತ್ನವನ್ನೂ ಅದು ಸಫಲವಾಗಲು ಬಿಡದು.

ಪ್ರವಾದಿವರ್ಯರ(ಸ) ಪಾವನ ಜೀವಿತ ಕಾಲದಲ್ಲಿ ಕಪಟವಿಶ್ವಾಸಿಗಳ ಒಂದು ಸಮೂಹವಿತ್ತು. ಸಮಾಜವನ್ನು ಮಾನ-ಮರ್ಯಾದೆಯೊಂದಿಗೆ ಬಾಳು ವುದನ್ನು ಸಹಿಸುವುದಿಲ್ಲ ಎಂದು ಅವರು ತಮ್ಮ ನಡೆ-ನುಡಿಗಳಿಂದ ಸಾಬೀತು ಗೊಳಿಸುತ್ತಿದ್ದರು. ಸಚ್ಚಾರಿತ್ರ್ಯ ಮತ್ತು ಸಭ್ಯತೆಯೆಡೆಗೆ ಸಾಗುತ್ತಿದ್ದ ಮಾನವೀಯತೆಯ ಕಾರವಾನವನ್ನು ಅವರು ಅದರ ಗುರಿಮುಟ್ಟಲು ಬಿಡುತ್ತಿರಲಿಲ್ಲ. ಈ ಕಿಡಿಗೇಡಿಗಳನ್ನು ಪವಿತ್ರ ಕುರ್‌ಆನ್ ತೀವ್ರವಾಗಿ ಖಂಡಿಸಿತು. ಅವರು ತಮ್ಮ ಈ ಕಿಡಿಗೇಡಿತನವನ್ನು ತೊರೆಯದಿದ್ದರೆ ಅವರ ಬಯಕೆ ಕಾರ್ಯರೂಪಕ್ಕೆ ಬರುವುದಕ್ಕೆ ಮುಂಚೆಯೇ ಅವರನ್ನು ಸದೆಬಡಿಯಲಾಗುವುದು.

"ಕಪಟವಿಶ್ವಾಸಿಗಳೂ ಹೃದಯದಲ್ಲಿ ಕೆಡುಕುಳ್ಳವರೂ ಮದೀನಾದಲ್ಲಿ ಉದ್ರೇಕಕಾರಿ ವದಂತಿಗಳನ್ನು ಹಬ್ಬಿಸುವವರೂ ತಮ್ಮ ದುಷ್ಕೃತ್ಯಗಳನ್ನು ತೊರೆಯದಿದ್ದರೆ ನಾವು ಅವರ ವಿರುದ್ಧ ಕಾರ್ಯಾಚರಣೆಗಾಗಿ ನಿಮ್ಮನ್ನು ಎಬ್ಬಿಸಿ ನಿಲ್ಲಿಸುವೆವು. ಅನಂತರ ಅವರು ಈ ನಗರದಲ್ಲಿ ನಿಮ್ಮ ಜತೆ ಇರುವುದು ಕಷ್ಟಸಾಧ್ಯ. ಅವರ ಮೇಲೆ ಎಲ್ಲ ಕಡೆಗಳಿಂದಲೂ ಛೀಮಾರಿ ಬೀಳುವುದು. ಅವರು ಕಂಡಕಂಡಲ್ಲಿ ಸೆರೆ ಹಿಡಿಯಲ್ಪಡುವರು ಮತ್ತು ನಿರ್ದಾಕ್ಷಿಣ್ಯವಾಗಿ ಕೊಲ್ಲಲ್ಪಡುವರು." **(ಪವಿತ್ರ ಕುರ್‌ಆನ್: 33: 60-61)**

"ಸಮಾಜವನ್ನು ಅನೈತಿಕತೆಗೆ ತಳ್ಳುವ ಮಂದಿಯನ್ನು ಹ. ಉಮರ್(ರ) ದೇಶಭ್ರಷ್ಟಗೊಳಿಸಿದ್ದರು. ಜುಅ್‌ದತುಸ್ಸಲ್ಮಾ ಎಂಬ ಒಬ್ಬ ವ್ಯಕ್ತಿಯಿದ್ದರು. ಮುಜಾಹಿದ್ ಗಳು ರಣರಂಗದಲ್ಲಿರುವಾಗ ಇವರು ಅವರ ಮಹಿಳೆಯರನ್ನು ನಗರದ ಹೊರಗೆ ಬಕೀಅ್‌ನ ಕಡೆಗೆ ಕರೆದೊಯ್ದು ಅವರೊಡನೆ ಮಾತನಾಡುತ್ತಿದ್ದರು. ಮುಜಾಹಿದ್‌ಗಳಿಗೆ ಈ ವಿಷಯ ತಿಳಿದಾಗ ಅವರು ಹ. ಉಮರ್(ರ) ಅವರಿಗೆ ವಿಷಯವನ್ನು ಬರಹ ಮೂಲಕ ತಿಳಿಸಿದರು. ಅವರು ಕೂಡಲೇ ಆ ವ್ಯಕ್ತಿಯನ್ನು ಮದೀನಾದಿಂದ ಗಡೀಪಾರುಗೊಳಿಸಿದರು." **(ಫತ್ಹುಲ್‌ಬಾರಿ ಸಂ- 12 ಪುಟ: 130)**

ಒಂದು ರಾತ್ರಿ ಹ. ಉಮರ್(ರ) ನಗರದ ಅಹವಾಲು ತಿಳಿಯಲು ಸಂಚರಿಸುತ್ತಿದ್ದರು. ಓರ್ವ ಮಹಿಳೆ ಈ ಅರ್ಥದ ಕವನ ಪಠಿಸುವುದು ಕೇಳಿಸಿತು.

"ಸುರಾಪಾನದ ಯಾವುದಾದರೂ ಸಂದರ್ಭ ಒದಗಿ ಬಂದೀತೇ? ನಸ್ರ್ ಬಿನ್ ಹಜ್ಜಾಜ್‌ನ ಬಳಿ ತಲುಪುವ ಯಾವುದೇ ದಾರಿ ತೆರೆದೀತೇ?"

ಮರುದಿನ ಹ. ಉಮರ್(ರ) ನಸ್ರ್ ಬಿನ್ ಹಜ್ಜಾಜ್‌ನನ್ನು ಕರೆಸಿದರು. ಆತ ಬಹಳ ಸುಂದರ ಮೈಕಟ್ಟಿನವನಾಗಿದ್ದ. ಆತನಿಗೆ ಹ. ಉಮರ್(ರ) ಹೇಳಿದರು, "ನಿಮ್ಮ ಕೂದಲುಗಳನ್ನು ಸರಿಪಡಿಸಿಕೊಳ್ಳಿ." ಆತ ಕೂದಲು ಸರಿಪಡಿಸಿಕೊಂಡಾಗ

ಇನ್ನಷ್ಟು ಸುಂದರನಾಗಿ ಗೋಚರಿಸಿದ. "ಅಮಾಮ(ಶಿರವಸ್ತ್ರ) ಧರಿಸು" ಎಂದು ಆಜ್ಞಾಪಿಸಲಾಯಿತು. ಅವನು ಅದನ್ನು ಧರಿಸಿದಾಗ ಮತ್ತಷ್ಟು ಸುಂದರನಾದ.

ಕಳೆದ ರಾತ್ರಿ ಆ ಮಹಿಳೆಯ ಹತಾಶ ಹಾಡು ಆಕೆಗೆ ಈತನೊಡನೆ ಅನೈತಿಕ ಸಂಬಂಧವಿತ್ತೆಂಬುದನ್ನು ಸೂಚಿಸುತ್ತಿತ್ತು. ಆದ್ದರಿಂದ ಆತನನ್ನು ಬಸ್ರಾಗೆ ಕಳುಹಿಸಿಕೊಟ್ಟರು. ಏಕೆಂದರೆ ಆತ ಮದೀನಾದಲ್ಲಿದ್ದರೆ ಪುನಃ ಅವರ ಮಧ್ಯೆ ಅನೈತಿಕ ಸಂಪರ್ಕವೇರ್ಪಡುವ ಸಾಧ್ಯತೆಯಿತ್ತು.

"ಮದೀನಾದಲ್ಲಿ ಓರ್ವ ಶಿಖಂಡಿ ಇದ್ದ. ಆತ ಎಲ್ಲ ಮನೆಗಳಿಗೂ ಯಾವುದೇ ಅಡೆ-ತಡೆಯಿಲ್ಲದೆ ನುಗ್ಗುತ್ತಿದ್ದ. ಜನರು ಆತನಿಗೆ ಕಾಮ ಬಯಕೆ ಇರಲಾರದು ಎಂದು ಭಾವಿಸಿದ್ದೇ ಇದಕ್ಕೆ ಕಾರಣ. ಒಮ್ಮೆ ಆತ ಹ. ಉಮ್ಮು ಸಲ್ಮಾರ(ರ) ಸೋದರ ಅಬ್ದುಲ್ಲಾ(ರ) ಅವರಿಗೆ ಈ ರೀತಿ ಹೇಳುತ್ತಿದ್ದ, "ತಾಯಿಫ್ ನಗರವನ್ನು ಗೆದ್ದು ಕೊಂಡ ಬಳಿಕ ನಾನು ನಿಮಗೆ ಇಂತಿಂತಹ ಸುಂದರಿಯನ್ನು ತೋರಿಸುವೆನು. ಅನಂತರ ಆ ಮಹಿಳೆಯ ಸೌಂದರ್ಯಗಳ ಸ್ತಬ್ಧ ಚಿತ್ರವನ್ನು ಅವರ ಮುಂದಿರಿಸಿದ. ಇದರಿಂದ ಆತನಿಗೆ ಕಾಮಬಯಕೆ ಇದೆಯೆಂದು ಸ್ಪಷ್ಟವಾಗುತ್ತಿತ್ತು. ಅಕಸ್ಮಾತ್ ಪ್ರವಾದಿಯವರಿಗೆ(ಸ) ಅವನ ಈ ಮಾತುಗಳು ಕೇಳಿಸಿತು. ಆತ ನಿಮ್ಮ ಬಳಿಗೆ ಬರದಂತೆ ನೋಡಿಕೊಳ್ಳಿರೆಂದು ಅವರು ತಮ್ಮ ಪತ್ನಿಯರಿಗೆ ಆಜ್ಞಾಪಿಸಿದರು. ಆ ಬಳಿಕ ಆತನನ್ನು ಮದೀನದಿಂದ ಗಡೀಪಾರುಗೊಳಿಸಿದರು. ಹ. ಉಮರ್ ಮತ್ತು ಹ. ಅಬೂಬಕರ್(ರ) ಅವರೂ ಇಂತಹ ಶಿಖಂಡಿಗಳನ್ನು ಗಡೀಪಾರು ಮಾಡಿದ್ದರು."

(ಅಬೂದಾವೂದ್, ಬುಖಾರಿ, ಬೈಹಕಿ)

## 7. ಛಡಿಯೇಟು ಮತ್ತು ಮರಣ ದಂಡನೆ

ವ್ಯಭಿಚಾರದ ಮಾರ್ಗದಲ್ಲಿ ಯಾರೆಷ್ಟು ಮುಂದುವರಿಯುತ್ತಾರೋ ಅವರ ಪಾಲಿಗೆ ಇಸ್ಲಾಮಿ ಶಿಕ್ಷೆಯು ಅಷ್ಟೇ ಉಗ್ರವಾಗುತ್ತದೆ. ಪ್ರೇಮ-ಕಾಮುಗಳ ಪ್ರಸ್ತಾಪ ಮಾಡಿದವನನ್ನು ಗಡೀಪಾರುಗೊಳಿಸಿದರೆ ಮಾನಭಂಗ ಮಾಡುವವನಿಗೆ ಬಹಿರಂಗವಾಗಿ ಛಡಿಯೇಟು ಬಾರಿಸಲಾಗುತ್ತದೆ. ಈ ಬಯಕೆಯನ್ನು ಈಡೇರಿಸಲು ಒಂದು ಧರ್ಮಸಮ್ಮತ ಮಾರ್ಗವು ಮನೆಯಲ್ಲಿದ್ದು ದುರಾಚಾರಕ್ಕೆ ಇಳಿಯುವವನು ಒಂದು ಪಾವನ ಸಮಾಜದಲ್ಲಿ ಜೀವಿಸುವ ಹಕ್ಕನ್ನೇ ಕಳಕೊಳ್ಳುತ್ತಾನೆ. ಆದ್ದರಿಂದ ಅದು ಅವನಿಗೆ ಮರಣದಂಡನೆ ವಿಧಿಸುವ ಮೂಲಕ ಸಮಾಜವನ್ನು ಆ ಕೊಳಕಿನಿಂದ ಮುಕ್ತಗೊಳಿಸುತ್ತದೆ.

"ವ್ಯಭಿಚಾರಿ ಮತ್ತು ವ್ಯಭಿಚಾರಿಣಿ ಇವರಿಬ್ಬರಲ್ಲಿ ಪ್ರತಿಯೊಬ್ಬರಿಗೂ ನೂರು ಛಡಿಯೇಟು ಕೊಡಿರಿ. ನೀವು ಅಲ್ಲಾಹನ ಹಾಗೂ ಅಂತಿಮ ದಿವಸದ ಮೇಲೆ ವಿಶ್ವಾಸವಿರಿಸುತ್ತೀರಾದರೆ ಅಲ್ಲಾಹನ ಧರ್ಮದ ವಿಷಯದಲ್ಲಿ ಅವರ ಮೇಲಿನ

ಕನಿಕರವು ನಿಮ್ಮನ್ನು ತಡೆಯದಿರಲಿ. ಅವರಿಗೆ ಶಿಕ್ಷೆ ಕೊಡುವಾಗ ಸತ್ಯವಿಶ್ವಾಸಿಗಳ ಒಂದು ಸಮೂಹ ಅಲ್ಲಿ ಉಪಸ್ಥಿತವಿರಲಿ." (ಪವಿತ್ರ ಕುರ್‌ಆನ್: 24: 2)

ಇದು ಅವಿವಾಹಿತರ ವ್ಯಭಿಚಾರಿಗಳಿಗೆ ನೀಡಬೇಕಾದ ಶಿಕ್ಷೆಯೆಂದು ಪ್ರವಾದಿ(ಸ) ಸ್ಪಷ್ಟಪಡಿಸಿರುವರು. ವಿವಾಹಿತರಾದವರು ವ್ಯಭಿಚಾರವೆಸಗಿದರೆ ಅವರನ್ನು ಕಲ್ಲೇಟಿನಿಂದ ಸಾಯಿಸಬೇಕೆಂದು ಅವರು ಆದೇಶಿಸಿರುವರು.

"ಕೇಳಿರಿ! ನನ್ನಿಂದ ಈ ವಿಧಿಯನ್ನು ಸ್ವೀಕರಿಸಿರಿ. ನನ್ನ ಈ ಆದೇಶವನ್ನು ಕೇಳಿರಿ! ಅಲ್ಲಾಹನು ವ್ಯಭಿಚಾರವೆಸಗುವ ಸ್ತ್ರೀಯರಿಗೆ ಶಿಕ್ಷೆಯನ್ನು ನಿಶ್ಚಯಿಸಿರುವನು. ಕುಮಾರಿಯಾದ ಯುವತಿಯೊಬ್ಬಳು ವ್ಯಕ್ತಿಯೊಂದಿಗೆ ವ್ಯಭಿಚಾರದಲ್ಲೇರ್ಪಟ್ಟರೆ ಇಬ್ಬರಿಗೂ ತಲಾ ನೂರು ಛಡಿಯೇಟುಗಳನ್ನು ಬಾರಿಸಲಾಗುವುದು ಮತ್ತು ಒಂದು ವರ್ಷದ ಮಟ್ಟಿಗೆ ಅವರನ್ನು ಗಡೀಪಾರು ಮಾಡಲಾಗುವುದು. ವಿವಾಹಿತ ಮಹಿಳೆಯೊಬ್ಬಳು ಒಬ್ಬ ವಿವಾಹಿತ ಪುರುಷನ ಜತೆ ವ್ಯಭಿಚಾರವೆಸಗಿದರೆ ಇಬ್ಬರಿಗೂ ನೂರು ಛಡಿಯೇಟುಗಳನ್ನು ಬಾರಿಸಿದ ನಂತರ ಅವರನ್ನು ಕಲ್ಲೇಟಿನಿಂದ ಸಾಯಿಸಲಾಗುವುದು." (ಮುಸ್ಲಿಮ್)

ವಿವಾಹಿತ ಸ್ತ್ರೀ-ಪುರುಷರ ಅನೈತಿಕ ಸಂಸರ್ಗಕ್ಕೆ ಮರಣ ದಂಡನೆಯಾಗ ಬೇಕೆಂಬುದು ಮುಸ್ಲಿಮ್ ಸಮುದಾಯದಲ್ಲಿ ಸರ್ವಸಮ್ಮತವಾಗಿರುವ ನಿಯಮ.

ಲೈಂಗಿಕ ಬಯಕೆಯ ಈಡೇರಿಕೆಗೆ ಇಸ್ಲಾಮ್ ಕೆಲವು ಮಿತಿಯೊಳಗೆ ಮಾತ್ರ ಅನುಮತಿ ನೀಡುತ್ತದೆ. ಈ ಮಿತಿಯನ್ನು ಮೀರುವವನಿಗೆ ಅದು ಕಠಿಣ ಶಿಕ್ಷೆಯನ್ನು ವಿಧಿಸುತ್ತದೆ. ಮನುಷ್ಯನು ತನ್ನ ಈ ಸಹಜ ಬೇಡಿಕೆಯನ್ನು ಪೂರೈಸುವಂತಾಗಲು ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಅದು ಸಮಾಜಕ್ಕೆ ಆದೇಶಿಸುತ್ತದೆ. ಆದರೆ ಮನುಷ್ಯನು ಮಾನವೀಯತೆಯ ಉಡುಪು ಕಳಚಿ ಸಮಾಜವನ್ನು ಮೃಗೀಯತೆಯ ಆಡುಂಬೊಲವಾಗಿ ಮಾಡಲು ಅದು ಅನುಮತಿಸುವುದಿಲ್ಲ ಎಂದು ಈ ವಿವರಣೆಗಳಿಂದ ಸ್ಪಷ್ಟವಾಗುತ್ತದೆ.

❖ ❖ ❖